೧ – ಭವಿಷತ್ತನ್ನು ತಿಳಿಯುವುದು ಹೇಗೆ



1

ಹಿಂದಿನ ಸ್ವಪ್ನವು ಈಗಾಗುವುದನ್ನು ತಿಳಿಸುತ್ತದೆ


2

ಒಬ್ಬ ಹುಚ್ಚನಾದ ತಜ್ಞರು ರೈಲು ಗಾಡಿಯಲ್ಲಿ ಒಂದು ದಿನ ಪ್ರಯಾಣ ಮಾಡುತ್ತಿದ್ದನು, ಓದುವುದರಲ್ಲಿ ನಿರತನಾಗಿದ್ದನು. ಕಂಡೆಕ್ಟರ್ ಆತನ ಹತ್ತಿರಕ್ಕೆ ಬಂದು ಟಿಕೇಟನ್ನು ಕೇಳಿದನು. ಈ ತಜ್ಞರು ಎಲ್ಲಾ ಜೇಬುಗಳನ್ನು ಹುಡಿಕಿದರು ಕಾಣಲಿಲ್ಲ. ತಿರುಗಿ ಹುಡಕಲು ಪ್ರಾರಂಭಿಸಿದರು. ಕಂಡೆಕ್ಟರ್ ತಿರುಗಿ ಬಂದು ಸಾರ್ ಪರವಾಗಿಲ್ಲ ನಿನಗೆ ಸಿಕ್ಕಿದ್ದಾಗ ಕಂಪನಿಗೆ ಅಂಚೆಯ ಮೂಲಕ ಕಳುಹಿಸಿರಿ ಅಂದನು. ನಿನ್ನಲ್ಲೇ ಇದೆ ಎಂದು ದೃಢವಾಗಿ ಗೊತ್ತು ಅದಕ್ಕೆ ಪ್ರಯಾಣಿಕನು ಸ್ತಬ್ಧನಾದನು. ನಿನಗೆ ಅರ್ಥವಾಗದು, ಈಗ ನಾನು ಕಂಡುಹಿಡಿಯಬೇಕೆಂದನು. ನಾನು ಎಲ್ಲಿ ಹೋಗುತ್ತಿದ್ದೇನೆಂದು ತಿಳಿಯಲು ನನಗೆ ಆ ಟಿಕೇಟ್ ಬೇಕೆಂದನು.

ಈ ಲೋಕದಲ್ಲಿ ಲಕ್ಷಾಂತರ ಜನರು ಎಲ್ಲಿಗೆ ಹೋಗುತ್ತಿದ್ದಾರೆಂದು ತಿಳಿಯದು. ಭವಿಷತ್ ಖಚಿತವಾಗಿಲ್ಲ. ಅವರು ಗಲಿಬಿಲಿಯಿಂದ ಕೂಡಿದ್ದಾರೆ. ಲೋಕ ಎಲ್ಲಿಗೆ ಹೋಗುತ್ತದೆಂದು ಅವರು ಆಶ್ಚರ್ಯಪಡುತ್ತಾರೆ.

ನಾನು ಆಶ್ಚರ್ಯ ಪಡಬೇಕಾದ ಅಗತ್ಯವೇ ಇಲ್ಲ. ೨೫೦೦ ವರ್ಷಗಳ ಹಿಂದೆ ಪುರಾತನ ರಾಜನ ಒಂದು ಕನಸು ನಮ್ಮ ಲೋಕದ ಚರಿತ್ರೆಯನ್ನು ತಿಳಿಸಿರುತ್ತದೆ.



3


(ವಿಡಿಯೋ ೧೦ ಸೆಕೆಂಡುಗಳು) ನಾವೆಲ್ಲರೂ ಸಾಮಾನ್ಯವಾಗಿ ಪ್ರತಿ ರಾತ್ರಿ ಅನೇಕ ಸಾರಿ ಕನಸನ್ನು ಕಾಣುತ್ತೇವೆಂದು ವಿಜ್ಞಾನಿಗಳು ಹೇಳುತ್ತಾರೆ. ಆದರೆ ನಾವು ಕಂಡ ಕನಸುಗಳನ್ನು ಜ್ಞಾಪಕದಲ್ಲಿಡುವದಿಲ್ಲ.


4

೨೫೦೦ ವರ್ಷಗಳ ಹಿಂದೆ ಬಾಬಿಲೋನಿನ ರಾಜನಿಗೆ ಒಂದು ರಾತ್ರಿಯಲ್ಲಿ ಬಿದ್ದ ಅದ್ಭುತವಾದ ಕನಸು ಚರಿತ್ರೆಯಲ್ಲಿ ದಾಖಲಾಗಿದೆ.

ಆ ಕನಸಿನ ಕಥೆಯು ಭದ್ರವಾಗಿ ದಾಖಲಾಗಿದೆ. ಅದನ್ನು ಅನುಭವಿಸಿದ ವ್ಯಕ್ತಿ ಹೇಳಿದನು ಮತ್ತು ಬರೆದನು.

೧ – ಭವಿಷತ್ತನ್ನು ತಿಳಿಯುವುದು ಹೇಗೆ



5

ಸತ್ಯವೇದದ ದಾನಿಯೇಲ ೨ ನೇ ಅಧ್ಯಾಯನದಲ್ಲಿ ಕಥೆಯು ಹೇಳಲ್ಪಟ್ಟಿದೆ. ಕನಸು ಕಂಡವನು ಶಕ್ತಿಯುತ ರಾಜನಾದ ನೆ ನೆಬೂಕದ್ನೇಚರನು ಕನಸು ಏನೆಂದು ಜ್ಞಾಪಿಸಿಕೊಳ್ಳಲಾಗಲಿಲ್ಲ ಇದು ಸಾಧಾರಣ ಕನಸೆಂದು ಆತನಿಗೆ ತಿಳಿದಿತ್ತು. ಈ ಮರ್ಮದ ಕನಸ್ಸಿಗೆ ಬಹು ಪ್ರಮುಖ್ಯವಾದ ವಿಚಾರಣೆ ಇರಬೇಕೆಂದು ಆತನಿಗೆ ತಿಳಿದಿತ್ತು. ಹೌದು ಅರ್ಥವಿದೆ.


6

ಲೋಕದ ಚರಿತ್ರೆಯನ್ನು ನಮಗೆ ತಿಳಿಸಲು ದೇವರು ಆತನಿಗೆ ಒಂದು ಕನಸನ್ನು ಕೊಟ್ಟನು. ವಿಷೇಶವಾಗಿ ಯೂರೋಪ್ ಮತ್ತು ಮದ್ಯ ಪ್ರಾಶ್ಚದ ವಿಚಾರವಾಗಿದೆ. ಇದು ನೆಬೂಕದ್ನೇಚರ ರಾಜನ ಕಾಲದಿಂದ ಕೊನೆಯವರೆಗೂ ಸೂಚಿಸುತ್ತದೆ.


7

ಭವಿಷತ್ತಿನಲ್ಲಿ ಏನಿದೆ ಎಂದು ದೇವರು ನಮ್ಮ ಜೊತೆ ಹಂಚಿಕೊಂಡದ್ದಾಕ್ಕಾಗಿ ದೇವರಿಗೆ ಸ್ತೋತ್ರ ನೀಡಿರಿ. ಆಗಿನ ಕಾಲದ ನಾಗರೀಕತೆಯು ಲೋಕದಲ್ಲಿ ಬಾಬಿಲೋನು ಮೊದಲ ಲೋಕ ಸಾಮ್ರಾಜ್ಯವಾಗಿದ್ದು, ಮಹತ್ವವಾದ, ಐಶ್ವರ್ಯದಿಂದ ಕೂಡಿದ್ದು ಪ್ರಭಾವಶಾಲಿಯಾಗಿದ್ದ ರಾಜ್ಯವಾಗಿತ್ತು. ಶಕ್ತಿಯುತ ರಾಜನು ಈ ರಾಜ್ಯಕ್ಕೆ ಇದ್ದನು. ಈ ನಾಯಕನ ಒತ್ತಾಯದಿಂದ ವಿರೋಧಿಗಳನ್ನು ತನ್ನ ಅದೀನಕ್ಕೆ ತೆಗೆದುಕೊಂಡು ಎಲ್ಲಾ ರಾಜ್ಯಗಳಲ್ಲಿ ಉತ್ತಮನಾಗಿ ತೋರಿಸಿಕೊಂಡನು.


8

ನೆಬೂಕದ್ನೇಚರನ ಆಳಿಕೆಯ ೨ ನೇ ವರ್ಷದಲ್ಲಿ ತನ್ನ ರಾಜ್ಯ ಎಷ್ಟು ಕಾಲ ಇರುತ್ತದೆಂದು ಯೋಚಿಸಿ ನಿದ್ದೆಮಾಡಿದನು. ಆತನು ಬೇರೆ ನಾಯಕರ ಹಾಗೆ ಭವಿಷತ್ತನ್ನು ತಿಳಿಯಲು ಆಶಿಸಿದನು.
ಆ ರಾತ್ರಿ ಪರಲೋಕದಿಂದ ದೇವರು ಕೆಳಗೆ ನೋಡಿ, ಆ ಗಣ್ಯ ವ್ಯಕ್ತಿಗೆ ಭವಿಷತ್ತಿನ ದೃಶ್ಯವನ್ನು ಕೊಟ್ಟನು.


9

ರಾಜನು ಬೆಳಿಗ್ಗೆ ನಿದ್ದೆಯಿಂದ ಎದ್ದಕೂಡಲೇ ಆತನಿಗೆ ಗಲಿಬಿಲಿಯಾಯಿತು. ಆತನಿಗೆ ಒಂದು ಕನಸು ಬಿತ್ತು, ಇದು ಪ್ರಧಾನವಾದದ್ದೆಂದು ಆತನಿಗೆ ತಿಳಿದಿತ್ತು. ಆದರೆ ಆ ಕನಸನ್ನು ಮರೆತನು. ಬಾಬಿಲೋನಿನವರು ಕನಸುಗಳಿಗೆ ಪ್ರಾಮುಖ್ಯತೆಯನ್ನು ನೀಡುತ್ತಿದ್ದರು. ಕನಸನ್ನು ಮತ್ತು ಅದರ ಅರ್ಥವನ್ನು ತಿಳಿಯಲು ರಾಜನು ಆಶಿಸಿದನು.

೧ – ಭವಿಷತ್ತನ್ನು ತಿಳಿಯುವುದು ಹೇಗೆ


10

ಆತನಲ್ಲಿ ಜೋಯಿಸರು, ಮಂತ್ರವಾದಿಗಳೂ, ಮಾಟಗಾರರು ಪಂಡಿತರೂ ಇದ್ದರು. ಅವರು ಖಂಡಿತವಾಗಿ ಕನಸು ಏನೆಂದು ಮತ್ತು ಅದರ ಅರ್ಥವನ್ನು ತಿಳಿಸುವರು.
ಮುಂಜಾನೆ ಅರಮನೆಗೆ ಅವರನ್ನು ಕರೆದನು. ಅವರು ಬಂದು ರಾಜನ ಮುಂದೆ ನಿಂತಾಗ ರಾಜನು ಅವರಿಗೆ ಹೀಗೆಂದನು.




11

(ವಚನ , ದಾನಿಯೇಲ ೨:೩)
ನಾನು ಕನಸು ಕಂಡೆನು, ನನ್ನ ಮನಸ್ಸು ತತ್ತರಗೊಂಡಿದೆ ಅಂದನು.
ದಾನಿಯೇಲ ೨:೩


12

ಈ ಜನರು ಬೇರೆಯವರಂತೆ ಎಲ್ಲವೂ ತಿಳಿದಿದೆ, ಭವಿಷತ್ತನ್ನು ಹೇಳುತ್ತೇವೆಂದು ಸೂಚಿಸಿದರು.
ಅವರು ಕನಸನ್ನು ವಿವರಿಸಿ ಅರ್ಥ ಹೇಳುತ್ತೇವೆಂದು ಹೇಳುವರು, ಆದರೆ ಕನಸಿನ ಅರ್ಥವು ನಿಜವಾಗಿ ಅವರಿಗೆ ಗೊತ್ತಿಲ್ಲ.
ಅವರು ಸಮಯ ಕೇಳಿದರು, ಕೊನೆಯಲ್ಲಿ ಹೀಗೆಂದರು.



13

(ವಚನ ದಾನಿ ೨:೪)
ಅರಸನೇ, ಚಿರಂಜೀವಿಯಾಗಿರು ಆ ಕನಸನ್ನು ನಿನ್ನ ದಾಸರಿಗೆ ಹೇಳು, ಆದರ ತಾತ್ಪರ್ಯವನ್ನು ತಿಳಿಸುವೆವು ಎಂದು ಅರಿಕೆ ಮಾಡಿದರು



14

(ವಚನ , ದಾನಿ ೨:೫,೬) ಆಗ ರಾಜನು ಪ್ರತ್ಯುತ್ತರವಾಗಿ ನನ್ನ ಮಾತು ಖಂಡಿತ ಅಂದನು.



15

ನೀವೇ ಆ ಕನಸನ್ನೂ ಅದರ ಅಭಿಪ್ರಾಯವನ್ನೂ ನನಗೆ ತಿಳಿಸದಿದ್ದರೆ ನಿಮ್ಮನ್ನು ಚೂರು ಚೂರಾಗಿ ಕಡಿಸುವೆನು



16

ನಿಮ್ಮ ಮನೆಯನ್ನು ತಿಪ್ಪೆಯನ್ನಾಗಿ ಮಾಡಿಸಿಬಿಡುವೆನು.

೧ – ಭವಿಷತ್ತನ್ನು ತಿಳಿಯುವುದು ಹೇಗೆ



17

ನೀವು ಆ ಕನಸನ್ನು ಅದರ ಅಭಿಪ್ರಾಯವನ್ನೂ ತಿಳಿಸಿದರೆ ನನ್ನಿಂದ ನಿಮಗೆ ದಾನ ಬಹುಮಾನಗಳು ಕೊಡಲ್ಪಡುತ್ತವೆ.




18

ವಿಶೇಷ ಸನ್ಮಾನಗಳು ಲಭಿಸುವವು. ಆದ ಕಾರಣ ಆ ಕನಸನ್ನೂ ಅದರ ಅಭಿಪ್ರಾಯವನ್ನು ನನಗೆ ತಿಳಿಸಿರಿ .



19

ರಾಜನು ಕನಸನ್ನು ಹೇಳಲೆಂದು ತಿರಿಗಿ ಅವರು ಪ್ರಯತ್ನಿಸಿದರು. ಈಗ ರಾಜನಿಗೆ ಮೋಸಗಾರರೆಂದು ತಿಳಿಯಿತು. ತಿರುಗಿ ಅವರನ್ನು ಹೆದರಿಸಿದನು, ಕೊನೆಯಲ್ಲಿ ಹೀಗೆ ಅರಿಕೆ ಮಾಡಿದರು.




20

(ವಚನ ದಾನಿ ೨:೧೦,೧೧)
ಆಗ ಆ ಪಂಡಿತರು ರಾಜನು ಕೇಳಿದ ಸಂಗತಿಯನ್ನು ತಿಳಿಸಬಲ್ಲವನು ಲೋಕದಲ್ಲಿ ಯಾವನೂ ಇಲ್ಲ ಅಂದರು.



21

ಎಷ್ಟೇ ಬಲಿಷ್ಟನು, ಎಷ್ಟೇ ಪ್ರಭಲನು ಆದ ಯಾವ ಅರಸನೂ ಜೋಯಿಸನನ್ನಾಗಲಿ , ಮಾಟಗಾರನನ್ನಾಗಲಿ, ಪಂಡಿತನನ್ನಾಗಲಿ ಇಂಥ ಸಂಗತಿಯನ್ನು ಎಂದೂ ಕೇಳಿದ್ದಿಲ್ಲ.



22

ನರಜನ್ಮದವರ ಮಧ್ಯೆ ವಾಸಿಸದ ದೇವರುಗಳೇ ಹೊರತು ಇನ್ನಾರು ರಾಜನ ಸಮ್ಮುಖದಲ್ಲಿ ತಿಳಿಸಲಾರರು. ದಾನಿಯೇಲ ೨:೧೦,೧೧.



23

ಇದನ್ನು ಕೇಳಿ ರಾಜನು ಉಗ್ರ ಕೋಪವುಳ್ಳವನ್ನಾಗಿ ಬಾಬೆಲಿನ ಸಕಲ ವಿದ್ವಾಂಸರನ್ನು ಕೊಲ್ಲಬೇಕೆಂದು ಆಜ್ಞಾಪಿಸಿದನು.

೧ – ಭವಿಷತ್ತನ್ನು ತಿಳಿಯುವುದು ಹೇಗೆ


24

ದಾನಿಯೇಲ ಮತ್ತು ಆತನ ಮೂರು ಇಬ್ರಿಯ ಸ್ನೇಹಿತರೂ ಕೂಡ ಪಂಡಿತರೆಂದು ಪರಿಗಣಿಸಲ್ಪಟ್ಟರು. ಅವರು ಆ ಸಮಯದಲ್ಲಿ ಅಲ್ಲಿಗೆ ಬರಲಿಲ್ಲ. ರಾಜನು ಆ ಕನಸಿನ ವಿವರಣೆ ನೀಡಲು ಪಂಡಿತರನ್ನು ಕೇಳಿದಾಗ ಅವರು ಅಲ್ಲಿರಲಿಲ್ಲ.
ಸಿಪಾಯಿಗಳು ದಾನಿಯೇಲನನ್ನು ಕೊಲ್ಲಲು ಬಂದಾಗ ಆತನಿಗೆ ಆಶ್ಚರ್ಯವಾಯಿತು. ಜನರ ಮದ್ಯೆ ವಾಸಿಸದ ದೇವರನ್ನು ಬೇಡಲು ಸಮಯ ಕೇಳಿದನು. ನಂತರ ರಾಜನಿಗೆ ಕನಸನ್ನು ತಿಳಿಸುತ್ತೇನೆಂದನು.
(ದಾನಿಯೇಲ ೨:೧೨–೧೫)


25

ಈ ಪ್ರಾಮಾಣಿಕನಾದ ಯವನಸ್ತನಿಗೆ ಗೌರವ ನೀಡಿ ರಾಜನು ದಾನಿಯೇಲನ ದೇವರ ಜೊತೆ ಮಾತಾಡಲು ಅವನಿಗೆ ಸಮಯ ಕೊಟ್ಟನು.
ದಾನಿಯೇಲನ ಮೇಲೆ ಎಂಥ ಜವಾಬ್ದಾರಿಕೆ ಇದೆ. ಆತನ ಮತ್ತು ಆತನ ಸ್ನೇಹಿತರ ಪ್ರಾಣಕ್ಕೆ ಅಪಾಯವಿರುವುದು ಮಾತ್ರವಲ್ಲದೆ ಬಾಬಿಲೋನನ ಪಂಡಿತರ ಜೀವಕ್ಕೆ ಅಪಾಯವಿತ್ತು.
ದಾನಿಯೇಲನು ಮನೆಗೆ ಬಂದು ಪರಿಸ್ಥಿತಿಯನ್ನು ವಿವರಿಸಿದನು.


26

ಪರಲೋಕ ದೇವರಿಂದ ಕರುಣೆಗಾಗಿ ಅವರು ಬೇಡಿದರು, ಮರ್ಮವನ್ನು ತಿಳಿಸಲು ಬೇಡಿದರು, ಇದರಿಂದ ಅವರಿಗೂ ಮತ್ತು ಬಾಬಿಲೋನಿನ ಪಂಡಿತರಿಗೂ ಪ್ರಾಣ ಅಪಾಯ ತಪ್ಪುವದು.
ಇದು ಎಂಥ ಪ್ರಾರ್ಥನೆ ಕೂಟವಾಗಿರಬೇಕು ಅನ್ಯ ರಾಜನ ಕನಸನ್ನು ತಿಳಿಸಲು ೪ ಇಬ್ರಿಯ ಯುವಕರು ದೇವರನ್ನು ಬೇಡುತ್ತಾರೆ. ಕೊಟ್ಟಿರುವ ಸಮಯಕ್ಕೆ ಮೊದಲೇ ರಾಜನ ಮುಂದೆ ಅದನ್ನು ತಿಳಿಸಬೇಕಾಗಿತ್ತು. (ದಾನಿಯೇಲ ೨:೧೬–೧೮)


27

ದಾನಿಯೇಲನ ದೇವರು ಆ ರಾತ್ರಿಯಲ್ಲೇ ರಾತ್ರಿಯ ಕನಸಿನಲ್ಲಿ ದಾನಿಯೇಲನಿಗೆ ತಿಳಿಸಿದನು ಎಂದು ಸತ್ಯವೇದವು ಹೇಳುತ್ತದೆ. ಪರಲೋಕದ ದೇವರು ಆ ಪ್ರಾರ್ಥನೆಗಳನ್ನು ಕೇಳಲು ಗೌರವಿಸಲು ನಿರಾಕರಿಸಲಿಲ್ಲ.
ಆದ ಕಾರಣ ದಾನಿಯೇಲನು ದೇವರನ್ನು ಕೋಂಡಾಡಿ ಹೀಗೆಂದನು.



28

(ವಚನ ದಾನಿಯೇಲ ೨;೨೩)
ನಿನ್ನನ್ನು ಸ್ತುತಿಸುತ್ತೇನೆ, ಕೊಂಡಾಡುತ್ತೇನೆ.ನೀನು ನನಗೆ ಜ್ಞಾನ ತ್ರಾಣಗಳನ್ನು ತೋರ್ಪಡಿಸಿದ್ದೀ.

೧ – ಭವಿಷತ್ತನ್ನು ತಿಳಿಯುವುದು ಹೇಗೆ



29

ನಾವು ಬೇಡಿದ್ದನ್ನು ನನಗೆ ತೋರ್ಪಡಿಸಿದೆಯಲ್ಲಾ. ಹೌದು, ರಾಜನ ರಹಸ್ಯವನ್ನು ನನಗೆ ವ್ಯಕ್ತಗೊಳಿಸಿದ್ದೀ.
ದಾನಿಯೇಲ ೨:೨೩.
ದಾನಿಯೇಲ ಮತ್ತು ಮೂವರು ಇಬ್ರಿಯರ ಹೃದಯಗಳಲ್ಲಿ ಎಂಥ ಆನಂದವಿರಬೇಕು.
ದಾನಿಯೇಲನು ಅರಿಯೋಕನ ಬಳಿ ಓಡಿ ಹೋದನೆಂದು ಸತ್ಯವೇದವು ಹೇಳುತ್ತದೆ.



30

(ವಚನ , ದಾನಿಯೇಲ ೨:೨೪)
ಆಗ ದಾನಿಯೇಲನು ಬಾಬೆಲಿನ ವಿದ್ವಾಂಸರನ್ನು ಕೊಲ್ಲುವದಕ್ಕೆ ರಾಜನು ನೇಮಿಸಿದ ಅರ್ಯೋಕನ ಬಳಿ ಹೋಗಿ ಹೀಗೆ ಹೇಳಿದನು.




31

ಬಾಬೆಲಿನ ವಿದ್ವಾಂಸರನ್ನು ಕೊಲ್ಲಬೇಡ, ನನ್ನನ್ನು ರಾಜನ ಸನ್ನಿಧಿಗೆ ಬಿಡು; ನಾನು ಕನಸಿನ ಅಭಿಪ್ರಾಯವನ್ನು ರಾಜನಿಗೆ ತಿಳಿಸುವೆನು ಎಂದು ಹೇಳಿದನು.
ದಾನಿಯೇಲ ೨:೨೪



32

ದಾನಿಯೇಲನು ರಾಜನ ಸನ್ನಿಧಿಗೆ ಬಂದಾಗ, ರಾಜನು ನಾನು ಕಂಡ ಕನಸನ್ನು ಅದರ ಅರ್ಥವನ್ನು ನನಗೆ ತಿಳಿಸಬಲ್ಲಿಯಾ ಎಂದು ಕೇಳಿದನು.
ರಾಜನಿಗೆ ದಾನಿಯೇಲನು ಹೇಗೆ ಉತ್ತರ ನೀಡಿದನೆಂದು ನೋಡೋಣ.



33

(ವಚನ ದಾನಿಯೇಲ ೨:೨೭,೨೮)
ರಾಜನು ಕೇಳುವ ರಹಸ್ಯವನ್ನು ವಿದ್ವಾಂಸರಾಗಲಿ, ಮಾಟಗಾರರಾಗಲಿ, ಜೋಯಿಸರಾಗಲಿ, ಶಕುನದವರಾಗಲಿ, ಯಾರೂ ರಾಜನಿಗೆ ತಿಳಿಸಲಾರರು.




34

ಆದರೆ ರಹಸ್ಯಗಳನ್ನು ವ್ಯಕ್ತಗೊಳಿಸುವ ಒಬ್ಬನಿದ್ದಾನೆ. ಆತನು ದೇವರು. ಪರಲೋಕದಲ್ಲಿದ್ದಾನೆ. ಉತ್ತರ ಕಾಲದಲ್ಲಿ ನಡೆಯುತಕ್ಕದ್ದನ್ನು ಆತನೇ ರಾಜನಾದ ನೇಬೂಕದ್ನೇಚರನಿಗೆ ತಿಳಿಯ ಪಡಿಸಿದ್ದಾನೆ. ದಾನಿಯೇಲ ೨:೨೭,೨೮.


35


ಆತನ ಜ್ಞಾನಕ್ಕೆ ದಾನಿಯೇಲನು ಹೆಚ್ಚಿಸಿಕೊಳ್ಳಲಿಲ್ಲ. ದೇವರು ಮಾತ್ರ ಭವಿಷತ್ತನ್ನು ತಿಳಿಸಬಲ್ಲನೆಂದು ಆತನಿಗೆ ತಿಳಿದಿತ್ತು.

೧ – ಭವಿಷತ್ತನ್ನು ತಿಳಿಯುವುದು ಹೇಗೆ



36

(ವಚನ ಯೇಶಾಯ ೪೬:೯,೧೦)
ದಾನಿಯೇಲನು ಯೇಶಾಯ ೪೬:೯,೧೦ ವಚನಗಳನ್ನು ತಿಳಿದಿದ್ದನು. ನಾನೇ ದೇವರು ಇನ್ನು ಯಾರು ಇಲ್ಲ, ನಾನೇ ಪರಮ ದೇವರು ನನಗೆ ಸರಿಸಮಾನರಿಲ್ಲ.



37

ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದೇನೆ. ಇನ್ನೂ ನಡೆಯದಿರುವ ಕಾರ್ಯವನ್ನು ಪುರಾತನ ಕಾಲದಲ್ಲಿಯೇ ಅರುಹಿದ್ದೇನೆ.


38

ಈ ಜ್ಞಾನವು ದೇವರಿಂದ ಬಂತು. ೨೬೦೦ ವರ್ಷಗಳ ಲೋಕ ಚರಿತ್ರೆಯನ್ನು ರಾಜನಾದ ನೆಬುಕನ್ನೇಚರನಿಗೂ ಮತ್ತು ನಮಗೂ ತಿಳಿಸಿರುತ್ತಾನೆ. ಮೊದಲು ದಾನಿಯೇಲನು ರಾಜನು ಕಂಡ ಕನಸಿನ ಹಿನ್ನಲೆಯನ್ನು ನೀಡುತ್ತಾನೆ.



39

(ವಚನ ದಾನಿಯೇಲ ೨:೨೯)
ರಾಜನೇ ನೀನು ಹಾಸಿಗೆಯ ಮೇಲೆ ಮಲಗಿರುವಾಗ ಮುಂದೇನಾಗುವುದೋ ಎಂಬ ಯೋಚನೆಯು ನಿನ್ನಲ್ಲಿ ಹುಟ್ಟಿತಲ್ಲಾ.



40

ರಹಸ್ಯಗಳನ್ನು ವ್ಯಕ್ತಗೊಳಿಸುವಾತನು ಮುಂದಾಗುವುದನ್ನು ನಿನಗೆ ಗೋಚರ ಮಾಡಿದ್ದಾನೆ. ದಾನಿಯೇಲ ೨:೨೯.



41

(ವಚನ ದಾನಿಯೇಲ ೨:೩೧) ನಂತರ ದಾನಿಯೇಲನು ಕನಸನ್ನು ಹೇಳುತ್ತಾನೆ.
ರಾಜನೇ ನೀನು ಕಂಡದು , ಆಹಾ, ಅಧ್ಭುತ ಪ್ರತಿಮೆ.



42


ಥಳಥಳನೆ ಹೊಳೆಯುವ ಆ ದೊಡ್ಡ ಪ್ರತಿಮೆಯು ನಿನ್ನೆದುರಿಗೆ ನಿಂತಿತ್ತು, ಭಯಂಕರವಾಗಿ ಕಾಣಿಸಿತು. ದಾನಿಯೇಲ ೨:೩೧.

೧ – ಭವಿಷತ್ತನ್ನು ತಿಳಿಯುವುದು ಹೇಗೆ




43

(ವಿಡಿಯೋ ೯ ಸೆಕೆಂಡುಗಳು)
ರಾಜನು ಆಶ್ಚರ್ಯದಿಂದ ಹೀಗೆ ಹೇಳಿರುವುದನ್ನು ನೋಡಿರಿ. ಹೌದು ಅದೇ ಭಯಂಕರವಾದ ಪ್ರತಿಮೆ, ಎತ್ತರವಾಗಿ ಕಂಡಿತು.
ದಾನಿಯೇಲನು ಆ ಕನಸನ್ನು ಪರಿಷ್ಕಾರವಾಗಿ ವಿವರಿಸಿದಾಗ ಅದೇ ಕನಸು ಎಂದು ನೆಬೂಕನ್ನೇಚರನಿಗೆ ತಿಳಿಯಿತು.



44

ವಚನ ದಾನಿಯೇಲ ೨:೩೨, ೩೩
ಆ ಪ್ರತಿಮೆಯ ತಲೆಯು ಅಪರಂಜಿ, ಎದೆ, ತೋಳುಗಳು, ಬೆಳ್ಳಿ, ಹೊಟ್ಟೆ ಸೊಂಟಗಳು ತಾಮ್ರ.



45

ಕಾಲುಗಳು ಕಬ್ಬಿಣ, ಹೆಜ್ಜೆಗಳು ಕಬ್ಬಿಣ, ಮತ್ತು ಮಣ್ಣು.




46

(ವಿಡಿಯೋ ೧೪ ಸೆಕೆಂಡುಗಳು)
ನೆಬೂಕನ್ನೇಚರನು ಕಂಡ ಪ್ರತಿಮೆಯನ್ನು ದಾನಿಯೇಲನು ಸರಿಯಾಗಿ ವಿವರಿಸಿದಾಗ ನೆಬೂಕನ್ನೇಚರನಿಗೆ ಆಶ್ಚರ್ಯವಾಯಿತು.
ತಲೆಯು ಅಪರಂಜಿಯಾಗಿತ್ತು.
ಎದೆ, ತೋಳುಗಳು, ಬೆಳ್ಳಿ,
ಸೊಂಟವು, ತಾಮ್ರದಾಗಿತ್ತು
ಕಾಲುಗಳು ಕಬ್ಬಿಣ, ಮತ್ತು ಪಾದಗಳು ಕಬ್ಬಿಣ, ಮತ್ತು ಮಣ್ಣು.



47

(ವಚನ ದಾನಿಯೇಲ ೨:೩೪,೩೫)
ನೀನು ನೋಡುತ್ತಿರವಾಗಿ ಬೆಟ್ಟದೊಳಗಿಂದ ಒಂದು ಗುಂಡು ಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟು ಸಿಡಿದು ಬಂತು.




48

ಸಿಡಿದು ಬಂದು ಆ ಪ್ರತಿಮೆಯ ಕಬ್ಬಿಣ, ಮಣ್ಣಿನ ಹೆಜ್ಜೆಗಳಿಗೆ ಬಡಿದು ಚೂರು ಚೂರು ಮಾಡಿತು.



49

ಆಗ ಕಬ್ಬಿಣ, ಮಣ್ಣು , ತಾಮ್ರ, ಬೆಳ್ಳಿ, ಬಂಗಾರಗಳೆಲ್ಲವೂ ಪುಡಿ ಪುಡಿಯಾದವು.




50

ಸುಗ್ಗಿಯ ಕಣದ ಹೊಟ್ಟಿನಂತಾದವು, ಗಾಳಿಯು ತೂರಿಕೊಂಡು ಹೋಗಲು ಅವುಗಳಿಗೆ ನೆಲೆಯೇ ಇಲ್ಲವಾಯಿತು



51

(ವಿಡಿಯೋ ೯ ಸೆಕೆಂಡುಗಳು)
ನಂತರ ರಾಜನು ಒಂದು ಕಲ್ಲು ಎಲ್ಲಿಂದಲೋ ಬಹು ವೇಗವಾಗಿ ಬಂದು ಪ್ರತಿಮೆಯ ಪಾದಗಳ ಮೇಲೆ ಬಿದ್ದುದ್ದನ್ನು ಕೇಳಿ ಚಕಿತನಾಗಿರಬೇಕು. ಅದನ್ನು ಪುಡಿಪುಡಿ ಮಾಡಿ ಇಡೀ ಪ್ರತಿಮೆಯನ್ನು ದೂಳು ಮಾಡಿ, ಗಾಳಿಯು ಬಡಕೊಂಡು ಹೋಯಿತು. ಪ್ರತಿಮೆಯು ಇಲ್ಲದಂತಾಯಿತು.



52

(ವಚನ ದಾನಿಯೇಲ ೨:೩೫)
ಪ್ರತಿಮೆಗೆ ಬಡಿದ ಆ ಬಂಡೆಯು ಮಹಾ ಪರ್ವತವಾಗಿ ಲೋಕದಲ್ಲೆಲ್ಲಾ ತುಂಬಿಕೊಂಡಿತು.



53

(ವಿಡಿಯೋ ೮ ಸೆಕೆಂಡುಗಳು)
ಹೌದು, ದಾನಿಯೇಲನೇ, ರಾಜನು ಹೀಗೆ ಹೇಳಿರಬೇಕು. ಒಂದು ಬಂಡೆಯು ಯಾರ ಕೈಯಿಂದಲೂ ಬಾರದೆ ಪ್ರತಿಮೆಯನ್ನು ಚೂರು ಚೂರು ಮಾಡಿ ದೊಡ್ಡ ಪರ್ವತವಾಗಿ ಭೂಮಿಯನ್ನೆಲ್ಲಾ ಆವರಿಸುವುದು.
ರಾಜನು ಕನಸನ್ನು ಕಂಡಹಾಗೆ ಈ ಎಲ್ಲಾ ಕನಸು ಇತ್ತು. ಈ ಯವವನಸ್ತನು ಕಂಡಂತೆ ಪ್ರತಿ ವಿವರಣೆಯು ನೆಬೂಕನ್ನೇಚರನು ಕಂಡ ಕನಸಿನ ಹಾಗಿತ್ತೆಂದು ತಿಳಿದು ರಾಜನು ಆಶ್ಚರ್ಯಪಟ್ಟನು.


54

ಯಾವ ಮಾನವನೂ ದಾನಿಯೇಲನಿಗೆ ತಿಳಿಸಿಲ್ಲವೆಂದು ರಾಜನಿಗೆ ದ್ರುಢವಾಯಿತು. ಬೆರೆಯವರ ಕನಸನ್ನು ಯಾರೂ ಹೇಳಲಾಗದು. ದೈವಿಕ ಮೂಲದಿಂದ ಮಾತ್ರ ಇದು ಬಂದಿದೆ.


55

ಈ ಕನಸಿನಿಂದ ನನಗೇನೆಂದು ರಾಜನು ಯೋಚಿಸಿರಬೇಕು, ನಮಗೂ ಅದೇ ಯೋಚನೆ ಇರಬೇಕೆಂದು ನೆಬೂಕದ್ನೇಚರನ ಕನಸು ಲೋಕದ ಪ್ರಮುಖ ರಾಜ್ಯಗಳ ಏಳುವಿಕೆ ಮತ್ತು ಬೀಳುವಿಕೆಯನ್ನು ತಿಳಿಸುತ್ತದೆ. ಆತನ ಕನಸಿನಲ್ಲಿ ತಿಳಿಸಿದ ರಾಜ್ಯಗಳು ಒಂದು ವಿಧದಲ್ಲಿ ಈ ಲೋಕದ ಪ್ರತಿ ರಾಜ್ಯಕ್ಕೆ ಪ್ರಭಾವ ಬೀರುತ್ತದೆ. ವಿಶೇಷವಾಗಿ ಆಧುನಿಕ ಕಾಲಗಳಿಗೆ ಅನ್ವಯವಾಗಿದೆ.

೧ – ಭವಿಷತ್ತನ್ನು ತಿಳಿಯುವುದು ಹೇಗೆ

೧ – ಭವಿಷತ್ತನ್ನು ತಿಳಿಯುವುದು ಹೇಗೆ



56

ಕೆಲವು ಮಾತುಗಳಲ್ಲಿ ಬಾಬಿಲೋನಿನ ಕಾಲದಿಂದ ಚರಿತ್ರೆಯನ್ನು ದೇವರು ತಿಳಿಸಿದ್ದಾನೆ. ಕ್ರಿಸ್ತನಿಗೆ ಮೊದಲು ೬೦೦ ವರ್ಷಗಳಿಂದ ಲೋಕದ ಚರಿತ್ರೆಯ ಅಂತ್ಯಕ್ಕೆ ಬರುತ್ತದೆ.
ಕೊನೆಯದಾಗಿ ಕನಸಿನ ತಿರುಳಿಗೆ ದಾನಿಯೇಲನು ಬರುತ್ತಾನೆ.



57

(ವಚನ ದಾನಿಯೇಲ ೨:೩೮)
ರಾಜನನ್ನು ನೇರವಾಗಿ ದೃಷ್ಟಿಸಿ ದಾನಿಯೇಲನು ನೀನೇ ಆ ಬಂಗಾರದ ತಲೆ ಎಂದು ಹೇಳಿದನು.
ದಾನಿಯೇಲ ೨:೩೮
ಬಾಬಿಲೋನಿನ ತಲೆ ಶುದ್ಧವಾದ ಬಂಗಾರದ ಒಂದು ರಾಜ್ಯ.
ಆ ಮಾತುಗಳನ್ನು ರಾಜನು ಕೇಳಿ ರಾಜನ ಮುಖದಲ್ಲಿ ನಗೆ ಕಂಡಿರಬೇಕು.


58

ಮಿಲಟೆರಿ ಜಯಗಳು ಮತ್ತು ಶಿಲ್ಪಿಯ ಕೆಲಸ ಬಹು ಅಲಂಕಾರವಾಗಿತ್ತು. ಬಾಬಿಲೋನನ್ನು ಸೂಚಿಸಲು ಚಿನ್ನವು ಸರಿಯಾದದ್ದೆಂದು ಚರಿತ್ರೆಗಾರರು ಹೇಳುತ್ತಾರೆ.


59

ಬಾಬಿಲೋನನ ಕಟ್ಟಡಗಳನ್ನು ಅಲಂಕರಿಸಲು ಚಿನ್ನವು ದಾರಾಳವಾಗಿ ಉಪಯೋಗಿಸಲ್ಪಟ್ಟಿತು. ಪುರಾತನ ಪಟ್ಟಣದ ವಿವರಣೆಯನ್ನು ಒಂದು ಚರಿತ್ರೆಗಾರನು ನೀಡುವುದನ್ನು ಗಮನಿಸಿರಿ.



60

ಪೂರ್ವದ ತೋಟದಲ್ಲಿ ಕಟ್ಟಲ್ಪಟ್ಟು, ಇದು ಚಚೌಕವಾಗಿತ್ತು. ಅದರ ಸುತ್ತಲೂ ಗೋಡೆ ಮತ್ತು ಕಾಲುವೆ ಇತ್ತು.



61

ತಾಮ್ರದ ಹೆಬ್ಬಾಗಿಲುಗಳಿದ್ದವು, ತೂಗಾಡುವ ತೋಟಗಳಿದ್ದವು . ೨ ರಾಜನ ಅರಮನೆಗಳಿದ್ದವು.



62

ಇಡೀ ಲೋಕವು ಅದರ ಪಾದಗಳಿಗೆ ಅಡ್ಡ ಬಿದ್ದಿತು. ಅಲಂಕಾರವಾದ ರಾಣಿಯಾಗಿ ಮೆರೆಯಿತು.



63

ರಾಜ್ಯದ ಪ್ರಮುಖ ನಗರವಾಗಿತ್ತು. ಇದು ಬಂಗಾರದ ತಲೆಗೆ ಹೋಲಿಕೆಯಾಗಿದೆ. ಉರ್ೈಯ ಸ್ಮಿತ್ ದಾನಿಯೇಲ ಪ್ರಕಟನೆಯ ಪ್ರವಾದನೆಗಳು ಪುಟಗಳು ೩೩, ೩೪.




64

ಬಾಬಿಲೋನಿನ ತೂಗಾಡುವ ತೋಟಗಳು ಪುರಾತನ ಲೋಕದ ೭ ಅದ್ಭುತಗಳಲ್ಲಿ ಒಂದಾಗಿತ್ತು.


65

ದಾನಿಯೇಲನು ಬುದ್ಧಿವಂತನಾದ ರಾಜಕಾರಣಿಯಾಗಿದ್ದಿಲ್ಲ. ಹೆಸರುಗಳಿಸಲು ಪ್ರಯತ್ನಿಸಿದ್ದರೆ ಕನಸಿನ ಅರ್ಥವನ್ನು ಅಲ್ಲಿಗೆ ನಿಲ್ಲಿಸುತ್ತಿದ್ದನು. ಆದರೆ ಲೋಕಕ್ಕೆ ತಿಳಿಸಬೇಕಾದ ಒಂದು ಸಂದೇಶವು ದಾನಿಯೇಲನಿಗೆ ಇತ್ತು. ಆತನ ಕಾಲಕ್ಕೆ ಮಾತ್ರ ಒಂದು ಸಂದೇಶವಲ್ಲ, ಲೋಕದ ಚರಿತ್ರೆಯ ಅಂತ್ಯಕ್ಕೆ ಅನುಗುಣವಾದದ್ದಾಗಿತ್ತು.



66

(ವಚನ ದಾನಿಯೇಲ ೨:೩೯)
ಆದ ಕಾರಣ ದಾನಿಯೇಲನು ನಮ್ರತೆಯಿಂದ ಆದರೆ ಧೈರ್ಯವಾಗಿ ರಾಜನಿಗೆ ಹೀಗೆ ಅರಿಕೆ ಮಾಡಿದನು. ನಿನ್ನ ಕಾಲವಾದ ಮೇಲೆ ನನಗಿಂತ ಕನಿಷ್ಟವಾದ ಮತ್ತೊಂದು ರಾಜ್ಯವುಂಟಾಗುವುದು. ದಾನಿಯೇಲ ೨:೩೯.



67

ದಾನಿಯೇಲನಿಂದ ಈ ಮಾತುಗಳನ್ನು ಕೇಳಿದಾಗ ರಾಜನು ತೃಪ್ತಿಪಟ್ಟಾಗ ಆದ ನಗೆಯು ಈಗ ಮಾಯವಾಯಿತು. ಬೇರೆ ರಾಜ್ಯವು ಲೋಕವನ್ನು ಆಳುವದೆಂಬ ಅಭಿಪ್ರಾಯದ ಒಂದು ಯೋಚನೆಯು ಬಾಬಿಲೋನಿನ ಗರ್ವದ ರಾಜನಿಗೆ ಬರಲೇ ಇಲ್ಲ.



68

ಭೂ ಸಂಶೋದಕರು ನೆಬೂಕದ್ನೇಚರನು ಹೇಳಿದ ಮಾತುಗಳು ಮಣ್ಣಿನ ಹಲಿಗೆಯಲ್ಲಿ ಬರೆದಿರುವುದನ್ನು ಹೊರತೆಗೆದಿದ್ದಾರೆ.



69

ಎಸಗಿಲ ಮತ್ತು ಬಾಬಿಲೋನಿನ ಕೋಟೆಗಳನ್ನು ನಾನು ಬಲಗೊಳಿಸಿದೆ, ಮತ್ತು ನನ್ನ ಆಳಿಕೆಯು ನನ್ನ ಹೆಸರು ಸದಾ ಇರಲೆಂದು ಸ್ಥಾಪಿಸಿದೆನು.


೧ – ಭವಿಷತ್ತನ್ನು ತಿಳಿಯುವುದು ಹೇಗೆ

೧ – ಭವಿಷತ್ತನ್ನು ತಿಳಿಯುವುದು ಹೇಗೆ



70

(ವಚನ ದಾನಿಯೇಲು ೪:೩೦)
ಗರ್ವದ ನೆಬುಕನ್ನೇಚರನು ಹೀಗೆ ಹೇಳಿದನೆಂದು ಸತ್ಯ ವೇದವು ಹೇಳುತ್ತದೆ. ಇಗೋ ಮಹಾ ಪಟ್ಟಣವಾದ ಬಾಬಿಲೋನ್ ಎಂದು ರಾಜನು ಹೇಳಿದನು.



71

ನನ್ನ ಮಹಿಮೆಯು ಪ್ರಸಿದ್ಧಿಗೆ ಬರುವಂತೆ ನನ್ನ ಸಾಮರ್ಥ್ಯ ಬಲದಿಂದ ರಾಜನಿವಾಸಕ್ಕಾಗಿ ನಾನು ಕಟ್ಟಿಸಿಕೊಂಡಿರುವುದು. ದಾನಿಯೇಲ ೪:೩೦ ಬಾಬಿಲೋನ್ ರಾಜ್ಯವನ್ನು ವಶಪಡಿಸಿಕೊಳ್ಳುವ ಮಹತ್ವದ ರಾಜ್ಯ ಬ ರುವುದೆಂದು ದೇವರು ಹೇಳಿದನು. ದಾನಿಯೇಲನು ರಾಜ್ಯವನ್ನು ನೋಡುವ ವರೆಗೆ ಜೀವಿಸಿದನು.



72

(ವಿಡಿಯೋ ೧೩ ಸೆಕೆಂಡುಗಳು)
ನೆಬೂಕದ್ನೇಚರನ ಮೊಮ್ಮಗನಾದ ಬೆಲ್ಶೆಶಚ್ಚರನು ಹಟಮಾರಿ ಮತ್ತು ಗರ್ವದವನು. ಆತನ ಆಳಿಕೆಯಲ್ಲಿ ಮೇದ್ಯ ರಾಜನಾದ ಕೊರೇಷನು ಬಾಬಿಲೋನಿಗೆ ಮುತ್ತಿಗೆ ಹಾಕಿದನು.




73

ಅಕ್ಟೋಬರ್ ೧೩ ಕ್ರಿ.ಪೂ. ೫೩೯ ರಲ್ಲಿ ಬಂಗಾರದ ರಾಜ್ಯವಾದ ಬಾಬಿಲೋನ್ ಅಂತ್ಯಕ್ಕೆ ಬಂತು.



74

ಈ ಪಟ್ಟಣವು ಯಾರಿಂದ ಹೇಗೆ ತೆಗೆದುಕೊಡಲ್ಪಡುವುದೆಂದು ದೇವರು ಪ್ರವಾದನೆ ನುಡಿದದ್ದನ್ನು ಗಮನಿಸಿರಿ. ಬಾಬಿಲೋನಿನ ಬೀಳುವಿಕೆಗೆ ೨೦೦ ವರ್ಷಗಳ ಹಿಂದೆ ತಿಳಿಸಿದೆ.



75


(ವಚನ ಯೇಶಾಯ ೪೫:೧)
ಪ್ರವಾದಿಯಾದ ಯೇಶಾಯನ ಮೂಲಕ ದೇವರು ಹೀಗೆ ಹೇಳಿದನು.. ಯಾವನ ಕೈ ಹಿಡಿದು ಯಾವನೆದುರಿಗೆ ಜನಾಂಗಗಳನ್ನು ತುಳಿದೆನೋ ತಾನು ಅಭಿಷೇಕಿಸಿದ ಆ ಕೊರೇಷನಿಗೆ ಹೀಗೆ ಹೇಳುತ್ತಾನೆ.



76

ರಾಜರ ನಡುಕಟ್ಟನ್ನು ಬಿಚ್ಚಿ ಯಾವನ ಮುಂದೆ ಬಾಗಿಲು ಹೆಬ್ಬಾಗಿಲುಗಳನ್ನು ತೆರೆದು, ಮುಚ್ಚನು. ಯಶಾಯ ೪೫,೧.

೧ – ಭವಿಷತ್ತನ್ನು ತಿಳಿಯುವುದು ಹೇಗೆ



77

ಆತನು ಹುಟ್ಟಲು ೧೫೦ ವರ್ಷಗಳಿಗೆ ಮುಂಚೆ ಯಾರಿಂದ ಈ ಕಾರ್ಯ ಆಗುವದೆಂದು ಮೇದ್ಯದ ಕೊರೇಷನನ್ನು ಕುರಿತು ಹೇಳಿದೆ.



78

(ವಿಡಿಯೋ ೮ ಸೆಕೆಂಡುಗಳು)
ಗೋಡೆಗಳನ್ನು ಹೊಡೆದು ಹಾಕಲು ಬಹು ಎತ್ತರವಾಗಿತ್ತು, ಮತ್ತು ದಪ್ಪವಾಗಿದ್ದವು, ಅವುಗಳನ್ನು ಒಡೆಯಲಾಗಲಿಲ್ಲ. ಆದ ಕಾರಣ ಬೇರೆ ವಿಧಾನವನ್ನು ಮಾಡಿದನು.
ಮದ್ಯೆ ಹರಿಯುತಿದ್ದ ನದಿಯನ್ನು ಬೇರೆ ಕಡೆಗೆ ತಿರುಗಿಸಿದನು. ಆತನ ಸೈನ್ಯವು ನದೀ ದಡಕ್ಕೆ ಹೋಗಿ ಪಟ್ಟಣಕ್ಕೆ ಪ್ರವೇಶಿಸಿದರು.
ಕುಡಿತದ ಅಮಲಿನಿಂದ ಒಬ್ಬನು ಅಜಾಗರುಕತೆಯಿಂದ ತಾಮ್ರದ ಹೆಬ್ಬಾಗಿಲುಗಳನ್ನು ಮುಚ್ಚಲು ಮರೆತನು.


79

ಕೊರೇಷನ ಸಿಪಾಯಿಗಳು ನದಿಯ ಮೂಲಕ ಪಟ್ಟಣದ ಒಳಗೆ ಹೋಗಿ, ರಾಜನು ಮತ್ತು ಮಂತ್ರಿಗಳು ರಾಜನಾದ ನೆಬೂಕದ್ನೇಚರನು, ಯೇರುಸಲೇಮನ್ನು ಮುತ್ತಿಗೆ ಹಾಕಿದಾಗ ತೆಗೆದುಕೊಂಡ ಬಂಗಾರದ ಪಾತ್ರೆಗಳಲ್ಲಿ ಕುಡಿಯುತ್ತಿರುವಾಗ ಕೊಂದರು. ನೆಬೂಕದ್ನೇಚರನು ಅನೇಕ ವರ್ಷಗಳ ಹಿಂದೆ ಸೊಲೋಮೋನನ ಆಲಯದಿಂದ ಬಂಗಾರದ ಪಾತ್ರೆಗಳನ್ನು ತಂದಿದ್ದನು.



80

ಚಿನ್ನವನ್ನು ಸೂಚಿಸಿದ ಬಾಬಿಲೋನ್ ರಾಜ್ಯದ ನಂತರ ಬಾಬಿಲೋನಿಗಿಂತ ಕನಿಷ್ಠವಾದ ರಾಜ್ಯವು ಏಳುವದು ಇದು ಎದೆ, ತೋಳುಗಳು, ಬೆಳ್ಳಿ ಇದನ್ನು ಸೂಚಿಸುತ್ತದೆಂದು ದಾನಿಯೇಲನು ಹೇಳಿದನು.


81

ಮೇದ್ಯ ಪರ್ಶಿಯಾ ರಾಜ್ಯಗಳು ಒಟ್ಟಿಗೆ ಸೇರಿದರೂ ಅವು ಮಹತ್ವವುಳ್ಳ ಬಾಬಿಲೋನಿಗೆ ಕನಿಷ್ಟವಾಗಿದ್ದವು. ಅದು ಮದ್ಯ ಪ್ರಾಚ್ಯವನ್ನು ೨ ಶತಮಾನಗಳವರೆಗೆ ಆಳಿತು. ಬೆಳ್ಳಿಯ ಸಾಮ್ರಾಜ್ಯಕ್ಕೂ ಮಿತಿ ಇದೆ ಎಂದು ದಾನಿಯೇಲನು ಮುಂತಿಳಿಸಿದನು.

೧ – ಭವಿಷತ್ತನ್ನು ತಿಳಿಯುವುದು ಹೇಗೆ



82


(ವಚನ ದಾನಿಯೇಲ ೨:೩೯)
ಅನಂತರ ಬೇರೊಂದು ಮೂರನೆಯ ರಾಜ್ಯವು ತಾಮ್ರದ್ದಾಗಿ ತಲೆದೋರಿ ಭೂಮಂಡಲವನ್ನೆಲ್ಲಾ ಆಳುವದು
ದಾನಿ ೨:೩೯
ಇದು ನೆರವೇರಿತೇ? ಹೌದು


83

ಅದ್ಭುತ ಪ್ರತಿಮೆ, ಸೊಂಟ ತಾಮ್ರದ್ದಾಗಿತ್ತು. ಇದು ಮಹಾವೀರನಾದ ಅಲೆಗ್ಸಾಂಡರನು ಪರ್ಶಿಯದ ದೊರೆಯಿಂದ ೩ ನೇ ದರ್ಮಾವೇಶನನ್ನು ಅರಬೆಲೆ ಯುದ್ದದಲ್ಲಿ ಕ್ರಿ.ಪೂ.೩೩೧ ರಲ್ಲಿ ಸೋಲಿಸಿದನು . ೩ ನೇ ಲೋಕ ಸಾಮ್ರಾಜ್ಯವು ಗ್ರೀಕ್ ರಾಜ್ಯವಾಗಿತ್ತು.



84

ಆಗಿನ ಕಾಲದಲ್ಲಿ ಹರಡಿದ್ದ ರಾಜ್ಯದ ದೊರೆಯಾಗಿ ೨೫ ವರ್ಷದ ಯುವನಸ್ಥನು ಗ್ರೀಕ್ ರಾಜ್ಯಕ್ಕೆ ಬಂದನು.



85

ಗ್ರೀಕ್ ಚರಿತ್ರೆಗಾರನಾದ ಏರಿಯನ್ ಅಲೆಗ್ಸಾಂಡರ್ ನ ವಿಚಾರವಾಗಿ ಬರೆದು ಹೀಗೆಂದನು.
ಯಾವ ರಾಜ್ಯ, ಪಟ್ಟಣ, ಜನರಲ್ಲಿ ಆತನ ಹೆಸರು ಕೇಳದೆ ಇದ್ದವರು ಇರಲಿಲ್ಲವೆಂದು ನಾನು ನಂಬುತ್ತೇನೆ.



86

ಆತನ ಜನ್ಮವನ್ನು ಮತ್ತು ಕಾರ್ಯಗಳನ್ನು ಮಾಡಲು ದೇವರ ಕರವಿತ್ತೆಂದು ನನಗೆ ತಿಳಿದು ಬರುತ್ತದೆ
ಹಿಸ್ಟಾರಿಕಲ್ ಲೈಬ್ರರಿ ಪುಸ್ತಕ ೧೬,ಅಧ್ಯಾಯ ೧೨.


87

ನೆಬೂಕದ್ನೇಚರನು ಕಂಡ ಲೋಹದಂತೆ ಗ್ರೀಕ್ ಸೈನಿಕರು ತಾಮ್ರದ ಕವಚವನ್ನು ಧರಿಸಿದ್ದರು.


88

ಅಲೆಗ್ಸಾಂಡರನು ಜ್ವರದಿಂದ ಆತ ೩೩ ನೇ ವಯಸ್ಸಿನಲ್ಲಿ ಸತ್ತನು.
ಆತನ ಮರಣ ನಂತರ ರಾಜ್ಯವು ಬಲಹೀನವಾಗಿ ಅನೇಕ ಭಾಗಗಳಾಗಿ ವಿಭಾಗಿಸಲ್ಪಟ್ಟಿತು.

೧ – ಭವಿಷತ್ತನ್ನು ತಿಳಿಯುವುದು ಹೇಗೆ



89

ಜೂನ್ ೨೨ ಕ್ರಿ.ಪೂ. ೧೬೮ ರಲ್ಲಿ ಪಿಡ್ನ ಯುದ್ದದಲ್ಲಿ ಅಲೆಗ್ಸಾಂಡರನ ರಾಜ್ಯ ಆತನು ಸತ್ತ ೧೪೪ ವರ್ಷಗಳ ನಂತರ ನಾಶವಾಯಿತು. ರೋಮಿನ ಚರಿತ್ರೆ ೩ ನೆಯ ಪುಸ್ತಕ ಅಧ್ಯಾಯ ೧೦.



90

ಈಗ ಭಯಂಕರವಾದ ಒಂದು ರಾಜ್ಯವು ಬರುತ್ತದೆ. ಒಂದಾದ ನಂತರ ಒಂದು ರಾಜ್ಯವು ದೇವರು ತಿಳಿಸಿದ ರೀತಿ ಬಂತು.



91

೪ ನೇ ಲೋಕ ಸಾಮ್ರಾಜ್ಯದ ವಿವರಣೆಯಲ್ಲಿ ನಾಶ ಮಾಡುವ ಅಧಿಕಾರವೆಂದು ಕಬ್ಬಿಣದ ಕಾಲುಗಳಿಗೆ ಹೋಲಿಸಿದೆ. ಈ ರೀತಿ ರಾಜನಿಗೆ ದಾನಿಯೇಲನು ವಿವರಣೆಯನ್ನು ನೀಡಿದನು.



92

(ವಚನ ದಾನಿಯೇಲ ೨:೪೦)

೪ ನೇ ರಾಜ್ಯವು ಕಬ್ಬಿಣದಷ್ಟು ಗಟ್ಟಿ ದಾನಿಯೇಲ ೨:೪೦


93

ರೋಮಿನ ರಾಜರು ತಮ್ಮನ್ನು ದೇವರುಗಳೆಂದು ಕರಕೊಂಡರು, ಎಲ್ಲಾ ಜನರು ಆರಾಧಿಸಬೇಕು, ಎಲ್ಲರೂ ವಿಧೇಯರಾಗಿರಬೇಕೆಂದು ಹಕ್ಕಿನಿಂದ ಕೇಳಿದರು.

ರೋಮರ ಆಳಿಕೆಯ ಸಮಯದಲ್ಲಿ ಪ್ರಾಮುಖ್ಯವಾದ ೨ ಸಂಭವನೆಗಳಾಗಿದ್ದವು.



94

(೧)ಯೇಸು ಬೆತ್ಲೆಹೇಮ್‌ನಲ್ಲಿ ಹುಟ್ಟಿದನು.

ಬೆತ್ಲೆ ಹೇಮಿನಲ್ಲಿ ಇವರುಗಳ ಗಂಡು ಮಕಳನ್ನೆಲ್ಲಾ ಕೊಲಲ್ಲು ರೋಮ್‌ನ ಅದಿಕಾರಿಯು ಅಪ್ಪಣೆ ನೀಡಿದನು. ಯೇಸುವನ್ನು ಕೊಲ್ಲಲು ನಿರೀಕ್ಷಿಸಿದನು ಮತ್ತು.


95

೨. ರೋಮಿನ ಅದಿಕಾರದಲ್ಲಿ ಯೇಸು ಯೂದಾಯದಲ್ಲಿ ಕ್ರೂಜೆಗೆ ಹಾಕಲ್ಪಟ್ಟನು.
ಖಂಡನೆಗೆ ಒಬ್ಬ ರೋಮ್ ಅಧಿಕಾರಿ ಅನುಮತಿ ನೀಡಿದನು. ಯೇಸುವನ್ನು ರೋಮ್‌ನ ಸಿಪಾಯಿಗಳು ಶಿಲುಭೆಗೆ ಹಾಕಿ
ಮೊಳೆ ಹೊಡೆದರು. ಸಮಾದಿಯನ್ನು ಕಾಯಲು ರೋಮ್ ಮುದ್ರೆ ಹಾಕಲ್ಪಟ್ಟಿತು.
ರೋಮ್‌ನ ನಂತರ ಬೇರೊಂದು ರಾಜ್ಯ ಬರುವುದೆಂದು ಪ್ರವಾದನೆಯು ತಿಳಿಸಿಲ್ಲ.



96

(ವಚನ ದಾನಿಯೇಲ ೨:೪೧,೪೩)
ದಾನಿಯೇಲನು ಬರೆದನು. ಹೆಜ್ಜೆಗಳಲ್ಲಿ ಮತ್ತು ಬೆರಳುಗಳಲ್ಲಿ ಒಂದಂಶವು ಕಬ್ಬಿಣದ, ಒಂದಂಶವು ಕುಂಬಾರನ ಮಣ್ಣು ಆಗಿರುವದನ್ನು ನೀನು ನೋಡಿದ ಪ್ರಕಾರ.



97

ಇದು ವಿಭಾಗವಾದ ರಾಜ್ಯವಾಗಿರುವುದು.



98

ಜನರು ಆದ ಕಾರಣ ಬೆರೆತಿರುವರು, ಒಟ್ಟಿಗೆ ಸೇರುವುದಿಲ್ಲ.



99

ಕಬ್ಬಿಣವು ಮಣ್ಣಿನ ಜೊತೆ ಅಂಟ್ಟಿಕೊಳ್ಳುವುದಿಲ್ಲ. ದಾನಿಯೇಲ ೨:೪೧, ೪೩


100

ಇನ್ನೊಂದು ವಿಧದಲ್ಲಿ ಹೇಳಬೇಕೇದರೆ ಪ್ರವಾದಿಯು ಮುಂತಿಳಿಸಿದನು. ೫ನೇ ಲೋಕ ಸಾಮ್ರಾಜ್ಯ ಏಳುವದಿಲ್ಲ ಆದರೆ ಕಬ್ಬಿಣದ ರೋಮ್ ವಿಭಾಗಿಸಲ್ಪಡುತ್ತದೆ.



101

(ವಿಡಿಯೋ ೩ ಸೆಕೆಂಡುಗಳು). ರೋಮ್ ಅನೇಕ ರಾಜ್ಯಗಳಾಗಿ ವಿಭಾಗಿಸಲ್ಪಡುವದು.


102


೬೦೦ ವರ್ಷಗಳ ಕಾಲ ಆಳಿತು. ಈ ಕಬ್ಬಿಣದ ಗಟ್ಟಿಯಾದ ಸಾಮ್ರಾಜ್ಯವಾದ ರೋಮ್


103

ಐಶ್ವರ್ಯದಿಂದ ರಾಜಕೀಯ ಹೊಲಸಿನಿಂದ, ಸಾಮಾಜಿಕ ಕೊಳಕಿನಿಂದ ರೋಮ್ ದೃಡತೆಯನ್ನು, ಬಲವನ್ನು ಕಳಕೊಂಡು ಅನ್ಯ ಜನಾಂಗಕ್ಕೆ ಒಳಗಾಯಿತು. ಇದನ್ನು ಕ್ರಿ.ಶ ೩೫೧ ರಿಂದ ಕ್ರಿ.ಶ ೪೭೬ ರವರೆಗೆ ಜಯಸಿದರು.



104

ಅಗಸ್ಥಸ್ ರಾಜನನ್ನು ತೆಗೆದುಹಾಕಿದರು, ರೋಮ್ ಅನೇಕ ಭಾಗಗಳಾಗಿ ವಿಭಾಗವಾಯಿತು.ಇದು ಕಬ್ಬಿಣ ಮತ್ತು ಮಣ್ಣನ್ನು ಬೆರತಿದ್ದ ಪಾದಗಳನ್ನು ಬೆರಳುಗಳನ್ನು ಸೂಚಿಸಿತು.



105

(ವಚನ ದಾನಿಯೇಲ ೨:೪೩)
ಕಬ್ಬಿಣವು ಜೇಡಿ ಮಣ್ಣಿನೊಂದಿಗೆ ಬೆರತಿರುವುದನ್ನು ನೀನು ನೋಡಿದ ಮೇರೆಗೆ ಆ ರಾಜ್ಯಾಂಶಗಳು ಸಂತತಿ ಸಂಭಂದವಾಗಿ ಬೆರೆತುಕೊಳ್ಳುವವು.



106

ಆದರೆ ಕಬ್ಬಿಣವು ಮಣ್ಣಿನೊಂದಿಗೆ ಹೇಗೆ ಕಲೆಯುವುದಿಲ್ಲವೋ ಹಾಗೆಯೇ ಅವು ಒಂದಕ್ಕೊಂದು ಅಂಟಿಕೊಳ್ಳುವುದಿಲ್ಲ. ದಾನಿಯೇಲ ೨:೪೩
ಅನ್ಯ ದೇಶಿಯರು ರೋಮ್ ರಾಜ್ಯವನ್ನು ವಿಭಾಗಿಸಿದರು.
ಕಬ್ಬಿಣದ ಪಾದಗಳು ಸೂಚಿಸಿದ ವಿಭಾಗಗಳು ಯುರೋಪಿನಲ್ಲಿ ಇಂದು ಇರುವ ರಾಜ್ಯಗಳಿಗೆ ಆಸ್ತಿವಾರಗಳಾಗಿವೆ.



107

(ವಿಡಿಯೋ ೬ ಸೆಕೆಂಡುಗಳು) ಅನೇಕ ಚರಿತ್ರೆಗಾರರು ೧೦ ರಾಜ್ಯಗಳನ್ನು ತಿಳಿಸುತ್ತಾರೆ. ಅಲಿಮಿನಿ, ಜರ್ಮನಿ , ಬರ್ಗಂಡಿಯನ್ನರು , ಸ್ವಿಸ್ಸ್, ಪ್ರಾಂಕ್ಸ್ ಅಂದರೆ ಫ್ರಾನ್ಸ್, ಲಂಬಾರ್ಡ್, ಇಟಲಿ, ಸ್ಯಾಕ್ಷನ್–ಇಂಗ್ಲೀಷ್



108

(ವಿಡಿಯೋ ೬ ಸೆಕೆಂಡುಗಳು)
ಸುವೆ– ಪೋರ್ಚಗೀಸ್ಸ್, ವಿಸಿಗಾತ್ಸ್– ಸ್ಪಾನಿಷ್ (ಹೆರೀಲಿ, ಆಸ್ಟ್ರೊಗಾತ್ಸ್, ವ್ಯಂಡಾಲ್ಸ್) ಈ ಮೂರು ರಾಜ್ಯಗಳು ಈಗ ಸೇರಿಲ್ಲ.

೧ – ಭವಿಷತ್ತನ್ನು ತಿಳಿಯುವುದು ಹೇಗೆ


109

ಈ ರಾಜ್ಯಗಳು ಒಂದಕ್ಕೊಂದು ಅಂಟಿಕೊಳುವುದಿಲ್ಲವೆಂದು ದೇವರು ತಿಳಿಸಿದ್ದಾನೆ.



110

ಯೂರೋಪ ರಾಜ್ಯಗಳು ವಿಂಗಡವಾಗಿರುತ್ತವೆ. ಒಂದಾಗಿ ಇರಲಾರವು.



111

ಅವರು ಸಂತತಿ ಸಂಭದವಾಗಿ ಬೆರೆತುಕೊಳ್ಳುವರು, ಅವರು ಒಬ್ಬರಿಗೊಬ್ಬರು ಮದುವೆಯಾಗುವರು.


112


ಡೆನ್ ಮಾರ್ಕಿನ ಒಂದು ಅರಮನೆಯಲ್ಲಿ ರಾಜ ಮನೆತನದ ಕುಟುಂಬವು ಚಿತ್ರಿಸಲ್ಪಟ್ಟಿದೆ. ಅವ್ರೆಲ್ಲರೂ ಸಂಭಂದಿಕರು, ಯುದ್ದವಾಗುವುದನ್ನು ತಡೆಗಟ್ಟುತ್ತೇವೆಂದು ಅವರು ನಿರೀಕ್ಷಿಸಿದರು. ಅದು ಕಾರ್ಯವನ್ನು ಮಾಡಲಿಲ್ಲ.


113

ಅವರು ಒಂದಾಗಿ ಇರಲಾಗಲಿಲ್ಲ. ಯುರೋಪಿನಲ್ಲಿ ಆದ ಅನೇಕ ಯುದ್ದಗಳು ನಿಜವಾಗಿ ಕುಟುಂಬದ ಜಗಳಗಳು, ಅವರು ಒಂದಕ್ಕೊಂದು. ಅಂಟಿಕೊಳ್ಳುವುದಿಲ್ಲವೆಂದು ದೇವರು ಮುಂತಿಳಿಸಿದನು.
ರೋಮ್ ರಾಜ್ಯವನ್ನು ಹಿಂದಕ್ಕೆ ಒಟ್ಟಿಗೆ ತರಲು ಪ್ರಯತ್ನಿಸಿದರು. ಅದು ಕಬ್ಬಿಣ ಮತ್ತು ಮಣ್ಣು ಒಂದಾಗಿ ಸೇರದ ರೀತಿ ಅವರು ಒಟ್ಟಿಗೆ ಸೇರಲು ಆಗದು.


114

ತಿರಿಗಿ ಯುರೋಪಿನ ರಾಜ್ಯಗಳನ್ನು ಒಟ್ಟಿಗೆ ಸೇರಿಸುವ ಪ್ರಯತ್ನಗಳನ್ನು ಕುರಿತು ಯೋಚಿಸಿರಿ.
ವಿಭಾಗವಾಗಿರುವ ಯುರೋಪನ್ನು ಒಂದುಗೂಡಿಸಲು ಪ್ರಯತ್ನಿಸಿದ ಲೋಕದ ನಾಯಕರಿಗೆ ಏನಾಯಿತು?



115

ಚಾರ್ಲಮಿನ್ ಸೋತನು ; ೫ನೇ ಚಾರ್ಲ್ಸ್ ಸೋತನು; ೧೪ ನೇ ಲೂಯಿ ಸೋತನು; ನೆಪೋಲಿಯನ್–ಸೋತನು; ಕೇಸರ್ ವಿಲ್ ಹೆಲ್ಮ್ ಸೋತನು; ಹಿಟ್ಲರ್ ಸೋತನು, ೧೮೦೦ ರಲ್ಲಿ ಫ್ರಾನ್ಸ್ ದೇಶದ ಮಹಾ ಹೋರಾಟಗಾರನಾಗಿದ್ದವನು ಎಲ್ಲಾ ದ್ವೀಪದಲ್ಲಿ ಕೈದಿಯಾಗಿದ್ದನು. ಪರಲೋಕ ದೇವರು ನನಗಿಂತಲೂ ಮಹಾ ಪರಾಕ್ರಮಿ ಎಂದು ಒಪ್ಪಿಕೊಂಡನು.

ಅವರೆಲ್ಲರಿಗೂ ದೇವರು ದೊಡ್ಡವನಾಗಿದ್ದನು.



116

ಅವು ಒಂದಕ್ಕೊಂದು ಅಂಟಿಕೊಳ್ಳುವುದಿಲ್ಲವೆಂದು ದೇವರು ಹೇಳಿದ್ದನು. ಲೋಕ ನಾಯಕರಿಗೆ ಇದು ಸರಿಯಾದ ಪರಮ ವಾಕ್ಯವಾಗಿದೆ. ಹೇಗೂ ಜನರು ಯುರೋಪಿನ ರಾಜ್ಯಗಳನ್ನು ಒಂದಾಗಿ ತರಲು ಇನ್ನೂ ಪ್ರಯತ್ನಿಸುತ್ತಿದ್ದಾರೆ. ದೇವರು ಹೇಳಿದಂತೆ ಅವು ಒಂದಕ್ಕೊಂದು ಅಂಟಿಕೊಳ್ಳುವುದಿಲ್ಲ.

ಅವರು ಒಂದಾಗಿ ಸೇರಬಹುದು, ಆದರೆ ಒಂದಕ್ಕೊಂದು ಅಂಟಿಕೊಳ್ಳಲಾಗದು.



117

(ವಿಡಿಯೋ ೧೨ ಸೆಕೆಂಡುಗಳು)

ಈ ಪ್ರವಾದನೆಯ ತಿರುಗುವಿಕೆಯನ್ನು ತಿಳಿದು ನೆಬುಕದ್ನೇಚರನಿಗೆ ಗಲಿಬಿಲಿಯಾಗಿರಬೇಕು.


ಆ ರಾಜ್ಯಗಳ ನಾಶವನ್ನು ದೇವರು ಮುಂತಿಳಿಸಿದನು.

ರೋಮ್ ಅನೇಕ ರಾಜ್ಯಗಳಾಗಿ ವಿಭಾಗವಾಗುತ್ತದೆಂದು ದೇವರು ಮುಂತಿಳಿಸಿದನು, ಪಶ್ಚಿಮ ಯುರೋಪಿನಲ್ಲಿ ಈಗ ೭ ರಾಜ್ಯಗಳಿವೆ, ಕೆಲವು ಬಲಿಷ್ಟವಾದವು ಕೆಲವು ಬಲಹೀನವಾದವು. ಆದರೆ ನಿರೀಕ್ಷೆಯಿಲ್ಲದ ವಿಚಾರವಾಗಿವೆ.


118

ಮುಂದೆ ಏನಾಗುತ್ತದೆ ?

ಸಂತೋಷ ಮತ್ತು ಭರವಸೆಯಿಂದ ದಾನಿಯೇಲನು ಆಶ್ಚರ್ಯಕರವಾದ ಅಂತ್ಯಕ್ಕೆ ಬಂದು ಪ್ರತಿಮೆಯನ್ನು ವಿವರಿಸಿ ಹೀಗೆ ಹೇಳುತ್ತಾನೆ.



119

(ವಚನ ದಾನಿಯೇಲ ೨:೪೪,೪೫)

ಆ ರಾಜರ ಕಾಲದಲ್ಲಿ ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು. ಅದು ಎಂದಿಗೂ ಅಳಿಯದು.

೧ – ಭವಿಷತ್ತನ್ನು ತಿಳಿಯುವುದು ಹೇಗೆ

೧ – ಭವಿಷತ್ತನ್ನು ತಿಳಿಯುವುದು ಹೇಗೆ



120

ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿ ಹೋಗದು, ಆ ರಾಜ್ಯಗಳನ್ನೆಲ್ಲಾ ಭಂಗ ಪಡಿಸಿ ನಿರ್ಣಾಮ ಮಾಡಿ ಶಾಶ್ವತವಾಗಿ ನಿಲ್ಲುವದು.




121

ಅದರ ಅರ್ಥವು ಹೀಗಿದೆ ಬೆಟ್ಟದೊಳಗಿಂದ ಒಂದು ಗುಂಡುಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟಿತು.



122

ಕಬ್ಬಿಣ, ತಾಮ್ರ, ಮಣ್ಣು, ಬೆಳ್ಳಿ, ಬಂಗಾರಗಳನ್ನು ಒಂದು ಬಂಡೆಯು ಚೂರು ಚೂರು ಮಾಡಿತು.



123

ಇದರಿಂದ ಪರಲೋಕ ದೇವರು ಮುಂದೆ ನಡೆಯುವ ವಿಷಯಗಳನ್ನು ರಾಜನಿಗೆ ತಿಳಿಯ ಪಡಿಸಿದ್ದಾನೆ. ಕನಸು ನಿಜ, ಅದರ ಅರ್ಥವು ನಂಬ ತಕ್ಕದ್ದು.


124

ಮಾನವನ ಚರಿತ್ರೆಯ ಹಂತದ ಮಹಾಸಂಭವನೆಯು ಯೇಸುಕ್ರಿಸ್ತನ ಎರಡನೆಯ ಬರೋಣ ಮತ್ತು ಆತನ ರಾಜ್ಯವನ್ನು ಸ್ಥಾಪಿಸುವುದಾಗಿದೆ. ಇದು ಕೈಯಿಲ್ಲದೆ ಒಡೆಯಲ್ಪಟ್ಟ ಬಂಡೆಯನ್ನು ಸೂಚಿಸುತ್ತದೆ. ಆತನ ರಾಜ್ಯವು ಮಾನವರ ಕೈಯಿಂದಲ್ಲ, ದೇವರ ಮಹಾ ಕೈಯಿಂದ ಸ್ಥಾಪಿಸಲ್ಪಡುವುದು. ಇಲ್ಲಿ ಭೂಮಿಯನ್ನೆಲ್ಲಾ ಆವರಿಸುವ ಒಂದು ರಾಜ್ಯವಾಗಿರುತ್ತದೆ.



125

(ವಚನ. ಪ್ರಕಟನೆ ೧೧:೧೫)
ಆಗ ಪ್ರವಾದನೆ ನೆರವೇರುವದು
ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ ಆತನ ಅಭಿಷೇಕಿಸಿದವನಿಗೂ ಉಂಟಾಯಿತು. ಆತನು ಯುಗಯುಗಾಂತರಗಳಲ್ಲಿಯೂ ರಾಜ್ಯವನ್ನಾಳುವನು. ಪ್ರಕಟನೆ ೧೧:೧೫




126

ದಾನಿಯೇಲನ ಪುಸ್ತಕದಲ್ಲಿರುವ ಆಶ್ಚರ್ಯವಾದ ಪ್ರವಾದನೆಯಲ್ಲಿ ಸೇರಿರುವ ಕೊನೆಯ ಸಂಭವನೆಗಳನ್ನು ಗಮನಿಸಿರಿ.


127

ಯೇಸುವಿನ ೨ ನೆಯ ಬರೋಣ


128

ಲೋಕದ ರಾಜ್ಯಗಳು ಅಂತ್ಯಕ್ಕೆ ಬರುತ್ತವೆ.


129

ದೇವರು ಆತನ ರಾಜ್ಯವನ್ನು ಸ್ಥಾಪಿಸುವನು.


130

ಈ ರಾಜ್ಯವು ಸದಾ ಇರುತ್ತದೆ.


131

ಯೇಸು ರಾಜಾಧಿರಾಜನಾಗಿ ಅಭಿಷೇಕವನ್ನು ಹೊಂದುವನು.



132

ನಿತ್ಯರಾಜ್ಯವನ್ನು ಆಳಲು ಯೇಸು ಈ ಭೂಮಿಗೆ ಬರುತ್ತಾನೆ.


133

ದಾನಿಯೇಲನು ರಾಜನಿಗೆ ಈ ಕನಸನ್ನು ಮತ್ತು ದೇವರ ಚಕಿತಗೊಳಿಸುವ ವಿವರಣೆಯನ್ನು ತಿಳಿಸಿದಾಗ, ರಾಜನಾದ ನೆಬುಕನ್ನೇಚರನು ತನ್ನ ಸಿಂಹಾಸನದಿಂದ ಎದ್ದನು.
ನಮ್ರತೆಯಿಂದ ದಾನಿಯೇಲನ ಮಹಾದೇವರ ಗೌರವಾರ್ಥವಾಗಿ ದಾನಿಯೇಲನಿಗೆ ಅಡ್ಡಬಿದ್ದನು. ದೇವರ ಜ್ಞಾನ ಮತ್ತು ಶಕ್ತಿಯು ಪರಿಣಾಮಕಾರಿಯಾಗಿ ಸಿದ್ಧಾಂತ ಪಡಿಸಲ್ಪಟ್ಟಿತು.

೧ – ಭವಿಷತ್ತನ್ನು ತಿಳಿಯುವುದು ಹೇಗೆ


134

(ವಚನ. ದಾನಿಯೇಲ ೨:೪೭)
ರಾಜನು ದಾನಿಯೇಲನಿಗೆ ಹೀಗೆಂದನು, ನಿಮ್ಮ ದೇವರು ದೇವಾಧಿ ದೇವನೂ, ರಾಜರ ಒಡೆಯನೂ ರಹಸ್ಯಗಳನ್ನು ವ್ಯಕ್ತಗೊಳಿಸುವವನೂ ಆಗಿದ್ದಾನೆ. ದಾನಿಯೇಲ ೨:೪೭.
ನಿಜದಲ್ಲಿ ದಾನಿಯೇಲನ ದೇವರನ್ನು ನನ್ನ ದೇವರಾಗಿರಲು ನಾನು ಆಶಿಸುತ್ತೇನೆ. ಆ ದೇವರು ಭವಿಷತ್ತನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡಿದ್ದಾನೆ.


135

ಕ್ರಿಸ್ತನು ಹುಟ್ಟಲು ೬ ಶತಮಾನಗಳ ಹಿಂದೆ ನೆಬೂಕದ್ನೇಚರನು ಕಂಡ ಲೋಹಗಳ ಪ್ರತಿಮೆಯು ಮುಂದಿನ ಶತಮಾನಗಳಲ್ಲಿ ಬರಲಿರುವ ಮರ್ಮಗಳನ್ನು ದೇವರು ತಿಳಿಸಿದನು.


136

ಹೌದು ಸ್ನೇಹಿತನೇ, ಕನಸು ನಿಜ ಅದರ ಅರ್ಥವು ನಂಬತಕ್ಕದ್ದು. ಪ್ರಯಾಣ ಬೇಗನೆ ಮುಗಿಯುತ್ತಿದೆ, ಮುಂದಿನ ಮಹಾ ಸಂಭವನೆಯು, ಮೇಘದಲ್ಲಿ ಕ್ರಿಸ್ತನು ತನ್ನ ನಿತ್ಯರಾಜ್ಯವನ್ನು ಸ್ಥಾಪಿಸಲು ಬರುತ್ತಾನೆ.



137

(ವಿಡಿಯೋ ೫ ಸೆಕೆಂಡುಗಳು)
ಚಿನ್ನ, ಬೆಳ್ಳಿ, ತಾಮ್ರ, ಮತ್ತು ಕಬ್ಬಿಣವನ್ನು ಸೂಚಿಸುವ ರಾಜ್ಯಗಳು ಚರಿತ್ರೆಯಲ್ಲಿ ದಾಟಿಹೋದವು, ಮತ್ತು ಮುಂದಿನ ಮಹಾ ಸಾಂಭವನೆಯು ಕರ್ತನ ಶೀಘ್ರ ಬರೋಣವಾಗಿದೆ.


138


ರಕ್ತ ಕರೆಯಿರುವ ಕಲ್ವೇರಿಯ ಶಿಲುಭೆಯ ಮೂಲಕ ಅಲಂಕಾರವಾದ ನಾಳಿನ ದಿನವನ್ನು ಸಾದ್ಯವಾಗ ಮಾಡಿದ್ದಾನೆ.
ಇವೆಲ್ಲವೂ ನೆರವೇರಲು ಸ್ವಲ್ಪ ಸಮಯ ಮಾತ್ರ ಇದೆ. ಈಗ ದೇವರು ಆತನ ರಾಜ್ಯವನ್ನು ಮತ್ತು ಆ ರಾಜ್ಯಕ್ಕೆ ಬಾಧ್ಯರನ್ನು ಸಿದ್ದಮಾಡುತ್ತಿದ್ದಾನೆ.

೧ – ಭವಿಷತ್ತನ್ನು ತಿಳಿಯುವುದು ಹೇಗೆ



139

(ವಿಡಿಯೋ ೭ ಸೆಕೆಂಡುಗಳು)
ಯೇಸು ಕ್ರಿಸ್ತನ ಪಕ್ಕದಲ್ಲಿ ಶಿಲುಭೆಗೆ ಹಾಕಿದ ಕಳ್ಳನು ಮಾಡಿದ ಹಾಗೆ ನಾವು ನಂಬಿಕೆಯಿಂದ ಮಾಡಿದರೆ ನಾವು ಅಲ್ಲಿ ಭಾಗವಹಿಸುತ್ತೇವೆಂಬ ದೃಡ ನಿರೀಕ್ಷೆಯು ಇರುತ್ತದೆ.
ಯೇಸುವಿನ ಸಮೀಪಕ್ಕೆ ಹೋಗಲಾಗಲಿಲ್ಲ. ಆದರೆ ಆತನು ಒಬ್ಬ ಪಾಪಿಯೆಂದು ತಿಳಿದು,ಆತನು ಮಾಡಿದ ಪಾಪದಿಂದ ರಕ್ಷಿಸಲ್ಪಡುವ ಅಗತ್ಯ ಅವನಿಗಿತ್ತು.
ಲೋಕ ರಕ್ಷಕನಾದ ಯೇಸುವನ್ನು ನೋಡಿದನು, ಮುಖದಿಂದಲೂ, ಮತ್ತು ಮುಳ್ಳಿನ ಕಿರೀಟದಿಂದಲೂ ಹಣೆಯಲ್ಲಿ ಹರಿಯುವ ರಕ್ತವನ್ನು ಕಂಡನು.
ಆತನ ಹೃದಯದಲ್ಲಿ ಪರಿವರ್ತನೆ ಉಂಟಾಯಿತು, ಆತನು ಪಾಪಗಳನ್ನು ಅರಿಕೆ ಮಾಡಿ ಹೀಗೆ ಕೂಗಿದನು.




140

(ವಚನ – ಲೂಕ ೨೩:೪೨)
ಯೇಸುವೇ, ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನನ್ನು ನೆನಸಿಕೋ ಅಂದನು. ಲೂಕ ೨೩:೪೨
ಆ ರಾಜ್ಯದಲ್ಲಿ ಆತನಿರುತ್ತಾನೆಂಬ ಭರವಸೆಯನ್ನು ಯೇಸು ಅವನಿಗೆ ನೀಡಿದನು.


141

ನೀವು ಕೂಡ ಅದೇ ಪ್ರಾರ್ಥನೆ ಮಾಡಿ, ಅದೇ ಭರವಸೆಯನ್ನು ಈ ಲೋಕದಲ್ಲಿ ಬೇಗನೆ ಸ್ಥಾಪಿಸಲಿರುವ ಕ್ರಿಸ್ತನ ರಾಜ್ಯದಲ್ಲಿ ಕ್ರಿಸ್ತನ ಜೊತೆಯಲ್ಲಿರುತ್ತೇನೆಂದು ಪಡೆಯಬಹುದು.



142

(ವಚನ ಮತ್ತಾಯ ೨೫:೩೪)
ಆತನ ಬರೋಣದಲ್ಲಿ ಕ್ರಿಸ್ತನ ತುಟಿಗಳಿಂದ ಆಹ್ವಾನವನ್ನು ಕೇಳಬಹುದು.
ನನ್ನ ತಂದೆಯ ಆಶೀರ್ವಾದ ಹೊಂದಿದರೇ ಬನ್ನಿರಿ– ಲೋಕಾದಿಯಿಂದ ನಿಮಗೋಸ್ಕರ ಸಿದ್ದಮಾಡಿದ್ದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ಮತ್ತಾಯ ೨೫:೩೪.

೧ – ಭವಿಷತ್ತನ್ನು ತಿಳಿಯುವುದು ಹೇಗೆ


143

ಈ ಲೋಕವು ಮಾನವರ ಕೈಗಳಲ್ಲಿ ಇಲ್ಲ.
ಇದು ದೇವರ ಕೈಯಲ್ಲಿದೆ. ಭವಿಷತ್ತನ್ನು ಭರವಸೆಯಿಂದ ನಾವು ಎದುರಿಸ ಬಹುದು. ಬೇಗನೆ ಕ್ರಿಸ್ತನು ಬರುತ್ತಾನೆ. ಯಾರ ಕೈಯಿಲ್ಲದೆ ಬಂಡೆಯು ಪ್ರತಿಮೆಯನ್ನು ಒಡೆದು ಹಾಕುವುದು.
ಈ ಲೋಕದ ರಾಜ್ಯಗಳು ಒಡೆದು ಬೀಳುವವು, ದೇವರು ಆತನ ನಿತ್ಯ ಸದಾ ಇರುವ ರಾಜ್ಯಕ್ಕೆ ಬರುವನು. ಈ ದೇವರಲ್ಲಿ ನಿಮಗೆ ಭರವಸೆ ಇರಬೇಕು. ಆತನ ಕರಗಳಲ್ಲಿ ಭದ್ರವಾಗಿ ವಿಶ್ರಮಿಸಬಹುದು. ಇಂದು ಆತನು ನಿಮ್ಮನ್ನು ಕರೆಯುತ್ತಾನೆ.


144

ಇಂದು ಬರಲು ಆತನು ನಿಮಗೆ ಆಹ್ವಾನವನ್ನು ನೀಡುತ್ತಾನೆ.
ನಿಮ್ಮ ಹೃದಯಕ್ಕೆ ಇಂದೆ ಬೇಡುತ್ತಿದ್ದಾನೆ, ಹೌದು ಕರ್ತನೆ ಸಂಪೂರ್ಣವಾಗಿ ನಿನ್ನಲ್ಲಿ ಭರವಸೆ ಇಡುತ್ತೇನೆಂದು ಹೇಳುವಿರೋ? ನಾವು ಪ್ರಾರ್ಥಿಸುವಾಗ ಈಗಲೇ ನನ್ನ ಜೀವಿತವನ್ನು ಅರ್ಪಣೆ ಮಾಡುತ್ತೇನೆಂದು ಹೇಳಿರಿ.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.



1

ಭವಿಷತ್ತನ್ನು ಹೆದರದೆ ಎದುರಿಸುವುದು.


2

ಒಂದು ಬೇಸಿಗೆಯ ದಿನದಲ್ಲಿ ಒಬ್ಬ ತಂದೆ ಮತ್ತು ೯ ವರ್ಷದ ಮಗಳು ಸಮುದ್ರದಲ್ಲಿ ಈಜಾಡಲು ಹೋದರು.
ಅವರು ಅಲೆಗಳ ಮಧ್ಯೆ ಈಜಾಡುತ್ತಿರುವಾಗ ಅಲೆಗಳು ಅಧಿಕವಾಗಲು ಪ್ರಾರಂಭಿಸಿದವು. ತಕ್ಷಣವೇ ಈ ಹುಡುಗಿಯನ್ನು ಒಳಗೆ ಎಳೆಯಿತು. ತಂದೆ ಆಕೆಯ ಬಳಿ ಹೋಗಲಾಗಲಿಲ್ಲ. ಆಕೆ ಕರೆಗೆ ಬರಬೇಕಾದರೆ ಆಕೆಗೆ ಸಹಾಯವು ಅಗತ್ಯ.
ತಂದೆಯು ನಿರಾಶನಾಗಲು ಬದಲು, ತೇಲುತ್ತಾ ನಿಧಾನವಾಗಿ ಈಜುತ್ತಾ , ಭಯ ಪಡಬೇಡ ನಿನ್ನನ್ನು ಕರೆದುಕೊಂಡು ಹೋಗಲು ಬರುತ್ತೇನೆಂದು ಗಟ್ಟಿಯಾಗಿ ಕೂಗಿ ಹೇಳಿದನು.
ಆತನು ಹಿಂದಕ್ಕೆ ಒಂದು ದೋಣಿಯನ್ನು ಮತ್ತು ರಕ್ಷಣ ದಳವನ್ನು ಕರಕೊಂಡು ಹೋದನು. ಅಲ್ಲಿ ನೋಡಿದಾಗ ಮಗಳು ಇರಲಿಲ್ಲ. ಬಹಳ ದೂರ ಸಮುದ್ರಕ್ಕೆ ಹೋಗಿದ್ದಾಳೆ
ಕೊನೆಯದಾಗಿ ಆಕೆಯ ಬಳಿ ಹೋದಾಗ, ತಂದೆ ಹೇಳಿದ ಹಾಗೆ ತೇಲಾಡುತಿದ್ದಳು.


3

ಸಮುದ್ರದಲ್ಲಿ ಹೇಗೆ ತಾನೆ ಸಮಧಾನವಾಗಿರಲು ಸಾಧ್ಯವಾಯಿತ್ತೆಂದು ಆಕೆಯನ್ನು ಕೇಳಿದಾಗ ತಂದೆ ಹೇಳಿದ್ದನ್ನು ನಾನು
ಮಾಡಿದೆನು. ಆತನು ಹಿಂದಕ್ಕೆ ಬರುತ್ತಾನೆಂದು ತಿಳಿದಿತ್ತು. ನಾನು ಭಯ ಪಡಲಿಲ್ಲ ಅಂದಳು. ಆ ಧೈರ್ಯದ ಸಣ್ಣ ಹುಡುಗಿಯ ನಿರೀಕ್ಷೆಯು ಆಕೆಯನ್ನು ಬದುಕಿಸಿತು, ಆಕೆ ರಕ್ಷಿಸಲ್ಪಟ್ಟಳು, ಮತ್ತು ಬದುಕಿದಳು.
ಸಾಶನದಲ್ಲಿ ಇರುವ ನಮ್ಮ ಗ್ರಹವನ್ನು ರಕ್ಷಿಸಲು ಪರಲೋಕದ ತಂದೆಯು ಸಿದ್ಧ ನಿದ್ದಾನೆಂಬ ನಿರೀಕ್ಷೆಯು ಕ್ರೈಸ್ತರಾದ
ನಮಗೆ ಇರಬೇಕಾಗಿದೆ.



4

(ವಿಡಿಯೋ ೧೦ ಸೆಕೆಂಡುಗಳು) ಇನ್ನು ಸಾವಿರ ವರ್ಷಗಳವರೆಗೆ ಲೋಕವಿರುವುದಿಲ್ಲ ಎಂಬ ಭಯವನ್ನು ಒಬ್ಬ ವಿಜ್ಞಾನಿಯು ತಿಳಿಸಿದರು. ಮಾನವರು ಲೋಕದ ವಾಯು ಮಂಡಲವನ್ನು ಕೆಡಿಸಲು ಮಾಡಿರುವ ಕಾರ್ಯಗಳು ಇಡೀ ಲೋಕದಲ್ಲಿ ಹವಗುಣವನ್ನು ತಾರು ಮಾರು ಮಾಡಿದೆ.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.


5

ಭೂಮಿಯಲ್ಲಿ ಭಯಂಕರವಾದ ಬಿಸಿ ಗಾಳಿಯನ್ನು ತಂದು ಪೋಲಾರಿನ ಮಂಜು ಕರಗಿಸಿ ಎಲ್ಲಾ ಕಡೆ



6

(ವಿಡಿಯೋ ೫ನೇ ಭಾಗ) ನಮ್ಮನ್ನು ನಾವೇ ಭಯಾನಕ ಯುದ್ಧದಲ್ಲಿ ನಾಶಮಾಡಿಕೊಳ್ಳುತ್ತೇವೆಂದು ಕೆಲವರು ಹೇಳುತ್ತಾರೆ.


7

ಲೋಕದಲ್ಲಿ ಜನ ಸಂಖ್ಯೆ ಆಧಿಕವಾಗುವಾಗ ಊಟ ಮತ್ತು ಬೇರೆ ವಸ್ತುಗಳಿರುವುದಿಲ್ಲವೆಂದು ಬೇರೆ ಕೆಲವರು ಹೇಳುತ್ತಾರೆ.


8

ಲೋಕದ ಜೊತೆ ದೊಡ್ಡ ಒಂದು ಧೂಮಕೇತು ಒಂದಕ್ಕೊಂದು ಬ ಡಿಯುವಾಗ ನಾವು ನಾಶವಾಗುತ್ತೇವೆಂದು ಕೆಲವರು


9

ಇನ್ನು ಕೆಲವರು ಹೀಗೆ ಯೋಚಿಸುತ್ತಾರೆ, ಒಂದು ದಿನ ಬೇರೆ ಗ್ರಹದಿಂದ ಜನರು ಇಲ್ಲಿಗೆ ಬಂದು ನಮ್ಮೆಲ್ಲರನ್ನು ನಾಶ ಮಾಡುತ್ತಾರೆಂದು ಯೋಚಿಸುತ್ತಾರೆ. ನಮ್ಮಲ್ಲಿ ಹೆಚ್ಚಿನ ಭಾಗದ ಜನರು ಚಿಂತಿಸಲು ಎಷ್ಟೋ ಬೇರೆ ಕಾರ್ಯಗಳಿವೆ ಎನ್ನುತ್ತೇವೆ.


10

ಜೀವಿಸಲು, ಬೇರೆಯುವರ ಜೊತೆ ಹೊಂದಾಣಿಕೆಯಿಂದ ಇರಲು, ಕಾಯಿಲೆ, ಚಿಂತೆ ಮತ್ತು ದುಃಖದಲ್ಲಿ
ಹೋರಾಡುತ್ತಿದ್ದೇವೆ.


11

ಅನೇಕರಿಗೆ, ಹೆಚ್ಚಿನ ಭಾಗದ ನಮಗೆ ಜೀವಿತವು ಸುಲಭವಾಗಿಲ್ಲ. ಲೋಕವು ಅಂತ್ಯವಾದರೆ ಸಾಕೆಂದು ಕಲವು ವೇಳೆ ಯೋಚಿಸುತ್ತೆವೆ. ನೋವು, ಹಸಿವೆ, ಆಯಾಸ, ಒತ್ತಡ, ಜೀವಿತದಲ್ಲಿ


12

ಇರಬೇಕೆಂದು ಜೀವನವು ಮಾಡಲ್ಪಡಲಿಲ್ಲ. ನಮಗೆ ಉತ್ತಮವಾದ ಒಂದು ಲೋಕವು ಬೇಕಾಗಿದೆ.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.


13

ಲೋಕ ಹೇಗೆ ಮತ್ತು ಯಾವಾಗ ಅಂತ್ಯವಾಗುವುದೆಂದು ನಾವೆಲ್ಲರೂ ತಿಳಿಯಲು ಆಶಿಸುತ್ತೇವೆ.
ನಮ್ಮ ಕಾಲದಲ್ಲಿ ಅಂತ್ಯವಾಗುವುದೊ, ಇಲ್ಲವೋ? ಈಗಿನಿಂದ ೧ ಸಾವಿರ ಇಲ್ಲವೇ ೧೦ ಸಾವಿರ ವರ್ಷಗಳು ತೆಗೆದುಕೊಳ್ಳುತ್ತದೋ ?


14

ಇದು ಹೇಗೆ ಆಂತ್ಯವಾಗುತ್ತದೆಂದು ಯಾರು ಸರಿಯಾಗಿ ಹೇಳುತ್ತಾರೆ?
ಪ್ರವಾದಿಗಳು ಹೆಚ್ಚಾಗಿ ಇದರ ವಿಚಾರ ತಿಳಿಸಿರುತ್ತಾರೆ.



15

ಯಾವ ಪ್ರವಾದಿಗಳು ತಿಳಿಸಿರುವುದು ಸರಿಯೆಂದು ಕಂಡುಹಿಡಿಯುವುದು ಒಂದು ಸಮಸ್ಯೆಯಾಗಿದೆ. ಪ್ರವಾದನೆ ಹೇಳಿರುವುದು ಸರಿಯಾಗಿ ನೆರವೇರಿರಬೇಕು.



16

(ವಿಡಿಯೋ ೧೫ ಸೆಕೆಂಡುಗಳು)
ಒಬ್ಬರಿದ್ದಾರೆ ಆವರು ಹೇಳಿದ ಪ್ರವಾದನೆಗಳೆಲ್ಲಾ ತಪ್ಪದೇ ನೇರವೇರಿರುವ ವ್ಯಕ್ತಿಯು ನಿಮಗೆ ತಿಳಿದಿದೆಯೋ?
ಈ ಲೋಕ ಹೇಗೆ ಅಂತ್ಯವಾಗುತ್ತದೆ? ಬೇಗ ಮುಗಿಯುತ್ತದೋ ಇಲ್ಲವೇ ೧೦೦೦ ವರ್ಷಗಳಾಗುತ್ತದೋ ಎಂದು
ಪರಿಷ್ಕಾರವಾಗಿ ನಮಗೆ ತಿಳಿಸುವ ಒಬ್ಬರಿದ್ದಾರೆ.
ಈ ಲೋಕವನ್ನು ಉಂಟು ಮಾಡಿದವನು ಪ್ರಾರಂಭವಾದಾಗ ಅಲ್ಲಿದ್ದವನು ಅಂತ್ಯವಾಗುವದನ್ನು ತಿಳಿದಿದ್ದಾನೆಂಬುದು
ತಿಳಿಯುವುದು ಆಶ್ಚರ್ಯವೇನೂ ಆಲ್ಲ.
ಸ್ನೇಹಿತರೇ ಯೇಸು ಕ್ರಿಸ್ತನು ಸೃಷ್ಟಿಯ ದೇವರು, ಆತನ ವಾಕ್ಯದ ಮೂಲಕ ಭವಿಷತ್ತಿಗೆ ನಮ್ಮ ನಿಮ್ಮನ್ನು ನಡೆಸುತ್ತಾನೆ.
ಆತನು ನಂಬತಕ್ಕ ನಾಯಕನು ಫ್ರಾರಂಭಿಸಿದವನಿಗಿಂತಲೂ ಹೆಚ್ಚಾಗಿ ಲೋಕದ ಆಂತ್ಯವನ್ನು ತಿಳಿದಿರುವವರು ಯಾರು?


17

ಯೇಸುವಿನ ಜೀವಿತದಲ್ಲಿ ಒಂದು ಆಸಕ್ತಿಯುಳ್ಳ ಸಂಭವನೆಯನ್ನು ಸತ್ಯವೇದವು ನಮಗೆ ತಿಳಿಸುತ್ತದೆ.
ರೋಮ್ ಸರ್ಕಾರದಿಂದ ತಿರಿಗಿ ಕಟ್ಟಲ್ಪಟ್ಟ ಆಲಯದ ಕಟ್ಟಡವನ್ನು ತೋರಿಸಲು ಒಂದು ದಿನ ಶಿಷ್ಯರು ಯೇಸುವನ್ನು ಪ್ರತ್ಯೇಕವಾಗಿ ಕರದುಕೊಂಡು ಹೋದರು.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.



18

ಇಡೀ ರೋಮ್ ಸಮ್ರಾಜ್ಯದಲ್ಲಿ ಒಂದು ಬೆಲೆ ಬಾಳುವ ಆಲಂಕಾರವಾದ ಕಟ್ಟಡವಾಗಿತ್ತು. ಆ ಕಟ್ಟಡವನ್ನು ನೋಡಿದ ನಂತರ ಯೇಸು ಆತನ ಶಿಷ್ಯರಿಗೆ ಚಕಿತಗೊಳಿಸುವ ಮಾತನ್ನು ಹೇಳಿದನು.



19

(ವಚನ ಮತ್ತಾಯ ೨೪:೨)
ಇವುಗಳನ್ನೆಲ್ಲಾ ನೋಡುತ್ತೀರಲ್ಲವೇ? ನಿಮಗೆ ಸತ್ಯವಾಗಿ ಹೇಳುತ್ತೇನೆ



20

ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯುವುದಿಲ್ಲ. ಎಲ್ಲಾ ಕೆಡವಲ್ಪಡುವುದು.
ಮತ್ತಾಯ ೨೪:೨




21

ಯೆಹೂದ ಜನಾಂಗಕ್ಕೆ ಇದು ಮಹತ್ತಾದ ಕಟ್ಟಡ ಮತ್ತು ಯೇಸು ಸಂಪೂರ್ಣವಾಗಿ ನಾಶವಾಗುತ್ತದೆಂದು ಮುಂತಿಳಿಸಿದನು.




22

ಶಿಷ್ಯರಿಗೆ ಆಶ್ಚರ್ಯವಾಯಿತು. ಎಣ್ಣೇಮರಗಳ ಗುಡ್ಡಕ್ಕೆ ಆವರು ಹೋದಾಗ ಕೇಳಲಿದ್ದ ಪ್ರಶ್ನೆಗಳನ್ನೆ ಆವರು ಕೇಳಿದರು.



23

(ವಚನ– ಮತ್ತಾಯ ೨೪:೩)
ಶಿಷ್ಯರು ಆತನ ಬಳಿಗೆ ಪ್ರತ್ಯೇಕವಾಗಿ ಬಂದು ಆದು ಯಾವಾಗ ಆಗುವುದೆಂದು ನಮಗೆ ಹೇಳು ಅಂದರು.



24

ನೀನು ಪ್ರತ್ಯಕ್ಷ ನಾಗುವದಕ್ಕೂ ಯುಗದ ಸಮಾಪ್ತಿಗೂ ಸೂಚನೆಯೇನು ? ಆಂದರು. ಮತ್ತಾಯ ೨೪:೩



25

ಈ ಕಟ್ಟಡ ನಾಶವಾಗುವುದಕ್ಕೂ ಕ್ರಿಸ್ತನ ಬರುವಿಕೆಗೂ ಯುಗದ ಸಮಾಪ್ತಿಗೂ ಸಂಭಂದವಿದೆ ಎಂದು ಶಿಷ್ಯರು ಭಾವಿಸಿದರು.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.


26

ಮತ್ತಾಯ ೨೪ನೇ ಅಧ್ಯಾಯದಲ್ಲಿ ಯೇಸು ಎರಡು ವಿವಿಧ ಸಂಭವನೆಗಳನ್ನು ಕುರಿತು ತಿಳಿಸಿದ್ದಾನೆ.


27

ಅವುಗಳಲ್ಲಿ ಒಂದು ಯೆಸುವಿನ ೨ನೇ ಬರೋಣ. ಲೋಕಕ್ಕೆ ಮಹಿಮೆಯಿಂದ ಆತನು ಹಿಂತಿರುಗುವನು ಮತ್ತು ನಿತ್ಯ ರಾಜ್ಯವನ್ನು ಈ ಲೋಕದಲ್ಲಿ ಸ್ಥಾಪಿಸುವುದು ಕುರಿತದ್ದಾಗಿದೆ.



28

(ವಿಡಿಯೋ ೬ ಸೆಕೆಂಡುಗಳು.)
ಇನ್ನೊಂದು ಆ ಸಮಯದಲ್ಲಿ ಜೀವಿಸುವ ಅನೇಕ ಜನರು ನೋಡುವ ಕಾರ್ಯವಾಗಿದೆ. ಯೆರುಸಲೇಮಿನ ಪಟ್ಟಣವು ಮತ್ತು ಆಲಯವು ನಾಶವಾಗಿದೆ.
ಆಲಯಕ್ಕೆ ಏನಾವಾಗುವುದೆಂದು ಯೇಸುವು ಶಿಷ್ಯರಿಗೆ ಹೇಳಲು ಮುಂದುವರಿಸುತ್ತಾನೆ.




29

(ವಚನ ಮತ್ತಾಯ ೨೪:೧೫,೧೬)
ಹಾಳು ಮಾಡುವ ಅಸಹ್ಯ ವಸ್ತುವನ್ನು ಕುರಿತು ದಾನಿಯೇಲ ಪ್ರವಾದಿಯು ಹೇಳಿರುವುದನ್ನು ನೀವು ಕಾಣುವಾಗ



30

ಪವಿತ್ರ ಸ್ಥಾನದಲ್ಲಿ ನಿಂತಿರುವುದನ್ನು ನೀವು ಕಾಣುವಾಗ ಇದನ್ನು ಓದುವವನು ತಿಳಿದುಕೊಳ್ಳಲಿ



31

ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿಹೋಗಲಿ



32

ಯೆರೂಸಲೇಮು ನಾಶವಾಗುವದೆಂದು ದಾನಿಯೇಲನು ಮುಂತಿಳಿಸಿದನು. ಪ್ರವಾದಿ ದಾನಿಯೇಲನ ಎಚ್ಚರಿಕೆಗಳು ಬೇಗ ನೆರವೇರುತ್ತವೆಂದು ಯೇಸು ಆತನ ಶಿಷ್ಯರಿಗೆ ಜ್ಞಾಪಿಸಿತ್ತಾನೆ.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.



33

(ವಚನ ಮತ್ತಾಯ ೨೪:೧೭,೧೮)
ಮತ್ತಾಯ ೨೪:೧೭,೧೮ರಲ್ಲಿ ಆತನು ಹೀಗೆ ಹೇಳಿದನು ಮಾಳಿಗೆಯ ಮೇಲೆ ಇರುವವನು ತನ್ನ ಮನೆಯೊಳಗಿರುವುದನ್ನು ತೆಗೆದುಕೊಳ್ಳುವುದಕ್ಕೆ ಇಳಿಯಬಾರದು




34

ಹೊಲದಲ್ಲಿರುವವನು ತನ್ನ ಹೊದಿಕೆಯನ್ನು ತೆಗೆದುಕೊಳ್ಳುವುದಕ್ಕೆ ಹಿಂತಿರುಗಿ ಬಾರದೆ ಓಡಿಹೋಗಲಿ.



35

ಇನ್ನೊಂದು ವಿಧದಲ್ಲಿ ಸೈನಿಕರು ಯೇರುಸಲೇಮಿನ ಪಟ್ಟಣವನ್ನು ಮುತ್ತಿಗೆ ಹಾಕುವುದನ್ನು ಅವರು ಕಾಣುವಾಗ ನಾಶನ ಖಂಡಿತ ಎಂದು ತಿಳಿಯಬೇಕಿತ್ತು.




36

(ವಚನ ಲೂಕ ೨೧:೨೦)
ಲೂಕ ೨೧:೨೦ ರಲ್ಲಿ ಯೇಸು ಹೀಗೆಂದನು. ದಂಡುಗಳು ಯೇರುಸಲೇಂ ಪಟ್ಟಣಕ್ಕೆ ಮುತ್ತಿಗೆ ಹಾಕಿರುವುದನ್ನು ನೀವು ಕಾಣುವಾಗ ಅದು ಹಾಳಾಗುವ ಕಾಲ ಸಮೀಪವಾಯಿತೆಂದು ತಿಳಿದುಕೊಳ್ಳುವಿರಿ.
ಈ ದಂಡುಗಳನ್ನು ಅವರು ಕಾಣುವಾಗ ಅವರು ಓಡಿಹೋಗಬೇಕಾಗಿತ್ತು




37

(ವಚನ–ಲೂಕ ೨೧:೨೨,೨೪)
ಯಾಕೆಂದರೆ ಬರೆದಿರುವುದೆಲ್ಲಾ ನೆರವೇರುವುದಕ್ಕಾಗಿ ಅವು ದಂಡನೆಯ ದಿವಸಗಳಾಗಿವೆ.



38


ಅವರು ಕತ್ತಿನ ಬಾಯಿಗೆ ಬೀಳುವರು ಅವರನ್ನು ಅನ್ಯ ದೇಶಗಳಿಗೆಲ್ಲಾ ಸೆರೆಹಿಡಿದುಕೊಂಡು ಹೋಗುವರು.



39


ಅನ್ಯ ದೇಶದವರ ಸಮಯುವು ಪೂರೈಸುವ ತನಕ ಯೆರುಸಲೇಂ ಪಟ್ಟಣವು ಅನ್ಯ ದೇಶದವರಿಂದ ತುಳಿಯಲ್ಪಡುತ್ತಿರುವದು. ಲೂಕ ೨೧:೨೨,೨೪

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.




40

ಕ್ರಿ.ಶ. ೬೬ ರಲ್ಲಿ ಯೇಸು ಮುಂತಿಳಿಸಿ ೩೩ ವರ್ಷಗಳ ನಂತರ ರೋಮ್ ಸೈನ್ಯವು ಸೆಸ್ಟಿಯಸ್ ಕೈಕೆಳಗೆ ಮುತ್ತಿಗೆ ಹಾಕಲು ಬಂತು.



41

ಯೆರುಸಲೇಮಿನಲ್ಲಿ ಹೋರಾಟವು ಪ್ರಾರಂಭವಾಯಿತು. ಹಿಡಿಯಲು ಯತ್ನಿಸಿದರು ಆಗಲಿಲ್ಲ.



42

ಕೊನೆಯಲ್ಲಿ ರೋಮ್ ಸೈನ್ಯವು ಹಿಂತಿರುಗಿತು. ಪಟ್ಟಣವನ್ನು ವಶಪಡಿಸುಕೊಳ್ಳಲಾಗಲಿಲ್ಲ. (ಏಸುಬಿಯಸ್, ಸಭಾ ಚರಿತ್ರೆ, ೩ನೇ ಪುಸ್ತಕ, ಆಧ್ಯಾಯ ೫ನ್ನು ನೋಡಿರಿ.)



43

(ವಿಡಿಯೋ ೬ ಸೆಕಂಡುಗಳು) ಯೇಸು ಕೊಟ್ಟ ಎಚ್ಚರಿಕೆಯನ್ನು ಪರಿಶೀಲಿಸಿದವರು ಯೇರೂಸಲೇಮ್ ಪಟ್ಟಣದ ನಾಶದಿಂದ ತಪ್ಪಿಸಿಕೊಂಡರು. ರೋಮ್ ಸೈನ್ಯ ಯೊರುಸಲೇಮನ್ನು ಹಿಡಿದಾಗ ಅವರು ಕೊಲ್ಲಲ್ಪಡಲಿಲ್ಲ.


44

ಭಯಂಕರವಾದ ಮುತ್ತಿಗೆಯಲ್ಲಿ ಸುಮಾರು ೧೧ ಲಕ್ಷ ಜನರು ಹತರಾದರು. ಕ್ರಿ.ಶ. ೬೬ರಲ್ಲಿ ರೋಮನ್ ಸೈನ್ಯವು ಹಿಂದಕ್ಕೆ ಹೋದಾಗ ಬುದ್ಧಿವಾದವನ್ನು ಅವರು ನಿರಾಕರಿಸಿದರು.

ಪ್ರವಾದನೆಗಳನ್ನು ಕಲಿಯುವವರ ಮತ್ತು ಸೂಚನೆಗಳನ್ನು ಗಮನಿಸುವುದರಲ್ಲಿ ಪ್ರಧಾನವಾದ ಒಂದು ಚಕಿತಗೊಳಿಸುವ ಪಾಠ ಇದೆ.

ಕ್ರಿಸ್ತನ ಮಾತನ್ನು ನಂಬಿ ಸೂಚನೆಗಳನ್ನು ಗಮನಿಸಿದವರು ರಕ್ಷಿಸಲ್ಪಟ್ಟವರು, ಅಪನಂಬಿಗಸ್ತರು ನಾಶವಾದರು.

ಅದೇ ವಿಧವಾಗಿ ಲೋಕಾಂತದಲ್ಲಿರುತ್ತದೆ. ಕಾದುಕೊಂಡ ಭಕ್ತರು ಬಿಡುಗಡೆ ಹೊಂದುವರು, ಅಪನಂಬಿಕಸ್ತರು ನಾಶವಾಗುವರು.



45

(ವಿಡಿಯೋ ೫ ಸೆಕೆಂಡುಗಳು)
ಅಲಂಕಾರವಾದ ದೇವಾಲಯದ ವಿಸ್ತಾರವೇನು? ರೋಮ್ ಅಧಿಕಾರಿಯು ಆಲಯವನ್ನು ಉಳಿಸಬೇಕೆಂದು ಆಪ್ಪಣೆ ನೀಡಿದನು. ಆದರೆ ಒಬ್ಬ ಸಿಪಾಯಿಯು ಬಂದು ಉರಿಯುವ ಪಂಜನ್ನು ಎಸೆದನು.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.


46

ಆಲಯವು ಬೆಂಕಿಯಿಂದ ನಾಶವಾಯಿತು. ಒಂದು ಕಲ್ಲಿನ ಮೇಲೆ ಇನ್ನೊಂದು ಕಲ್ಲು ಉಳಿಯಲಿಲ್ಲ.


47

ಯೆರುಸಲೇಮಿನ ನಾಶಕ್ಕೆ ಮೊದಲು ಯೇಸು ಆತನ ಶಿಷ್ಯರಿಗೆ ४೦ ವರ್ಷಗಳಿಗೆ ಮೊದಲು ಮುಂತಿಳಿಸಿದ್ದು ನೆರವೇರಿತು.
ಯೇಸು ನಮಗೆ ಕೊಟ್ಟ ಲೋಕಾಂತ್ಯದ ಸೂಚನೆಗಳನ್ನು ನಿರ್ಲಕ್ಷ್ಯ ಮಾಡುತ್ತೇವೋ ಇಲ್ಲವೇ ಎಚ್ಚರಿಕೆಗೆ ಕಿವಿಗೊಟ್ಟು ನಾವು ಮುಂದಿರುವ ಕಾರ್ಯಕ್ಕೆ ಸಿದ್ಧರಾಗಿದ್ದೇವೋ?
ಲೋಕಾಂತ್ಯವು ಬಹು ಹತ್ತಿರವಿದೆ ಎಂದು ನಾವು ತಿಳಿಯುವದು ಹೇಗೆ?
ಯೇಸು ಪರಿಷ್ಕಾರವಾದ ಸೂಚನೆಗಳನ್ನು ನಮಗೆ ನೀಡಿರುತ್ತಾನೆ.


48

ನಮ್ಮ ಕಾಲದ ಕೆಲವು ಸೂಚನೆಗಳನ್ನು ನೋಡೋಣ ಮತ್ತಾಯ ೨४:೭ ರಲ್ಲಿ ಯೇಸು ಹೀಗೆಂದನು.



49

(ವಚನ ಮತ್ತಾಯ ೨४:೭)
ಜನಕ್ಕೆ ವಿರೋಧವಾಗಿ ಜನವೂ, ರಾಜ್ಯಕ್ಕೆ ವಿರೋಧವಾಗಿ ರಾಜ್ಯವು ಏಳುವವು



50

ಅಲ್ಲಲ್ಲಿ ಬರಗಳು ಬರುವವು, ಭೂಕಂಪಗಳು ಆಗುವವು, ಕಾಯಿಲೆಗಳು ಬರುತ್ತವೆ. ಮತ್ತಾಯ ೨४:೭
೨೦ ನೇ ಶತಮಾನವು ಮಾನವರ ಚರಿತ್ರೆಯಲ್ಲಿ ರಕ್ತ ಪಾತದ ಶತಮಾನವಾಗಿರುತ್ತದೆ.




51

(ವಿಡಿಯೋ ೨೦ ಸೆಕೆಂಡುಗಳು) ಮೊದಲ ಮಹಾಯುದ್ಧಹಲ್ಲಿ ೨ ಕೋಟಿ ಜನರು ತ್ಯಾಗ ಮಾಡಿದರು. ೨ನೇ ಮಹಾಯುದ್ಧಹಲ್ಲಿ ೫ ಕೋಟಿ ಜನರು ನಾಶವಾದರು.
ವಿರೋಧತೆ ಮತ್ತು ಅಘರಾದ ನಿಲ್ಲುವುದೆಂದು ಎಲ್ಲರೂ ನೆನೆಸಿದ್ದರೂ ಇನ್ನೂ ಯುದ್ಧಗಳಿವೆ. ಲೋಕಕ್ಕೆ ಹುಚ್ಚು ಹಿಡಿದಿದೆ ಎಂದು ಕಾಣುತ್ತದೆ. ಇದು ಈ ಕಾಲದ ಒಂದು ಸೂಚನೆಯಾಗಿದೆ.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.


52

ರಾಜ್ಯಗಳು ಶಾಂತಿಯನ್ನು ಕುರಿತು ಮಾತಾಡುತ್ತವೆ, ಆದರೆ ಯುದ್ಧಕ್ಕೆ ಸಿದ್ಧರಾಗುತ್ತಾರೆ
ಸಮಧಾನ ಮತ್ತು ಯುದ್ಧಕ್ಕಾಗಿ ಸಿದ್ಧತೆಯ ವಿಚಾರವಾಗಿ ಇನ್ನೊಂದು ಸತ್ಯವೇದದ ಪ್ರವಾದನೆ ಹೀಗಿದೆ.




53

ವಚನ ೧ ಥೆಸಲೋನಿಕ ೫:೩
ಸಮಾದಾನವಾಗಿಯೂ, ನಿರ್ಭಯವಾಗಿಯೂ ಇರುತ್ತೇವೆಂದು ಜನರು ಹೇಳುತ್ತಿರುವಾಗಲೇ ಇವರ ಮೇಲೆ ನಾಶನವು ಬರುತ್ತದೆ. ೧ ಥೆಸಲೋನಿಕ ೫:೩
ನಾವು ಸಮಾಧಾನದ ವಿಚಾರ ಮಾತಾಡುತ್ತೇವೆ. ಆದರೆ ಸಮಾಧಾನವಿಲ್ಲ. ಪ್ರತಿಯೊಬ್ಬರೂ ಸಮಾಧಾನವನ್ನು ಆಶಿಸುತ್ತಾರೆ. ಆದರೆ ಬರೇ ಮಾತಾಗಿದೆ.


54

ಈ ಭೂಮಿಯ ಕೊನೆಯ ಸಮಯದಲ್ಲಿ ಮಾನವರು ಲೋಕವನ್ನು ನಾಶಮಾಡಲು ಸಾಮರ್ಥ್ಯ ಪಡೆದಿದ್ದಾರೆಂದು ವೇದವು ಹೇಳುತ್ತದೆ.




55

(ವಚನ ಪ್ರಕಟನೆ ೧೧:೧೮)
ಜನಾಂಗಗಳು ಕೋಪಿಸಿಕೊಂಡವು. ನಿನ್ನ ಕೋಪವು ಪ್ರಕಟವಾಯಿತು. ಲೋಕ ನಾಶಕರನ್ನು ನಾಶಮಾಡುವಿ. ಪ್ರಕ ೧೧:೧೮
ಲೋಕವು ಮಾಡಲ್ಪಟ್ಟ ವಸ್ತುವಿನಿಂದಲೇ ಮಾನವರು ನಾಶ ಮಾಡಲು ಹಿಂದೆ ಎಂದೂ ಸಾಮರ್ಥ್ಯ ಹೊಂದಿರಲಿಲ್ಲ.


56

ಅಣು ಗುಂಡನ್ನು ಕಂಡು ಹಿಡಿದಿರುವುದು ಲೋಕವನ್ನು ನಾಶ ಮಾಡಲು ಮಾನವನಿಗೆ ಸಾಮರ್ಥ್ಯವಿದೆ ಎಂದು ಸೂಚಿಸುತ್ತದೆ.


57

ನಾಶ ಮಾಡುವ ಆಯುಧಗಳು ಒಂದು ಕಾಲದಲ್ಲಿ ಕಾಪಾಡಲ್ಪಟ್ಟವು. ಇವುಗಳನ್ನು ಬಯೋತ್ಪಾದಕರು ಕೊಳ್ಳಲು ಇಲ್ಲವೇ ಅಪಹರಿಸಲು ಒಂದು ಮಾರ್ಗವನ್ನು ಈಗ ಕಂಡುಹಿಡಿದಿದ್ದಾರೆ. ಈ ಭಯಾನಕ ನಿರ್ಮಾಣಗಳನ್ನು ಮಾರಲು ಇಲ್ಲವೇ ಉಪಯೋಗಿಸಲು ಬೇರೆಯವರ ಕೈಯಲ್ಲಿ ಇವೆ.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.



58

ಒಂದು ಗೌರವಾರ್ತವಾದ ಪತ್ರಿಕೆಯು ಹೇಗೆ ನಾಶಕಾರಕ ಅಣು ಗುಂಡುಗಳನ್ನು ತಯಾರಿಸುವುದೆಂಬ ವಿಷಯವು ಇಡೀ ಪ್ರಪಂಚದ ಪ್ರಮುಖ ಪುಸ್ತಕ ಬಂಡಾರಗಳಲ್ಲಿ ಸಿಗುತ್ತದೆಂದು ಪ್ರಕಟಿಸಿತ್ತು. ಇದು ಕಂಪ್ಯೂಟರಿನ ಹಾಗೆ ವೇಗವಾಗಿರುತ್ತದೆ.



59

(ವಿಡಿಯೋ ೫ ಸೆಂಕೆಂಡುಗಳು) ಇದು ಯಾರಲ್ಲಿದೆ ಮತ್ತು ಅವರು ಬೇಗನೆ ಏನು ನೋಡಲಿದ್ದಾರೆ? ಒಂದು ಸಣ್ಣ ಪೆಟ್ಟಿಗೆಯಷ್ಟು ದೊಡ್ಡದಿದೆ. ಎಲ್ಲಿ ಬೇಕಾದರೂ ಹೂಳಿಡಬಹುದು. ಇದರಲ್ಲಿ ಒಂದು ದೊಡ್ಡ ಪಟ್ಟಣವನ್ನು ನಾಶಮಾಡುವ ಶಕ್ತಿಯಿದೆ.



60

ಕೊನೆಯ ದಿನಗಳಲ್ಲಿ ಎಲ್ಲಾ ತೆರನಾದ ಅನಾಹುತಗಳು ಇರುತ್ತೆವೆಂದು ಕರ್ತನು ಹೇಳಿದನು.




61

(ವಚನ ಮತ್ತಾಯ ೨೪:೭)
ಬರಗಳು ಬರುತ್ತವೆ.
(ಮತ್ತಾಯ ೨೪:೭)




62

ಲೋಕದಲ್ಲಿ ಅನೇಕ ಭಾಗಗಳಲ್ಲಿ ಬರಗಳಿವೆ.



63


ಐವತ್ತು ಕೋಟಿ ಜನರು ಪ್ರತಿ ವರ್ಷ ಊಟಾ ಈಲದೆ ಇದ್ದಾರೆ. ೧೫೬,೦೦೦ ಸಯುತ್ತಾರೆ.



64

ಈ ಲೋಕದಲ್ಲಿ ಇರುವ ಕೋಟ್ಯಾಂತರ ಜನರ ಪೈಕಿ ಶೇಖಡ ೬೦ ಭಾಗದ ಜನರು ಆಹಾರವಿಲ್ಲದೆ ಇದ್ದಾರೆ. ಶೇಖಡ ೨೦ ಭಾಗದ ಜನರು ಊಟವಿಲ್ಲದೆ ಬಳಲುತ್ತಾರೆ. ಈ ಅಂತ್ಯಕಾಲದ ಸೂಚನೆಗಳಲ್ಲಿ ಒಂದು ಕ್ಷಾಮಗಳು ಬ ರುತ್ತವೆಂದು ಯೇಸು ಹೇಳಿದನು.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.



65

(ವಿಡಿಯೋ ೫ ಸೆಕೆಂಡುಗಳು.)
ಜನ ಸಂಖ್ಯೆಗೆ ಆಹಾರ ಹೆಚ್ಚಾಗಿ ಬೆಳೆಯದೆ ಇರುವಾಗ ಇಡೀ ಲೋಕದಲ್ಲಿ ಕ್ಷಾಮ, ಊಟವಿಲ್ಲದಿರುವುದು ಕಾಯಿಲೆಗಳು ಆಹಾರಕ್ಕಾಗಿ ಹೋರಾಡುವುದು ಸಹಜವಾಗಿದೆ. ಲೋಕದಲ್ಲಿ ೩ನೇ ೨ಭಾಗ ಜನರು ಈಗ ಹಸಿವೆಯಿಂದ ಇರುವಾಗ ಹೊಸದಾಗಿ ಜನಿಸುವವರಿಗೆ ಆಹಾರ ಒದಗಿಸುವುದು ಹೇಗೆ?



66

(ವಚನ ಲೂಕ ೨೧:೨೫)
ಯೇಸು ಕೊನೆಯ ಗಳಿಗೆಯ ಸ್ಥಿತಿಯನ್ನು ಕುರಿತು ಹೀಗೆ ಹೇಳಿದ್ದಾನೆ.
ಭೂಮಿಯಲ್ಲಿ ದಿಕ್ಕು ಕಾಣದೆ ಸಂಕಟವುಂಟಾಗಿವುದು.


67

ಉಪದ್ರವಗಳೂ ಉಂಟಾಗವವು ಅಂದನು,




68

(ವಚನ – ಮತ್ತಾಯ ೨೪:೭)
ಅಲ್ಲಲ್ಲಿ ಬರಗಳು ಬರುವವು, ಉಪದ್ರವಗಳೂ ಉಂಟಾಗವವು, ಭೂಕಂಪಗಳು ಆಗುವವು.
ಉಪದ್ರವಗಳು ಎಂದು ಹೇಳುವಾಗ ಯಾರಿಗೂ ಅರಿಯದ ರೋಗವೆಂದು ಕಾಣುತ್ತೇವೆ.



69

ಆಧುನಿಕ ಔಷಧಿಗಳಿದ್ದರೂ ಅನೇಕ ಹೊಸ ರೋಗಗಳು ಕಾಣಿಸಿಕೊಳ್ಳುತ್ತವೆ.



70

ಏಡ್ಸ್, ಮಲೇರಿಯಾ, ನಿವೋನಿಯಾ, ಕ್ಷಯ, ಎಬೊಲ ಕಾಯಿಲೆ, ಸಿಫ್‌ಲಿಸ್, ಗನೋರಿಯ ಮತ್ತು ವಾಂತಿ ಬೇದಿ.


71


ಲೋಕ ಆರೋಗ್ಯ ಸಂಸ್ಥೆಯು, ಈಗ ೪ ಕೋಟಿ ಏಡ್ಸ್ ಕಾಯಿಲೆಯವರಿದ್ದಾರೆಂದು ಅಂದಾಜು ಮಾಡಿದ್ದಾರೆ. ಇದನ್ನು ತಡೆಗಟ್ಟದಿದ್ದರೆ ಇಡೀ ರಾಜ್ಯವೇ ತೊಡೆದು ಹೋಗುತ್ತದೆ.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.




72

ಇನ್ನೊಂದು ಸೂಚನೆಯು ಸನ್ನಿವೇಶದ ಆಶುದ್ಧತೆಯಲ್ಲಿ ಕಾಣಬರುತ್ತದೆ.



73

(ವಚನ ಯೆಶಾಯ ೫೧:೬)
ನಿಮ್ಮ ಕಣ್ಣುಗಳನ್ನು ಮೇಲಕ್ಕೆತ್ತಿ ಆಕಾಶ ಮಂಡಲವನ್ನು ನೋಡಿರಿ. ಕೆಳಗೆ ಭೂ ಮಂಡಲವನ್ನು ದೃಷ್ಟಿಸಿರಿ.



74

ಆಕಾಶವು ಹೊಗೆಯಂತೆ ಚದುರಿ ಹೋಗುವುದು, ಭೂಮಿಯು ವಸ್ತ್ರದ ಹಾಗೆ ಜೀರ್ಣವಾಗುವುದು
ಆಕಾಶ ಮತ್ತು ಭೂಮಿಯು ಆಂತ್ಯಕ್ಕೆ ಬರುತ್ತಿರುವಾಗ ಇದಕ್ಕಿಂತಲೂ ಉನ್ನತವಾದ ವಿವರ ಯಾಕೆ ಬೇಕಿದೆ.



75

ದೊಡ್ಡ ಪಟ್ಟಣಗಳಲ್ಲಿ ಮೇಲಿನ ಆಕಾಶವು ವಿಷಪೂರಿತ ಆನಿಲಗಳಿಂದ ತುಂಬಿದೆ. ಇವನ್ನು ಶ್ವಾಸಕೋಶದ ಮೂಲಕ ತೆಗೆದುಕೊಳ್ಳುತ್ತೇವೆ.



76

ಗಾಳಿ ಕೆಟ್ಟಿದೆ ಎಂದು ಅನೇಕ ಪಟ್ಟಣಗಳಲ್ಲಿ ಎಚ್ಚರಿಕೆಯ ಬರವಣಿಗೆಗಳು ಹಾಕಲ್ಪಟ್ಟಿವೆ.



77

(ವಿಡಿಯೋ ೫ ಸೆಕೆಂಡುಗಳು)
ಅನೇಕ ಸ್ಥಳಗಳಲ್ಲಿ ನೀರನ್ನು ಕುಡಿಯಲು ಆಗುವುದಿಲ್ಲ. ಯಾಕೆಂದರೆ ಅದರಲ್ಲಿ ಭಯಾನಕ ವಸ್ತುಗಳಿವೆ.




78

ಆಣು ಗುಂಡಿನ ಉಪಯೋಗವಾಗದ ವಸ್ತುಗಳನ್ನು ಹೊರಗೆ ಹಾಕುವುದು ನಿಜವಾದ ಒಂದು ಸಮಸ್ಯೆಯಾಗಿದೆ. ಒಂದು ದೊಡ್ಡ ಅಣು ಗುಂಡಿನ ಕಾರ್ಖಾನೆಯಲ್ಲಿನ ಪಕ್ಕದಲ್ಲಿನ ಕೆಲಸಗಾರರಿಗೆ, ವಿಷದಿಂದ ಬಳಲುವದರಿಂದ ಆವರಿಗೆ ಹಣ ಸಹಾಯವು

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.


79

ನಮಗೆ ವಿದ್ಯುಚ್ಛಕ್ತಿ, ಶುದ್ಧವಾದ ನೀರು ಮತ್ತು ಗಾಳಿ ಎಲ್ಲಿಂದ ಸಿಗುತ್ತದೆ?
ಆಹಾರ ಎಲ್ಲಿಂದ ದೊರೆಯುತ್ತದೆ.



80

(ವಿಡಿಯೋ ೬ ಸೆಕೆಂಡುಗಳು)
ಜನ ಸಂಖ್ಯೆ ಇಡೀ ಲೋಕದಲ್ಲಿ ಹೆಚ್ಚುತ್ತಿರುವುದರಿಂದ ಲೋಕದಲ್ಲಿ
ಜೀವಿಸಲು ಸಮಸ್ಯೆಯನ್ನು ಮಾನವನು ಎದುರಿಸುತ್ತಾನೆ.



81

(ವಚನ ಲೂಕ ೨೧:೨೫)
ಜನಗಳಿಗೆ ದಿಕ್ಕು ಕಾಣದೆ ಸಂಕಟವು ಉಂಟಾಗುವುದು ಲೂಕ ೨೧:೨೫



82

ಭೂಕಂಪಗಳು ಅಧಿಕವಾಗುತ್ತವೆಂದು ಸತ್ಯ ವೇದವು ತಿಳಿಸುತ್ತದೆ.



83

(ವಚನ ಮತ್ತಾಯ ೨೪:೭)
ಅಲ್ಲಲ್ಲಿ ಭೂಕಂಪಗಳಾಗುತ್ತವೆ ನಾವು ಆನೇಕ ಭಯಂಕರವಾದ
ಭೂಕಂಪಗಳಾಗುವುದನ್ನು ನಾವು ಕಂಡಿದ್ದೇವೆ.



84

ಪ್ರತಿ ವರ್ಷ ೬ಸಾವಿರ ದೊಡ್ಡ ಭೂಕಂಪಗಳು ಈ ಲೋಕದಲ್ಲಿ ಆಗುತ್ತವೆ.




85

(ವಿಡಿಯೋ ೧೦ ಸೆಕೆಂಡುಗಳು)
ಕಳೆದ ೯೦ ವರ್ಷಗಳಿಂದ ೧೫ ಲಕ್ಷ ಸಾವುಗಳಾಗಿವೆ.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.



86

ಕೆಲ ಸಮಯದ ಹಿಂದೆ ಭೂಕಂಪಗಳು ೨೦ ಸಾವಿರದಿಂದ ೩೦ ಸಾವಿರ ಜನರನ್ನು ಬಲಿ ತೆಗೆದುಕೊಂಡಿವೆ. ಒಂದು ದೊಡ್ಡ ಭೂಕಂಪದಲ್ಲಿ ಇದಾಯಿತು.
ವಿವಿಧ ರಾಜ್ಯಗಳು ಭೂಕಂಪಗಳಿಂದ ಕಷ್ಟ ಪಟ್ಟದ್ದನ್ನು ನಾವು ನೆನಸುತ್ತೇವೆ.




87

(ವಚನ ಲೂಕ ೨೧:೧೧, ೨೫)
ಸತ್ಯವೇದವು ಹೀಗೆ ಹೇಳುತ್ತದೆ. ಮಹಾ ಭೂಕಂಪಗಳಾಗುವವು, ಅಲ್ಲಲ್ಲಿ ಬರಗಳು, ಕಾಯಿಲೆಗಳು ಬರುವವು.




88

ಆಕಾಶದಿಂದ ಭಯಂಕರವಾದ ದೃಶ್ಯಗಳು , ಸೂಚನೆಗಳು ಕಾಣ ಬರುವವು.



89

ಇದಲ್ಲದೆ ಸೂರ್ಯ, ಚಂದ್ರ, ನಕ್ಷತ್ರಗಳಲ್ಲಿ ಸೂಚನೆಗಳು ತೋರುವವು. ಲೋಕದಲ್ಲಿ ಜನರಿಗೆ ಸಂಕಟವು ಉಂಟಾಗುವುದು.



90

ಭೂಮಿಯ ಮೇಲೆ ಸಮುದ್ರ ಮತ್ತು ತೆರೆಗಳ ಘೋಷದ ನಿಮಿತ್ತವಾಗಿ ಜನಗಳಿಗೆ ದಿಕ್ಕು ಕಾಣದೆ ಸಂಕಟವು ಉಂಟಾಗುವುದು. ಲೂಕ ೨೧:೧೧, ೨೫



91

(ವಿಡಿಯೋ ೧೭ ಸೆಕೆಂಡುಗಳು) ಗಾಳಿ ಮತ್ತು ಅಲೆಗಳು ಮೊರೆಯುತ್ತದೆಂದು ಹೇಳಿರುವುದನ್ನು ಗಮನಿಸಿರಿ. ಇಡೀ ಲೋಕದಲ್ಲಿ ಅಸಾಧ್ಯ ಚಂಡಮಾರುತ, ಬಿಸಿ ಗಾಳಿ, ಮತ್ತು ಅಗ್ನಿ ಸ್ತೋಮವನ್ನು ಕಾಣುತ್ತೇವೆ. ಇದರಿಂದ ಆಸ್ತಿ ಮತ್ತು ಜನರ ಜೀವಿತಗಳಿಗೆ ನಷ್ಟ ಉಂಟಾಗುತ್ತದೆ.



92

ಸತ್ಯ ವೇದವು ಇನ್ನೊಂದು ಸೂಚನೆಯನ್ನು ನೀಡುತ್ತದೆ. ಕೊನೆಯ ಕಾಲದ ನೈತಿಕ ಸ್ಥಿತಿ ಗತಿಗಳ ವಿಚಾರ ತಿಳಿಸಿದೆ.
ಯೇಸು ಲೋಕದ ಸ್ಥಿತಿಗತಿಗಳನ್ನು ಸೋದೋಮ್ ಗೋಮೋರ ಪಟ್ಟಣಗಳ ಕೊನೆಯ ದಿನಗಳಿಗೆ ಹೋಲಿಸಿದ್ದಾನೆ. ೨ ಪಾಪದಿಂದ ತುಂಬಿದ ದೊಡ್ಡ ಪಟ್ಟಣಗಳಾಗಿದ್ದವು. ದೇವರು ಆಕಾಶದಿಂದ ಬೆಂಕಿಯನ್ನು ಸುರಿಸಿ ನಾಶಮಾಡಿದನು..

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.



93

(ವಚನ ಲೂಕ ೧೭:೨೮,೩೦) ಲೋಟನ ಕಾಲದಲ್ಲಿ ಇದ್ದ ಹಾಗಿರುವುದು.



94

ಮನುಷ್ಯ ಕುಮಾರನು ಪ್ರತ್ಯಕ್ಷವಾಗುವ ದಿವಸದಲ್ಲಿ ಅದೇ ರೀತಿಯಾಗಿ ಇರುವುದು ಲೂಕ ೧೭:೨೮–೩೦




95

(ವಚನ ಯೂದ ೧:೭) ಸೊದೊಮ್ ಗೊಮೋರ ಪಟ್ಟಣಗಳವರು ಅವುಗಳ ಸುತ್ತ ಮುತ್ತಲ ಪಟ್ಟಣಗಳವರು ತಮ್ಮನ್ನು ಜಾರತ್ವಕ್ಕೆ ಒಪ್ಪಿಸಿ ಬಿಟ್ಟು ಸ್ವಭಾವ ವಿರುದ್ಧವಾದ ಭೋಗವನ್ನು ಸರಿಸಿದರು ಯೂದ ೧:೭



96

ಈ ಪಟ್ಟಣದ ನೈತಿಕ ಸ್ಥಿತಿ ಗತಿಗಳನ್ನು ಕುರಿತು ಪೌಲನು ಮಾತನಾಡುತ್ತಾ ಹೀಗೆಂದನು.




97

(ವಚನ ರೋಮಪುರದವರಿಗೆ ೧:೨೬,೨೭)
ಹೇಗೆಂದರೆ ಅವರ ಹೆಂಗಸರು ಸ್ವಾಭಾವಿಕವಾದ ಭೋಗವನ್ನು ಬಿಟ್ಟು ಸ್ವಾಭಾವಕ್ಕೆ ವಿರುದ್ಧವಾದ ಭೋಗವನ್ನು ಅನುಸರಿಸಿದರು.



98

ಅದರಂತೆ ಗಂಡಸರು ಸಹ ಸ್ವಾಭಾವಿಕವಾದ ಸ್ತ್ರೀ ಭೋಗವನ್ನು ಬಿಟ್ಟು ಒಬ ್ಬರ ಮೇಲೊಬ್ಬರು ತಮ್ಮ ಕಾಮಾತುರದಿಂದ ತಾಪ ಪಡುತ್ತಾ ಗಂಡಸರ ಸಂಗಡ ಗಂಡಸರು ಕೇವಲ ಅವಲಕ್ಷಣವಾದದ್ದನ್ನು ನಡಿಸಿದರು.



99

ಗಂಡಸರು ಬೇರೆ ಗಂಡಸರ ಜೊತೆ ಅವಲಕ್ಷಣವಾಗಿ ನಡಕೊಂಡರು.
ರೋಮಪುರದವರಿಗೆ ೧:೨೬,೨೭

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.



100

(ವಚನ ೨ ತಿಮೋಥಿ ೩:೨–೫) ಮನುಷ್ಯರು ಸ್ವಾರ್ಥಚಿಂತಕರೂ, ಹಣದಾಸೆಯವರೂ, ಬಡಾಯಿ ಕೊಚ್ಚುವವರೂ, ಅಹಂಕಾರಿಗಳೂ, ದೂಷಕರೂ, ತಂದೆತಾಯಿಗಳಿಗೆ ಅವಿಧೇಯರೂ, ಉಪಕಾರ ನೆನಸದವರೂ, ಆಗಿರುವರು.



101

ಮಮತೆ ಇಲ್ಲದವರೂ, ದಮೆ ಇಲ್ಲದವರೂ, ಉಗ್ರತೆಯುಳ್ಳವರೂ, ಒಳ್ಳೆಯದನ್ನು ಪ್ರೀತಿಸದವರೂ, ಆಗಿರುವರು.



102

ದುಡುಕಿನವರೂ, ಉಬ್ಬಿಕೊಂಡವರೂ, ದೇವರನ್ನು ಪ್ರೀತಿಸದೆ ಭೋಗಗಳನ್ನು ಪ್ರೀತಿಸುವವರೂ ಆಗಿರುವರು.



103

ಭಕ್ತಿಯ ವೇಷವಿದ್ದು, ಅದರ ಬಲವನ್ನು ಬೇಡ ಅನ್ನುವವರು ಆಗಿರವರು. ೨ ತಿವೊಥಿ ೨–೫



104

೨ ತಿವೊಥಿ ೩:೧೩
ಆದರೆ ದುಷ್ಟರೂ, ವಂಚಕರೂ, ಇತರರನ್ನು ಮೋಸ ಮಾಡುತ್ತಾ ತಾವೇ ಮೋಸ ಹೋಗುತ್ತಾ ಹೆಚ್ಚಾದ ಕೆಟ್ಟತನಕ್ಕೆ ಹೋಗುವರು.



105


ಅರ್ಥಗರ್ಭಿತವಾದ ಸೂಚನೆಗಳಲ್ಲಿ ಒಂದನ್ನು ಯೇಸು ಕೊಟ್ಟಿದ್ದಾನೆ. ಅದು ಸುಳ್ಳು ಕ್ರಿಸ್ತರು ಮತ್ತು ಸುಳ್ಳು ಪ್ರವಾದಿಗಳು ಏಳುವರು.
ಲೋಕವನ್ನು ಮೋಸಗೊಳಿಸಲು ಕಾಣಿಸಿಕೊಳ್ಳುವ ಸುಳ್ಳು ಕ್ರಿಸ್ತರ ಮತ್ತು ಪ್ರವಾದಿಗಳ ವಿಚಾರವಾಗಿ ಯೇಸು ಎಚ್ಚರಿಕೆ ನೀಡಿದ್ದಾನೆ.



106

(ವಚನ ಮತ್ತಾಯ ೨೪:೨೩–೨೪)
ಇಗೋ ಕ್ರಿಸ್ತನು ಇಲ್ಲಿದ್ದಾನೆ, ಅಗೋ ಅಲ್ಲಿದ್ದಾನೆ ಎಂದು ಹೇಳಿದರೆ ನಂಬ ಬೇಡಿರಿ.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.




107

ಸುಳ್ಳು ಕ್ರಿಸ್ತರೂ, ಸುಳ್ಳು ಪ್ರವಾದಿಗಳೂ ಮೋಸಗೊಳಿಸುವುದಕ್ಕೋಸ್ಕರ ದೊಡ್ಡ ದೊಡ್ಡ ಸೂಚಕ ಕಾರ್ಯಗಳನ್ನು ಅದ್ಭುತ ಕಾರ್ಯಗಳನ್ನು ಮಾಡಿ ತೋರಿಸುವರು.



108

ಸಾಧ್ಯವಾದರೆ ದೇವರಾದುಕೊಂಡವರನ್ನು ಸಹ ಮೋಸಗೊಳಿಸುವರು.ಮತ್ತಾಯ ೨೪:೨೩–೨೪



109

(ವಚನ _ ಮತ್ತಾಯ ೨೪:೨೬)
ಅಗೋ ಕ್ರಿಸ್ತನು ಅಡವಿಯಲ್ಲಿ ಇದ್ದಾನೆಂದು ಹೇಳಿದರೆ ಹೊರಟು ಹೋಗ ಬೇಡಿರಿ ಮತ್ತಾಯ ೨೪:೨೬ ನಾವು ಎಲ್ಲಿಗೂ ಹೋಗಬೇಕಿಲ್ಲ. ಯೇಸು ಹೀಗೆಂದನು



110

(ವಚನ ಮತ್ತಾಯ ೨೪:೨೭)
ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುವ ಹಾಗಿರುತ್ತದೆ.



111

ಹಾಗೆಯೇ ಮನುಷ್ಯ ಕುಮಾರನ ಪ್ರತ್ಯಕ್ಷತೆ ಇರುವುದು ಮತ್ತಾಯ ೨೪:೨೭



112

(ವಚನ ಪ್ರಕಟನೆ. ೧:೭)
ತಿರಿಗಿ ಹೀಗೆ ತಿಳಿಸಿದೆ. ಇಗೋ ಮೇಘಗಳೊಂದಿಗೆ ಬರುತ್ತಾನೆ. ಎಲ್ಲರ ಕಣ್ಣುಗಳು ಆತನನ್ನು ಕಾಣುವವು. ಆತನನ್ನು ಇರಿದವರು ಸಹ ಕಾಣುವರು. ಪ್ರಕಟನೆ ೧:೭.


113


ಆತನು ಬರುವಾಗ ನಾವು ನೋಡುತ್ತೇವೆ. ಆತನ ಧೂತರ ಜೊತೆ ಯೇಸು ಯಾವಾಗ ಬರುತ್ತಾನೆಂದು ಯಾರಿಗೂ ಹೇಳಬೇಕಾದ ಅಗತ್ಯವಿಲ್ಲ.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.



114

ಯೇಸು ಕೊಟ್ಟ ಮಹಾ ಸೂಚನೆಗಳಲ್ಲಿ. ಒಂದು ಸುವಾರ್ತೆಯು ಲೋಕದ ಎಲ್ಲಾ ಕಡೆಗೆ ಸಾರಲಾಗುವುದು. ಇದೊಂದು ಸೂಚನೆ. ಇನ್ನೂ ನೆರವೇರಲಿಲ್ಲ.



115

(ವಚನ ಮತ್ತಾಯ ೨೪:೧೪)
ಮತ್ತಾಯ ೨೪:೧೪ ರಲ್ಲಿ ಯೇಸು ಹೇಳಿದನು. ಇದಲ್ಲದೆ ಪರಲೋಕ ರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಯಾಗಿ ಸಾರಲಾಗುವುದು. ಆಗ ಅಂತ್ಯವು ಬರುವುದು.



116

ಪ್ರಕಟನೆಯ ಪುಸ್ತಕದಲ್ಲಿ. ಈ ಮಹಾ ಪ್ರಕಟನೆಯಲ್ಲಿ ವಿವರಿಸಿರುವುದನ್ನು ಕಾಣುತ್ತೇವೆ.



117

(ವಚನ ಪ್ರಕಟನೆ ೧೪:೬)
ಮತ್ತೊಬ್ಬ ದೇವ ಧೂತನು ಆಕಾಶದ ಮಧ್ಯೆ ಹಾರಿ ಹೋಗುವುದನ್ನು ಕಂಡೆನು.



118

ಭೂ ನಿವಾಸಿಗಳಿಗೆ ಸಾರಲು ಶುಭವರ್ತಮಾನವು ಅವನಲ್ಲಿತ್ತು



119

ಸಕಲ ಜನಾಂಗ, ಕುಲ, ಪ್ರಜೆಗಳವರಿಗೆ ಸಾರಬೇಕಾಗಿದೆ. ಪ್ರಕಟನೆ ೧೪:೬ ಈ ಕೂಟದಲ್ಲಿ ಈ ಪ್ರವಾದನೆಯು ಈ ರಾತ್ರಿ ನೆರವೇರುವುದನ್ನು ನೀವು ಕಾಣುತ್ತೀರಲ್ಲವೇ.?
ಪ್ರತಿಯೊಬ್ಬರಿಗೂ ಸಾರಬೇಕಾಗಿದ್ದ ನಿತ್ಯವಾದ ಶುಭ ವರ್ತಮಾನದ ಒಂದು ಭಾಗವಾಗಿದೆ



120

ಸುವಾರ್ತೆಯು ಬಾನುಲಿ, ದೂರದರ್ಶನ ಸುವಾರ್ತೆ ಕೂಟಗಳ ಮೂಲಕ, ಇಂಟರ್ ನೆಟ್, ಸತ್ಯವೇದ ಪಾಠಗಳಿಂದ, ಸತ್ಯವೇದ ಪತ್ರ ವ್ಯವಹಾರದ ಮೂಲಕ ಸಾರಲ್ಪಡುತ್ತಾ ಇದೆ.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.


121

ತಿಳಿವಳಿಕೆ ಹೆಚ್ಚುವದೆಂದು ದಾನಿಯೇಲನು ಹೇಳಿದನು. ಈ ಲೋಕದ ಚರಿತ್ರೆಯ ಕೊನೆಯ ದಿನಗಳಲ್ಲಿ ದಾನಿಯೇಲನ ಪುಸ್ತಕದ ಮುದ್ರೆ ಒಡೆಯಲ್ಪಟ್ಟಿತು. ದೇವರ ಯೋಜನೆಯ ತಿಳುವಳಿಕೆಯನ್ನು ಲೋಕದಲ್ಲಿನ ವಿಜ್ಞಾನವು ಅಧಿಕವಾಗುವುದನ್ನು ತಿಳಿಸುತ್ತದೆ.



122


ಸಮಯವು ಕಳೆಯುತ್ತದೆ. ನೋಹನ ಕಾಲದಲ್ಲಿದ್ದ ಲೋಕವು ನಾಶವಾಗುವುದಕ್ಕೆ ಕಾರಣವಾದ ಅದೇ ಪಾಪಗಳು ಇಂದು ಇರುತ್ತವೆ.


123

ಈಗ ಸಂಭವಿಸುತ್ತಿರುವ ಸಂಭವನೆಗಳ ಸಿದ್ಧಾಂತದಿಂದ ಮಾನವನು ಆತನ ಸ್ವಂತ ನಾಶಕ್ಕಾಗಿ ಸಿದ್ಧನಿದ್ದಾನೆ. ಯೇಸು ನಮ್ಮ ಕಾಲವನ್ನು ನೋಹನ ಕಾಲಗಳಿಗೆ ಹೋಲಿಸುತ್ತಾನೆ.



124

ನೋಹನ ಕಾಲದಲ್ಲಿದ್ದ ಜನರು ಬಹಳ ಕೆಲಸದಲ್ಲಿ, ದಿನನಿತ್ಯದ ಕಾರ್ಯದಲ್ಲಿ ನಿರತರಾಗಿದ್ದರು. ಅಧ್ಯಾತ್ಮಿಕ ಕಾರ್ಯಗಳಲ್ಲಿ ಹೆಚ್ಚಿನ ಸಮಯವನ್ನು ಕಳೆಯಲಿಲ್ಲ.




125

(ವಚನ ಮತ್ತಾಯ ೨೪:೩೭-೩೯)
ಯೇಸು ಮತ್ತಾಯ ೨೪:೩೭-೩೯ ವಚನಗಳಲ್ಲಿ ಹೀಗೆ ಹೇಳಿದನು. ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯ ಕುಮಾರನ ಪ್ರತ್ಯಕ್ಷತೆಯು ಇರುವುದು.



126


ಹೇಗೆಂದರೆ ಜಲ ಪ್ರಳಯಕ್ಕೆ ಮುಂಚಿನ ದಿನಗಳಲ್ಲಿ. ಜನರು ಉಣ್ಣುತ್ತಾ ಕುಡಿಯುತ್ತಾ ಇದ್ದರು.



127


ನೋಹನು ನಾವೆಯಲ್ಲಿ ಸೇರಿದ ತನಕ ಮದುವೆ ಮಾಡಿಕೊಳ್ಳುತ್ತಾ, ಮಾಡಿಕೊಡುತ್ತಾ ಇದ್ದರು.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.



128

ಪ್ರಳಯದ ನೀರು ಬಂದು ಎಲ್ಲರನ್ನೂ ಬಡಕೊಂಡು ಹೋಗುವ ತನಕ ಏನೂ ತಿಳಿಯದೆ ಇದ್ದರು



129

ಅದರಂತೆ ಮನುಷ್ಯ ಕುಮಾರನು ಪ್ರತ್ಯಕ್ಷನಾಗುವ ಕಾಲದಲ್ಲಿಯೂ ಇರುವುದು.



130

ನೋಹನ ಕಾಲದ ಹಾಗೆ ಆತನ ಎರಡನೆಯ ಬರೋಣದಲ್ಲಿ ಇರುವುದೆಂದು ಯೇಸು ಹೇಳಿದನು.
ಜನರು ಹೆಚ್ಚಾದ ಸಮಯವನ್ನು ಕಳೆಯುತ್ತಾರೆ. ಆದರೆ ದೇವರಿಗೆ ಸಮಯ ನೀಡುವುದಿಲ್ಲ. ದೇವರನ್ನು ಪ್ರೀತಿಸಲು ಬದಲು ಅವರು ಭೋಗಗಳನ್ನೇ ಹೆಚ್ಚಾಗಿ ಪ್ರೀತಿಸುತ್ತಾರೆ.



131

ಗಡಿಯಾರದ ಲೋಟದಲ್ಲಿ ಮರಳು ಬೀಳುತ್ತದೆ. ಬೇಗನೆ ದೇವ ಕುಮಾರನು ನಕ್ಷತ್ರವಿರುವ ಆಕಾಶದಿಂದ, ಲೆಕ್ಕವಿಲ್ಲದ ದೂತರ ಜೊತೆ ಇಳಿದು ಬರುತ್ತಾನೆ. ಆ ದಿನಕ್ಕಾಗಿ ದೇವರು ಆಸಕ್ತಿಯಿಂದ ಎದುರು ನೋಡುತ್ತಾನೆ. ಈ ಲೋಕವನ್ನು ನಾಶಮಾಡಲಿಕ್ಕಲ್ಲ, ಆದರೆ ಆತನ ಜನರನ್ನು ಮನೆಗೆ ಕರೆದುಕೊಂಡು ಹೋಗಲು ಆಶಿಸುತ್ತಾನೆ. ಮನೆಯು ಕಾದಿದೆ. ಸಿದ್ಧವಾಗಿದೆ.



132


ಇಂದು ಲೋಕದಲ್ಲಿ ನಾವು ಸೂಚನೆಗಳನ್ನು ಕಾಣುವಾಗ ಯೇಸುವಿನ ಬ ರುವಿಕೆಗೆ ಎಷ್ಟು ಹತ್ತಿರ ವಿದ್ದೇವೆಂದು ತಿಳಿಯಬಹುದಾಗಿದೆ.
ಯೇಸು ಮೊದಲನೆಯ ಸಾರಿ ಬಂದಾಗ ಇದ್ದ ಕಾರ್ಯಗಳು ಈಗಲೂ ಇವೆ. ಲೋಕಕ್ಕೆ ಯೇಸು ಬರುತ್ತಾನೆಂದು ಜನರು ತಿಳಿಯಲು ದೇವರು ಹಿಂದೆ ಅನೇಕ ಸೂಚನೆಗಳನ್ನು ನೀಡಿದ್ದನು.



133

(ವಿಡಿಯೋ ೭ ಸೆಕೆಂಡುಗಳು)
೪೦೦೦ ವರ್ಷಗಳ ಕಾಲ ಗಡಿಯಾರ ಕೆಲಸ ಮಾಡಿತು ಮತ್ತು ಆತನ ಬ ರುವಿಕಯನ್ನು ಜನರಿಗೆ ತಿಳಿಸಲು ದೇವರು ಧೂತರನ್ನು ಮತ್ತು ಜೋಯಿಸರನ್ನು ಕಳುಹಿಸಿದನು.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.



134

(ವಚನ ಯೋಹಾನ ೧:೧೧)
ಹೇಳಲು ವ್ಯಸನವಾಗುತ್ತದೆ. ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು, ಆದರೆ ಸ್ವಂತ ಜನರು ಆತನನ್ನು ಅಂಗೀಕರಿಸಲಿಲ್ಲ.ಆತನಿಗಾಗಿ ಅವರು ಸಿದ್ದರಿರಲಿಲ್ಲ.



135

ಸ್ನೇಹಿತರೇ, ಆತನು ಬೇಗ ಬರುತ್ತಾನೆಂದು ತಿಳಿಸಲು ಈ ಸೂಚನೆಗಳನ್ನು ಕೊಟ್ಟಿದ್ದೇವೆ. ಯೇಸು ಹೀಗೆಂದನು.



136

(ವಚನ ಮತ್ತಾಯ ೨೪:೩೩,೩೪)
ನೀವು ಇದನ್ನೆಲ್ಲಾ ನೋಡುವಾಗ ಆ ದಿನವು ಹತ್ತರವದೆ, ಬಾಗಲಲ್ಲೇ ಅದೆ ಎಂದು ತಿಳುಕೊಳ್ಳಿರಿ.



137

ಇದೆಲ್ಲಾ ಆಗುವ ತನಕ ಈ ಸಂತತಿಯು ಅಳಿದು ಹೋಗುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಮತ್ತಾಯ ೨೪:೩೩,೩೪


138

ಈ ಸಮಯದಲ್ಲಿ ಆತನನ್ನು ನಾವು ಅಂಗಿಕರಿಸುತ್ತೇವೋ ಇಲ್ಲವೇ ತಿರಿಗಿ ನಿರಾಶರಾಗಿರುತ್ತೇವೋ ? ಗಂಟೆ ತಡವಾಯಿತು. ಕಂಬಗಳು ಬಹು ಎತ್ತರವಾಗಿದೆ. ಸುಮ್ಮನೆ ಸಮಯವನ್ನು ಕಳೆಯಲಾಗದು.

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.


139

ಹೊಗೆ ಬಂಡಿಯು ಮಧ್ಯೆ ಅಮೇರಿಕದ್ದು ನ್ಯೂಯಾರ್ಕ್ ಸಮುದ್ರದ ಕಡೆಯಿಂದ, ದಕ್ಷಿಣ ಕಡೆಗೆ ಪನಾಮ ಕಾಲುವೆಯ ಕಡೆಗೆ ಸಾಗುತಿತ್ತು. ಹಡಗಿನಲ್ಲಿ ತೂತು ಇತ್ತು. ಬೇರೆ ಹಡಗು ಪರಿತಾಪದ ಚಿಹ್ನೆಯನ್ನು ಕಂಡು ಸಹಾಯಕ್ಕೆ ಬರಲು ಪ್ರಾರಂಭಿಸಿತು. ಹಡಗನ್ನು ಕಾಪಾಡುವ ನಾವಿಕನು ಒಂದು ಸಂದೇಶವನ್ನು ಕಳುಹಿಸಿದನು. ಏನಾಯಿತು? ನಾವು ದುರಸ್ಥಿ ಮಾಡುತ್ತಿದ್ದೇವೆ. ಹಡಗು ಕೆಳಗೆ ಇಳಿಯುತ್ತಾ ಇದೆ. ಬೆಳಗಾಗುವವರೆಗೆ ಕಾಯಿರೆಂಬ ಉತ್ತರ ಕೊಡಲ್ಪಟ್ಟಿತು. ರಕ್ಷಿಸಲಿದ್ದವನು ಹಡಗು ಮುಳುಗುವುದನ್ನು ಕಂಡು ಹೀಗೆ ಉತ್ತರ ನೀಡಿದನು. ಹಡಗಿನಲ್ಲಿರುವ ಪ್ರಯಾಣಿಕರನ್ನು ಕರಕೊಂಡು ಹೋಗಲು ಬಯಸುತ್ತೇನೆಂದು ನಾವಿಕನು ಹೇಳಿದನು.

ಆದರೆ ರಾತ್ರಿಯಾಯಿತು. ಮಧ್ಯೆ ಅಮೇರಿಕಾದ ನಾವಿಕನು ರಾತ್ರಿಯಲ್ಲಿ ಪ್ರಯಾಣಿಕರನ್ನು ಸಾಗಿಸಲು ಇಷ್ಟ ಪಡದೆ ಬೆಳಗಿನವರೆಗೆ ಕಾಯಲು ಹೇಳಿದನು. ಬೇರೆ ನಾವಿಕನು ತಕ್ಷಣವೇ ತೀರ್ಮಾನ ಮಾಡಲು ಸಂದೇಶಗಳನ್ನು ಕಳುಹಿಸಿದನು. ಆದರೆ ಈತನು ನಿರಾಕರಿಸಿದನು. ರಾತ್ರಿಯಲ್ಲಿ ಆತನು ಸ್ವಲ್ಪ ದೂರ ಕಾದಿರಬೇಕಾಯಿತು. ಸೇತುವೆಯ ಮೇಲಿದ್ದ ಜನರು ಮಧ್ಯೆ ಅಮೇರಿಕಾದ ಹಡಗಿನ ದೀಪಗಳು ಹಾರಿ ಹೋಗುವುದನ್ನು ಕಂಡರು. ಅಲೆಗಳು ಬಡಿಯುವುದನ್ನು ಕಂಡಿತು.

ಒಂದುವರೆ ಗಂಟೆಯ ನಂತರ ತಕ್ಷಣವೇ ಆ ದೀಪಗಳು ಹಾರಿ ಹೋಗುವುದನ್ನು ಆವರು ಕಂಡರು. ಹಡಗು ಮುಳುಗಿತು. ಇದ್ದವರೆಲ್ಲರೂ ನಾಶವಾದರು.


140

ಕಾದರೆ ಅದರ ಪಲಿತಾಂಶ ನಿತ್ಯ ನಾಶವಾಗಿದೆ. ಕೆಲವು ವೇಳೆ ತಕ್ಷಣವೇ ಈಗ ತೀರ್ಮಾನ ಮಾಡಬೇಕಾಗಿದೆ.

ಮಧ್ಯೆ ಅಮೇರಿಕದ ನಾವಿಕನು ಬೆಳಗಿನವರೆಗೆ ಕಾದನು ಯಾವ ಸಮಸ್ಯೆ ಇಲ್ಲ ಎಂದು ಯೋಚಿಸಿದನು. ಅವನು ತೀರಾ ತಪ್ಪು ಮಾಡಿದನು.

ಈ ಹೋತ್ತಿನಲ್ಲೇ ರಕ್ಷಣೆಯ ದಿನವೆಂದು ಸತ್ಯವೇದವು ಹೇಳುತ್ತದೆ. ಕಾಯ ಬೇಡಿರಿ, ಅನುಮಾನ ಪಡಬೇಡಿರಿ, ತಡ ಮಾಡಬೇಡಿರಿ.

ಈಗಲೇ ಯಾಕೆ ಯೇಸುವಿಗಾಗಿ ತಿರ್ಮಾನ ಮಾಡಬಾರದು ? ಈಗಲೇ ಯಾಕೆ ನಿಮ್ಮ ಹೃದಯವನ್ನು ದೇವರ ಕಡೆಗೆತ್ತಿ ಕ್ರಿಸ್ತನ ಶೀಘ್ರ ಬರೋಣಕ್ಕೆ ನೀವು ಸಿದ್ಧರಾಗಲು ಯಾಕೆ ಆತನನ್ನು ಸಹಾಯಕ್ಕಾಗಿ ಕೇಳಬಾರದು ?

ಯೇಸುವಿನ ಶೀಘ್ರ ಬರೋಣಕ್ಕೆ ಸಿದ್ಧರಾಗುವುದರಿಂದ ದೂರವಿಡಲು ನಿಮ್ಮ ಜೀವಿತದಲ್ಲಿ ಯಾವದಾದರೂ ಅಡ್ಡಿ ಇದೆಯೋ ?

ನಾವು ಪ್ರಾರ್ಥಿಸುವಾಗ ಅದನ್ನು ಯಾಕೆ ಈಗಲೇ ಬಿಟ್ಟು ಬಿಡಬಾರದು ?

ಕ್ರಿಸ್ತನನ್ನು ಅಂಗೀಕರಿಸಲು ನೀವು ನಿಜವಾಗಿ ಇಷ್ಟವುಳ್ಳವರಾಗಿದ್ದರೆ ಈಗಲೇ ನಿಮ್ಮ ಕೈಯನ್ನು ಎತ್ತಿ, ಹೌದು ಕರ್ತನೇ ನೀನು ತಿರಿಗಿ ಬರುವಾಗ ನಾನು ಸಂಧಿಸಲು ಸಿದ್ಧನಾಗಲು ಆಶಿಸುತ್ತೇನೆಂದು ಯಾಕೆ ಹೇಳಬಾರದು ?

೨ – ನೀವು ಅಲಕ್ಷ್ಯ ಮಾಡದ ಸೂಚನೆಗಳು.

೩ – ಮಹಾ ತಪ್ಪಿಸಿಕೊಳ್ಳುವಿಕೆ



1


ನೀನು ಅಮರತ್ವಕ್ಕೆ ಕಾಲಿಡುವ ದಿನ.


2

ಮೇರಿಗೆ ಆಯಾಸವಾಯಿತು. ಬಹು ಕೆಲಸದಲ್ಲಿ ನಿರತಳಾಗಿದ್ದ ವಾರವಾಗಿತ್ತು. ಆಕೆಯ ಜೀವಿತದಲ್ಲಿ ತುಂಬಾ ಕೆಲಸ ಮಾಡುತ್ತಿರುವ ಹಾಗೆಯೇ ಕಂಡಿತು. ಅಂಗಡಿಯಿಂದ ಕಾರಿನಲ್ಲಿ ಹೊರಟು ರಾಜ ಮಾರ್ಗದಿಂದ ಹೊರಟು ಸಣ್ಣ ರಸ್ತೆಯಲ್ಲಿ ಆಕೆಯ ಮನೆಗೆ ಹೋದಳು.


3

ತಕ್ಷಣವೇ ರಾತ್ರಿ ಆಕಾಶದಲ್ಲಿ ಉಲ್ಕಗಳು ಸುರಿಯುವುದನ್ನು ಕಂಡಳು, ಅಡ್ಡಾಡುವ ನಕ್ಷತ್ರಗಳು ಆಕಾಶವನ್ನು ಬೆಳಗಿಸಿದವು.


4

ಈ ತೆರನಾದ ನಕ್ಷತ್ರಗಳು ಎಂದೂ ಕಾಣಿಸಿರಲಿಲ್ಲ ಆಕೆಯು ಬೇಗನೆ ಕೆಳಗೆ ಇಳಿದು ಬಂದಳು, ಆಕೆಯು ತಕ್ಷಣವೇ ಹೀಗೆ ಯೋಚಿಸಿದಳು. ಇದು ಲೋಕದ ಅಂತ್ಯ, ಕ್ರಿಸ್ತನು ಬರುತ್ತಾನೆ. ನಾನು ಬೇಗನೆ ಮನೆಗೆ ಹೋಗಿ ನನ್ನ ಮಗನ ಜೊತೆಯಲ್ಲಿರಬೇಕು.
ಆದ ಅನುಭವದ ವಿಚಾರವಾಗಿ ನಂತರ ವಿವರಿಸುತ್ತ ಮೇರಿ ಹೀಗಂದಳು. ಆಕಾಶವು ಅಷ್ಟು ಪ್ರಕಾಶವಾಗಿರುವದನ್ನು ಕಂಡಾಗ ಆ ಕ್ಷಣವೇ ಯೇಸು ಬ ರುತ್ತಾನೆಂದು ಯೋಚಿಸಿದೆನು.



5

ಒಂದು ದಿನ ಲೋಕವು ಅಂತ್ಯವಾಗುವುದೋ ಎಂದು ಯಾವಾಗಲಾದರೂ ಆಶ್ಚರ್ಯ ಪಟ್ಟಿದ್ದೀರೋ? ಅದು ಹೀಗೆ ಅಂತ್ಯವಾಗಬಹುದೆಂದು ನೀವು ಆಶ್ಚರ್ಯಪಟ್ಟಿರಬಹುದು? ಅಂತ್ಯಕ್ಕೆ ಈ ತೆರನಾದ ಉಲ್ಕಗಳು ಉದುರುವುದು ಸೂಚನೆ ಇರುತ್ತದೋ?



6

(ವಿಡಿಯೋ ೮ ಸೆಕೆಂಡುಗಳು) ಈ ಲೋಕವು ಒಂದು ಅಣುಬಾಂಬಿನ ಯುದ್ಧದಿಂದ ಅಂತ್ಯಗೊಳುತ್ತದೆಂದು ಕೆಲವು ಜನರು ಯೋಚಿಸುತ್ತಾರೆ. ಮಾನವರು ತಮ್ಮನ್ನು ತಾವೇ ನಾಶಮಾಡಿಕೊಳ್ಳುವರು. ಲೋಕದಲ್ಲಿ ಜೀವಿಸುವವರು ಕೊಲ್ಲಲ್ಪಡುವರೆಂದು ಕೆಲವರು ಯೋಚಿಸುತ್ತಾರೆ.

೩ – ಮಹಾ ತಪ್ಪಿಸಿಕೊಳ್ಳುವಿಕೆ


7

ಭೂಮಿಯು ಅನೇಕ ಜನರಿಗೆ ಊಟವನ್ನು ಒದಗಿಸಲಿಕ್ಕಾಗುವುದಿಲ್ಲ. ಊಟವಿಲ್ಲದೆ ಜನರು ಬಳಲುವುದರಿಂದ ಲೋಕದ ಜನ ಸಂಖ್ಯೆಯು ಅಧಿಕವಾಗಿ ಹೆಚ್ಚುವುದರಿಂದ ಹೀಗಾಗುವುದೆಂದು ಬೇರೆಯವರು ನೆನಸುತ್ತಾರೆ.


8

ಇನ್ನು ಕೆಲವರು ಈ ರೀತಿ ಚಿಂತಿಸುತ್ತಾರೆ. ಒಂದು ದಿನದಲ್ಲಿ ತಾರಾ ಮಂಡಲವು ಇಲ್ಲವೇ ಒಂದು ದೂಮಕೇತು ಭೂಮಿಗೆ ಬಡಿದು ನಾಶಮಾಡುತ್ತದೆನ್ನುತ್ತಾರೆ.



9

(ವಿಡಿಯೋ ೮ ಸೆಕೆಂಡುಗಳು)
ಲೋಕವು ಹೇಗೆ ಅಂತ್ಯವಾಗುವುದೆಂದು ಅನೇಕ ಕಾಲದ ಹಿಂದೆ ಸತ್ಯವೇದ ತಿಳಿಸಿರುವುದು ನಿಮಗೆ ತಿಳಿದಿದೆಯೋ?
ಸ್ನೇಹಿತರೇ ಮಾನವ ಸಂತತಿಯು ಯುದ್ದ, ಊಟವಿಲ್ಲದೆ ಬಳಲುವುದರಿಂದ ಅಂತರದಲ್ಲಿ ಗ್ರಹಗಳು ಒಂದಕ್ಕೊಂದು ಹೊಡೆಯುವುದರಿಂದ ನಾಶವಾಗುವುದಿಲ್ಲ ಎಂಬುದು ಶುಭ ಸಂದೇಶವಾಗಿದೆ.


10

ಕ್ರಿಸ್ತನು ಜಯ ಪ್ರದನಾಗಿ ಈ ಭೂಮಿಗೆ ಬರುವಾಗ ಲೋಕವು ಅಂತ್ಯವಾಗುವುದೆಂದು ಸತ್ಯವೇದವು ಹೇಳುತ್ತದೆ.
೨೦೦೦ ವರ್ಷಗಳ ಹಿಂದೆ ಆತನು ಬಿಟ್ಟು ಹೋದ ಇದೇ ಭೂಮಿಗೆ ಆತನು ಹಿಂತಿರುಗಿತ್ತಾನೆ. ಸಮಯವನ್ನು ಅಂತ್ಯಗೊಳಿಸಲು ಆತನು ಬರುತ್ತಾನೆ. ಇದು ನಮಗೆ ತಿಳಿದಿರಬೇಕು


11

ಯೇಸುವಿನ ಬರೋಣವು ಹೇಗಿರುತ್ತದೆಂದು ಅವರು ಯೋಚಿಸುತ್ತಾರೆಂದು ಕೇಳುವಾಗ, ಜನರು ಏನಾಗುವರೆಂದು ಯೋಚಿಸುವುದನ್ನು ಕಂಡು ಹಿಡಿಯಲು ಸ್ವಾರಸ್ಯವಾಗಿದೆ.


12

ಹೌದು ಸ್ನೇಹಿತರೇ, ರಾಜನಾದ ಯೇಸು ಬೇಗ ಬರುತ್ತಾನೆ. ಈ ಲೋಕದ ಸಮಸ್ಯೆಗಳು ಮಾನವನ ಸಹಾಯಕ್ಕಿಂತಲೂ ಮಿಗಿಲಾಗಿದೆ. ಎಂಬುದರಲ್ಲಿ ಸಂದೇಹವಿಲ್ಲ. ಈ ಲೋಕದಲ್ಲಿರುವ ಸಮಸ್ಯೆಗಳನ್ನು ಸರಿಪಡಿಸಲು ಕ್ರಿಸ್ತನು ಮತ್ತು ಆತನ ತಂದೆಯಿಂದ ಮಾತ್ರ ಸಾಧ್ಯವಿದೆ. ರಾಜನು ಬರುವಾಗ ಎಂಥಾ ಬಂದು ಆಶೀರ್ವಾದವಿರುತ್ತದೆ.

೩ – ಮಹಾ ತಪ್ಪಿಸಿಕೊಳ್ಳುವಿಕೆ


13

ಅಪೋಸ್ತಲನಾದ ಪೌಲನು ಕೈದಿಯಾಗಿ ಕತ್ತಲೆಯ ಶೀತದ ಮಾಮರ್ ಟೆನ್ ಸೆರೆಮನೆಯಲ್ಲಿದ್ದಾಗ ಆತನ ಕುತ್ತಿಗೆಯನ್ನು ಕಡಿಯಲು ಕಾದಿದ್ದಾಗ ಇದನ್ನು ಬರೆದನು.



14

ನಾವು ಭಕ್ತಿಹೀನತೆಯನ್ನು ಲೋಕದ ಆಶೆಗಳನ್ನೂ ವಿಸರ್ಜಿಸಿ ಭಾಗ್ಯಕರವಾದ ನಿರೀಕ್ಷೆಯನ್ನು ಅಂದರೆ ಮಹಾದೇವರ ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇಹಲೋಕದಲ್ಲಿ ಸ್ವಸ್ಥಚಿತ್ತರಾಗಿಯೂ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು ನಮಗೆ ಬೋಧಿಸುತ್ತದೆ.


15

ನಿಮ್ಮ ಜೀವನದಲ್ಲಿ ಅಧೈರ್ಯದ ಸನ್ನಿವೇಶಗಳು ಆಗಾಗ್ಗೆ ಘೋರಾಂಧಕಾರವಾಗಿ ಕಾಡುತ್ತಿದ್ದರೆ, ಮೇಲಕ್ಕೆ ನೋಡಿ. ಈ ಲೋಕಕ್ಕೆ ಎರಡನೇ ಸಾರಿ ಬರಲಿರುವ ಕ್ರಿಸ್ತನ ಆ ಭಾಗ್ಯಕರ ನಿರೀಕ್ಷೆ ಎಲ್ಲವನ್ನೂ ಸರಿಪಡಿಸುತ್ತದೆ ಎಂಬುದನ್ನು ಜ್ಞಾಪಕದಲ್ಲಿಡಿ.



16

ಹೊಸ ಒಡಂಬಡಿಕೆಯಲ್ಲಿ ಬಹಳವಾಗಿ ಮಾತಾಡಲ್ಪಟ್ಟ ಘಟನೆಯೆಂದರೆ ಕ್ರಿಸ್ತನ ಎರಡನೇ ಬರೋಣವೇ ಆಗಿದೆ. ಪ್ರತಿ ೨೫ ವಾಕ್ಯಗಳಲ್ಲಿ, ಒಂದು ವಾಕ್ಯ ಆ ಘಟನೆಯನ್ನು ಕುರಿತು ಮಾತಾಡುತ್ತದೆ. ಹೊಸ ಒಡಂಬಡಿಕೆಯಲ್ಲಿ ಯೇಸುಸ್ವಾಮಿ ಬೇರಾವುದೇ ವಿಷಯಕ್ಕಿಂತ ಈ ಘಟನೆಯನ್ನು ಕುರಿತು ಮಾತಾಡುವುದರಲ್ಲಿ ಹೆಚ್ಚು ಸಮಯ ಕಳೆದಿದ್ದಾನೆ. ಸತ್ಯವೇದವನ್ನು ನಂಬ ುವ ಪ್ರತಿಯೊಬ್ಬ ವ್ಯಕ್ತಿಗೂ ತಿಳಿದಿರಲೇ ಬೇಕಾದ ಎರಡು ವಚನಗಳಿವೆ.




17

ಯೋಹಾನ ೩:೧೬ ಎಲ್ಲರಿಗೂ ತಿಳಿದಿರುವಂಥ ಜನಪ್ರಿಯ ವಚನವಾಗಿದೆ. ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು......



18


ಯೇಸುಸ್ವಾಮಿ ಶಿಲುಬೆಗೆ ಹಾಕಲ್ಪಟ್ಟು, ಮರಣಿಸಿ, ಪುನರುತ್ಥಾನಗೊಂಡು ಪರಲೋಕಕ್ಕೆ ಏರಿ ಹೋಗುವದಕ್ಕೆ ಸ್ವಲ್ಪ ಕಾಲವಿರುವಾಗ ಹೇಳಿದ ಒಂದು ವಚನವಂತೂ ಬಹಳ ಸುಂದರವಾದುದು.



19


ಯೋಹಾನ ೧೪:೧-೩
ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ.

೩ – ಮಹಾ ತಪ್ಪಿಸಿಕೊಳ್ಳುವಿಕೆ




20

ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ; ಇಲ್ಲದಿದ್ದರೆ ಹೇಳುತ್ತಿದ್ದೆನು; ನಿಮಗೆ ಸ್ಥಳವನ್ನು ಸಿದ್ಧಮಾಡುವುದಕ್ಕೆ ಹೋಗುತ್ತೇನಲ್ಲಾ.



21

ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು.



22

ಯಾಕೆಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು.ಮತ್ತು ನಾನು ಹೋಗುವ ಸ್ಥಳದ ಮಾರ್ಗವು ನಿಮಗೆ ತಿಳಿದಿದೆ ಎಂದನು.


ಯೋಹಾನ ೧೪:೧–೩


23

ಶತಮಾನಗಳಿಂದ ಕ್ರಿಸ್ತನ ಹಿಂಬಾಲಕರನ್ನು ನೋವು, ನಿರಾಶೆ ಸಾವು ಬೆದರಿಸಿದಾಗ,


24

ಆ ಭಾಗ್ಯಕರ ನಿರೀಕ್ಷೆ – ಆತನ ಎರಡನೇ ಬರೋಣದ ವಾಗ್ದಾನ ಅವರಿಗೆ ಧೈರ್ಯವನ್ನು ಮತ್ತು ಸಾಮರ್ಥ್ಯವನ್ನು ತಂದುಕೊಟ್ಟಿದೆ.



25


೨ ತಿಮೊಥಿ ೪:೭,೮
ಪೌಲನ ಜೀವನದಲ್ಲಿ ಹಿಂಸಕನು ಹಿಂಸಿಸಲು ಪಯತ್ನಿಸಿ ಸೋತು ಹಿಂದೆ ಸರಿದಾಗ, ಜಯಶಾಲಿಯಾದ ಪೌಲನು, ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ, ನನ್ನ ಓಟವನ್ನು ಕಡೆಗಾಣಿಸಿದ್ದೇನೆ, ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ.



26

ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು.

೩ – ಮಹಾ ತಪ್ಪಿಸಿಕೊಳ್ಳುವಿಕೆ



27

ನನಗೆ ಮಾತ್ರವಲ್ಲ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು. ೨ ತಿಮೊಥಿ ೪:೭,೮


28

ಕ್ರಿಸ್ತನು ಹಿಂತಿರುಗಿ ಬರುತ್ತಾನೆ ಎಂದು ನುಡಿದ ಆ ವಾಗ್ದಾನವನ್ನು ಪಾಲನು ಅಚಲವಾಗಿ ನಂಬಿದ್ದರಿಂದ ತನ್ನ
ಮರಣಾಂತಿಕ ದಿನದಂದೂ ಸಹ ಆತ ತನ್ನ ಹಿಂಸಕನ ಕತ್ತಿಯ ವಿರುದ್ಧ ಧೈರ್ಯವಾಗಿ ಹೋರಾಡುವುದು ಸಾಧ್ಯವಾಯಿತು.


29

ಹೌದು, ಯೇಸುವು ನಿಶ್ಚಯವಾಗಿ ಹಿಂತಿರುಗಿ ಬರುತ್ತಾರೆ ! ಸ್ನೇಹಿತನೇ, ಯೇಸುಸ್ವಾಮಿ ಶಿಷ್ಯರಿಗೆ ನೀಡಿದ ವಾಗ್ದಾನ ನಮಗೂ ಸಹ ಅನ್ವಯವಾಗುತ್ತದೆ. ಯೇಸು ಸ್ವಾಮಿ ಖಂಡಿತವಾಗಿ ಬರುತ್ತಾನೆ !


30

ಯೇಸುಸ್ವಾಮಿ ಶಿಷ್ಯರು ಆತನ ಎರಡನೇ ಬರೋಣ ಹಾಗೂ ಲೋಕಾಂತ್ಯವನ್ನು ಕುರಿತು ಗುರುತುಗಳೇನು ಎಂದು ಅವರನ್ನು ಕೇಳಿದಾಗ, ಆತನ ಎರಡನೇ ಬರೋಣಕ್ಕೆ ಸ್ವಲ್ಪ ಮುನ್ನ ಕೇಳಿದಾಗ, ಆತನ ಎರಡನೇ ಬ ರೋಣಕ್ಕೆ ಸ್ವಲ್ಪ ಮುನ್ನ ಘಟಿಸುವ ಎಲ್ಲಾ ಘಟನೆಗಳನ್ನು ವಿವರವಾಗಿ ವರ್ಣಿಸಿದ್ದನು.



31


(ಮತ್ತಾಯ ೨೪:೪೫) ಯೇಸುಸ್ವಾಮಿ ಹೇಳುತ್ತಾನೆ, ಯಾರಾದರು ನಿಮನ್ನು ವೋಸಗೊಳಿಸಾರು ನೋಡಿಕೊಳ್ಳಿರಿ.



32

ಯಾಕೆಂದರೆ ಅನೇಕರು ಬಂದು ನನ್ನ ಹೆಸರನ್ನು ಎತ್ತಿ ಹೇಳಿ ಎಷ್ಟೋ ಜನರನ್ನು ವೋಸಗೊಳಿಸುವರು.

೨೪ ನೇ ವಚನದಲ್ಲಿ ಈ ವಿಷಯವನ್ನು ಇನ್ನೂ ವಿಶಾದವಾಗಿ ಹೇಳಿದ್ದಾನೆ.



33

(ಮತ್ತಾಯ ೨೪:೪೫) ಯೇಸುಸ್ವಾಮಿ ಹೇಳುತ್ತಾನೆ, ಯಾರಾದರು ನಿಮನ್ನು ವೋಸಗೊಳಿಸಾರು ನೋಡಿಕೊಳ್ಳಿರಿ. ಸುಳ್ಳುಕ್ರಿಸ್ತರೂ, ಸುಳ್ಳುಪ್ರವಾದಿಗಳೂ ಎದ್ದು ಸೂಚಕಕಾರ್ಯಗಳನ್ನೂ, ಅದ್ಭುತವಾದ ಕಾರ್ಯಗಳನ್ನೂ ಮಾಡಿ ವೊಸಗೊಳಿಸುವರು.

೩ – ಮಹಾ ತಪ್ಪಿಸಿಕೊಳ್ಳುವಿಕೆ



34

ದೇವರಾದು ಕೊಂಡವರನ್ನು ಸಹ ಮೊಸಗೊಳಿಸುವರು.



35

ನಿಜವಾದ ವ್ಯಕ್ತಿಗೂ, ಸುಳ್ಳಾದ ವ್ಯಕ್ತಿಗೂ ಇರುವ ವ್ಯತ್ಯಾಸವನ್ನು ನಾವು ಕಂಡುಕೊಳ್ಳದಿದ್ದರೆ, ಸುಳ್ಳು ಪ್ರವಾದಿಯನ್ನೇ ಕ್ರಿಸ್ತನೆಂದು ನಂಬುವ ಅಪಾಯವಿದೆ! ಹೀಗಾಗಬಹುದೆಂದು ಯೇಸುಸ್ವಾಮಿ ಎಚ್ಚರಿಕೆ ನೀಡಿದ್ದರೂ ಸಹ, ಅವರು ಕೆಲವು ಸಾಧಾರಣ ಮೋಸಕಾರ್ಯಗಳನ್ನು ಕುರಿತು ಮಾತಾಡುತ್ತಿಲ್ಲ.


36

ಅದೊಂದು ಅಸಾಧಾರಣ ಮೋಸಕಾರ್ಯ. ಯೇಸುವನ್ನೇ ಹೋಲುವಂಥ ರೂಪ ಧರಿಸುವ ಸನ್ನಾಹ. ಬಹಳ ಎಚ್ಚರಿಕೆಯಿಂದ ಮಾಡಿದ ಕಾರ್ಯಸಿದ್ಧತೆ. ಇದರಲ್ಲಿ ಇಡೀ ಪ್ರಪಂಚವೇ ಮೊಸಗೊಳಿಸುವ ತಂತ್ರಗಾರಿಕೆಯಿದೆ.ತಾನೇ ಯೇಸು ಎಂದು ತೋರಿಸಿಕೊಳ್ಳುವುದಕ್ಕಾಗಿ, ಯೇಸುವಿನ ಈ ಪ್ರತಿ ರೂಪ ಅದ್ಭುತವಾದ ಕಾರ್ಯಗಳನ್ನು ಮಾಡುವುದು ಹಾಗೂ ಅಸಾಧಾರಾಣ ಪ್ರದರ್ಶನಗಳನ್ನು ನೀಡುವುದು.


37

ಕ್ರಿಸ್ತನ ನಿಜ ಬರೋಣವನ್ನು ನಾವು ಅಪಾರ್ಥಮಾಡಿಕೊಳ್ಳುವುದಿಲ್ಲ. ಅದನ್ನು ಯಾರು ಮಾಡಲೂ ಬಾರದು. ಆದರೂ ಕ್ರಿಸ್ತನ ಪ್ರತಿರೂಪದ ಸುಳ್ಳುಪ್ರವಾದಿ ನಮ್ಮನ್ನು ಮೋಸಗಳಿಸಲುಬಿಡಬಾರದಲ್ಲ; ಆ ಬಗ್ಗೆ ಬಹಳ ಎಚ್ಚರಿಕೆಯಿಂದ ಯೋಚಿಸೋಣ.


38

ಆ ಪುರಾತನ ಪಿಶಾಚನು ಸುಳ್ಳು ಕ್ರಿಸ್ತರನ್ನು ಮತ್ತು ಸುಳ್ಳು ಪ್ರವಾದಿಗಳನ್ನೂ ಉಪಯೋಗಿಸಿಕೊಂಡು ಕ್ರಿಸ್ತನ ಎರಡನೇ ಬರೋಣವನ್ನು ಕುರಿತು ಗೊಂದಲವನ್ನುಂಟು ಮಾಡುತ್ತಾನೆ.



39

ಆದರೆ ಅಂಥವರು ಸುಳ್ಳು ಅಪೊಸ್ಟಲರೂ ಮೋಸಗಾರರಾದ ಕೆಲಸದವರೂ ಕ್ರಿಸ್ತನ ಅಪೊಸ್ತಲರಾಗಿ ಕಾಣಿಸುವುದಕ್ಕೆ ವೇಷ ಹಾಕಿಕೊಳ್ಳುವವರೂ ಆಗಿದ್ದಾರೆ.

೩ – ಮಹಾ ತಪ್ಪಿಸಿಕೊಳ್ಳುವಿಕೆ



40

ಇದೇನು ಆಶ್ಚರ್ಯವಲ್ಲ; ಸೈತಾನನು ತಾನೇ ಪ್ರಕಾಶರೂಪವುಳ್ಳ ದೇವದೂತನ ವೇಷವನ್ನು ಹಾಕಿಕೊಳ್ಳುವನು. . . .

೨ ಕೊರಿಂಥ ೧೧:೧೪

ಆ ಪಿಶಾಚನೇ ಕ್ರಿಸ್ತನ ಎರಡನೇ ಬರೋಣವನ್ನು ಅಣಕಿಸುವಂತೆ ತನ್ನನ್ನೇ ತಾನು ಮಾರ್ಪಡಿಸಿಕೊಂಡು ರಂಗಮಂಟಪದ ಮೇಲೆ ಏರಿ ಬರಲು ಸಿದ್ದನಾಗುತ್ತಿದ್ದಾನೆ.



41

(ವಿಡಿಯೋ ೧೩ ಸೆಕೆಂಡುಗಳು) ಈ ಲೋಕವೆಂಬ ರಂಗಮಂಟಪದ ಮೇಲೆ ಆಗಾಗ್ಗೆ ಕ್ರಿಸ್ತನ ಪ್ರತಿರೂಪದ ವ್ಯಕ್ತಿಗಳು ಬಂದು ಹೋಗುತ್ತಲೇ ಇದ್ದಾರೆ. ಅವರು ಕ್ರಿಸ್ತನು ಧರಿಸಿದ್ದ ಉಡುಪನ್ನು ಧರಿಸುತ್ತಾರೆ. ಅವರು ಬಹಳ ಮೆಲು ಧ್ವನಿಯಲ್ಲಿ ಮಧುರವಾಗಿ ಮಾತನಾಡುತ್ತಾರೆ. ಅವರು ಎಲ್ಲಾದಕ್ಕೂ ಸತ್ಯವೇದ ಆಧಾರ ಮಾಡಿಕೊಂಡು ಮಾತನಾಡುತ್ತಾರೆ. ಬಹಳ ಜಾಣರಾಗಿ ಕಾಣುತ್ತಾರೆ. ಅವರಲ್ಲಿ ಕೆಲವರು ಯೇಸು ಭೂಮಿಗೆ ಮತ್ತೆ ಬಂದರೆಂದು ನಂಬುವ ದೊಡ್ಡ ದೊಡ್ಡ ಜನಸಮೂಹವನ್ನು ಆಕರ್ಷಣೆಗೊಳಪಡಿಸುತ್ತಾರೆ. ಆದರೆ ಇವರಾರು ಕ್ರಿಸ್ತನಲ್ಲ. ಇದನ್ನು ಖಚಿತವಾಗಿ ನಾವು ಹೇಳಬಲ್ಲೆವು. ಏಕೆ? ಅವರು ಯೇಸುವಿನಂತೆ ಕಾಣಬಹುದು. ಆತನಂತೆ ಮಾತನಾಡಬ ಹುದು.


42

ಜನರ ರೋಗಗಳನ್ನು ವಾಸಿಮಾಡಬಹುದು. ಅದ್ಬುತ ಕಾರ್ಯಗಳನ್ನು ಮಾಡಬಹುದು. ಸೂಚಕ ಕಾರ್ಯಗಳನ್ನು ಮಾಡಬಹುದು. ಸತ್ಯವೇದ ಹೇಳುವುದನ್ನೇ ಅನುಮಾನದಿಂದ ನೋಡುವ ಹಾಗೆ ಶೋಧನೆ ನಮ್ಮನ್ನು ಕಾಡಬಹುದು. ಆದ್ದರಿಂದ ನಮ್ಮ ಜ್ಞಾನೇಂದ್ರಿಯಗಳು ಏನನ್ನು ಕೇಳಿಸಿಕೊಳ್ಳುತ್ತವೆಯೋ, ಏನನ್ನು ನೋಡುತ್ತವೆಯೋ ಮತ್ತು ಏನನ್ನು ಅನುಭವಿಸುತ್ತವೆಯೋ ಅದನ್ನೇ ನಂಬಿ ಧೈರ್ಯಮಾಡದಿರೋಣ.


43

ಆ ಪ್ರತಿರೂಪ ಮೋಸಗಾರನೋ ಅಥವಾ ನಿಜವಾದವನೋ ಎಂಬುದನ್ನು ಅರ್ಥಮಾಡಿಕೊಳ್ಳಲು ಇರುವ ಒಂದೇ ಕ್ಷೇಮಕರ ಮಾರ್ಗದರ್ಶಿಯೆಂದರೆ : ಸತ್ಯವೇದ.



44

ನಾವು ಮೋಸಹೋಗದಿರುವ ಸಲುವಾಗಿ ಕ್ರಿಸ್ತನ ಎರಡನೇ ಬರೋಣಕ್ಕೆ ಮುನ್ನ ನಡೆಯುವ ಕೆಲವು ಗುರುತುಗಳನ್ನು ಅಥವಾ ವೈಶಿಷ್ಟ್ಯಗಳನ್ನು ಸ್ವಲ್ಪ ಹೊತ್ತು ಗಮನಿಸೋಣ.

೩ – ಮಹಾ ತಪ್ಪಿಸಿಕೊಳ್ಳುವಿಕೆ




45

ಕ್ರಿಸ್ತನ ಎರಡನೇ ಬರೋಣವು ಕಣ್ಣಿಗೆ ಗೋಚರವಾಗುವ ಒಂದು ಮನೋಹರ ದೃಶ್ಯ.



46

(ಮತ್ತಾಯ ೨೪:೨೭). ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೋ ಹಾಗೆಯೇ ಮನುಷ್ಯ ಕುಮಾರನ ಪ್ರತ್ಯಕ್ಷತೆಯು ಇರುವುದು. ಪ್ರಕಟಣೆ ೧:೭ ಈ ರೀತಿಯಾಗಿ ಓದುತ್ತೇವೆ.



47

(ಪ್ರಕಟನೆ ೧:೭) ಇಗೋ ಮೇಘಗಳೊಂದಿಗೆ ಬರುತ್ತಾನೆ. ಎಲ್ಲರ ಕಣ್ಣುಗಳು ಆತನನ್ನು ಕಾಣುವವು;


48


ಕ್ರಿಸ್ತನ ಪ್ರತಿರೂಪಿ ಅಲ್ಲಿ ಇಲ್ಲಿ ಕಾಣಿಸಿಕೊಳ್ಳಬಹುದು, ಅದರೆ ಆತನು ಎಲ್ಲರ ಕಣ್ಣುಗಳು ಕಾಣುವಂತೆ ಮೇಘದಲ್ಲಿ ಬರುವುದು ಸಾಧ್ಯವಿಲ್ಲ.


49

ಯೇಸು ಸ್ವಾಮಿ ಮೊದಲನೇ ಸಲ ಈ ಭೂಮಿಗೆ ಬಂದಿದ್ದಾಗ, ತನ್ನ ಕೆಲಸವೆಲ್ಲ ಈ ಭೂಮಿಯ ಮೇಲೆ ಮುಗಿದ ನಂತರ, ಆತನು ಪರಲೋಕಕ್ಕೆ ಏರಿ ಹೋಗುವುದಕ್ಕೆ ಸಿದ್ದನಾಗಿದ್ದನು.



50

ಆ ಸಂದರ್ಭದಲ್ಲಿ ಯೇಸು ತನ್ನ ಪ್ರಿಯರಾದ ಶಿಷ್ಯರನ್ನು ಎಣ್ಣೆ ಮರಗಳಿದ್ದ ಗುಡ್ಡಕ್ಕೆ ಕರೆದುಕೊಂಡು ಬಂದನು. ಅಲ್ಲಿ ತನ್ನ ಶಿಷ್ಯರಿಗೆ ಹೇಳಬೇಕಾದ ಎಲ್ಲಾ ಸಂಗತಿಗಳನ್ನು ತಿಳಿಸಿದ ನಂತರ, ಅವರಿಗೆ ಬೀಳ್ಕೊಡೆಗೆ ಹೇಳಿದ ತಕ್ಷಣ ಆತ ಮೇಲಕೆತ್ತಲ್ಪಟ್ಟನು.



51

ಈ ಘಟನೆಯನ್ನು ಕುರಿತು ಸತ್ಯವೇದ ಏನು ಹೇಳುತ್ತದೆ ಎಂಬುದನ್ನು ನೋಡಣವೇ:



52

(ಅ. ಕೃ: ೧:೯–೧೧) ಈ ಮಾತುಗಳನ್ನು ಹೇಳಿದ ಬಳಿಕ ಅವರು ನೋಡುತ್ತಾ ಇದ್ದ ಹಾಗೆ ಆತನು ಏರಿಸಲ್ಪಟ್ಟನು; ಮೋಡವು ಆತನನ್ನು ಕವಿದುಕೊಂಡಿದ್ದರಿಂದ ಅವರ ಕಣ್ಣಿಗೆ ಮರೆಯಾದನು.

೩ – ಮಹಾ ತಪ್ಪಿಸಿಕೊಳ್ಳುವಿಕೆ



53

ಆತನು ಹೋಗುತ್ತಿರುವಾಗ ಅವರು ಆಕಾಶದ ಕಡೆಗೆ ದೃಷ್ಟಿಸಿ ನೋಡುತ್ತಾ ಇರಲಾಗಿ ಶುಭ್ರವಸ್ತ್ರಧಾರಿಗಳಾದ ಇಬ್ಬರು ಪುರುಷರು ಪಕ್ಕನೆ ಅವರ ಹತ್ತಿರ ನಿಂತುಕೊಂಡು. .



54

’ಗಲಿಲಾಯದವರೆ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ?



55

ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರಿತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು ಎಂದು ಹೇಳಿದರು. ಅ. ಕೃ: ೧:೯–೧೧.


56

ಯೇಸುಸ್ವಾಮಿ ಈ ಲೋಕದಲ್ಲಿದ್ದಾಗ ಶಿಷ್ಯರಿಗೆ ನೀಡಿದ ವಾಗ್ದಾನ ನೆರವೇರುತ್ತದೆ ಎಂಬುದನ್ನು ಖಚಿತಪಡಿಸಲು ಇಬ್ಬರು ದೇವದೂತರು ತಂದೆಯ ಬಳಿಯಿಂದ ಬಂದಿದ್ದರು. ಆಗ ಅವರು ಏನನ್ನು ಕಾಣಲಿಕ್ಕಿದ್ದಾರೋ ಅದನ್ನು ಕುರಿತು ಯೇಸುಸ್ವಾಮಿ ಶಿಷ್ಯರಿಗೆ ಸ್ಪಷ್ಟವಾಗಿ ತಿಳಿಸಿದ್ದನು.



57

(ಲೂಕ ೨೧:೨೭)
ಆಗ ಮನುಷ್ಯಕುಮಾರನು ಬಲದಿಂದಲೂ ಬಹುಮಹಿಮೆಯಿಂದಲೂ ಮೇಘದಲ್ಲಿ ಬರುವದನ್ನು ಕಾಣುವರು.


58

ಯೇಸುಸ್ವಾಮಿಯುವರು ಯಾವಾಗ ಬರುತ್ತಾರೆ ಎಂಬುದನ್ನು ನಿಮಗೆ ಯಾರು ಹೇಳಿಕೊಡಬೇಕಾಗಿಲ್ಲ. ಆತನು ಮೇಘದಲ್ಲಿ ಬರುವುದನ್ನು ನೀವೇ ಕಾಣುತ್ತೀರಿ. ಇನ್ನೂ ಕೆಲವು ಗುರುತುಗಳಿವೆ, ಅದನ್ನೂ ಸೈತಾನ ಅನುಕರಣೆ ಮಾಡಲಾರ. ಯೇಸುಸ್ವಾಮಿ ಎಲ್ಲೋ ಒಂದು ಕುಗ್ರಾಮದಲ್ಲಿ ಕಾಣಿಸಿಕೊಳ್ಳುವವನಲ್ಲ ಅಥವಾ ಆಕಾಶ ನೌಕೆಯಿಂದ ಇಳಿದುಬರುವವನಲ್ಲ.


59

ಆತನು ಒಬ್ಬಂಟಿಗನಾಗಿ ಬರುವವನಲ್ಲ, ಆದರೆ ಆತನ ಬರೋಣ ಮಹಿಮೆಯಿಂದ ಕೊಡಿರುವಂಥದ್ದು.

೩ – ಮಹಾ ತಪ್ಪಿಸಿಕೊಳ್ಳುವಿಕೆ



60

(ಮತ್ತಾಯ ೨೫:೩೧)
ಇದಲ್ಲದೆ ಮನುಷ್ಯಕುಮಾರನು ತನ್ನ ಮಹಿಮೆಯಿಂದ ಎಲ್ಲಾ ದೇವದೂತರೊಂದಿಗೆ ಕೂಡಿಬರುವಾಗ ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವನು.

ಮತ್ತಯ ೨೪:೩೧



61

(ಮತ್ತಾಯ ೨೫:೩೧)
ಇದಲ್ಲದೆ ಮನುಷ್ಯಕುಮಾರನು ತನ್ನ ದೇವದೂತರೊಂದಿಗೆ ಯಾಕೆ ಬರುತ್ತಾನೆ?
ಮತ್ತು ಅತನು ತುತೂರಿಯ ಮಹಾ ಶಬ್ಧದಿಂದ ತನ್ನ ದೂತರನ್ನು ಕಳುಹಿಸುವನು.



62

ಅವರು ಆತನು ಆದುಕೊಂಡವರನ್ನು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ನಾಲ್ಕೂ ದಿಕ್ಕುಗಳಿಂದ ಒಟ್ಟುಗೂಡಿಸುವರು.
ಮತ್ತಯ ೨೪:೩೧


63

ವರ್ಣಿಸಲಸಾಧ್ಯವಾದ ಮಹಿಮೆಯಿಂದ ಆಕಾಶವನ್ನು ತುಂಬಿಸಿ, ಯೇಸುಸ್ವಾಮಿ ದೇವದೂತ ಗಣದೊಂದಿಗೆ ಈ ಲೋಕಕ್ಕೆ ಬರಲಿದ್ದಾರೆ. ನಾನೇ ಕ್ರಿಸ್ತನೆನ್ನುವ ವ್ಯಕ್ತಿ ಕ್ರಿಸ್ತನಾಗಿರಲು ಏಕೆ ಸಾಧ್ಯವಿಲ್ಲ ಎಂಬುದು ನಿಮಗೆ ಈಗ ಅರ್ಥವಾಗಿರಲಿಕ್ಕೂ ಸಾಕು. ಯೇಸುಸ್ವಾಮಿಯ ಹಿಂತಿರುಗೋಣದ ರೀತಿಯನ್ನು ಯಾರಿಂದಲೂ ಅನುಕರಣೆಮಾಡಲು ಸಾಧ್ಯವಾಗದು. ಈ ಮಹಿಮೆಯ ಘಟನೆಗೆ ಇನ್ನೂ ಅನೇಕ ಸೂಚನೆಗಳು ಸಂಬಂಧಿಸಿವೆ.



64

ಆತನ ಬರೋಣ ಮಹಾಶಬ್ಧದಿಂದ ಕೂಡಿರುತ್ತದೆ. ಮರಣಿಸಿದ ನೀತಿವಂತರು ಮತ್ತೆ ಬದುಕಿ ಎದ್ದುಬರುತ್ತಾರೆ.



65

೧ ಥೆಸ ೪:೧೬
ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನ ದೂತನ ಶಬ್ದದೊಡನೆಯೂ ದೇವರ ತೂತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು.

೩ – ಮಹಾ ತಪ್ಪಿಸಿಕೊಳ್ಳುವಿಕೆ



66

ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದುಬರುವರು.

೧ ಥೆಸ ೪:೧೬.


67

ನೋಡಿದಿರಾ? ಕ್ರಿಸ್ತನ ಎರಡನೇ ಬರೋಣವು ಬರೀ ಕಣ್ಣಿನ ನೋಟ ಮಾತ್ರವಲ್ಲ, ಆದರೆ ಅದು ಪ್ರತಿಯೊಬ್ಬರಿಗೂ ಕೇಳಿಸುವಂಥ ಮಹಾ ಶಬ್ಧದಿಂದ ಕೂಡಿರುವ ಘಟನೆ ಸಹ. ಆ ಮಹಾ ದೇವರ ಕರೆ ಎಷ್ಟು ತೀಕ್ಷ್ಣವಾದುದೆಂದರೆ; ತುತೂರಿಯ ಶಬ್ದ ಕೇಳಿದೊಡನೆ ಕ್ರಿಸ್ತನಲ್ಲಿ ಮಡಿದವರು ಎಚ್ಚರಗೊಳ್ಳುವರು ಮತ್ತು ಸಮಾಧಿಯಿಂದ ಎದ್ದುಬರುವರು.


68

ಸಮಾಧಿಗಳು ತೆರೆಯಲ್ಪಟ್ಟಾಗ ಮತ್ತು ಕುಟುಂಬಗಳು ಮತ್ತೆ ಒಂದುಗೂಡಿದಾಗ ಉಂಟಾಗುವ ಸಂತೋಷವನ್ನು ನೀವು ಊಹಿಸಬಲ್ಲಿರಾ?


69

ಕ್ರಿಸ್ತನ ಎರಡನೇ ಬರೋಣದ ನಿಜ ರೂಪವನ್ನು ಸೈತಾನನು ಅನುಕರಣೆ ಮಾಡುವದು ಎಷ್ಟು ಅಸಾಧ್ಯ ಎಂಬುದು ಈಗ ನಿಮಗೆ ಮನದಟ್ಟಾಗಿರಬಹುದಲ್ಲವೇ?



70

ಯೇಸುಸ್ವಾಮಿ ಮತ್ತೆ ಹಿಂತಿರುಗಿ ಬರುವಾಗ ಏನಾಗುತ್ತದೆ ಎಂಬುದಕ್ಕೆ ಪೌಲನು ಮತ್ತಷ್ಟು ವಿವರಣೆಗಳನ್ನು ನೀಡಿದ್ದಾನೆ.



71

ಜೀವದಿಂದುಳಿದಿರುವ ನೀತಿವಂತರು ಯೇಸುಸ್ವಾಮಿಯನ್ನು ಅಂತರಿಕ್ಷದಲ್ಲಿ ಎದುರುಗೊಳ್ಳುವರು.



72

ಹಿಗಾಗಿ ನಾವು ಸದಾಕಾಲವು ಕರ್ತನ ಜೊತೆಯಲ್ಲಿರುವೆವು

೩ – ಮಹಾ ತಪ್ಪಿಸಿಕೊಳ್ಳುವಿಕೆ




73

(ವಿಡಿಯೊ:೪ ಸೆಕೆಂಡುಗಳು) ಯೇಸುವಿನ ಶಿಶ್ಯರು ಯೇಸುಸ್ವಾಮಿಯನ್ನು ಅಂತರಿಕ್ಷದಲ್ಲಿ ಎದುರುಗೊಳ್ಳುವರು. ಕುಟುಂಬಗಳು ಒಂದು ಸೇರುವ ಸಂತೋಷದ ಸುದ್ಧಿ ಇದು.



74

ಪೌಲನು ನಮಗೆ ಯೆಸುವಿನ ಎರಡನೆಯ ಬರೋಣದಲ್ಲಿ ನಡೆಯುವಂಥ ಘಟನೆಗಳ ಬಗ್ಗೆ ಹೆಚ್ಚು ವಿಸ್ತಾರವಾಗಿ ಕೊಡುತಾನೆ.




75

೧ ಕೊರಿಂಥ ೧೫:೫೧–೫೩
ಕೇಳಿರಿ, ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಿಮಗೆ ತಿಳಿಸುತ್ತೇನೆ....... ನಾವೆಲ್ಲರು.. ಮಾರ್ಪಡುವೆವು.




76

ಆದರೆ ಕಡೇ ತುತೂರಿಯು ಧ್ವನಿಯಾಗುವಾಗ ನಾವೆಲ್ಲರು ಒಂದು ಕ್ಷಣದಲ್ಲೇ ರಪ್ಪೆ ಬಡಿಯುವಷ್ಟರೊಳಗಾಗಿ ಮಾರ್ಪಡುವೆವು.



77

ತುತೂರಿಯು ಊದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು, ನಾವು ಮೂರ್ಪಡುವೆವು.




78

ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವದು ಮರಣಾಧೀನವಾಗಿರುವ ಈ ದೇಹವು ಅಮರ್ರ್ವತನನ್ನು ಧರಿಸಿಕೊಳ್ಳುವದೂ ಅವಶ್ಯ.
೧ ಕೊರಿಂಥ ೧೫:೫೧–೫೩


79


ಯೇಸುಸ್ವಾಮಿಯನ್ನು ಹಿಂಬಾಲಿಸುವ ಪ್ರತಿಯೊಬ್ಬನಿಗೆ ದೇವರು ತನ್ನ ಪ್ರೀತಿಯ ಕಾಣಿಕೆಯಾದ– ಅಮರತ್ವವನ್ನು ನೀಡುವವನಾಗಿದ್ದಾನೆ.

೩ – ಮಹಾ ತಪ್ಪಿಸಿಕೊಳ್ಳುವಿಕೆ



80

ಫಿಲಿಪ್ಪಿ ೩:೨೦,೨೧
ದೇವರು ತನ್ನ ಮಕ್ಕಳಿಗೆ ಇನ್ನೂ ಏನನ್ನೋ ಕೊಡುವುದನ್ನು ನೋಡುತ್ತೇವೆ.
ಯೇಸು ಕ್ರಿಸ್ತನು ಅಲ್ಲಿಂದಲ್ಲೇ ರಕ್ಷಕನಾಗಿ ಬರುವದನ್ನು ಎದುರುನೋಡುತ್ತಾ ಇದ್ದೇವೆ.




81

ದೀನಾವಸ್ಥೆಯುಳ್ಳ ಈ ನಮ್ಮ ದೇಹವನ್ನು ಪ್ರಭಾವವುಳ್ಳ ಆತನ ದೇಹದಂತೆ ಸಾರೂಪ್ಯಗೊಳಿಸುವವರಾರು?
ಫಿಲಿಪ್ಪಿ ೩:೨೦,೨೧
ಕ್ರಿಸ್ತನ ದೇಹದಂಥಹ ದೇಹ!
ಆ ದೇಹಕ್ಕೆ ನೋವಿಲ್ಲ– ಸಾವಿಲ್ಲ.
ಇದಕ್ಕಿಂತ ಹೃತ್ಪೂರ್ವಕ ಸ್ವಾಗತ ನೀಡಲು ಮತ್ತ್ಯಾವ ಸುದ್ಧಿ ಇದೆ?



82

ಇನ್ನೊಂದು ವರ್ಗದ ಜನರಿದ್ದಾರೆ. ವರ್ಗದ ಜನರಿಗೆ ಎರಡನೇ ಬರೋಣ ಖಂಡಿತವಾಗಿಯೂ ಸ್ವಾಗತರ್ಹವಲ್ಲ.
ಇತಿಹಾಸದ ಅಂತ್ಯಕಾಲದ ಭೂಮಿಯು ನಡುಗುವಂಥ ಘಟನೆಗಳನ್ನು ಸತ್ಯವೇದ ಹೇಗೆ ವಿವರಿಸುತ್ತದೆ ಎಂಬುದನ್ನು ಕೇಳಿ.




83

ಪ್ರಕಟನೆ ೧೬:೧೪–೧೭
ಆಕಾಶವು ಸುರುಳಿಯ ಹಾಗೆ ಸುತ್ತಲ್ಪಟ್ಟು ಹೋಗಿಬಿಟ್ಟಿತು.




84

ಎಲ್ಲಾ ಬೆಟ್ಟಗಳೂ ದ್ವೀಪಗಳೂ ತಮ್ಮ ತಮ್ಮ ಸ್ಥಳಗಳಿಂದ ಚಲಿಸಿದವು.



85

ಇದಲ್ಲದೆ ಭೂರಾಜರೂ ಪ್ರಭುಗಳೂ ಸಹಸ್ರಾಧಿಪತಿಗಳೂ ಐಶ್ವರ್ಯವಂತರೂ ಪರಾಕ್ರಮಶಾಲಿಗಳೂ



86


ಬೆಟ್ಟಗಳ ಗವಿಗಳಿಗೂ ಬಂಡೆಗಳ ಸಂದುಗಳಿಗೂ ಓಡಿಹೋಗಿ ತಮ್ಮನ್ನು ಮರೆಮಾಡಿಕೊಂಡು

೩ – ಮಹಾ ತಪ್ಪಿಸಿಕೊಳ್ಳುವಿಕೆ



87


ಬೆಟ್ಟಗಳಿಗೂ ಬಂಡೆಗಳಿಗೂ ನಮ್ಮ ಮೇಲೆ ಬೀಳಿರಿ, ಸಿಂಹಾಸನದ ವೇಲೆ ಕೂತಿರುವಾತನ ಮುಖಕ್ಕೂ ಯಜ್ಞದ ಕುರಿಯಾದಾತನ ಕೋಪಕ್ಕೂ ನಮ್ಮನ್ನು ಮರೆಮಾಡಿರಿ.



88

ಅವರ ಕೋಪವು ಕಾಣಿಸುವ ಮಹಾದಿನ ಬಂದಿದೆ; ಅದರೆ ಮುಂದೆ ನಿಲ್ಲುವದಕ್ಕೆ ಯಾರು ಶಕ್ತರು?

ಪ್ರಕಟನೆ ೧೬:೧೪–೧೭



89

(ಪ್ರಕಟನೆ ೧೬:೧೮.) ಆಗ ಮಿಂಚುಗಳೂ ವಾಣಿಗಳೂ ಗುಡುಗುಗಳೂ ಉಂಟಾದವು; ಇದಲ್ಲದೆ ಮಹಾ ಭೂಕಂಪವಾಯಿತು;



90


ಮನುಷ್ಯರು ಭೂಮಿಯ ಮೇಲೆ ಇದ್ದಂದಿನಿಂದ ಅಂಥ ದೊಡ್ಡ ಭೂಕಂಪವಾಗಲಿಲ್ಲ. ಪ್ರಕಟಣೆ ೧೬:೧೮


91

ಇಂಥಹ ಒಂದು ಭೂಕಂಪವು ಭೂಮಿಯ ಮೇಲಿನ ನಗರಗಳನ್ನು ನಾಶಮಾಡುತ್ತದೆ. ಕ್ರಿಸ್ತನ ಎರಡನೇ ಬರೋಣವಾಗುತ್ತಿದ್ದಂತೆ ಎದುರಾಗುವ ಇಂಥಹ ಭೂಕಂಪದಿಂದ ಯಾರು ತಪ್ಪಿಸಿಕೊಳ್ಳಲಾಗದು.


92

ಯಾರು ನಿರೀಕ್ಷಿಸದ ಸಮಯದಲ್ಲಿ ತನ್ನ ಬರೋಣ ಇರುತ್ತದೆ ಎಂಬುದಾಗಿ ಯೇಸುಸ್ವಾಮಿ ಎಚ್ಚರಿಕೆ ನೀಡಿದ್ದಾನೆ. ಜನರು ಮೂರ್ಖತನದ ಐಷರಾಮಿ ಜೀವನ ನಡೆಸುವುದರಲ್ಲಿ ತಮ್ಮನ್ನು ಬಹಳವಾಗಿ ತೊಡಗಿಸಿಕೊಂಡಿರುತ್ತಾರೆಂದು ಯೇಸುಸ್ವಾಮಿ ಹೇಳಿದ್ದಾನೆ.



93

ಮತ್ತಾಯ ೨೪:೩೦
. . . ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆ ಬಡಕೊಳ್ಳುವರು . . .

೩ – ಮಹಾ ತಪ್ಪಿಸಿಕೊಳ್ಳುವಿಕೆ


94

ಸಿದ್ಧವಿಲ್ಲದವರು ನಾಷವಾಗುವರು. ಸ್ನೇಹಿತನೇ ಆ ದಿನವು ನಿಜವಾದದ್ದೆ. ಅದು ಕನಸಲ್ಲ.



95

ಯೇಸು ಬರುವಾಗ ಅವನನ್ನು ಸಂಧಿಸುವುದಕ್ಕಿಂತ ಈ ಲೊಕದಲ್ಲಿ ಯಾವುದೂ ಮಹತ್ವವಲ್ಲ. ನಮ್ಮ ಎಲ್ಲ ಪ್ರಿಯವಾದ ಐಶ್ವರ್ಯಗಳು ಎನೆನೂ ಈಲ್ಲ, ಒಂದು ಬೂಕಂಪವಾದರೆ ಎಲ್ಲವೂ ನಶವಾಗುತ್ತದೆ.



96

(ವಚನ:ಲೂಕ ೨೧:೩೬) ಆದರೆ ಬರುವದಕ್ಕೆರುವ ಇವೆಲ್ಲವುಗಳಿಂದ ತಪ್ಪಿಸಿಕೊಳ್ಳುವುದಕ್ಕೆ ನೀವು ಪೂರ್ಣ ಶಕ್ತರಾಗುವಂತೆ ಎಲ್ಲ ಕಾಲದಲ್ಲಿಯು ದೆವರಿಗೆ ವಿಜ್ಞಾಪಣೆ ಮಾಡಿಕೊಳ್ಳಲು ಎಚ್ಚರವಾಗಿರಿ,




97

ಮನುಷ್ಯಕುಮಾರನ ಮುಂದೆ ನಿಂತುಕೊಳ್ಳಲು. ಲೂಕ ೨೧:೩೬




98

ನಾವು ಸತ್ಯವೆದದಲ್ಲಿ ಕಲಿತಿರುವುದನ್ನು ದೀರ್ಘವಾಗಿ ಸಮಾಲೊಚಿಸೋಣ




99

ಸುಳ್ಳುಪ್ರವಾದಿಗಳು ಮತ್ತು ಸುಳ್ಳು ಕ್ರಿಸ್ತರು ಎಲ್ಲರನ್ನೂ ಮೋಸಮಾಡಲು ಪ್ರಯತ್ನಿಸುತ್ತಾರೆ.



100

ಸೈತಾನನು ಬೆಳಕಿನ ದೇವದೂತನಂತೆ ಹಾಗೆ ಕಾಣಿಸು ಕೊಳ್ಳುತಾನೆ



101

ಯೆಸುವಿನ ಎರಡನೆಯೆ ಬರೊಣವು ಗುಪ್ತವಾಗಿರುವುದಿಲ್ಲ.

೩ – ಮಹಾ ತಪ್ಪಿಸಿಕೊಳ್ಳುವಿಕೆ




102

ಯೇಸುಸ್ವಾಮಿಯ ಆಗಮನವನ್ನು ಎಲ್ಲಾ ಕಣ್ಣುಗಳು ಕಾಣುವವು.



103

ಯೇಸುಸ್ವಾಮಿಯೊಂದಿಗೆ ದೇವದೂತ ಸಮೂಹವೇ ಬರುವದು.



104

ಆತನು ದೇವರ ತುತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದು ಬ ರುವನು




105

ಆತನು ಪ್ರಧಾನದೂತನ ಶಬ್ಧದೊಡನೆಯೂ ಬರುವನು




106

ಎಲ್ಲಾ ನೀತಿವಂತರಿಗೆ ಅಮರತ್ವ ಪ್ರಾಪ್ತವಾಗುವುದು.




107

ಜೀವದಿಂದುಳಿದಿರುವ ನೀತಿವಂತರು ಸಾವಿನ ರುಚಿ ನೋಡದೆ ಹಾಗೇ ಮಾರ್ಪಡುವರು.



108

ನೀತಿವಂತರಿಗೆಲ್ಲಾ ಅಮರತ್ವವು ಕೊಡಲ್ಪಡುವದು.



109

ಯೇಸುಸ್ವಾಮಿಯನ್ನು ನೋಡಿದಾಗ ಪ್ರಾಪಂಚಿಕ ಜನರೆಲ್ಲಾ ದುಃಖಿಸುವರು

೩ – ಮಹಾ ತಪ್ಪಿಸಿಕೊಳ್ಳುವಿಕೆ



110

ಒಂದು ಮಹಾ ಭೂಕಂಪ ಭೂಮಿಯನ್ನು ನಾಶಮಾಡುವದು.



111

ಈ ಲೋಕದಲ್ಲಿ ತಪ್ಪಿಹೋದವರು ಕೊಲ್ಲಪಡುವರು


112


ಕ್ರಿಸ್ತನ ಎರಡನೇ ಬರೋಣವನ್ನು ಕುರಿತು ಅಪೂರ್ಣವಾಗಿ ಹೇಳಲಾಗದು, ಮಾನವನ ಲೇಖನಿಯಿಂದ ವರ್ಣಿಸಲಾಗದು, ಆ ಮಹಿಮೆಯ ಕ್ರಿಸ್ತನ ಎರಡನೇ ಬರೋಣವನ್ನು ಮರ್ತ್ಯರಾದ ಮಾನವರಿಂದ ಕಲ್ಪನೆ ಕೂಡ ಮಾಡಲಾಗದು. ಆದರೆ ಯೇಸುಸ್ವಾಮಿಯ ಬರೋಣವನ್ನು ಕುರಿತು ಕೆಲವು ಬರಹಗಾರರು ಹಾಗೂ ಕಲಾಕಾರರು ಕಂಡ ರಮಣೀಯ. ಅವರ ಕಲ್ಪನೆ ಯಾವ ರೀತಿಯಲ್ಲಿದೆ. ಸತ್ಯವೇದ ವಿವರಿಸಿದಂತೆಯೇ ಅವರ ಮನೋಚಿತ್ರಣವಿದೆಯೇ?


113

ಯಾರೂ ನಿರೀಕ್ಷಸದ ಸಮಯದಲ್ಲಿ ಯೇಸುಸ್ವಾಮಿ ಬರುತ್ತಾನೆ! ಯೇಸುಸ್ವಾಮಿಯ ಬರೋಣದ ದಿನ ಮತ್ತು ಗಳಿಗೆಯನ್ನು ಪ್ರಕಟಿಸುವ ದೇವರ ಧ್ವನಿಯು ಗುಡುಗಿನ ಸರಮಾಲೆಯಂತಿರುವದು.


114

ಆಕಾಶವು ಸುರುಳಿಯ ಹಾಗೆ ಸುತ್ತಲ್ಪಟ್ಟ ಹೋಗಿಬಿಟ್ಟಿತು. ಎಲ್ಲಾ ಬೆಟ್ಟಗಳೂ ದ್ವೀಪಗಳೂ ತಮ್ಮ ತಮ್ಮ ಸ್ಥಳಗಳಿಂದ ಚಲಿಸಿದವು.


115

ತಕ್ಷಣದಲ್ಲಿ ಪೂರ್ವದಲ್ಲಿ ಒಂದು ಸಣ್ಣ ಮೋಡವು ಕಾಣಿಸಿಕೊಳ್ಳುವದು, ಅದು ಮನುಷ್ಯನ ಮುಷ್ಟಿಯ ಗಾತ್ರದ ಅರ್ಧದಷ್ಟಿರುವದು.

೩ – ಮಹಾ ತಪ್ಪಿಸಿಕೊಳ್ಳುವಿಕೆ


116

ಆ ಮೋಡ ಭೂಮಿಯ ಹತ್ತಿರ ಹತ್ತಿರ ಬರುತ್ತಿದ್ದಂತೆ, ಪ್ರಕಾಶ ಪ್ರಕಾಶಮಾನವಾಗಿ ಹೊಳೆಯುತ್ತಾ ಬರುತ್ತದೆ ಮತ್ತು ಅದೊಂದು ದೊಡ್ಡಮೋಡವಾಗಿ ಅದರ ಮೇಲೆ ಕಾಮನಬಿಲ್ಲು ಮೂಡಿದಾಗ ಅದು ಶೋಭಾಯಮಾನವಾಗಿ ಕಾಣುವದು. ಅಂಥಹ ರಮಣೀಯ ದೃಶ್ಯವನ್ನು ದೇವಜನರು ಗರಬಡಿದವರಂತೆ ಮಾತಿಲ್ಲದೆ ಮೌನವಾಗಿ ದಿಟ್ಟಿಸುವರು. ಅದೊಂದು ಉಸಿರು ಕಟ್ಟಿಸುವ ವಾತಾವರಣವೇ ಸರಿ!


117

ಆಕಾಶದಲ್ಲಿ ಎಂದಿಗಿಂತ ಅಂದರೆ ಹತ್ತುಸಾವಿರಕ್ಕೆ ಹತ್ತುಸಾವಿರ ಪಟ್ಟು ಅಧಿಕಗೊಂಡ ಜ್ವಾಜಾಲಮಾನ್ಯವಾದ ಬೆಳಕಿನ ಕಿರಣಗಳು ಆಕಾಶವನ್ನೆಲ್ಲಾ ತುಂಬುವವು, ಮತ್ತು ಯೇಸುಸ್ವಾಮಿಯ ಸಿಂಹಾಶನದ ಸುತ್ತ ಸಾವಿರಾರು ದೇವದೂತರುಗಳು ಸುತ್ತುವರಿದಿರುವರು.


118

ಆ ಮನೋಹರ ದೃಶ್ಯವು ಆಕಾಶವನ್ನೆಲ್ಲಾ ಪಸರಿಸುವುದು, ಆ ದೃಶ್ಯ ಮತ್ತಷ್ಟು ಭೂಮಿಗೆ ಹತ್ತಿರವಾದಾಗ,
ಬರುತ್ತಿರುವ ರಾಜನ ಮೊಗವನ್ನು ಭೂಮಿಯ ಮೇಲಿರುವ ಎಲ್ಲಾ ಜನರ ಕಣ್ಣುಗಳು ಕಾಣುವವು. ಆತನ ತಲೆಯ ಮೇಲೆ ಈಗ ಇರುವದು ಮುಳ್ಳಿನ ಕಿರೀಟವಾಗಿರದೆ, ಮಹಿಮೆಯ ಕಿರೀಟವಾಗಿರುತ್ತದೆ. ಆತನ ತೊಡೆಯ ಮೇಲೆ, ರಾಜಾಧಿರಾಜನೂ ಮತ್ತು ಕರ್ತಾದಿ ಕರ್ತನು ಎಂದು ಬ ರೆಯಲಾಗಿದೆ.


119

ಅಂಥಹ ಯಜ್ಞದ ಕುರಿಯಾದಾತನ ಪ್ರಸನ್ನತೆಯಲ್ಲಿ ಭೂರಾಜರೂ ಪ್ರಭುಗಳೂ, ಸಹಸ್ರಾಧಿಪತಿಗಳೂ, ಐಶ್ವರ್ಯವಂತರೂ, ಪರಾಕ್ರಮಶಾಲಿಗಳೂ, ಎಲ್ಲಾ ದಾಸರೂ, ಸ್ವತಂತ್ರರೂ ಬೆಟ್ಟಗಳ ಗವಿಗಳಿಗೂ ಬಂಡೆಗಳ ಸಂದುಗಳಿಗೂ ಓಡಿಹೋಗಿ ತಮ್ಮನ್ನು ಮರೆಮಾಡಿಕೊಂಡು ಬೆಟ್ಟಗಳಿಗೂ ಬಂಡೆಗಳಿಗೂ– ನಮ್ಮ ಮೇಲೆ ಬೀಳಿರಿ, ಸಿಂಹಾಸನದ ಮೇಲೆ ಕೂತಿರುವವನ ಮುಖಕ್ಕೂ ಯಜ್ಞದ ಕುರಿಯಾದಾತನ ಕೋಪಕ್ಕೂ ನಮ್ಮನ್ನು ಮರೆಮಾಡಿರಿ... ಎಂದು ಹೇಳಿದರು.

೩ – ಮಹಾ ತಪ್ಪಿಸಿಕೊಳ್ಳುವಿಕೆ


120

ದೇವ ಜನರನ್ನು ಹಿಂಸಿಸಿದವರು ಮತ್ತು ಕೊಂದವರು ಹಾಗೂ ದೇವರ ಮಗನಾದ ಯೇಸುವನ್ನು ಅಪಹಾಸ್ಯ ಮಾಡಿದವರು ಮತ್ತು ತಿರಸ್ಕರಿಸಿದವರು, ಆತನನ್ನು ಶಿಲುಬೆಗೆ ಹಾಕಿ, ಶಿಲುಬೆಗೆ ಹಾಕಿ ಎಂದು ಕೂಗಿದವರೆಲ್ಲರನ್ನು ಸಮಾಧಿಯಿಂದ ಎಚ್ಚರಗೊಳಿಸಿ ಯೇಸುಸ್ವಾಮಿಯ ಮುಂದೆ ನಿಲ್ಲಿಸಲಾಗುವುದು. ಅವರ ಹೃದಯಗಳೂ ಕರಗುವುದು, ಅವರ ಮೊಣಕಾಲುಗಳು ನಡುಗುವವು, ಭಯಭೀತಿಯಿಂದ ಅವರು ಕೂಗಿಕೊಳ್ಳುತ್ತಾರೆ.



121

ಈತನೇ ದೇವರ ಕುಮಾರ ಈತನೇ ನಿಜವಾದ ಮೆಸ್ಸೀಯ ಅನ್ನುವರು.


122

ಈಗ, ಆತನನ್ನು ಎಲ್ಲರೂ ಆತನ ಮಹಿಮೆಯಲ್ಲಿ ಕಾಣುವರು, ಆತನು ದೇವರ ಬಲ ಪಾರ್ಶ್ವದಲ್ಲಿ ಕುಳಿತುಕೊಳ್ಳುವುದನ್ನು ಅವರು ಇನ್ನೂ ನೋಡಲಿದ್ದಾರೆ.


123

ಆತನು ದೇವರ ಕುಮಾರನಲ್ಲವೆಂದು ಜರಿದಿದ್ದವರು ಈಗ ಮಾತಿಲ್ಲದ ಮೂಖರಾಗಿದ್ದರು, ಯೇಸುವಿನ ರಾಜವಂಶದ ಬಿರುದನ್ನೂ ಹಿಯ್ಯಾಳಿಸಿದ್ದ ಹಾಗೂ ಯೇಸುವನ್ನು ಅಪಹಾಸ್ಯವಾಡುತ್ತಿದ್ದ ಸಿಪಾಯಿಗೂ, ಯೇಸು ಯೆಹೂದ್ಯರ ಅರಸನೆಂದು ತಲೆಬರಹ ಬರೆದು ಶಿಲುಭೆಯ ಮೇಲೆ ಜಡಿಯುವಂತೆ ಹೇಳಿದ ಅಹಂಕಾರಿ ಹೆರೋದನೂ ಅಲ್ಲಿದ್ದನು.


124

ಆತನಿಗೆ ಕೆಂಪು ಒಲ್ಲಿಯನ್ನು ಉಡಿಸಿದ ರಕ್ತಸಿಕ್ತ ಕೈನ ಮನುಷ್ಯರು, ಆತನು ಪರಿಶುದ್ಧ ಹಣೆಯ ಮೇಲೆ ಮುಳ್ಳಿನ ಕಿರೀಟ ಒತ್ತಿದವರು, ಆತನ ಮೃದು ಹಸ್ತಗಳಿಗೆ ಮೊಳೆ ಜಡಿದವರು, ಆತನಿಗೆ ಅವಮಾನ ಮಾಡುವಂತೆ ನಾಟಕೀಯವಾಗಿ ಬೊಗ್ಗಿ ನಮಸ್ಕರಿಸಿ ದೇವದೂಷಣೆ ವಾಡಿದವರೂ ಅಲ್ಲಿದ್ದರು.


125

ಜೀವ ನೀಡುವ ರಾಜಕುವಾರನ ಮುಖಕ್ಕೆ ಹೊಡೆದು ಉಗಿದಿದ್ದವರು ಆತನ ನೋಟವನ್ನು ಎದುರಿಸಲಾಗದೆ ತಲೆತಗ್ಗಿಸಿದ್ದರು, ಆತನ ಮಹಿಮೆಯ ಮುಂದೆ ನಿಲ್ಲಲಾಗದೆ ಆತನ ಸನ್ನಿಧಾನದಿಂದ ಓಡಿಹೋಗುವ ಮನಸ್ಸಿನವರಾಗಿದ್ದರು.

೩ – ಮಹಾ ತಪ್ಪಿಸಿಕೊಳ್ಳುವಿಕೆ


126

ಆತನ ಕೈಕಾಲುಗಳಿಗೆ ಮೊಳೆ ಜಡಿದ ಸಿಪಾಯಿಗಳು, ಆತನ ಎದೆಗೆ ಈಟಿಯಿಂದ ಚುಚ್ಚಿದ ಸಿಪಾಯಿಗಳು ಅವರ ಕೃತ್ಯಗಳಿಂದ ಎದ್ದುಕಾಣುತ್ತಿರುವ ಗಾಯದ ಕಲೆಗಳೆಡೆ ಭಯಭೀತರಾಗಿ ನೋಡುತ್ತಿದ್ದಾರೆ. ಮಹಾಯಾಜಕರುಗಳು ಮತ್ತು ಶಾಸ್ತ್ರಿಗಳು ಹಾಗೂ ಅಧಿಕಾರಿಗಳು ಕಲ್ವೆರಿಯ ಅಂದಿನ ಕಹಿ ಘಟನೆಗಳನ್ನು ನೆನೆಸಿ ನೋಡುತ್ತಿದ್ದಾರೆ. ಸೈತಾನನ ಅಡಿಯಾಳುಗಳಾಗಿ, ಇತರರನ್ನು ರಕ್ಷಿಸಿದನು, ತನ್ನನ್ನು ತಾನು ರಕ್ಷಿಸಿಕೊಳ್ಳಲಾರನೆಂದು


127

'ಅತನು ಇಸ್ರಾಯೇಲ್ಯರ ರಾಜನಾಗಿದ್ದರೆ, ಶಿಲುಭೆಯ ಮೇಲಿಂದ ಇಳಿದುಬರಲಿ, ಆಗ ಖಂಡಿತ ನಾವು ಈತನಲ್ಲಿ ನಂಬಿಕೆ ಇಡುತ್ತೇವೆ. ಆತ ದೇವರಲ್ಲಿ ಬಹಳ ಭರವಸೆಯಿಟ್ಟಿದ್ದ. ಆ ದೇವರೇ ಈಗ ಈತನನ್ನು ಬಿಡಿಸಲಿ'ಎಂದು ಹೇಳಿದ ಮಾತುಗಳನ್ನು ದೇಹಾತ್ಮಗಳ ನಡುಕದೊಂದಿಗೆ ನೆನೆಸಿಕೊಳ್ಳುತ್ತಿದ್ದಾರೆ.


128

ಕ್ರಿಸ್ತನನ್ನು ನಾಶಮಾಡಿದವರು ಮತ್ತು ಆತನ ಶಿಷ್ಯರನ್ನು ತೊಂದರೆಪಡಿಸಿದವರೆ ಇಂದು ಕ್ರಿಸ್ತನ ಮೇಲೆ ಇಳಿದುಬಂದಿರುವ ಮಹಿಮೆಯನ್ನು ಕಣ್ಣಾರೆ ಕಾಣುತ್ತಿದ್ದಾರೆ. ಹೀಗೆ ಭಯ ಭೀತಿಯ ವಾತಾವರಣದಲ್ಲಿದ್ದರೂ ಸಂತರು ಸಂತೋಷದಿಂದ ಹರ್ಷಧ್ವನಿ ಗೈಯುತ್ತಿರುವುದನ್ನು ಕೇಳುತ್ತಲೂ ಇದ್ದಾರೆ.



129

ವಚನ – ಯೇಶಾಯ ೨೫:೯ಆ ದಿನದಲ್ಲಿ ಜನರು.
ಆಹಾ, ಈತನೇ ನಮ್ಮ ದೇವರು,
ನಮ್ಮನ್ನು ರಕ್ಷಿಸಲಿ ಎಂದು ಈತನನ್ನು ನಿರೀಕ್ಷಿಸಿಕೊಂಡಿದ್ದೇವೆ ಎಂಬ ಸಂತರ ಹರ್ಷದ್ವನಿಯನ್ನು ಕೇಳುತ್ತಿದ್ದಾರೆ.



130

(ವಿಡಿಯೋ ೧೧.ಸೆಕೆಂಡುಗಳು)
ಭೂಮಿಯ ಕಂಪನಗಳ ನಡುವೆಯೂ, ಮಿಂಚುಗಳು ಹೊಂಚುಹಾಕಿ ಮಿನುಗುವುದರ ನಡುವೆಯೂ, ಸಿಂಹಗಳೋಪಾದಿಯಲ್ಲ ಗರ್ಜನೆಯ ಶಬ್ದ ಹೊರಡಿಸುತ್ತಿರುವ ಗುಡುಗುಗಳ ನಡುವೆಯೂ ದೇವಕುಮಾರನ ಧ್ವನಿ ನಿದ್ರಿಸುತ್ತಿರುವ ಸಂತರನ್ನು ಎಬ್ಬಿಸುತ್ತದೆ. ಆತನು ನೀತಿವಂತರ ಸಮಾದಿಗಳನ್ನು ನೋಡುತ್ತಾ, ತನ್ನ ಕರಗಳನ್ನು ಆಕಾಶದ ಕಡೆಗೆತ್ತಿ, ದೂಳಿನಲ್ಲಿ ನಿದ್ದೆಮಾಡುವವರೇ ಏಳಿರಿ, ಏಳಿರಿ ಎಂದು ಕೂಗುವನು.

೩ – ಮಹಾ ತಪ್ಪಿಸಿಕೊಳ್ಳುವಿಕೆ


131

ಪ್ರಪಂಚದಾದ್ಯಂತ ಸತ್ತು ಮಲಗಿರುವವರಲ್ಲರೂ ಆತನ ಕರೆಯ ಧ್ವನಿಯನ್ನು ಕೇಳಿಸಿಕೊಳ್ಳುತ್ತಾರೆ; ಕೇಳಿಸಿಕೊಂಡವರಲ್ಲಾ ಮತ್ತೆ ಬದುಕಿ ಏಳುತ್ತಾರೆ. ಇಡೀ ಲೋಕವು ಪ್ರತಿ ರಾಜ್ಯ, ಭಾಷೆ, ಜನಾಂಗದಿಂದ ತುಂಬಿರುವದು.


132

ಮರಣವೆಂಬ ಸೆರಮನೆಯಿಂದ ಅಮರತ್ವ ಎಂಬ ಮಹಿಮೆಯನ್ನು ಧರಿಸಿಕೊಂಡು ಹೊರಬಂದವರು, ಮರಣವೇ, ನಿನ್ನ ಜಯವೆಲ್ಲಿ? ಮರಣವೇ, ನಿನ್ನ ವಿಷದ ಕೊಂಡಿ ಎಲ್ಲಿ? ಎಂದು ಕೊಂಡಿರುವರಲ್ಲಿ ಜೀವದಿಂದುಳಿದಿರುವ ನೀತಿವಂತರು ಮತ್ತು ಮರಣ ನಿದ್ರೆಯಿಂದ ಎಚ್ಚತ್ತು ಬಂದ ಸಂತರು ಧ್ವನಿಗೂಡಿ ಜಯೋತ್ಸವ ಮಾಡುವರು. ಅವರ ಎಲ್ಲಾ ಕೊರತೆಗಳು ಮತ್ತು ಬಲಹೀನತೆಗಳನ್ನು ಅವರು ಸಮಾಧಿಯಲ್ಲೇ ಬಿಟ್ಟುಬ ಂದಿದ್ದಾರೆ.

ಆಹಾ! ಎಂಥಹ ಆಶ್ಚರ್ಯಕರ ವಿಮುಕ್ತಿ! ದೀರ್ಘಾಕಾಲ ಮಾತಾಡಿದ, ಅನತಿ ಕಾಲದಿಂದ ನಿರೀಕ್ಷಿಸಿದ, ಕಾತುರದಿಂದ ಎದುರುನೋಡಿ ಧ್ಯಾನಮಾಡಿದ ಆದರೆ ಯಾವತ್ತೂ ಎಂದೂ ಅರ್ಥಮಾಡಿಕೊಂಡಿರದಿದ್ದ ಅನುಭವವಿದು!


133

ಜೀವದಿಂದುಳಿದಿರುವ ನೀತಿವಂತರು, ಒಂದು ಕ್ಷಣದಲ್ಲೇ ರಪ್ಪೆ ಬ ಡಿಯುವಷ್ಟರೊಳಗಾಗಿ ಮಾರ್ಪಡುವರು. ಈಗ ಅವರು ಅಮರ್ತ್ವತವನ್ನು ಧರಿಸಿಕೊಳ್ಳುವರು ಮತ್ತು ಪುವರುತ್ಥಾನಗೊಂಡ ಸಂತರೊಂದಿಗೆ ಯೇಸುಸ್ವಾಮಿಯನ್ನು ಮೇಘದಲ್ಲಿ ಸಂದಿಸಲು ಏರಿ ಹೋಗುವರು.


134

ದೇವರಾದುಕೊಂಡವರನ್ನು ದೇವದೂತರುಗಳು, ಚತುರ್ದಿಕ್ಕಿನಿಂದ ಮತ್ತು ಆಕಾಶದ ಒಂದು ಮೂಲೆಯಿಂದ ಮತ್ತೊಂದು ಮೂಲೆಯತನಕ ಒಂದು ಗೂಡಿಸುವರು. ಪರಶುದ್ಧ ದೇವದೂತರುಗಳು ಚಿಕ್ಕ ಮಕ್ಕಳನ್ನು ಕೈಗಳೆತ್ತಿಕೊಂಡು ಹೋಗಿ ತಾಯಿಂದಿರ ಮಡಿಲಿಗೆ ಹಾಕುವರು.


135

ಮರಣದ ನಿಮಿತ್ತ ಅನೇಕ ಕಾಲದಿಂದ ಅಗಲಿದ್ದ ಮಿತ್ರರು ಇನ್ನೆಂದೂ ಅಗಲದಂತೆ ಒಂದುಗೂಡುವರು. ಇವರುಗಳು ಹರ್ಷಗೀತ ಹಾಡುತ್ತಾ ದೇವ ನಗರಿಯನ್ನು ಒಂದಾಗಿ ಸೇರುವರು.


136

ಅವರು ಪರಲೋಕವನ್ನು ಸಮಿಪಿಸುತ್ತಿದ್ದಂತೆ, ಶುದ್ಧ, ಶುದ್ಧ, ಶುದ್ಧ, ಸರ್ವಶಕ್ತ ದೇವ! ಎಂದು ಸುಶ್ರಾವ್ಯಾವಾಗಿ ಹಾಡುತ್ತಿರುವ ದೇವದೂತರ ಇಂಪಾದ ಧ್ವನಿಯನ್ನು ಕೇಳುವರು. ಆಗ ಇವರುಗಳು, ಹಲ್ಲೆಲೂಯ ಎಂದು ಆರ್ಭಟ ಮಾಡುತ್ತಾ ಆ ಪರಿಶುದ್ಧ ನಗರದತ್ತ ಸಾಗುವರು.

೩ – ಮಹಾ ತಪ್ಪಿಸಿಕೊಳ್ಳುವಿಕೆ


137

ಪರಿಶುದ್ಧ ಪಟ್ಟಣವನ್ನು ಪ್ರವೇಶಿಸುವ ಮುನ್ನ, ತನ್ನ ಹಿಂಬಾಲಕರಿಗೆ ಜಯೋತ್ಸವದ ಸಂಕೇತವನ್ನು ಮತ್ತು ರಾಜವಂಶಸ್ಥರ ಪದವಿಯನ್ನು ನೀಡುವನು. ವಿಮೋಚಿಸಲ್ಪಟ್ಟ ಅಸಂಖ್ಯಾತರ ದೃಷ್ಟಿ ಯೇಸುಸ್ವಾಮಿಯ ಕಡೆಗಿತ್ತು.


138

ಜಯಶಾಲಿಗಳಾಗಿ ಬಂದ ಪ್ರತಿಯೊಬ್ಬರ ತಲೆಯ ಮೇಲೆ ಯೇಸುಸ್ವಾಮಿ ತಮ್ಮ ಸ್ವಂತ ಕೈಗಳಿಂದ ಮಹಿಮೆಯ ಕಿರೀಟಧಾರಣೆ ಮಾಡುವನು. ಅವರವರ ಕಿರೀಟದ ಮೇಲೆ ಅವರಿಗೆ ನೀಡಲ್ಪಡುವ ಹೊಸ ಹೆಸರು ಬ ರೆಯಲ್ಪಟ್ಟಿರುವುದು ಮತ್ತು ಅದರ ಮೇಲೆ ಕರ್ತನು ಪರಿಶುದ್ಧನು ಎಂದು ಕೆತ್ತಲ್ಪಟ್ಟಿರುವುದು. ಪ್ರತಿಯೊಬ್ಬರ ಹೃದಯವೂ ಹೇಳಿಕೊಳ್ಳಲಾಗದ ಸಂಭ್ರಮದಿಂದ ತುಂಬಿರುವುದು. ಪ್ರತಿಯೊಬ್ಬರ ಧ್ವನಿಯೂ ಕೃತಜ್ಞಪೂರಿತ ಸ್ತೋತ್ರ ಸ್ವರದೊಡನೆ ಮೇಲೇರುವರು.


139

ವಿದೋಚಿಸಲ್ಪಟ್ಟ ಜನ ಸಮೂಹದ ಮುಂದೆ ಪರಿಶುದ್ಧ ಪಟ್ಟಣ ನಿಂತಿದೆ. ಮುತ್ತು ರತ್ನಖಚಿತ ಬಾಗಿಲನ್ನು ಯೇಸುಸ್ವಾಮಿ ತೆರೆಯುವನು. ದೇವರಾಜ್ಞೆಯನ್ನು ಕೈಗೊಂಡು, ಯೇಸುಸ್ವಾಮಿಯೊಂದಿಗೆ ಸಮಾಧಾನ ಹೊಂದಿದ್ದ ರಾಷ್ಟ್ರಗಳು ಈ ಬಾಗಿಲು ಮೂಲಕ ಪ್ರವೇಶಿಸುವರು. ಅಲ್ಲಿ ಅವರು ದೇವರ ಪರದೈಸನ್ನು ಕಾಣುವರು. ಅದು ಆದಾಮ ಪಾಪಮಾಡುವ ಮುನ್ನ ವಾಸವಾಗಿದ್ದ ಮನೆಯಾಗಿತ್ತು. ಮನುಷ್ಯರು ತಮ್ಮ ಜೀವಮಾನದಲ್ಲಿ ಎಂದೂ ಯಾವ ವಾದ್ಯದಿಂದಲೂ ಕೇಳಿರದಿದ್ದ ಇಂಪಾದ ಧ್ವನಿ ಅವರ ಕಿವಿಯ ಮೇಲೆ ಬಿದ್ದು ಅದು– ನಿಮ್ಮ ಕಷ್ಟಸಂಕಟ ಘರ್ಷಣೆಗಳು ಮುಗಿದವು.



140

ವಚನ – ಮತ್ತಾಯ ೨೫:೩೪
ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ.
ಮತ್ತಾಯ ೨೫:೩೪

೩ – ಮಹಾ ತಪ್ಪಿಸಿಕೊಳ್ಳುವಿಕೆ


141

ಇದೇ ನಮ್ಮ ನಿರೀಕ್ಷೆ, ಅದೇ ನಮ್ಮ ಕೊನೆಯ ಘಟ್ಟ. ಇದೆ ನಮ್ಮ ಭವ್ಯಭವಿಷ್ಯ. ಕಿಸ್ತನೊಂದಿಗೆ ನಮ್ಮ ಜೀವನ ಅಲ್ಲಿಂದ ಮುಂದಕ್ಕೆ ನಿರಂತರ. ಆ ನಿತ್ಯಜೀವನದಿಂದ ತಪ್ಪಿಸಿಕೊಂಡರೆ, ಉಳಿದೆಲ್ಲದರಿಂದಲೂ ತಪ್ಪಿಸಿಕೊಂಡಂತೆಯೇ, ಪರಲೋಕ ತಪ್ಪಿದರೆ, ಎಲ್ಲವೂ ತಪ್ಪಿಹೊಂದಂತೆಯೇ. ಕ್ರಿಸ್ತನ ಬರೋಣಕ್ಕೆ ನೀವು ಸಿದ್ಧವಾಗದಿದ್ದರೆ, ಇತಿಹಾಸದ ಕಾಲ ಘಟ್ಟಗಳಲ್ಲೇ ನಡೆದಿರದ ಒಂದು ಮಹಾನ್ ಘಟನೆಯಿಂದ ವಂಚಿತರಾಗುತ್ತೀರಿ. ಯೇಸುಸ್ವಾಮಿ ಕರೆಯುತ್ತಾನೆ.... ಪಾಪ ಕ್ಷಮೆಗಾಗಿ ಬನ್ನಿ. ಕರುಣೆ ಪಡೆಯಲು ಬನ್ನಿ. ನಿಮ್ಮ ಪಾಪದ ಮೇಲೆ ಅಧಿಕಾರ ಪಡೆಯಲು ಬನ್ನಿ. ನಿತ್ಯಜೀವಕ್ಕಾಗಿ ಬನ್ನಿ. ನನ್ನ ರಾಜ್ಯ ಪ್ರವೇಶಿಸಲು ಬನ್ನಿ, ಆತನ ಮನವಿಗೆ ಈಗಲೇ 'ಸರಿ' ಎನ್ನುವಿರಾ? ಆತನ ರಾಜ್ಯದಲ್ಲಿ ಸದಾಕಾಲ ಜೀವಿಸಲು ಬಯಸಿದರೆ, ನಾವೀಗ ಪ್ರಾರ್ಥನೆ ಮಾಡುವಾಗಲೇ ಎದ್ದು ನಿಲ್ಲಿರಿ.

೪ – ಅಕಸ್ಮಾತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ



1

ಜೀವನದ ರಹಸ್ಯಗಳನ್ನು ಕಂಡುಹಿಡಿಯಿರಿ.


2

ನೀವು ಸಮುದ್ರತೀರದಲ್ಲಿ ವಾಸಿಸುತ್ತಿದ್ದೀರೆಂದು ತಿಳಿಯೋಣ. ಒಂದು ದಿನ ಬೆಳಿಗ್ಗೆ ಸಮುದ್ರತೀರದ ಮರಳಿನಲ್ಲಿ ನಡೆಯಲು ನಿರ್ಧರಿಸುತ್ತೀರಿ. ಅದೊಂದು ಮನೋಹರವಾದ ದೃಶ್ಯ, ಉದಯಿಸುತ್ತಿರುವ ಸೂರ್ಯನ ಕಿರಣಗಳು ಸಮುದ್ರದ ನೀರಿನ ಮೇಲೆ ನಾಟ್ಯವಾಡುತ್ತಿವೆ, ಅಲೆಗಳು ತೀರಕ್ಕೆ ಬಡಿಯುತ್ತಿವೆ.


3

ಸಮುದ್ರ ತೀರದ ಮೌನತೆಯಲ್ಲಿ ನೀವು ನಡೆಯುತ್ತಿರುವಾಗ ನಿಮ್ಮ ಮುಂದಿರುವ ಮರಳಿನಲ್ಲಿ ಒಂದು ಜೊತೆ ಹೆಜ್ಜೆಯ ಗುರುತುಗಳನ್ನು ನೀವು ಕಾಣುವಿರಿ.
ಅದೇ ರೀತಿ ಇನ್ನು ಹಲವಾರು ಹೆಜ್ಜೆಯ ಗುರುತುಗಳನ್ನು ಕಾಣುವಿರಿ.
ಸಮುದ್ರ ತೀರದುದ್ದಕ್ಕೂ ನೀವು ನೋಡಿದರೂ, ಯಾರೂ ಕಾಣುತ್ತಿಲ್ಲ. ಈ ಎಲ್ಲಾ ಹೆಜ್ಜೆಯ ಗುರುತುಗಳು ನಿಮಗೆ ಏನು ತಿಳಿಸುತ್ತವೆ? ನೀವು ಯಾರನ್ನೂ ಕಾಣದಿದ್ದರೂ, ಯಾರೋ ಒಬ್ಬರು ಅಲ್ಲಿದ್ದರೆಂಬುದನ್ನು ಆ ಹೆಜ್ಜೆಗಳು ತಿಳಿಸುತ್ತವೆ.
ನಿಮಗಿಂತ ಮೊದಲೆ ಬೇರೆ ಯಾರೋ ಸಮುದ್ರ ದಂಡೆಯಲ್ಲಿ ನಡೆದು ಹೋಗಿದ್ದಾರೆ.
ನಿಮಗೆ ಮತ್ತೊಂದು ಪ್ರಶ್ನೆಯನ್ನು ಕೇಳುತ್ತೇನೆ.


4

ನೀವು ಬಯಲು ಪ್ರದೇಶದಲ್ಲಿ ನಿಂತು ಸುತ್ತಲೂ ನೋಡಿದಾಗ ಏನನ್ನು ಕಾಣುವಿರಿ?
ಹುಲ್ಲು, ಗಿಡಮರಗಳು, ಬೆಟ್ಟ ಗುಡ್ಡಗಳು, ಹೂಗಳು, ತೊರೆ, ನದಿ ಬಹುಶಃ ಕೆಲವು ಪ್ರಾಣಿಗಳನ್ನೂ ನೋಡಬಹುದು.


5

ಅಲ್ಲಿ ನೀವು ನಿಂತಿರುವಾಗ, ಯಾವುದರ ಮೇಲೆ ನಿಂತಿರುವಿರಿ?
ಹೌದು, ನೀವು ನೆಲದಮೇಲೆ, ಅಂದರೆ ಭೂಮಿಯ ಮೇಲ್ಮೈನಲ್ಲಿ ನಿಂತಿರುವಿರಿ.

೪ – ಅಕಸ್ಮಾತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ

೪ – ಅಕಸ್ಮತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ


6

ಮೇಲೆ ನೋಡಿ, ಏನು ಕಾಣುವಿರಿ?


7

ಹಗಲಿನಲ್ಲಿ ನೀವು ಸೂರ್ಯ, ಆಕಾಶ ಅಥವಾ ಮೋಡಗಳನ್ನು ನೋಡುವಿರಿ.


8

ರಾತ್ರಿವೇಳೆಯಲ್ಲಿ ಸಹಸ್ರಾರು ಅಥವಾ ಲಕ್ಷಾಂತರ ನಕ್ಷತ್ರಗಳನ್ನು ಹಾಗೂ ಬಹುಶಃ ಚಂದ್ರನನ್ನು ಕಾಣುವಿರಿ.


9

ಅದು ಅಲ್ಲಿಗೆ ಹೇಗೆ ಹೋಯಿತು?
ನೀವು ಇಲ್ಲಿಗೆ ಹೇಗೆ ಬಂದಿರಿ?
ನಿಮ್ಮನ್ನು ಉಂಟುಮಾಡಿದವರಾರು?


10

ಸಮುದ್ರದಲ್ಲಿರುವ ಜೀವಕಣಗಳಿಂದ (ಸಿ.ಇ.ಎಲ್.ಎಲ್, ಜೈವಿರ ರಚನೆಯ ಮೂಲಧಾತು) ಜೀವವು ಆರಂಭವಾಯಿತೆಂದು ಕೆಲವರು ಹೇಳುವರು.
ಆ ಜೀವಕಣಗಳು ಅನೇಕ ಕಣಗಳುಳ್ಳ ಅತಿ ಚಿಕ್ಕ ಜೀವಿಯಾಗಿ ಬೆಳವಣಿಗೆ ಹೊಂದಿದವು.
ಅನಂತರ ಈ ಸಣ್ಣದಾದ ಜೀವಿಗಳು ಲಕ್ಷಾಂತರ ವರ್ಷಗಳಾದ ಮೇಲೆ ಸಮುದ್ರದಿಂದ ಒಣ ನೆಲಕ್ಕೆ ಚಲಿಸಬಲ್ಲಂತ ಚಿಕ್ಕ ಸೃಷ್ಟಿಗಳಾದುವು ಮತ್ತು ಅವುಗಳಿಗೆ ಕಾಲುಗಳು ಬೆಳೆಯಿತು.



11

ಕೋಟ್ಯಾಂತರ ಜನರು ಈ ಎಲ್ಲಾ ಕಾಲಗಳಲ್ಲಿ ಈ ವಿಶ್ವ, ಸಮಸ್ತ ಬೋರ್ ಮತ್ತು ಜೀವಿಸುವ ಎಲ್ಲಾ ವಸ್ತುಗಳು ಯಾವ ರೀತಿ ಒಂದು ಗೊತ್ತಾದ ಪರಿಸ್ತಿತಿಯಲ್ಲಿ ಬದುಕುಳಿದಿವೆ ಎಂಬುದರ ಬಗ್ಗೆ ಸಂಪೂರ್ಣವಾದ ವ್ಯತ್ಯಾಸವುಳ್ಳ ನಂಬಿಕೆ ಹೊಂದಿದ್ದಾರೆ.
ಸೃಷ್ಟಿಕರ್ತನಾದ ದೇವರು ಇವೆಲ್ಲವುಗಳನ್ನು ಉಂಟುಮಾಡಿದನೆಂದು ಅವರು ನಂಬುತ್ತಾರೆ.
ಆದರೆ ಯಾವ ದೇವರು?

೪ – ಅಕಸ್ಮೃತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ


12

ಜನರು ಇಂದು ಬುದ್ಧ,ಮಹಾವದ್, ಶಿಂಟೋ, ಹಿಂದೂ ದೇವತೆಗಳು ಮತ್ತು ಇತರರನ್ನು ದೇವರೆಂದು ಪೂಜಿಸುತ್ತಾರೆ.
ಈ ದೇವತೆಗಳ ಅನುಯಾಯಿಗಳು ತಮ್ಮ ದೇವರುಗಳು ಸರ್ವಶ್ರೇಷ್ಠ ಎಂದು ಹೇಳಿಕೊಳ್ಳುತ್ತಾರೆ.


13


ಆದರೆ ಈ ಲೋಕದಲ್ಲಿರುವ ಎಲ್ಲಾ ದೇವರುಗಳಲ್ಲಿ, ಒಬ್ಬನೇ ಒಬ್ಬನು ಸಮಸ್ತವನ್ನೂ ಸೃಷ್ಟಿಸಿದವನು ತಾನೇ ಎಂದು ಹೇಳಿಕೊಂಡಿರುವುದು ನಿಮಗೆ ತಿಳಿದಿದೆಯೇ?
ಆ ದೇವರು ತಾನೇ ಪರಿಶುದ್ಧ ಸತ್ಯವೇದದ ದೇವರು, ಸಮಸ್ತವನ್ನು ಉಂಟುಮಾಡಿದ ಸೃಷ್ಟಿಕರ್ತನಾದ ದೇವರ ಬಗ್ಗೆ ಸತ್ಯವೇದದಿಂದ ತಿಳಿದುಕೊಳ್ಳೋಣ.


14

ನೀವು ಒಂದು ಮನೆಯನ್ನು ನೋಡಿದಾಗ, ಈ ಮನೆಯು ಹೇಗೋ ತಾನಾಗಿಯೇ ಉಂಟಾಯಿತೆಂದು ಭಾವಿಸುತ್ತೀರೋ? ಇಲ್ಲ, ಈ ಮನೆಯನ್ನು ಯಾರೋ ಒಬ್ಬರು ಕಟ್ಟಿದರೆಂದು ತಿಳಿಯುತ್ತೀರಿ.


15

ಒಂದು ರಸ್ತೆಯನ್ನು ನೋಡುವಿರಿ. ನೋಡಿದಾಗ ಇದು ತಾನಾಗಿಯೇ ಉಂಟಾಯಿತೋ ಅಥವಾ ಯಾರಾದರೂ ಮಾಡಿದರೋ ಎಂದು ಯೋಚಿಸುವಿರಾ? ಲೋಕಗಳು ಮತ್ತು ಜನರಿಗಿಂತ ಮನೆ ಮತ್ತು ರಸ್ತೆಗಳು ಎಷ್ಟೋ ಸರಳವಲ್ಲವೇ?
ಆದುದರಿಂದ ನೀವು ಜನರು, ಪ್ರಾಣಿಗಳು ಮತ್ತು ನಕ್ಷತ್ರಗಳನ್ನು ನೋಡಿದಾಗ ಇವೆಲ್ಲವುಗಳನ್ನು ಯಾರೋ ಉಂಟುಮಾಡಿದ್ದಾರೆಂದು ತಿಳಿದು ಕೊಳ್ಳುವುದು ವಿವೇಕವಲ್ಲವೇ?
ಯಾರೋ ಒಬ್ಬರು ಇವೆಲ್ಲವುಗಳನ್ನು ರೂಪಿಸಿದರು, ಅನಂತರ ಅವುಗಳನ್ನು ಉಂಟುಮಾಡಿದರು.


16

ಸಮಸ್ತವನ್ನೂ ರೂಪಿಸಿ, ಸೃಷ್ಟಿಸಿದೆನೆಂದು ಅಧಿಕಾರಯುತವಾಗಿ ಹೇಳಿಕೊಳ್ಳುವ ದೇವರ ಬಗ್ಗೆ ತಿಳಿದು ಕೊಳ್ಳೋಣ.
ಈ ಲೋಕ ಮತ್ತು ವಿಶ್ವವನ್ನು (ಯೂನಿವರ್ಸ್) ಉಂಟುಮಾಡಿದ ಸೃಷ್ಟಿಕರ್ತನ ಬಗ್ಗೆ ಆತನ ಪರಿಶುದ್ಧ ಗ್ರಂಥವಾದ ಸತ್ಯವೇದವು ಏನು ಹೇಳುತ್ತದೆ ಎಂಬುದನ್ನು ತಿಳಿದುಕೊಳ್ಳೋಣ.

೪ – ಅಕಸ್ಮಿತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ



17

ವಾಕ್ಯ; ಆದಿಕಾಂಡ ೧:೧
ಆದಿಯಲ್ಲಿ ದೇವರು ಆಕಾಶವನ್ನೂ, ಭೂಮಿಯನ್ನೂ ಉಂಟುಮಾಡಿದನು.
(ಆದಿಕಾಂಡ ೧:೧)



18

ವಾಕ್ಯ; ಆದಿಕಾಂಡ ೧:೩.
ಆಗ ದೇವರು – ಬೆಳಕಾಗಲಿ ಅನ್ನಲು ಬೆಳಕಾಯಿತು.
ಆದಿಕಾಂಡ ೧:೩.




19

ವಚನ ೨ ಚಿತ್ರಫಲಕ (ಸ್ಲೈಡ್ಸ್) (ಆದಿಕಾಂಡ ೧:೪,೫)
ದೇವರು ಆ ಬೆಳಕನ್ನು ಒಳ್ಳೇದೆಂದು ನೋಡಿದನು; ದೇವರು ಬೆಳಕನ್ನೂ, ಕತ್ತಲೆಯನ್ನೂ ಬೇರೆ ಬೇರೆ ಮಾಡಿ, ಬೆಳಕಿಗೆ ಹಗಲೆಂದೂ ಕತ್ತಲೆಗೆ ಇರುಳೆಂದೂ ಹೆಸರಿಟ್ಟನು.



20

ವಚನ ೨ ಚಿತ್ರಫಲಕ (ಸ್ಲೈಡ್ಸ್) (ಆದಿಕಾಂಡ ೧:೪,೫)
ದೇವರು ಆ ಬೆಳಕನ್ನು ಒಳ್ಳೇದೆಂದು ನೋಡಿದನು; ದೇವರು ಬೆಳಕನ್ನೂ, ಕತ್ತಲೆಯನ್ನೂ ಬೇರೆ ಬೇರೆ ಮಾಡಿ, ಬೆಳಕಿಗೆ ಹಗಲೆಂದೂ ಕತ್ತಲೆಗೆ ಇರುಳೆಂದೂ ಹೆಸರಿಟ್ಟನು.



21


(ವಚನ ಆದಿಕಾಂಡ ೧:೬) ಎರಡನೆಯ ದಿನ
ಬಳಿಕ ದೇವರು – ಜಲಸಮೂಹಗಳ ನಡುವೆ ವಿಸ್ತಾರವಾದ ಗುಮಟವು ಉಂಟಾಗಲಿ; ಅದು ಕೆಳಗಣ ನೀರುಗಳನ್ನೂ, ಮೇಲಣ ನೀರುಗಳನ್ನೂ ಬೇರೆ ಬೇರೆ ಮಾಡಲಿ ಅಂದನು. ಆದಿಕಾಂಡ ೧:೬



22


(ವಚನ; ಆದಿಕಾಂಡ ೧:೭)
ಹಾಗೆಯೇ ಆಯಿತು ಆದಿಕಾಂಡ ೧:೭

೪ – ಅಕಸ್ಮತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ




23

(ವಚನ; ಆದಿಕಾಂಡ ೧:೮)
ದೇವರು ಆ ಗುಮಟಕ್ಕೆ ಆಕಾಶವೆಂದು ಹೆಸರಿಟ್ಟನು. ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಎರಡನೆಯ ದಿನವಾಯಿತು.
ಆದಿಕಾಂಡ ೧:೮.
ಎರಡನೆಯ ದಿನದಲ್ಲಿ ದೇವರು ಮೇಲಣ ಆಕಾಶವನ್ನು ಉಂಟುಮಾಡಿದನು ಮತ್ತು ಭೂಮಿಯ ನೀರನ್ನು ಮೋಡಗಳ ಮತ್ತು ಆಕಾಶದ ನೀರಿನಿಂದ ವಿಂಗಡಿಸಿದನು.




24

(ವಚನ ೨ ಸ್ಲೈಡುಗಳು; ಆದಿಕಾಂಡ ೧:೯. ಮೂರನೆಯ ದಿನ)
ಅನಂತರ ದೇವರು – ಆಕಾಶದ ಕೆಳಗಿರುವ ನೀರೆಲ್ಲಾ ಒಂದೇ ಸ್ಥಳದಲ್ಲಿ ಕೂಡಿಕೊಳ್ಳಲಿ, ಒಣನೆಲವು ಕಾಣಿಸಲಿ ಅಂದನು.



25

ಹಾಗೆಯೇ ಆಯಿತು. ಆದಿಕಾಂಡ ೧:೯



26

(ವಚನ ೨ ಸ್ಲೈಡುಗಳು; ಆದಿಕಾಂಡ ೧:೧೧)
ತರುವಾಯ ದೇವರು – ಭೂಮಿಯು ಹುಲ್ಲನ್ನೂ, ಬೀಜಬಿಡುವ ಕಾಯಿಪಲ್ಯದ ಗಿಡಗಳನ್ನೂ ಬೆಳೆಸಲಿ



27


ಮತ್ತು ಬೀಜವುಳ್ಳ ಹಣ್ಣಿನ ಮರಗಳನ್ನು ಅವುಗಳ ಜಾತಿಗನುಸಾರವಾಗಿ ಹುಟ್ಟಿಸಲಿ ಎಂದು ಹೇಳಿದನು; ಹಾಗೆಯೇ ಆಯಿತು. ಆದಿಕಾಂಡ ೧:೧೧



28


(ವಚನ: ಆದಿಕಾಂಡ ೧:೧೩)
ಹೀಗೆ ಸಾಯಂಕಾಲವೂ, ಪ್ರಾತಃಕಾಲವೂ ಆಗಿ ಮೂರನೆಯ ದಿನವಾಯಿತು,
ಆದಿಕಾಂಡ ೧:೧೩
ಮೂರನೆಯ ದಿನದಲ್ಲಿ ದೇವರು ಒಣನೆಲವು ಕಾಣಿಸಿಕೊಳ್ಳುವಂತೆ ಮಾಡಿದನು, ಸಮುದ್ರವನ್ನು ಉಂಟುಮಾಡಿದನು ಮತ್ತು ಭೂಮಿಯನ್ನು ಗಿಡಮರಗಳಿಂದ ತುಂಬಿಸಿದನು.

೪ – ಅಕಸ್ಮಾತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ




29

(ವಚನ ೩ ಸ್ಲೈಡ್‌ಗಳು, ಆದಿಕಾಂಡ ೧:೧೪,೧೫)
ನಾಲ್ಕನೆಯದಿನ
ಬಳಿಕ ದೇವರು – ಆಕಾಶಮಂಡಲದಲ್ಲಿ ಬೆಳಕುಗಳು ಉಂಟಾಗಲಿ, ಅವು ಹಗಲಿರುಳುಗಳನ್ನು ಬೇರೆ ಬೇರೆ ಮಾಡಲಿ



30

ಇದಲ್ಲದೆ ಅವು ಗುರುತುಗಳಾಗಿದ್ದು ಸಮಯಗಳನ್ನೂ, ದಿನ ಸಂವತ್ಸರಗಳನ್ನೂ ತೋರಿಸಲಿ



31

ಮತ್ತು ಭೂಮಿಯ ಮೇಲೆ ಬೆಳಕು ಕೊಡುವುದಕ್ಕೆ ಅವು ಆಕಾಶ ಮಂಡಲದಲ್ಲಿ ದೀಪಗಳಂತಿರಲಿ ಅಂದನು; ಹಾಗೆಯೇ ಆಯಿತು.



32

(ವಚನ ೨ ಸ್ಲೈಡ್‌ಗಳು; ಆದಿಕಾಂಡ ೧:೧೮,೧೯)
ದೇವರು ಅದನ್ನು ಒಳ್ಳೇದೆಂದು ನೋಡಿದನು




33

ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ನಾಲ್ಕನೆಯ ದಿನವಾಯಿತು.
ಆದಿಕಾಂಡ ೧:೧೯
ನಾಲ್ಕನೆಯ ದಿನದಲ್ಲಿ ದೇವರು ಆಕಾಶದಲ್ಲಿ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳನ್ನೂ ಉಂಟುಮಾಡಿದನು.



34

(ವಚನ ೨ ಸ್ಲೈಡ್‌ಗಳು; ಆದಿಕಾಂಡ ೧:೨೦)
ಐದನೆಯ ದಿನ . ದೇವರು ಐದನೆಯ ದಿನದಲ್ಲಿ ಏನು ಸೃಷ್ಟಿ ಮಾಡಿದನು?
ತರುವಾಯ ದೇವರು – ಗುಂಪುಗುಂಪಾಗಿ ಚಲಿಸುವ ಜಲ ಜಂತುಗಳು ನೀರಿನಲ್ಲಿ ತುಂಬಿಕೊಳ್ಳಲಿ.



35


ಪಕ್ಷಿಗಳು ಭೂಮಿಯ ಮೇಲೆ ಅಂತರಿಕ್ಷದೊಳಗೆ ಹಾರಾಡಲಿ ಅಂದನು.
ಆದಿಕಾಂಡ ೧:೨೦

೪ – ಅಕಸ್ಮತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ




36

(ವಚನ ಆದಿಕಾಂಡ ೧:೨೩)
ಹೀಗೆ ಸಾಯಂಕಾಲವೂ ಪ್ರಾತಃ ಕಾಲವೂ ಆಗಿ ಐದನೆಯ ದಿನವಾಯಿತು
ಐದನೆಯ ದಿನ ಹೀಗೆ ಸಾಯಂಕಾಲವೂ ಪ್ರಾತಃ ಕಾಲವೂ ಆಗಿ ಐದನೆಯ ದಿನವಾಯಿತು



37

(ವಚನ ೨ ಸ್ಲೈಡ್‌ಗಳು: ಆದಿಕಾಂಡ ೧:೨೪) ಆರನೆಯ ದಿನ. ಸೃಷ್ಟಿಯ ಆರನೆಯ ದಿನವು ಇಲ್ಲಿಯವರೆಗೆ ಬಹಳ ಮುಖ್ಯವಾದುದು.
ಮತ್ತು ದೇವರು – ಭೂಮಿಯಿಂದ ಜೀವ ಜಂತುಗಳು ಉಂಟಾಗಲಿ




38

ಪಶುಕ್ರಿಮಿಗಳೂ, ಕಾಡು ಮೃಗಗಳೂ ತಮ್ಮ ತಮ್ಮ ಜಾತಿಗನುಸಾರವಾಗಿ ಹುಟ್ಟಲಿ ಅಂದನು; ಹಾಗೆಯೇ ಆಯಿತು. ಆದಿಕಾಂಡ ೧:೨೪




39

(ವಚನ ೫ ಸ್ಲೈಡ್‌ಗಳು; ಆದಿಕಾಂಡ ೧:೨೬,೨೭)
ಆ ಮೇಲೆ ದೇವರು – ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ;



40

ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ, ಪಶುಗಳ ಮೇಲೆಯೂ,



41

ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ, ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು.



42

ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು; ದೇವ ಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು.



43

ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು.

೪ – ಅಕಸ್ಮತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ

೪ – ಅಕಸ್ಮತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ



44

(ವಚನ ೨ ಸ್ಲೈಡ್‌ಗಳು; ಆದಿಕಾಂಡ ೧:೩೧)
ದೇವರು ತಾನು ಉಂಟು ಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು.



45


ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಆರನೆಯ ದಿನವಾಯಿತು ಆದಿಕಾಂಡ ೧:೩೧.
ಆರನೆಯ ದಿನದಲ್ಲಿ ದೇವರು ಪ್ರಾಣಿಗಳನ್ನು ಮತ್ತು ತನ್ನ ಎಲ್ಲಾ ಸೃಷ್ಟಿಗೆ ಕಿರೀಟ ಪ್ರಾಯವಾಗಿರುವ ಮನುಷ್ಯರನ್ನು ಉಂಟುಮಾಡಿದನು.


46

ಆದಾಮು ಮತ್ತು ಹವ್ವರು ಇದ್ದಕ್ಕಿದ್ದಂತೆ ಅಥವಾ ವಿಕಾಸಗೊಳ್ಳಲಿಲ್ಲ. ದೇವರು ಅವರ ಶರೀರವನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನೆಂದು ಸತ್ಯವೇದವು ಹೇಳುತ್ತದೆ.



47

ದೇವರು ಒಬ್ಬ ಮಹಾನ್ ಯಂತ್ರಶಿಲ್ಪಿ ಹಾಗೂ ಒಬ್ಬ ಮಹಾನ್ ಕುಶಲ ನಕ್ಷೆಗಾರನಾಗಿದ್ದು ನಮ್ಮನ್ನು ಮನುಷ್ಯರನ್ನಾಗಿ ರೂಪಿಸಿದನು.
ಏಳನೆಯ ದಿನ.
ಏಳನೆಯ ದಿನದಲ್ಲಿ ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ವಿಶ್ರಮಿಸಿ ಕೊಂಡನು. ಮತ್ತು ಏಳನೆಯ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು.



48

(ವಚನ ೩ ಸ್ಲೈಡ್‌ಗಳು; ಆದಿಕಾಂಡ ೨:೧,೨.)
ಹೀಗೆ ಭೂಮ್ಯಾಕಾಶಗಳೂ ಅವುಗಳಲ್ಲಿರುವ ಸಮಸ್ತವೂ ನಿರ್ಮಿತವಾದವು.



49


ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು.



50

ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಆ ಏಳನೆಯ ದಿನದಲ್ಲಿ ವಿಶ್ರಮಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು.
ಆದಿಕಾಂಡ ೨:೧,೨.

೪ – ಅಕಸ್ಮಾತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ



51

ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಆ ಏಳನೆಯ ದಿನದಲ್ಲಿ ವಿಶ್ರಮಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು.
ದೇವರು ಸೃಷ್ಟಿ ಮಾಡಿದ ಈ ಏಳನೆಯ ದಿನದ ಸಬ್ಬತ್ತಿನ ವಿಶ್ರಾಂತಿಯ ಬಗ್ಗೆ ಮುಂದಿನ ಕೂಟಗಳಲ್ಲಿ ಹೆಚ್ಚಾಗಿ ಕಲಿಯೋಣ.


52

ದೇವರು ಈ ಭೂಮಿಯನ್ನೂ ಮತ್ತು ಮನುಷ್ಯರನ್ನೂ ಒಳಗೊಂಡಂತೆ ಸಮಸ್ತವನ್ನೂ ಹೇಗೆ ಸೃಷ್ಟಿಸಿದ ಎಂಬುದರ ಸಂಕ್ಷಿಪ್ತ ನೋಟವನ್ನು ತಿಳಿದುಕೊಂಡೆವು.


53

ದೇವರು ನಿಜವಾಗಿಯೂ ಎಂತಹ ಅದ್ಭುತವಾದ ನಕ್ಷೆಗಾರ ಹಾಗೂ ಸೃಷ್ಟಿಕರ್ತನೆಂಬುದನ್ನು ಕೂಲಂಕುಶವಾಗಿ ತಿಳಿದುಕೊಳ್ಳೋಣ.


54

ಮಾನವ ಶರೀರವು ಅದರ ವಿನ್ಯಾಸ ಹಾಗೂ ವಿನ್ಯಾಸಕಾರನ ಬಗ್ಗೆ ಅದ್ಭುತವಾದ ಸಾಕ್ಷಿಯನ್ನು ನೀಡುತ್ತದೆ.


55

ಮಾನವ ಶರೀರದ ಒಂದು ಭಾಗವಾದ ಕಣ್ಣುಗಳ ಬಗ್ಗೆ ಆಳವಾಗಿ ಯೋಚಿಸಿ.



56

(ವಿಡಿಯೋ; ೧೦ ಸೆಕೆಂಡು)
ಕಣ್ಣುಗುಡ್ಡೆಯ ಮುಂಭಾಗದಲ್ಲಿರುವ ಪಾರದರ್ಶಕ ಪಟಲ ಮತ್ತು ಪಾರದರ್ಶಕವಾದ ತಿನ್ಸುಗಳ ವಿನ್ಯಾಸವು ಎಷ್ಟೊಂದು ಕೋಮಲವಾಗಿದೆಯೆಂದರೆ, ಈ ಲೋಕದಲ್ಲಿರುವ ಅತ್ಯಾಧುನಿಕ ಕ್ಯಾಮರಾಗಳು ಅವುಗಳ ಮುಂದೆ ಹೋಲಿಕೆಯಲ್ಲಿ ಮಕ್ಕಳ ಬೊಂಬೆಯಂತಿದೆ ಎಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ.

೪ – ಅಕಸ್ಮಾತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ


57

ಕಣ್ಣುಗಳು ಬೆಳಕನ್ನು ಸಂದೇಶಗಳನ್ನಾಗಿ ಪರಿವರ್ತಿಸುತ್ತವೆ. ಮೆದುಳು ಈ ಸಂದೇಶಗಳನ್ನು ಯಾವರೀತಿಯಲ್ಲಿ ಗ್ರಹಿಸಿಕೊಳ್ಳುತ್ತದೆಂದರೆ ಈ ಲೋಕದಲ್ಲಿರುವ ಯಾವುದೇ ಆತ್ಯಾಧುನಿಕ ಪ್ರಯೋಗಶಾಲೆಗಳು ಅದನ್ನು ಯಥಾವತ್ತಾಗಿ ಪುನರ್ ರೂಪಿಸಲು ಸಾಧ್ಯವಿಲ್ಲ.
ಮೆದುಳಿನ ಜೀವಕಣಗಳು ಈ ಸಂದೇಶಗಳನ್ನು ಅದ್ಭುತವಾದ ನೋಡುವ ದೃಶ್ಯವನ್ನಾಗಿ ಪರಿವರ್ತಿಸುತ್ತವೆ. ಈ ಲೋಕದ ಯಾವುದೇ ವಸ್ತುವು ಇಂತಹ ಅದ್ಭುತಕಾರ್ಯ ಮಾಡಲು ಸಾಧ್ಯವಿಲ್ಲ.


58

ಮಾನವ ಕಣ್ಣುಗಳು ಈ ಲೋಕದಲ್ಲಿ ದೇವರು ತಾನು ಸೃಷ್ಟಿಸಿದ ಎಲ್ಲಾ ಸೌಂದರ್ಯವನ್ನು ನಾವು ನೋಡಿ ಆನಂದ ಪಡಬೇಕೆಂದು ಪ್ರೀತಿ ಸ್ವರೂಪಿಯಾದ ದೇವರು ಆಶಿಸುತ್ತಾನೆಂಬುದಕ್ಕೆ ಆಧಾರವಾಗಿದೆ. ಈ ಕಾರಣದಿಂದಲೇ ಕೀರ್ತನೆಗಾರನು ಹೀಗೆ ಬರೆಯುತ್ತಾನೆ.



59

(ವಚನ ಕೀರ್ತನೆಗಳು ೧೩೯:೧೪)
ನೀನು ನನ್ನನ್ನು ಅದ್ಭುತವಾಗಿಯೂ, ವಿಚಿತ್ರವಾಗಿಯೂ ರಚಿಸಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ.



60

ನಿನ್ನ ಕೃತ್ಯಗಳು ಆಶ್ಚರ್ಯವಾಗಿವೆಯೆಂದು ನನ್ನ ಹೃದಯವು ಚೆನ್ನಾಗಿ ಗ್ರಹಿಸಿಕೊಂಡಿದೆ ಕೀರ್ತನೆಗಳು ೧೩೯:೧೪ ಮಾನವನ ಶರೀರ ಮತ್ತು ಮನಸ್ಸು ಎಷ್ಟೊಂದು ತೊಡಕಾಗಿದೆಯೆಂದರೆ ಅತಿ ಜ್ಞಾನಿಯಾದ ವಿನ್ಯಾಸಕಾರನಿಂದ ಮಾತ್ರ ಅವುಗಳನ್ನು ರೂಪಿಸಲು ಸಾಧ್ಯ.



61

ಈ ಲೋಕದ ಹಾಗೂ ವಿಶ್ವದ ಉಳಿದವುಗಳ ಬಗ್ಗೆ ಏನು? ಸಮಸ್ತ ವಿಶ್ವವನ್ನು ಸೃಷ್ಟಿಕರ್ತನಾದ ದೇವರೇ ಉಂಟುಮಾಡಿದನೆಂಬುದಕ್ಕೆ ಆಧಾರವೇನಿದೇ?


62


ಪ್ರವಾದಿಯಾದ ಯಶಾಯನು – ನಮ್ಮ ಕಣ್ಣುಗಳನ್ನು ಸುತ್ತಮುತ್ತಲಿನ ಅಲ್ಪ ವಿಷಯಗಳಿಂದ ತೆಗೆದು ಹಾಕಿ, ಆಕಾಶದಲ್ಲಿ ದೇವರು ಏನು ಮಾಡಿದ್ದಾನೆಂಬ
ುದನ್ನು ದೃಷ್ಟಿಸುವಂತೆ ಹೇಳುತ್ತಾನೆ.

೪ – ಅಕಸ್ಮೃತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ




63

(ವಚನ ೨ ಸ್ಲೈಡುಗಳು ಯಶಾಯ ೪೦:೨೬)
ನಿಮ್ಮ ಕಣ್ಣುಗಳನ್ನು ಮೇಲಕ್ಕೆತ್ತಿ ನೋಡಿರಿ; ಈ ನಕ್ಷತ್ರಗಳನ್ನು ಸೃಷ್ಟಿಸಿದಾತನು ಯಾರು? ಈ ಸೈನ್ಯವನ್ನು ಲೆಕ್ಕಕ್ಕೆ ಸರಿಯಾಗಿ ಮುಂದರಿಸುತ್ತಾನಲ್ಲಾ.



64

ಎಲ್ಲವನ್ನು ಹೆಸರೆತ್ತಿ ಕರೆಯುತ್ತಾನೆ; ಆತನು ಅತಿ ಬಲಾಢ್ಯನೂ ಮಹಾ ಶಕ್ತನೂ ಆಗಿದ್ದಾನೆ.



65

ಅವುಗಳೊಳಗೆ ಒಂದೂ ಕಡಿಮೆಯಾಗದು. ಯಶಾಯ ೪೦:೨೬


66

ಆಕಾಶದಲ್ಲಿರುವ ಅಸಂಖ್ಯಾತ ನಕ್ಷತ್ರಗಳನ್ನು ನೋಡಿರುವಿರಾ? ಅವು ಎಲ್ಲಿಂದ ಬಂದವೆಂದೂ ಮತ್ತು ಅವುಗಳ ಸಂಖ್ಯೆ ಎಷ್ಟೆಂದು ನೋಡಿ ಆಶ್ಚರ್ಯಗೊಂಡಿರುವಿರಾ?


67

ಅವುಗಳ ಅಪರಿಮಿತ ಸಂಖ್ಯೆಯನ್ನು ಇನ್ನೂ ಹೆಚ್ಚಾಗಿ ಗ್ರಹಸಿಕೊಳ್ಳಲು ಸಾಧ್ಯವಾಗುವಂತೆ ಸಹಾಯ ಮಾಡುವ ಉದಾಹರಣೆಯನ್ನು ದೇವರು ಕೊಡುತ್ತಾನೆ.
ದೇವರು ಒಂದು ಸಾರಿ ಅರಬ್ಬರು ಮತ್ತು ಯಹೂದ್ಯ ಜನಾಂಗಗಳ ಮೂಲಪುರುಷನಾದ ಅಬ್ರಹಾಮನನ್ನು ಹೊರಗೆ ಕರೆದು ಕೊಂಡು ಹೋಗಿ ಆಕಾಶದಲ್ಲಿರುವ ನಕ್ಷತ್ರಗಳ ಸಂಖ್ಯೆಯನ್ನು ಎಣಿಸುವಂತೆ ತಿಳಿಸಿದನು.



68

(ವಚನ; ಆದಿಕಾಂಡ ೧೫:೫)
ಆಕಾಶದ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವುದು ನಿನ್ನಿಂದಾದರೆ ಲೆಕ್ಕಿಸು; ನಿನ್ನ ಸಂತಾನವು ಅಷ್ಟಾಗುವುದು ಅಂದನು.
ಆದಿಕಾಂಡ ೧೫:೫



69

ಪ್ರಪಂಚದಲ್ಲಿರುವ ಎಲ್ಲಾ ಸಮುದ್ರ ತೀರಗಳ ಮರಳನ್ನು ಲೆಕ್ಕಿಸುವುದು ಸಾದ್ಯವಾದರೆ, ಹೆಚ್ಚು ಕಡಿಮೆ ಅಷ್ಟೇ ಸಂಖ್ಯೆಯು ನಕ್ಷತ್ರಗಳು ಆಕಾಶದಲ್ಲಿವೆ ಎಂದು ಇತ್ತೀಚೆಗೆ ಖಗೋಳ ವಿಜ್ಞಾನಿಯೊಬ್ಬರು ಹೇಳಿದ್ದಾರೆ.

೪ – ಅಕಸ್ಮತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ



70

ನೀವು ಯಾವಾಗಲಾದರೂ ಸಮುದ್ರ ತೀರಕ್ಕೆ ಹೋದರೆ, ಒಂದು ಬಕೆಟಿನಲ್ಲಿ ಮರಳು ಎಷ್ಟಿರಬಹುದು ಎಂದು ಎಣಿಸಲು ಪ್ರಯತ್ನಿಸಿ.
ಅಂದಮೇಲೆ ದಾವೀದ ರಾಜನು ಹೇಳುವುದು ಆಶ್ಚರ್ಯ ಉಂಟುಮಾಡುತ್ತದೆಯೇ?



71

(ವಚನ ೨ ಸ್ಲೈಡುಗಳು; ಕೀರ್ತನೆ ೮:೩,೪)
ನಿನ್ನ ಕೈ ಕೆಲಸವಾಗಿರುವ ಆಕಾಶ ಮಂಡಲವನ್ನೂ, ನೀನು ಉಂಟುಮಾಡಿದ ಚಂದ್ರ ನಕ್ಷತ್ರಗಳನ್ನೂ ನಾನು ನೋಡುವಾಗ



72

ಮನುಷ್ಯನು ಎಷ್ಟು ಮಾತ್ರದವನು, ಅವನನ್ನು ನೀನು ಯಾಕೆ ನೆನಸಬೇಕು?
ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು?
ಕೀರ್ತನೇ ೮:೩,೪




73

(ವಿಡಿಯೋ; ೨೦ ಸೆಕೆಂಡು)
ಸಮಸ್ತ ವಿಶ್ವವನ್ನು ಸೃಷ್ಟಿಸಿ ಅದನ್ನು ಕಾಪಾಡಿ ಪರಿಪಾಲಿಸುತ್ತಿರುವ ಸರ್ವಶಕ್ತನಾದ ದೇವರು ಈ ಲೋಕದಲ್ಲಿ ನಮ್ಮ ಹಾಗೂ ನಮ್ಮ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸುತ್ತಾನೆಂಬುದು ನಿಮಗೆ ಆಶ್ಚರ್ಯ ಉಂಟುಮಾಡುತ್ತದೆಯೇ?
ಆದರೂ ನಿಮ್ಮ ತಂದೆಯ ಚಿತ್ತವಿಲ್ಲದೆ ಒಂದಾದರು ಗುಬ್ಬಿ ನೆಲಕ್ಕೆ ಬೀಳದು ಎಂದು ಯೇಸು ಹೇಳುತ್ತಾನೆ.



74

(ವಚನ; ಮತ್ತಾಯ; ೧೦:೩೧)
ಆದುದರಿಂದ ಹೆದರಬೇಡಿರಿ; ಬಹಳ ಗುಬ್ಬಿಗಳಿಗಿಂತ ನೀವು ಹೆಚ್ಚಿನವರು.
ನಮ್ಮ ಮೇಲಿರುವ ದೇವರ ಪ್ರೀತಿಯ ಬಗ್ಗೆ ಯೇಸುಸ್ವಾಮಿಯವರು



75

(ವಚನ; ಮತ್ತಾಯ; ೧೦:೩೦)
ನಿಮ್ಮ ತಲೇಕೂದಲುಗಳು ಸಹ ಎಲ್ಲವೂ ಎಣಿಕೆಯಾಗಿದೆ
ಮತ್ತಾಯ; ೧೦:೩೦
ಎಂತಹ ಅದ್ಭುತವಾದ ದೇವರು!

೪ – ಅಕಸ್ಮಾತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ


76

ಪ್ರತಿಯೊಬ್ಬರೂ ಸಂಪೂರ್ಣವಾಗಿ ತನ್ನನ್ನೇ ಆರಾಧಿಸಬೇಕೆಂದು ಸತ್ಯವೇದದ ದೇವರು ಯಾವ ಹಕ್ಕನ್ನು ಹೊಂದಿದ್ದಾನೆ?
ದೇವರು ನಮ್ಮನ್ನು ಸೃಷ್ಟಿಮಾಡಿದ ಕರ್ತನಾಗಿರುವುದರಿಂದ ಸತ್ಯವೇದದ ದೇವರು ಮತ್ತು ಕ್ರೈಸ್ತ ಧರ್ಮವು ಆತನೊಬ್ಬನೇ ಆರಾಧನೆಗೆ ಯೋಗ್ಯನೆಂದು ಎಣಿಸುತ್ತದೆ.


77

ಆತನು ಸೃಷ್ಟಿಕರ್ತನಾಗಿರುವುದರಿಂದ ಆತನು ನಮ್ಮ ಆರಾಧನೆಗೆ ಯೋಗ್ಯನಾಗಿದ್ದಾನೆ. ನೀವು ಒಪ್ಪುತ್ತೀರೋ?


78

ಕ್ರಿಸ್ತನ ಶಿಷ್ಯರಲ್ಲಿ ಒಬ್ಬನಾದ ಹಾಗೂ ಸತ್ಯವೇದದ ಕೊನೆಯ ಪುಸ್ತಕವಾದ ಪ್ರಕಟನೆಯ ಗ್ರಂಥ ಕರ್ತನಾದ ಯೋಹಾನನು ಪತ್ಮೋಸ್ ದ್ವೀಪದಲ್ಲಿ ದರ್ಶನದಲ್ಲಿದ್ದನು. ಆ ದರ್ಶನದಲ್ಲಿ ಅವನು ಪರಲೋಕದ ಸಿಂಹಾಸನವನ್ನೂ ಕಂಡನು. ಅವನು ಏನು ಹೇಳುತ್ತಾನೆಂಬುದನ್ನು ಗಮನಿಸಿ;




79

(ವಚನ. ೪ ಸ್ಲೈಡುಗಳು ಪ್ರಕಟನೆ ೪:೧೦,೧೧)
ಆ ಇಪ್ಪತ್ತು ನಾಲ್ಕು ಮಂದಿ ಹಿರಿಯರು ಸಿಂಹಾಸನದ ಮೇಲೆ ಕೂತಾತನ ಪಾದಕ್ಕೆ ಬಿದ್ದು




80

ತಮ್ಮ ಕಿರೀಟಗಳನ್ನು ಸಿಂಹಾಸನದ ಮುಂದೆ ಹಾಕಿ



81

ಕರ್ತನೇ, ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವುದಕ್ಕೆ ಯೋಗ್ಯನಾಗಿದ್ದೀ:



82

ಸಮಸ್ತವನ್ನು ಸೃಷ್ಟಿಸಿದಾತನು ನೀನೆ; ಎಲ್ಲವೂ ನಿನ್ನ ಚಿತ್ತದಿಂದಲೇ ಇದ್ದವು; ನಿನ್ನ ಚಿತ್ತದಿಂದಲೇ ನಿರ್ಮಿತವಾದವು.
ಪ್ರಕಟನೆ ೪:೧೦,೧೧


೪ – ಅಕಸ್ಮ‌ತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ


83

ದೇವರ ಸಿಂಹಾಸನದ ಮುಂದಿರುವ ಇಪ್ಪತ್ತು ನಾಲ್ಕು ಮಂದಿ ಹಿರಿಯರು ಆತನು ಸೃಷ್ಠಿಕರ್ತನಾಗಿರುವುದರಿಂದ ಅವನನ್ನು ಸ್ತುತಿಸಿ ಆರಾಧಿಸುತ್ತಾರೆ, ಈ ಕಾರಣದಿಂದಲೇ ನಾವೂ ಸಹ ಪರಲೋಕದ ದೇವರನ್ನು ಆರಾದಿಸಬೇಕು.


84

ಆತನು ತಾನೇ ಈ ಲೋಕವನ್ನು ಮತ್ತು ನಮ್ಮೆಲ್ಲರನ್ನು ಉಂಟು ಮಾಡಿದವನು.
ದೇವರು ಸೃಷ್ಠಿ ಕರ್ತನೆಂಬುದಕ್ಕೆ ಬೇರೆ ಏನಾದರು ಆಧಾರಗಳಿವೆಯೋ ಎಂದು ನೀವು ಪ್ರಶ್ನಿಸಬಹುದು.
ದೇವರು ತಾನೇ ನಮ್ಮೆಲ್ಲರನ್ನೂ ಉಂಟುಮಾಡುವುದಕ್ಕೆ ಸಾಕ್ಷ್ಯಾಧಾರಗಳಿವೆಯೆಂದು ತಿಳುಸುತ್ತಾನೆ.



85

(ವಚನ ೨ ಸ್ಲೈಡುಗಳು ರೋಮಾಯ ೧:೨೦)
ಅತನ ನಿತ್ಯ ಶಕ್ತಿಯು, ದೇವತ್ವವೂ . . . . ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ.



86

ಆತನ ನಿತ್ಯ ಶಕ್ತಿಯೂ, ದೈವತ್ವವೂ . . . . ರೋಮಾಯ ೧:೨೦, ಸೃಷ್ಠಿಯ ಆರಂಭದಿಂದಲೂ ದೇವರು ಎಲ್ಲಾ ವಸ್ತುಗಳನ್ನು ಸೃಷ್ಠಿ ಮಾಡಿದನೆಂಬುದಕ್ಕೆ, ಆತನು ಸೃಷ್ಠಿಸಿದ ಎಲ್ಲವುಗಳಲ್ಲಿ ಸಾಕ್ಷ್ಯಾಧಾರಗಳಿವೆ.


87

ಮರಳಿನ ಮೇಲೆ ಹೆಜ್ಜೆಯ ಗುರುತುಗಳಂತೆಯೋ, ನಾವು ಆ ವ್ಯಕ್ತಿಯನ್ನು ಕಾಣದಿದ್ದರೂ ಸಹ ಅಲ್ಲಿ ಯಾರೋ ಒಬ್ಬರು ಇದ್ದರೆಂದು ನಾವು ತಿಳಿದಿದ್ದೆವು.


88

ಯಾರಿಂದಲೋ ಸೃಷ್ಠಿ ಮಾಡಲ್ಪಡಬೇಕಾಗಿ, ನಿಮ್ಮ ಸುತ್ತಲಿರುವ ಎಲ್ಲವುಗಳನ್ನು ನೀವು ನೋಡುವಾಗ ಅವುಗಳು ಮರಳಿನ ಮೇಲಿನ ಹೆಜ್ಜೆಯ ಗುರುತುಗಳಂತಿವೆ. ಅವುಗಳು ಇವೆಲ್ಲವನ್ನೂ ಸೃಷ್ಟಿಮಾಡಿದಾತನು ಒಬ ್ಬನಿದ್ದಾನೆಂದು ಹೇಳುತ್ತವೆ.


89


ಸತ್ಯವೇದದಲ್ಲಿ ಕರೆಯಲ್ಪಟ್ಟಿರುವಂತೆ ತಂದೆಯಾದ ದೇವರು ತನ್ನ ಸೃಷ್ಠಿಯ ಕಾರ್ಯದಲ್ಲಿ ತಾನು ಒಂಟಿಗನಾಗಿರಲಿಲ್ಲ

೪ – ಅಕಸ್ಮಿತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ



90

(ವಚನ: ಆದಿಕಾಂಡ ೧:೨೬)
ಆ ಮೇಲೆ ದೇವರು ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ ಎಂದು ಆದಿಕಾಂಡ ಪುಸ್ತಕದಲ್ಲಿ ಹೇಳುತ್ತದೆ.
ಯೋಹಾನನ ಸುವಾರ್ತೆಯಲ್ಲಿ ಇದು ಇನ್ನೂ ವಿಶಾದವಾಗಿ ಹೇಳಲ್ಪಟ್ಟಿದೆ.




91

(ವಚನ ೩ ಸ್ಲೈಡುಗಳು ; ಯೋಹಾನ ೧:೧–೩)
ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು.




92

ಆತನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು




93

ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು; ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ.



94

ವಚನ ೨ ಸ್ಲೈಡುಗಳು : ಯೋಹಾನ ೧:೧೪
ಆ ವಾಕ್ಯವೆಂಬುವನು ನರಾವತಾರವೆತ್ತಿ ನಮ್ಮ ಮದ್ಯದಲ್ಲಿ ವಾಸ ಮಾಡಿದನು, ನಾವು ಆತನ ಮಹಿಮೆಯನ್ನು ನೋಡಿದೆವು.



95

ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು. ಯೋಹಾನ ೧:೧೪.




96

ದೈವತ್ವವೆಂದರೆ ನಾವು ಏನು ತಿಳಿದುಕೋಂಡಿದ್ದೇವೆಯೋ ಅದರ ಬಗ್ಗೆ ಸತ್ಯವೇದವು ಹೇಳುತ್ತದೆ.
ತಂದೆಯಾದ ದೇವರು ಮಗನಾದ ದೇವರು ಹಾಗೂ ಪರಿಶುಧಾತ್ಮನಾದ ದೇವರು ದೈವತ್ವದಲ್ಲಿ ಮೂವರು ವ್ಯಕ್ತಿಗಳಿದ್ದಾರೆ; ಅವರೆಲ್ಲರೂ ಒಂದೇ ರೀತಿ ಆಲೋಚಿಸುತ್ತಾರೆ ಆದಾಗ್ಯೂ ಪ್ರತ್ಯೇಕ ವ್ಯಕ್ತಿಯಾಗಿದ್ದಾರೆ.

೪ – ಅಕಸ್ಮೃತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ


97

ಕ್ರಿಸ್ತನು ಸಮಸ್ತವನ್ನೂ ಸೃಷ್ಟಿಸಲು ತಂದೆಯಾದ ದೇವರಿಗೆ ಸಹಕಾರ ನೀಡಿದನು.




98

(ವಚನ : ಎಫೆಸದವರಿಗೆ ೩:೯)
ಸಮಸ್ತವನ್ನು ಸೃಷ್ಟಿಸಿದ ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು ಪ್ರಕಟವಾಗುವ ವಿಧ ಎಂಥದೆಂದು ತಿಳಿಸುವ ಹಾಗೆಯೂ ದೇವಜನರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತು.
ಎಲ್ಲಾ ಒಳ್ಳೆಯ ಮತ್ತು ಪರಿಪೂರ್ಣ ವರವು ಮಾನವನಿಗಿದ್ದ ಮತ್ತು ಮುಂದೆ ಇರುವದೆಲ್ಲವು, ದೇವರು ಎಲ್ಲಾ ಮಾನವರಿಗೆ ಕೊಡುವ ಆಶೀರ್ವಾದಗಳಾಗಿದೆ.



99

ದೇವರು ತನ್ನ ಸ್ವರೂಪದಲ್ಲಿ ಮಾನವನನ್ನು ಸೃಷ್ಟಿಸಿ ಈ ಸುಂದರವಾದ ಭೂಮಿಯನ್ನು ಆತನಿಗೆ ಜೀವಸಲಿಕ್ಕೆ ಕೊಟ್ಟದ್ದು ಮಾತ್ರವಲ್ಲ; ಮಾನವನ ಅಗತ್ಯಗಳ ಬಗ್ಗೆಯೂ ದೇವರಿಗೆ ಕಾಳಜಿಯಿದೆ:



100

ವಚನ; ಕೀರ್ತನೆಗಳು ೧೪೫:೧೫,೧೬
ಎಲ್ಲಾ ಜೀವಿಗಳ ಕಣ್ಣುಗಳು ನಿನನ್ನೇ ನೋಡುತ್ತವೆ; ನೀನು ಆವುಗಳಿಗೆ ಹೊತ್ತು ಹೊತ್ತಿಗೆ ಆಹಾರ ಕೊಡುತ್ತೀ.



101

ನೀನು ಕೈದೆರದು ಎಲ್ಲಾ ಜೀವಿಗಳ ಇಷ್ಟವನ್ನು ನೆರವೇರಿಸುತ್ತೀ.
ಕೀರ್ತನೆಗಳು ೧೪೫:೧೫,೧೬


102

ದೇವರು ತಾನು ಸೃಷ್ಟಿಸಿದವುಗಳ ಅಗತ್ಯಗಳ ಬಗ್ಗೆ ಯಾವ ರೀತಿ ಚಿಂತಿಸುತ್ತಾನೆ ಎಂಬುದನ್ನು ಕೆಲವು ವಿಧವಾಗಿ ಈಗ ಪರಿಶೀಲಿಸೋಣ.ನಾವು ಕುಡಿಯುವ ನೀರನ್ನೇ ತೆಗೆದುಕೊಳ್ಳಿ, ಇದು ಐಗುಪ್ತ ದೇಶದ ಪಿರಮಿಡ್ಡುಗಳಿಗಿಂತಲೂ, ಪುರಾತನವಾದದ್ದು.


103

ನೀರು ರಸಾಯನಿಕಗಳಿಂದ ಇಲ್ಲವೆ ತ್ಯಾಜ್ಯ ವಸ್ತುಗಳಿಂದ ಕಲುಷಿತವಾಗಿರಬಹುದು, ಆದರೆ ಸೂರ್ಯನು ಇದನ್ನು ಆವಿಯ ಮೂಲಕವಾಗಿ ವಾಯುಮಂಡಲಕ್ಕೆ ತೆಗೆದುಕೊಳ್ಳಲಿ.

೪ – ಅಕಸ್ಮಾತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ


104

ಇದು ಶುದ್ಧ ನೀರಾಗಿ ಪರಿವರ್ತನೆಗೊಂಡು ಇದನ್ನು ಮತ್ತೆ ಮತ್ತೆ ಉಪಯೋಗಿಸಬಹುದು. ಮಳೆ, ಮಂಜು ಅಥವಾ ಹಿಮದ ಮೂಲಕವಾಗಿ ಇದು ಹಂಚಿಕೆಯಾಗಿದೆ. ದೇವರು ರೂಪಿಸಿದ ಎಂತಹ ಅದ್ಭುತವಾದ ನೀರಿನ ವ್ಯವಸ್ಥೆ!


105


ಆಕಾಶದಲ್ಲಿ ದೇವರ ಒಂದು ಮಹಾ ಶಕ್ತಿ ಕೇಂದ್ರವಿದೆ–ಅದು ಸೂರ್ಯ, ಆದರ ಬಗ್ಗೆ ಕ್ಷಣ ಕಾಲ ಆಲೋಚಿಸಿ.


106

ಸೂರ್ಯನು ಒಂದು ವೇಳೆ ನಮ್ಮ ಭೂಮಿಗೆ ಸ್ವಲ್ಪ ಸಮೀಪವಾಗಿದಲ್ಲಿ ಅಥವಾ ಸ್ವಲ್ಪ ದೊಡ್ಡದಾಗಿದಲ್ಲಿ ನಮ್ಮ ಎಲ್ಲಾ ಸಾಗರ,ಸಮುದ್ರಗಳು ಬಿಸಿಯಾಗಿ ಕುದಿಯುತಿದ್ದವು.


107

ಸೂರ್ಯನು ಒಂದು ವೇಳೆ ಸ್ವಲ್ಪ ಸಣ್ಣದಾಗಿದ್ದಲ್ಲಿ ಅಥವಾ ಇನ್ನೂ ಸ್ವಲ್ಪ ದೂರವಿದ್ದಲ್ಲಿ ನಮ್ಮ ವಾತವರಣವು ಹಿಮಗಟ್ಟಿ ಹೋಗುತಿತ್ತು.ಈ ಎರಡರಲ್ಲಿ ಯಾವುದೇ ಆಗಿದ್ದರೂ ಈ ಜಗತ್ತಿನಲ್ಲಿ ಜೀವಿಗಳು ಇರಲಾಗುತ್ತಿರಲಿಲ್ಲ. ಆದರೆ ದೇವರು ಇವೆಲ್ಲವುಗಳನ್ನು ಸೃಷ್ಟಿಸಿದಲ್ಲದೆ,ಎಲ್ಲವನ್ನೂ ಪರಿಪಾಲಿಸುತ್ತಾ ಇದ್ದಾನೆ.




108

(ವಚನ: ಯೋಬನು ೧೨:೧೦)
ಪ್ರತಿ ಪ್ರಾಣಿಯ ಪ್ರಾಣವೂ, ಸಮಸ್ತ ಮನುಷ್ಯರ ಆತ್ಮಗಳೂ ಆತನ ಕೈಯಲ್ಲಿರುವವು . ಯೋಬನು ೧೨:೧೦


109

ದೇವರು ಈ ವಿಶ್ವವನ್ನು ರೂಪಿಸಿದನು ಮತ್ತು ಈ ಲೋಕದಲ್ಲಿ ಮನುಷ್ಯರ ಹಾಗೂ ಜೀವ ಜಂತುಗಳ ಆರೋಗ್ಯ ಮತ್ತು ಜೀವವನ್ನು ಕಾಪಾಡಿಕೊಂಡು ಹೊಗುವುದಕ್ಕೆ ಅಗತ್ಯವಾದ ಉಸಿರಾಡುವ ಗಾಳಿಯ ಸೂತ್ರ ಎಷ್ಟೆಂದು ಅವನಿಗೆ ತಿಳಿದಿತ್ತು.



110

ವಾತವರಣದಲ್ಲಿ ಸರಿಯಾದ ಪ್ರಮಾಣದಲ್ಲಿ ನೈಟ್ರೋಜನ್ ಆಮ್ಲಜನಕ, ಆಕ್ಷಿಜನ್ ಎಂಬ ವಾಯುಮಂಡಲದಲ್ಲಿರುವ ಒಂದು ಜಡವಾದ ಅನಿಲ ಮತ್ತು ಕಾರ್ಬನ್ ಡೈ ಆಕ್ಸೈಡ್ ಮಿಶ್ರವಾಗಿರಬೇಕೆಂಬುದು ದೇವರಿಗೆ ತಿಳಿದಿತ್ತು.ಇವೆಲ್ಲವೂ ಖಂಡಿತವಾಗಿಯೂ ಇದ್ದಕ್ಕಿದ್ದಂತೆ ಉಂಟಾಗಲು ಸಾದ್ಯವಿಲ್ಲ.

೪ – ಅಕಸ್ಮತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ


111

ನಾವು ಜೀವಿಸುವ ಲೋಕದಲ್ಲಿ ಅದ್ಭುತಗಳಿಗೆ ಕೊನೆಯಿಲ್ಲ. ತನ್ನ ಸೃಷ್ಠಿಯ ಮೇಲೆ ದೇವರಿಗೆ ಇರುವ ಕಾಳಜಿಗೆ ಮುಕ್ತಾಯವಿಲ್ಲ.ನಿಸರ್ಗದ ಮಹಾನ್ ಒಗಟಾಗಿರುವ ಪಕ್ಷಿಗಳ ವಲಸೆಯ ಬಗ್ಗೆ ಯೋಚಿಸಿ.


112

ಒಂದು ಜೌನ್ಸ್ ಆಂದರೆ ಒಂದು ಪೌಂಡಿನಲ್ಲಿ ೧೬ನೇ ಒಂದು ಭಾಗಕ್ಕಿಂತಲೂ ಕಡಿಮೆ ದೂರವಿರುವ ಪಕ್ಷಿಗಳು ಎಲ್ಲಿಯೂ ವಿಶ್ರಮಿಸದೆ,ಎಂದೂ ನೋಡದೆ ಇರುವಂತಹ ಸಾವಿರಾರು ಮೈಲು ದೂರದಲ್ಲಿರುವ ಸ್ಥಳಕ್ಕೆ ಹಾರಿ ಹೋಗಲು ಹೇಗೆ ಸಾಧ್ಯ?


113

ವಿಶಾಲವಾದ ಸಮುದ್ರದಲ್ಲಿರುವ ಮೀನುಗಳು ಸಾವಿರಾರು ಮೈಲುಗಳ ದೂರದಲ್ಲಿ ಮರಿ ಮಾಡುವುದ್ದಕ್ಕಾಗಿ ಸಿಹಿ ನೀರಿನ ತೊರೆಗಳನ್ನು ಹೇಗೆ ಕಂಡು ಹಿಡಿಯುತ್ತವೆ?
ಮರಿ ಮಾಡುವುದಕ್ಕಾಗಿ ಯಾವಾಗ ಎಲ್ಲಿಗೆ ಹೊಗಬೇಕೆಂದು ಅವುಗಳಿಗೆ ಹೇಗೆ ತಿಳಿದಿದೆ?


114

ಜೇನು ನೊಣಗಳನ್ನೇ ತೆಗೆದುಕೊಳ್ಳಿ, ಅವುಗಳ ಮಿದುಳು ಪಿನ್ನಿನ ತಲೆಯಷ್ಟೂ ದೊಡ್ಡದಲ್ಲ, ಆದರೂ ಅತ್ಯುತ್ತಮ ನಿರ್ಮಾಣ. ಕೌಶಲ್ಯದಿಂದ ಜೇನುಗೂಡು ತಯಾರಿಸುವುದನ್ನು ಅದಕ್ಕೆ ಕಲಿಸಿದವರಾರು?
ಇವೆಲ್ಲವುಗಳ ಹಿಂದೆ ಇರುವ ಚತುರ ಶಿಲ್ಪಿ ಯಾರು?
ಯೋಬನು ಈ ರೀತಿ ಹೇಳುತ್ತಾನೆ:



115

(ವಚನ ೩ ಸ್ಲೈಡುಗಳು : ಯೋಬನು ೧೨:೭–೯)
ಆದರೆ ಮೃಗಗಳನ್ನು ವಿಚಾರಿಸು; ನಿನಗೆ ಉಪದೇಶ ಮಾಡುವವು ಆಕಾಶದ ಪಕ್ಷಿಗಳನ್ನು ಕೇಳು, ನಿನಗೆ ತಿಳಿಸುವವು.



116

ಭೂಮಿಯನ್ನು ಮಾತಾಡಿಸು, ನಿನಗೆ ಬೊಧಿಸುವುದು; ಸಮುದ್ರದ ಮೀನುಗಳು ನಿನಗೆ ಹೇಳುವವು.

೪ – ಅಕಸ್ಮೃತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ




117

ಈ ಎಲ್ಲವುಗಳ ಸಾಕ್ಷಿಯಿಂದ ಯೆಹೋವನ ಕೈಯೇ ಸಕಲ ಕಾರ್ಯಗಳನ್ನು ಮಾಡುತ್ತದೆ ಎಂದು ಯಾರಿಗೆ ತಾನೇ ಗೊತಾಗುವುದಿಲ್ಲ? ಯೋಬನು ೧೨:೭-೯

ಹೌದು, ದೇವರೇ ಇದೆಲ್ಲವನ್ನು ಮಾಡಿದನು.

ದೇವರು ತಮ್ಮ ಸೃಷ್ಟಿಕರ್ತನಾಗಿರುವುದರಿಂದ ಮತ್ತು ಎಲ್ಲಾ ಜೀವಿಗಳ ಜೀವದಿಂದ ಬದುಕುಳಿಯುವುದಕ್ಕೆ ದೇವರೇ ಕಾರಣವಾಗಿರುವುದರಿಂದ ಆತನನ್ನು ಆರಾಧಿಸುವುದು ನಮ್ಮ ಮಹಾ ಅವಕಾಶವೂ, ಕರ್ತವ್ಯವೂ ಆಗಿದೆ.



118

(ವಚನ ೨ ಸ್ಲೈಡುಗಳು: ಕೀರ್ತನೆಗಳು ೧೦೦:೩)


ಯೆಹೋವನೇ ದೇವರೆಂದು ತಿಳಿದುಕೊಳ್ಳಿರಿ, ನಮ್ಮನ್ನು ಉಂಟುಮಾಡಿದವನು ಆತನೇ, ನಾವು ಆತನವರು.



119

ನಾವು ಆತನ ಪ್ರಜೆಯು ಆತನು ಪಾಲಿಸುವ ಹಿಂಡೂ ಆಗಿದ್ದೇವೆ. ಕೀರ್ತನೆಗಳು ೧೦೦:೩

ನಮ್ಮ ಅಗತ್ಯಗಳೇನೆಂದು ದೇವರಿಗೆ ತಿಳಿದಿದೆ, ಮತ್ತು ಆ ಅಗತ್ಯಗಳನ್ನು ಪುರೈಸುವ ಶಕ್ತಿ ಆತನಿಗಿದೆ.



120

(ವಚನ ೨ ಸ್ಲೈಡುಗಳು : ಯೆರೆಮಿಯ ೩೨:೧೭.)

ಯೆರೆಮಿಯನು ಹೀಗೆ ಹೇಳುತ್ತಾನೆ; ಎಲೈ, ಕರ್ತನಾದ ಯಹೊವನೇ! ಆಹಾ, ನೀನು ಭುಜವನ್ನೆತ್ತಿ ನಿನ್ನ ಮಹಾಶಕ್ತಿಯಿಂದ ಭೂಮ್ಯಾಕಾಶಗಳನ್ನು ಸೃಷ್ಟಿಸಿದ್ದೀ;



121


ಯಾವ ಕಾರ್ಯವೂ ನಿನಗೆ ಅಸಾಧ್ಯವಲ್ಲ.


122

ದೇವರು ಸಮಸ್ತ ವಿಶ್ವವನ್ನು ಮಾತ್ರವಲ್ಲದೆ, ನಿಮ್ಮ ವ್ಯಯಕ್ತಿಕ ಜೀವನವನ್ನೂ ಸಹ ನಡಿಸಬಲ್ಲನೆಂಬುದು ನಿಮ್ಮ ಮನಸ್ಸಿಗೆ ಸಮಾಧಾನ ತರುವುದಿಲ್ಲವೆ?


ಯಾವ ಸಮಸ್ಯೆಯೂ ಸಹ ಸೌರಮಂಡಲಗಳ ದೇವರಾದ ಯಹೋವನಿಗೆ ಚಿಕ್ಕದ್ದಲ್ಲ, ದೇವರು ಎಲ್ಲವನ್ನು ತಿಳಿದಿದ್ದಾನೆ-ಅದು ಮಾತ್ರವಲ್ಲ ನಡೆಯುವುದಕ್ಕಿಂತಲೂ ಮೊದಲೇ ತಿಳಿದಿದ್ದಾನೆ.

೪ – ಅಕಸ್ಮಾತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ



123

(ವಚನ ೨ ಸ್ಲೈಡುಗಳು ; ಯೆಶಾಯ ೪೬:೯)
ನಾನೆ ದೇವರು . . . ನನಗೆ ಸರಿಸಮಾನರಿಲ್ಲ ಎಂದು ದೇವರು ಹೇಳುತ್ತಾನೆ.



124

ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದೇನೆ; ನನ್ನ ಸಂಕಲ್ಪವು ನಿಲ್ಲುವುದು. ನನ್ನ ಇಷ್ಟಾರ್ಥವನೆಲ್ಲಾ ನೆರವೇರಿಸುವೆನು ಎಂದು ಹೇಳಿ ಇನ್ನೂ ನಡಯದಿರುವ ಕಾರ್ಯಗಳನ್ನು ಪುರಾತನ ಕಾಲದಲ್ಲಿಯೇ ಅರುಹಿದ್ದೇನೆ. ಯೆಶಾಯ ೪೬:೧೦



125

ದೇವರ ಶಕ್ತಿಗೆ ಮೀರುವಂತೆ ಯಾವುದು ನಮಗೆ ಸಂಭವಿಸುವುದಿಲ್ಲ ಎಂಬ ುದನ್ನು ತಿಳಿಯುವುದು ನಮಗೆ ಎಂತಹ ಸಮಾಧಾನ ಹಾಗೂ ಭರವಸೆಯನ್ನು ನೀಡುತ್ತದ್ದೆ.



126

(ವಚನ:೧ ಯೋಹಾನ ೪:೮)
ದೇವರು ಪ್ರೀತಿ ಸ್ವರೂಪಿ ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ.



127

(ವಚನ : ಯೋಹಾನ ೧೬:೨೭)
ತಂದೆಯು ತಾನೇ ನಿಮ್ಮ ಮೇಲೆ ಮಮತೆ ಇಡುತ್ತಾನಲ್ಲವೆ?



128

(ವಿಡಿಯೋ : ೧೦ ಸೆಕೆಂಡುಗಳು) ಇಂತಹ ಅಗಾಧ ವಿಶ್ವವನ್ನು ಸೃಷ್ಟಿಸಿ ಪರಿಪಾಲಿಸಿಕೊಂಡು ಬರುತ್ತಿರುವ ಸರ್ವ ಶಕ್ತನಾದ ದೇವರು ನಿಮ್ಮ ಬಗ್ಗೆ ಕಾಳಜಿ ವಹಿಸುತ್ತಾನೆಂಬುದು ಆಶ್ಚರ್ಯವೆನುಸುತ್ತದೆಯೇ?
ದೇವರ ಅಪರಿಮಿತವಾದ ಶಕ್ತಿ, ಆತನ ಮಹಾಜ್ಞಾನ ಮತ್ತು ಸರ್ವವ್ಯಾಪಿಯಾದ ಆತನ ಸಾಮರ್ಥ್ಯದ ಬಗ್ಗೆ ಆಲೋಚಿಸುವುದು ನಮ್ಮನ್ನು ಸ್ಥೈರ್ಯಗೆಡಿಸುತ್ತದಲ್ಲವೇ?
ಆದರೆ ಪ್ರೀತಿಯನ್ನು ಅರ್ಥಮಾಡಿಕೊಳುವುದು ಸಾಧ್ಯ. ಯಾವುದೂ ಸಹ ನಮನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವು.

೪ – ಅಕಸ್ಮಾತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ




129

(ವಚನ ೪ ಸ್ಲೈಡುಗಳು; ರೋಮಾಯ ೮:೩೮,೩೯)
ಹೇಗೆಂದರೆ ಮರಣವಾಗಲಿ ಜೀವವಾಗಲಿ, ದೇವದೂತರಾಗಲಿ ದುರಾತ್ಮಗಳಾಗಲಿ . . . . .



130

. . . ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ . . . . .



131

ಮಹತ್ವಗಳಾಗಲಿ, ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆಯಾವ ಸೃಷ್ಟಿಯಾಗಲಿ ನಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು.



132

ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ಉಂಟು. ರೋಮಾಯ ೮:೩೮,೩೯.


133

ನಾವು ದೇವರನ್ನು ಪ್ರೀತಿಸಲಿ ಅಥವಾ ಪ್ರೀತಿಸದಿರಲಿ ದೇವರು ನಮನ್ನು ಪ್ರೀತಿಸುತಾನೆ.
ನಾವು ಕಪ್ಪು ಚರ್ಮದವರೋ ಅಥವಾ ಬಿಳಿ ಚರ್ಮದವರೋ, ಗಂಡಸರೋ ಅಥವಾ ಹೆಂಗಸರೋ , ಸುಂದರವಾಗಿದ್ದೇವೆಯೋ ಇಲ್ಲವೇ ಕುರೂಪಿಗಳೋ ದೇವರು ನಮ್ಮನ್ನು ಪ್ರೀತಿಸುತ್ತಾನೆ. ಅಂತವರು ಯಾರೂ ಇಲ್ಲ! ಆದರೆ ಆತನು ನಮ್ಮನ್ನು ಪ್ರೀತಿಸುತ್ತಾನೆ, ಅದು ಮುಖ್ಯ.



134

(ವಚನ : ಯೆರೆಮೀಯ ೩೧:೩)
ನಾನು ನಿನ್ನನ್ನು ಪ್ರೀತಿಸುತ್ತಿರುವುದು ಶಾಶ್ವತ ಪ್ರೇಮದಿಂದಲ್ಲೇ.

೪ – ಅಕಸ್ಮತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ



135

(ವಚನ : ಕೀರ್ತನೆಗಳು ೧೦೦:೫)
ದಾವೀದನು ಹೀಗೆ ಬರೆಯುತ್ತಾನೆ: ಯೆಹೋವನು ಒಳ್ಳೆಯವನು ; ಆತನ ಪ್ರೀತಿಯು ತಲತಲಾಂತರಕ್ಕೂ ಇರುವದು. ಕೀರ್ತನೆಗಳು ೧೦೦;೫
ದೇವರು ನಮ್ಮನ್ನು ಎಂದಿಗೂ ಕೈ ಬಿಡುವುದ್ದಿಲ್ಲ ! ನಾವು ಜೀವಿಸುವ ಒಂದೊಂದು ಕ್ಷಣವೂ ಆತನು ನಮ್ಮೊಂದಿಗಿರುತ್ತಾನೆ ಮತ್ತು ನಮ್ಮನ್ನು ಎಂದಿಗೂ ತೊರೆಯುವುದಿಲ್ಲ!
ದೇವರ ಪ್ರೀತಿಯ ಬಗ್ಗೆ ನಮ್ಮ ಮನಸ್ಸಿನಲ್ಲಿ ಅಲ್ಪ ಸ್ವಲ್ಪ ಸಂದೇಹ ಉಳಿದಿದ್ದರೆ, ನಮಗೆ ಅರ್ಥವಾಗುವಂತಹ ಸರಳ ಭಾಷೆಯಲ್ಲಿ ಆತನು ಹೀಗೆ ಹೇಳುತ್ತಾನೆ:



136

(ವಚನ ೩ ಸ್ಲೈಡುಗಳು ; ಯಶಾಯ ೪೯:೧೫,೧೬)
ಒಬ್ಬ ಹೆಂಗಸು ತಾನು ಹೆತ್ತ ಮಗುವಿನ ಮೇಲೆ ಕರುಣೆಯಿಡದೆ ತನ್ನ ಮೊಲೆ ಕೂಸನ್ನು ಮರೆತಾಳೇ?



137

ಒಂದು ವೇಳೆ ಮರೆತಾಳು, ನಾನಾದರೋ ನಿನ್ನನ್ನು ಮರೆಯೆ.



138

ಇಗೋ, ನನ್ನ ಅಂಗೈಗಳಲ್ಲಿ ನಿನ್ನನ್ನು ಚಿತ್ರಿಸಿದ್ದೇನೆ
ಯಶಾಯ ೪೯:೧೬


139

ದೇವರು ಮನುಷ್ಯರ ಮೇಲೆ ತಾನಿಟ್ಟಿರುವ ಪ್ರೀತಿಯನ್ನು ತೋರಿಸಲು ಪ್ರಯತ್ನಿಸಿದನು. ಆದರೆ ಪ್ರವಾದಿಗಳು ಮತ್ತು ದೇವದೂತರುಗಳ ಮೂಲಕ ಕಳುಹಿಸಿದ ಸಂದೇಶಗಳು ಸಾಕಾಗಲಿಲ್ಲ. ನಾವು ಆ ಸಂದೇಶವನ್ನು ಸರಿಯಾಗಿ ತಿಳಿದುಕೊಳಲಿಲ್ಲ.


140

ಆದುದರಿಂದ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಯೇಸು ಸ್ವಾಮಿಯವರು ತಂದೆಯಾದ ದೇವರ ವ್ಯಕ್ತಿತ್ವ ಹಾಗೂ ಗುಣಾತಿಶಯಗಳ ಪರಿಪೂರ್ಣ ಪ್ರಕಟಣೆಯಾಗಿದ್ದರು.

೪ – ಅಕಸ್ಮಾತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ



141

(ವಚನ : ಯೋಹಾನ ೧೪:೯)
ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ ಎಂದು ಯೇಸು ಹೇಳಿದನು.


142

ದೇವರು ಹೇಗಿದ್ದಾನೆ ಮತ್ತು ನಮ್ಮ ಬಗ್ಗೆ ಆತನ ಭಾವನೆಗಳೇನು ಎಂಬ ುದನ್ನು ಖಚಿತವಾಗಿ ತಿಳಿದುಕೊಳ್ಳಲು ನೀವು ಇಚ್ಛಿಸಿದಲ್ಲಿ, ಯೇಸುವಿನ ಜೀವನವನ್ನು ಅಧ್ಯಯನ ಮಾಡಬೇಕು. ನಮ್ಮ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದಕ್ಕೋಸ್ಕರ ಆತನು ನಮ್ಮ ಸ್ವಭಾವವನ್ನು ಧರಿಸಿಕೊಂಡನು. ಬಡವರಿಗೆ ರಕ್ಷಣೆವೆಂಬ ಶುಭ ಸಮಾಚಾರವನ್ನು ಸಾರಿದನು. ಆತನು ದುಃಖದಿಂದ ಕುಗ್ಗಿಹೋದವರನ್ನು ಸಂತೈಸಿದನು ಮತ್ತು ಕುರುಡರಿಗೆ ಕಣ್ಣು ಕೊಟ್ಟನು.


143

ಹಸಿದವರಿಗೆ ಆಹಾರ ಕೊಟ್ಟನು ಮತ್ತು ಸಾಧಾರಣ ಜನರೊಂದಿಗೆ ಅವರ ಮನೆಯಲ್ಲಿ ಊಟಮಾಡಿದನು. ಯೇಸುವು ಅವರ ಪಾಪಗಳನ್ನು ಕ್ಷಮಿಸಿ ಭವಿಷ್ಯದ ಒಂದು ನೀರೀಕ್ಷೆ ಕೊಟ್ಟನು.


144

ಅನೇಕರು ಆತನನ್ನು ಪ್ರಥಮ ಬಾರಿಗೆ ನೋಡಿದರು, ಮೊದಲನೆಯದಾಗಿ ಆತನ ಸ್ವರವನ್ನು ಕೇಳಿದವರು ಅನೇಕರು . ಆತನು ಅನೇಕ ಊರುಗಳಲ್ಲಿ ಸಂಚರಿಸಿ ನಿತ್ಯಜೀವದ ಸಂತೋಷವಾದ ವರ್ತಮಾನವನ್ನು ಸಾರಿದನು. ಆತನು ತನ್ನನ್ನು ತಾನೆ ನಿರಾಕರಿಸಿ ಇತರರಿಗಾಗಿ ಚಿಂತಿಸಿದನು.



145

ಯೇಸುಕ್ರಿಸ್ತನು ತಾಳಿಕೊಂಡ ನಾಚಿಕೆ, ಅವಮಾನ ನಿಂದೆ, ಕಲ್ವಾರಿ ಶಿಲುಬೆಯ ಮೇಲೆ ಆತನ ಮರಣ
ಮೊದಲಾದುವುಗಳನ್ನು ನೆನಸಿಕೊಂಡಾಗ ದೇವರು ತನ್ನ ಮಕ್ಕಳ ಮೇಲಿಟ್ಟಿರುವ ಪ್ರೀತಿಯನ್ನು ಸ್ವಲ್ಪವಾಗಿ ತಿಳಿದುಕೊಳ್ಳಲು ಸಾದ್ಯವಾಗುತ್ತದೆ.



146

(ವಚನ : ಯೋಹಾನ ೩:೧೬)
ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. . .



147

ಆತನನ್ನು ನಂಬುವ ಒಬ್ಬನಾದರು ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.
ಯೋಹಾನ ೩:೧೬

೪ – ಅಕಸ್ಮತ್ತಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೋ


148

ಸಮಸ್ತ ವಿಶ್ವದ ಈ ದೇವರು ಯಾರು? ಆತನು ಮಹಾಶಕ್ತಿಶಾಲಿಯಾದ ಸೃಷ್ಠಿ ಕರ್ತನು. ಆತನು ಅದ್ಬುತವಾಗಿ ಜನರ ಅಗತ್ಯಗಳನ್ನು ಒದಗಿಸುವವನು. ಆತನು ನಂಬಲಸಾಧ್ಯವಾದ ರೀತಿಯಲ್ಲಿ ನಮ್ಮನ್ನು ರೂಪಿಸಿದವನು. ಆತನು ಪ್ರೀತಿ ಸ್ವರೂಪಿಯಾದ ತಂದೆ.



149

ಅನೇಕ ವರ್ಷಗಳ ಹಿಂದೆ ಒಬ್ಬ ಸಣ್ಣ ಬಾಲಕನು ಅಪಘಾತಕ್ಕೆ ಈಡಾದನು. ಆಸ್ಪತ್ರೆಗೆ ಸೇರಿಸಲ್ಪಟ್ಟ ಅವನ ಸ್ಥಿತಿಯೂ ಬಹಳ ಗಂಭೀರವಾಗಿತ್ತು.ಅವನಿಗೆ ತಕ್ಷಣ ರಕ್ತ ಕೊಡಬೇಕಾಗಿತ್ತು, ಅದರೆ ರಕ್ತದಾನಿಗಳಾರೂ ಕಂಡು ಬರಲಿಲ್ಲ. ಆತನ ತಂದೆಯು ಅದೇ ಗುಂಪಿನ ರಕ್ತಹೊಂದಿದ್ದು, ಮಗನಿಗೆ ರಕ್ತದಾನ ಮಾಡಲು ಒಪ್ಪಿದರು.
ವೈದ್ಯರು ತಂದೆಯ ಕೈಯಿಂದ ಮಗನಿಗೆ ನೇರವಾಗಿ ರಕ್ತ ಪೂರೈಸಲು ಆರಂಭಿಸಿದರು. ಪ್ರಜ್ಞೆಯಿಲ್ಲದೆ ನಿಶ್ಚಲವಾಗಿದ್ದ ಮಗನ ಶರೀರಕ್ಕೆ ತನ್ನ ರಕ್ತ ಪೂರೈಕೆಯಾಗುವುದನ್ನು ಕಂಡ ತಂದೆಯು ಕಣ್ಣೀರಿಡುತ್ತಾ ವೈದ್ಯರಿಗೆ ಡಾಕ್ಟರೇ, ನಿಮಗೆ ಬೇಕೆನಿಸಿದರೆ ನನ್ನ ಎಲ್ಲಾ ರಕ್ತವನ್ನು ತೆಗೆದುಕೊಳ್ಳಿ. ನನ್ನ ಮಗನಿಗಾಗಿ ನನ್ನ ಎಲ್ಲಾ ರಕ್ತವನ್ನು ಕೊಡಲು ನಾನು ಸಿದ್ದ ಎಂದು ಹೇಳಿದರು.


150

ಪರಲೋಕದ ನಮ್ಮ ತಂದೆಯೂ ಸಹ ತಾನು ಸೃಷ್ಠಿಸಿದ ಈ ಲೋಕವು ಪಾಪದಿಂದ ನಾಶವಾಗಿರುವುದನ್ನು ಕಂಡನು. ಪರಲೋಕದ ಸರ್ವಸ್ವವನ್ನು ತನ್ನ ಮಗನ ಮೂಲಕ ದೇವರು ಕೊಟ್ಟನು. ಯೇಸುಸ್ವಾಮಿಯವರು ತಂದೆಯಾದ ದೇವರಿಗೆ ತಂದೆಯೇ ನಿನಗೆ ಅಗತ್ಯವೆನಿಸಿದರೆ ಎಲ್ಲವನ್ನೂ ತೆಗೆದುಕೋ. ಭೂಲೋಕದ ನನ್ನ ಮಗ, ಮಗಳು ಮತ್ತು ಸ್ನೇಹಿತನನ್ನು ರಕ್ಷಿಸಲು ನನ್ನ ಪ್ರತಿ ರಕ್ತ ಹನಿ ತೆಗೆದುಕೋ ಎಂದು ಹೇಳಿದನು.


151

ಅಂತಹ ಪ್ರೀತಿಗೆ ನೀವು ಹೇಗೆ ವಿಮುಖರಾಗುವಿರಿ?
ಸರ್ವಶಕ್ತನಾದ ಪ್ರೀತಿಸ್ವರೂಪನಾದ ದೇವರು ನಿಮ್ಮನ್ನು ಸೃಷ್ಠಿಸಿದನು. ಮಾನವ ಜನಾಂಗವು ಪಾಪ ಮಾಡಿದಾಗ, ದೇವರು ನಮಗಾಗಿ ಎಲ್ಲವನ್ನು ಕೊಟ್ಟನು. ಆತನಿಗೆ ನಾವು ಬಹಳ ಅಮೂಲ್ಯವಾದವರು. ಆಶ್ಚರ್ಯಕರವಾದ ಕೃಪೆಯಿಂದ ದೇವರು ನಿಮ್ಮನ್ನು ಪ್ರೀತಿಸುವನು. ಈಗ ಪ್ರಾರ್ಥನೆ ಮಾಡುವಾಗ ನಿಮ್ಮ ಕೈಗಳನ್ನು ಮೇಲೆತ್ತಿ ಕರ್ತನೇ, ನನ್ನ ಹೃದಯವನ್ನು ನಿನಗಾಗಿ ಸಮರ್ಪಿಸುತ್ತಿದ್ದೇನೆ, ನನ್ನನ್ನು ಸೃಷ್ಠಿಸಿ ಪಾಪದಿಂದ ವಿಮೋಚನೆ ನೀಡಿದ್ದಕ್ಕಾಗಿ ನಿನಗೆ ವಂದನೆಗಳು, ನನ್ನನ್ನು ಸಂಪೂರ್ಣವಾಗಿ ಈಗ ನಿನಗೆ ಒಪ್ಪಿಸುತ್ತೇನೆ.

೩ – ಪುರಾತನ ಸುರುಳಿಯ ಮರ್ಮಗಳು.



1

ಅವು ನಿಮಗೆ ಯಾವ ಅರ್ಥವನ್ನು ನೀಡುತ್ತವೆ ?


2

ಕೆಲವು ವರ್ಷಗಳ ಹಿಂದೆ ಶ್ರೀ ಮಾರ್ಶ್ ಎಂಬುವನು ಆತನ ಚಿಕ್ಕಮ್ಮ ಸತ್ತಿದ್ದಾಳೆ. ಆದರೆ ಆಕೆಯ ಇಷ್ಟ ಪತ್ರದಲ್ಲಿ ಆತನನ್ನು ಸೇರಿಸಿದ್ದಳು. ಪತ್ರದಲ್ಲಿ ಮಾರ್ಶ್‌ಗೆ ನನ್ನ ಕುಟುಂಬದ ವೇದವನ್ನು ಅದರಲ್ಲಿರುವದನ್ನೆಲ್ಲಾ ಕೋಡುತ್ತೇನೆ. ಆದರ ಜೊತೆ ಆಸ್ತಿಯನ್ನು ಕೊಡುತ್ತೇನೆಂದು ಮರಣದ ಪತ್ರದಲ್ಲಿ ತಿಳಿಸಿತ್ತು.

ಸಾಲಕೊಟ್ಟ ನಂತರ, ಸ್ವಲ್ಪ ಹಣ ಮಾತ್ರ ಉಳಿಯಿತು. ಹಣ ಬೇಗನೆ ತೀರಿತು. ಆದರೆ ಕುಟುಂಬದಿಂದ ಸತ್ಯವೇದ ಮಾತ್ರ ಉಳಿಯಿತು. ಆ ವೇದವನ್ನು ಒಂದು ಪಟ್ಟಿಗೆಯಲ್ಲಿ ಹಾಕಿ ಮೇಲೆ ಇಟ್ಟನು. ೩೦ ವರ್ಷಗಳ ಕಾಲ ಬಡತನದಲ್ಲಿ ಜೀವಿಸಿದನು.



3

(ವಿಡಿಯೋ ೯ ಸಕೆಂಡುಗಳು)

ಕೊನೆಯಲ್ಲಿ ಆತನಿಗೆ ೯೦ ವರ್ಷ ವಯಸ್ಸಾದಾಗ, ಮಗನ ಮನೆಗೆ ಹೋಗಲು ನಿರ್ಧರಿಸಿದನು. ಸಾಮಾನುಗಳನ್ನು ಸಾಗಿಸುತ್ತಿರುವಾಗ ಚಿಕ್ಕಮ್ಮನ ಸತ್ಯವೇದವನ್ನು ತೆಗೆದು ಏನಿದೆ ಎಂದು ನೋಡಿದನು. ಮಾರ್ಶ್ ಒಳಗಿದ್ದ ಬ್ಯಾಂಕ್ ನೋಟುಗಳನ್ನು ಕಂಡು ಆಶ್ಚರ್ಯ ಪಟ್ಟನು. ೫೦೦೦ ಡಾಲರ್ ನೋಟುಗಳಿದ್ದವು. ಆತನು ಐಶ್ವರ್ಯವಂತನಾಗಿರಬಹುದಿತ್ತು. ಆದರೆ ಆತನು ಬಡತನದಲ್ಲಿಯೇ ಕಳೆದನು. ದೇವರ ವಾಕ್ಯದಲ್ಲಿ ಬೊಕ್ಕಸವಿತ್ತು.

ನಮಗೂ ಕೂಡ ಪಕ್ಕದಲ್ಲೇ ಆಶ್ಚರ್ಯನೀಡುವ ಬೊಕ್ಕಸ ಹತ್ತಿರವಿರಲು ಸಾದ್ಯ್ವೋ ? ಲಕ್ಷಾಂತರ ಜನರು ಸತ್ಯವೇದವು ಬಹು ಬೆಲೆಯುಳ್ಳ ಪುಸ್ತಕವೆಂದು ನಂಬುತ್ತಾರೆ. ಸತ್ಯ ವೇದವು ದೈವ ಪ್ರೇರಿತವಾದ ಪುಸ್ತಕವೆಂದು, ನಿತ್ಯ ಜೀವನವನ್ನು ಹೊಂದಲು ಮಾರ್ಗದ ತಿಳುವಳಿಕೆ ಇದೆ ಎಂದು ಅನೇಕರಿಗೆ ತಿಳಿದಿದೆ.


ಪ್ರತಿ ದೇಶದಲ್ಲಿ ಭಾಷೆಯನ್ನು ದೇವರ ವಾಕ್ಯವನ್ನು ಜೀವನವಲ್ಲಿ ಬದಲಿಸುವ ಸಂಪತ್ತೆಂದು ಅಂಗೀಕರಿಸಿದ್ದಾರೆ.

ಬೇರೆ ಜನರಿಗೆ ತೀವ್ರ ಸಂದೇಹಗಳಿವೆ. ಆವರಿಗೆ ತುಂಬಾ ಪ್ರಶ್ನೆಗಳಿವೆ.

೫ – ಪುರಾತನ ಸುರುಳಿಯ ಮರ್ಮಗಳು.


4

ಈ ಲೋಕದಲ್ಲಿ ಹೆಚ್ಚಾಗಿ ಮಾರಲ್ಪಡುವ ಪುಸ್ತಕದ ಸತ್ಯ ವೇದದ ವಿಚಾರವೇನು ? ಇದರ ಮೇಲೆ ಬರವಸೆ ಇಡಬಹುದೋ ? ಆದು ಸತ್ಯವೇದವನ್ನು ಹೇಳುತ್ತದೊ ? ಯಾವ ಸಂದೇಹವಿಲ್ಲದೆ ನೀವು ಭರವಸೆ ಇಡಬಹುದೆಂದು ಕೆಲವರು ಹೇಳುತ್ತಾರೆ. ಕೆಲವರು ಅದನ್ನು ನಂಬ ಲಾಗದೆನ್ನುತ್ತಾರೆ. ಯಾರು ಸರಿ?



5


ಸಾತ್ಯವೇದವು ಸತ್ಯವಾಗಿದ್ದರೆ ಉತ್ತರವು ಪ್ರಧಾನವಾದದ್ದಾಗಿದೆ. ನೀವು ಅದರ ಮೇಲೆ ಭರವಸೆ ಇಡುವದು ಇಡದಿರುವದು ಜೀವ ಮರಣಕ್ಕೆ ಸಂಭಂದ ಪಟ್ಟದ್ದು. ಸತ್ಯವೇದವು ನಿಜವಾಗಿದ್ದರೆ ನಿಮ್ಮ ಇಡಿ ನಿತ್ಯವಿಧಿಯು ನೀವು ಅದನ್ನು ನಂಬಿ ಅಂಗೀಕರಿಸುವದರ ಮೇಲೆ ಆತುಕೊಂಡಿದೆ. ದೇವರ ವಿಚಾರ ನೀವು ನಂಬುವದು ಸತ್ಯವೇದದ ಮೇಲೆ ಭರವಸೆ ಇಂದ ಇರುವದರ ಮೇಲೆ ಆತಿದೆ. ದೇವರ ನಿಜವಾದ ಚಿತ್ರವನ್ನು ಪಡೆಯುವ ಒಂದೇ ಸ್ಥಳವು ಸತ್ಯವೇದದಲ್ಲಿದೆ. ಈ ಕಾರಣಕ್ಕಾಗಿ ಸತ್ಯವೇದವು ನಮಗೆ ಕೊಡಲ್ಪಟ್ಟಿತು.


6

ಆತನ ಪ್ರವಾದಿಗಳು ಕಳುಹಿಸಿದ ಸಂದೇಶಗಳ ಮೂಲಕ ಮತ್ತು ಮಗನು ನಮಗಾಗಿ ಪ್ರಕಟಿಸಿದ ವಿಧದಲ್ಲಿ ನಮ್ಮ ಕಣ್ಣಿಗೆ ಕಾಣದ ದೇವರ ವಿಚಾರವಾಗಿ ನಮಗೆ ತಿಳಿಸುತ್ತದೆ.


7

ಈ ದೊಡ್ಡ ಪುಸ್ತಕವನ್ನು ನೋಡೋಣ. ಸತ್ಯವೇದವು ದೇವರ ವಾಕ್ಯವೆಂದು ಕರೆಯಲ್ಪಡುತ್ತದೆ. ಅದು ನಿಜವೋ ಇಲ್ಲವೇ ಸುಳ್ಳೋ ಎಂದು ತಿಳಿಯಲು ಭರವಸೆ ಇಡಬಹುದೋ ಇಲ್ಲವೇ ಇಡಬಾರದೋ ಎಂಬ ಸಿದ್ದಾಂತವನ್ನು ನಾವು ನೋಡೋಣ



8

(ವಿಡಿಯೋ ೬ನೆಕೆಂಡುಗಳು)
ಸತ್ಯವೇದವು ಬರೇ ಒಂದು ಪುಸ್ತಕವಲ್ಲ, ಅನೇಕ ಪುಸ್ತಕಗಳು ಸೇರಿರುವ ಗ್ರಂಥವಾಗಿದೆ,ಸತ್ಯ ವೇದದಲ್ಲಿ ೬೬ ಪುಸ್ತಾಕಗಳಿವೆ. ವಿವಿಧ ಸಮಯಗಳಲ್ಲಿ ವಿವಿದ ಗ್ರಂಥಕರ್ತರಿಂದ ಬರೆಯಲ್ಪಟ್ಟವು. ಬರೆ ಹಳೆ ಬಡಂಬಡಿಕೆಯಲ್ಲಿ ೩೯ ಪುಸ್ತಕಗಳಿವೆ. ಹೊಸ ಬಡಂಬಡಿಕೆಯಲ್ಲಿ ೨೭ ಪುಸ್ತಕಗಳಿವೆ.


9

೪೫ ಜನರು ಈ ಪುಸ್ತಕಗಳನ್ನು ಬರೆದರೂ ಹೊಂದಾಣಕೆ ಇದೆ. ಯಾವ ಬಿನ್ನಭಿಪ್ರಾಯವಿಲ್ಲ. ಬರೆದವರು ಒಬ್ಬರನ್ನೊಬ್ಬರು ನೋಡದೆ ಇದ್ದರೂ ಎಲ್ಲರೂ ಒಬ್ಬರಿಗೊಬ್ಬರು ಒಪ್ಪಿಕೊಳ್ಳುತ್ತಾರೆ.

೩ – ಪುರಾತನ ಸುರುಳಿಯ ಮರ್ಮಗಳು.



10

ಅವರು ವಿವಿಧ ವೃತ್ತಿಯಲ್ಲಿದ್ದವರು. ಕೆಲವರು ಬೆಸ್ತರು, ಕೆಲವರು ಕುರುಬರು, ಕೆಲವರು ರಾಜರು, ಕೆಲವರು ಸರ್ಕಾರಿ ನೌಕರರು, ಕೆಲವರು ರೈತರು, ಕೆಲವರು ಉಪನ್ಯಾಸಕರು, ಕೆಲವರು ರಾಜಕಾರಣಿಗಳು, ಓಬ್ಬನು ವೈದ್ಯನು.




11

(ವಿಡಿಯೋ ೧೩ ಸೆಕೆಂಡುಗಳು)
ಅವರು ಬರೆದ ಪುಸ್ತಕಗಳಲ್ಲಿ ಪರಿಪೂರ್ಣತೆ ಮತ್ತು ಹೊಂದಾಣಿಕೆ ಇದೆ. ಇದು ಒಂದು ಅದ್ಬುತವಾಗಿದೆ. ದೇವರು ಈ ಪುಸ್ತಕವನ್ನು ನಮಗೆ ಕೊಟ್ಟನು. ಇದರಿಂದ ನಮಗೆ ಆತನ ಚಿತ್ತವನ್ನು ತಿಳಿಸಲು ಮಾರ್ಗವಾಯಿತೆಂಬ ತೀರ್ಮಾನಕ್ಕೆ ನಾವು ಬರುತ್ತೇವೆ.




12

(ವಚನ ೨ ಪೇತ್ರ ೧:೨೧)
ಪೇತ್ರನು ಹೀಗೆ ಬರೆದನು. ಯಾವ ಪ್ರವಾದನೆಯು ಎಂದೂ ಮನುಷ್ಯನ ಚಿತ್ತದಿಂದ ಉಂಟಾಗಲಿಲ್ಲ. ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು ೨ ಪ್ರೇತ್ರ ೧:೨೧




13

(ವಚನ ೨ತಿಮೋಥಿ ೩:೧೬–೧೭)
ಅಪೋಸ್ತಲನಾದ ಪೌಲನು ಹೀಗೆ ಬರೆದನು. ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೆ ಕೊಡಲ್ಪಟ್ಟಿದೆ.



14

ಖಂಡನೆಗೂ, ತಿದ್ದುಪಾಟಿಗೂ, ನೀತಿಶಿಕ್ಷೆಗೂ ಉಪಯುಕ್ತವಾಗಿದೆ.



15

ಅದರಿಂದ ದೇವರು ಮನುಷ್ಯನು ಪ್ರವೀಣಗಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ದನಾಗುವನು. ೨ ತಿಮೋಥಿ ೩:೧೬, ೧೭ ಬರವಣಿಗೆ ಮೂಲಕ ಮಾತಾಡಲು ದೇವರು ಆರಿಸಿಕೊಂಡದ್ದು ದೇವರಿಗೂ ಮತ್ತು ಮಾನವನಿಗೂ ಮಧ್ಯೆ ಇದ್ದ ಸಂಭಂದವು ಪಾಪದಿಂದ ಬೇರ್ಪಟ್ಟಿತ್ತು.



16

ದೇವರು ಮತ್ತು ಮಾನವನು ಏದೆನ್ ತೋಟದಲ್ಲಿ ಒಟ್ಟಿಗೆ ನಡೆದಾಡಿದರು ಮತ್ತು ಮಾತಾಡಿದರು. ಆದಕಾರಣ ದೇವರು ಮಾನವನಿಗೆ ತಿಳಿಸಬೇಕಾದದ್ದನ್ನು ಒಬ್ಬ ಪ್ರವಾಡಿಯ ಮೂಲಕ ತಿಳಿಸಬೇಕಾದ ಅಗತ್ಯವಿರಲಿಲ್ಲ.

೫ – ಪುರಾತನ ಸುರುಳಿಯ ಮರ್ಮಗಳು.


17

ಆದಾಮನು ಪಾಪ ಮಾಡಿದಾಗ ದೇವರಿಂದ ಮರೆಯಾದನು, ಆತನು ಮಾಡಿದ ಕಾರ್ಯಕ್ಕೆ ಹೆದರಿದನು ಮತ್ತು ದೋಷಿಯಾದನು,ಎಲ್ಲಿದ್ದೀ ಎಂದು ದೇವರು ಆದಾಮನನ್ನು ಪ್ರಶ್ನಿಸಿದಾಗ ಆದಾಮನು ಹೀಗೆಂದನು.




18

(ವಚನ ಆದಿಕಾಂಡ ೩:೧೦)
ನೀನು ತೋಟದಲ್ಲಿ ಸಂಚರಿಸುವ ಸಪ್ಪಳವನ್ನು ಕೇಳಿ ಹೆದರಿ ಅಡಗಿಕೊಂಡೆನು ಅಂದನು. ಆದಿಕಾಂಡ ೩:೧೦


19

ದೇವರು ಮುಖಾಮುಖಿಯಾಗಿ ಮಾತಾಡಲಾಗಲಿಲ್ಲ. ದೇವರು ಆಶಿಸುವ ಕಾರ್ಯವನ್ನು ಆತನ ಪ್ರವಾದಿಗಳನ್ನು ನಂತರ ಆತನ ಮಗನ ಮೂಲಕ ತಿಳಿಸಲು ಆರಿಸಿಕೊಂಡನು.



20

(ವಚನ ಅಮೋಸ ೩:೭)
ಕರ್ತನಾದ ಯೆಹೋವನು ತನ್ನ ಸೇವಕರಾದ ಪ್ರವಾದಿಗಳಿಗೆ ತನ್ನ ರಹಸ್ಯವನ್ನು ತಿಳಿಸದೆ ಏನೂ ಮಾಡನು.


21

ಮೋಶೆ, ಯೋಬನ ಮತ್ತು ಹಳೆಬಡಂಬಡಿಕೆ ಪುಸ್ತಕಗಳನ್ನು ಬರೆಯಲು ಪವಿತ್ರಾತ್ಮನು. ಪ್ರೇರಿಸಿದನು ಇದು ದರ್ಮಶಾಸ್ತ್ರವೆಂದು ಕರೆಯಲ್ಪಟ್ಟಿದೆ. ಕ್ರಿ. ಪೂ. ೧೫೦೦ ರಲ್ಲಿ ಬರೆಯಲ್ಪಟ್ಟಿತು


22

ಇಸ್ರಾಯೇಲ್ಯರು ಹೆಚ್ಚಿ ದೊಡ್ಡ ಜನಾಂಗವಾದ ನಂತರ ಅನೇಕ ಲಕ್ಷಗಟ್ಟಲೆ ಜನರಾದ ನಂತರ ದೇವರು ತನ್ನ ಚಿತ್ತವನ್ನು ಬರವಣಿಗೆಯ ಮೂಲಕ ತಿಳಿಸುವ ಅಗತ್ಯವಿತ್ತು
ಇದು ಹಿರೋಗ್ಲೆಫಿಕ್ (ಚಿತ್ರಗಳ ಮೂಲಕ ತಿಳಿಯಲು) ಬದಲು ಅಕ್ಷರಗಳು ಕಂಡು ಹಿಡಿಯಲ್ಪಟ್ಟವು.


23

ಜನರು ಈಗ ದೇವರು ಅತನ ಸ್ವಂತ ಬೆರಳುಗಳಿಂದ ಬರೆದ ೧೦ಕಟ್ಟಳೆಗಳನ್ನು ಓದಲು ಸಾದ್ಯವಿದೆ.
ದರ್ಮಶಾಸ್ತ್ರದ ಗ್ರಂಥವನ್ನು ದೇವರಿಗೋಸ್ಕರ ಮೋಶೆ ಬರೆದನು.

೫ – ಪುರಾತನ ಸುರುಳಿಯ ಮರ್ಮಗಳು.




24

ಆದರೆ ಪ್ರಶ್ನೆ ಉಳಿದಿದೆ. ದೇವರು ಕೊಟ್ಟ ಹಾಗೆ ಸತ್ಯವೇದವು ಕ್ರಮ ಬದ್ದವಾಗಿದೆಯೋ? ಮತ್ತು ಅದರ ಮೇಲೆ ಆತು ಕೊಳ್ಳಬಹುದೋ?೧೯೪೭ನೇ ವರ್ಷದವರೆಗೆ ಪುರಾತನ ಪ್ರತಿಗಳು ಅಂದರೆ ಹಳೆ ಬಡಂಬಡಿಕೆಯು ಕ್ರಿ.ಶ ೯೦೦ ರ ತನಕ ನಕಲುಗಳಾಗಿದ್ದವು



25

ಕ್ರಿ. ಪೂ ೧೨೫ ರಲ್ಲಿ ಯೆಶಾಯ ಗ್ರಂಥವು ಸಿಕ್ಕಿತು. ಇದು ಸಂಪೂರ್ಣವಾಗಿತು.



26

ಸರ್ ಪ್ರೆಡ್ರಿಕ್ ಕೆನ್ ಯಾನ್ ತುಂಬಾ ವಿದ್ಯೆಯ ನಿಪುಣನೂ ಮತ್ತು ಬ್ರಿಟಿಷ್ ಶಾಲೆಯ ಭೂ ಸಂಶೋಧನೆಗೆ ಅದ್ಯಕ್ಷರಾಗಿದ್ದವರು ಈ ರೀತಿ ವರದಿನೀಡಿದನು. ೧೬೬ ಪದಗಳ ಒಂದು ಅಧ್ಯಾಯದಲ್ಲಿ ಒಂದು ಸಾವಿರ ವರ್ಷಗಳ ನಂತರ ಒಂದೇ ಪದದ (೩ ಅಕ್ಷರಗಳು) ಪ್ರಶ್ನೆಯಲ್ಲಿವೆ.



27

ಈ ಪದವು ಸಂದೇಶದ ಅರ್ಥವನ್ನು ಬದಲಾಯಿಸಲಾಗಲಿಲ್ಲ.



28

ಸರ್ ಪ್ರೆಡ್ರಿಕ್ ಕೆನ್ ಯಲ್ಲಿ ಈ ರೀತಿ ಹೇಳುತ್ತಾರೆ.



29

ಕ್ರೈಸ್ತನು ಇಡೀ ಸತ್ಯ ವೇದವನ್ನು ಆತನ ಕೈಯಲ್ಲಿ ತೆಗೆದು ಕೋಂಡು ಆತನ ಕೈಯಲ್ಲಿ ನಿಜವಾದ ದೇವರ ವಾಕ್ಯವನ್ನು ಹಿಡಿದಿದ್ದೇನೆಂದು ಭಯ ಮತ್ತು ಅನುಮಾನ ವಿಲ್ಲದೆ ಹೇಳಬಹುದು.



30

ಯಾವುದು ತಪ್ಪಿಹೋಗದೆ ಇಡೀ ಶತಮಾನಗಳಲ್ಲಿ ಒಂದು ಸಂತಾನದಿಂದ ಇನ್ನೊಂದು ಸಂತಾನಕ್ಕೆ ಕೊಡಲ್ಪಟ್ಟಿತು.

೫ – ಪುರಾತನ ಸುರುಳಿಯ ಮರ್ಮಗಳು.



31

ಸರ್ ಪ್ರೆಡ್ರಿಕ್ ಕೆನ್ ಯಾನ್ ಸತ್ಯವೇದ ಹೇಗೆ ಕೊಡಲ್ಪಟ್ಟಿತು. ಈ ರೀತಿ ಕೊಡಲ್ಪಟ್ಟದ್ದು ಈ ಪುಸ್ತಕದ ಸಂದೇಶದ ಮೇಲೆಯಾವ ಪರಿಣಾಮ ಬೀರಿತೆಂದು ತಿಳಿಯಲು ಇಡೀ ಜೀವಮಾನವನ್ನು ಕಳೆದಿದ್ದಾರೆ.


32

ಸತ್ಯವೇದದ ದೋಷ ವಿಮರ್ಷಕರು ಒಂದು ಶತಮಾನದ ಹಿಂದೆ ಸತ್ಯವೇದದ ವಿಚರವಾಗಿ ಅನುಮಾನವನ್ನು ತರಲು ಅನೇಕ ಕಾರಣಗಳನ್ನು ಕಂಡು ಹಿಡಿದರು, ಆದರೆ ಅನೇಕ ದೋಷ ವಿಮರ್ಷಕರು ಭೂ ಸಂಶೋಧನೆಯ ಕಾರ್ಯದಿಂದ ಮೌನರಾದರು.


33

೧೯ ಶತಮಾನಗಳ ವರೆಗೆ ಪುರಾತನ ಕಾರ್ಯವು ಸತ್ಯವೇದವು ಹೇಳುವದನ್ನು ಬಿಟ್ಟರೆ ಏನು ತಿಳಿದಿರಲಿಲ್ಲ.


34

ಪುರಾತನ ಚರಿತ್ರೆಯು ಚಿತ್ರಗಳ ಮೂಲಕ ಮರೆಯಾಗಿದ್ದ ಅಕ್ಷರಗಳನ್ನು ಅರ್ಥಮಾಡಿ ಕೊಳ್ಳಲಾಗಲಿಲ್ಲ. ಇದು ಐಗುಪ್ತ ದವರು ಚಿತ್ರಗಳ ಮೂಲಕ ಉಪಯೋಗಿಸಿದ ಅಕ್ಷರಗಳು. ಐಗುಪ್ತದೇಶದಲ್ಲಿ ಇಲ್ಲವೇ ಇಡೀ ಲೋಕದಲ್ಲಿ ಅವುಗಳನ್ನು ವಿವರಿಸಲು ಆಗಲಿಲ್ಲ.



35

೧೭೯೮ರಲ್ಲಿ ನೆಪೋಲಿಯನ್ ಬಂದು ಸೈನ್ಯ ದೊಡನೆ ಐಗುಪ್ತಕ್ಕೆ ದಂಡ ಯಾತ್ರೆ ಹೋದನು. ಆತನ ಜೊತೆ ೩೮ ಸಾವಿರ ಸಿಪಾಯಿಗಳಿದ್ದರು. ನೆಪೋಲಿಯನ್ ೧೦೦ ಜನ ಚಿತ್ರ ಬರೆಯುವವರನ್ನು ಭಾಷೆಯ ನಿಪುಣರನ್ನು ಕರ ಕೊಂಡು ಹೋದನು; ಮತ್ತು ಆ ದೇಶದ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯಕ್ಕಾಗಿ ವಿಜ್ಞಾನಿಗಳನ್ನು ಕರಕೊಂಡು ಹೋಗಿದ್ದನು


36

ಎಲ್ಲೆಲ್ಲೂ ಅವರು ಹಿಂದಣ ಕಳೇಬರಹಗಳನ್ನು, ಸಿಂಗರಿಸಿದ ಸ್ಮಾರಕಗಳನ್ನು ಮತ್ತು ದೇವರ ಆಲಯದ ಗೋಡೆಗಳನ್ನು ಕಂಡರು. ನೆಪೋಲಿಯನ್ ಮತ್ತು ತಜ್ಞರು ಯಾವ ಪವಿತ್ರ ಸಂದೇಶಗಳನ್ನು ಈ ಚಿತ್ರಗಳು ಒಳಗೊಂಡಿವೆ ಎಂದು ಆಶ್ಚರ್ಯಪಟ್ಟರು.


37

ಒಂದು ವರ್ಷದ ನಂತರ ೧೭೯೯ರಲ್ಲಿ. ಅದು ವರೆಗೆ ನಡೆದಿದ್ದ ಭೂಸಂಶೋದನೆಯ ಅರ್ಥವು ಲಭ್ಯವಾಯಿತು

೩ – ಪುರಾತನ ಸುರುಳಿಯ ಮರ್ಮಗಳು.


38

ನೆಪೋಲಿಯನ್ನಿನ ಒಬ್ಬ ಸಿಪಾಯಿಯು ಅಗೆಯುತ್ತಿರುವಾಗ ರೊಸೆಟ ಕಲ್ಲನ್ನು ತೆಗೆದನು. ಅದು ಕಪ್ಪುಕಲ್ಲಾಗಿದ್ದು ೧೨೨ ಸೆಂಟಿಮೀಟರ್ ಉದ್ದವಾಗಿ ಮತ್ತು ೭೬ ಸೆಂಟಿಮಿಟರ್ ಅಗಲವಗಿತ್ತು (೪ ಅಡಿಉದ್ದ ಮತ್ತು ೨೧/೨ ಅಡಿ ಅಗಲವಾಗಿತ್ತು)ಇದು ಚಿತ್ರದ ಮರ್ಮವನ್ನು ಮತ್ತು ಅನೇಕ ಶತಮಾನದಿಂದ ಬಚ್ಚಿಟ್ಟವುಗಳನ್ನು ತಿಳಿಸಿತು.


39

ರೊಸೆಟಾ ಕಲ್ಲು ಈಗ ಬ್ರಿಟಿಷ್ ವಸ್ತು ಸಂಗ್ರಹ ಶಾಲೆಯಲ್ಲಿ ಇಡಲ್ಪಟ್ಟಿದೆ.



40

ಈ ಕಲ್ಲುಚಪ್ಪಡಿಯು ರೊಸೆಟ ಪ್ರದೇಶದಲ್ಲಿ ಸಿಕ್ಕಿತು. ೩ ತೆರನಾದ ಭಾಷೆಗಳಲ್ಲಿ ಬರೆದಿದೆ. ಚಿತ್ರದ ಬರವಣಿಗೆ, ಐಸುಪ್ತರ ಭಾಷೆ, ಮತ್ತು ಗ್ರೀಕ್ ಭಾಷೆಯಲ್ಲಿದೆ ಚಿತ್ರಗಳ ಮೂಲಕ ಬರೆದಿರುವ ಅಕ್ಷರವನ್ನು ಭಾಷಾಂತರಿಸುವದು ಕಷ್ಟ.



41

ಚಿತ್ರ ಬರಹ, ಡೆಮೊಟಿಕ್ ಮತು ಗ್ರಿಕ್. ಪಂಡಿತರು ಗ್ರಿಕ್ ಬಾಷೆಯವನು ಸುಲಭವಾಗಿ ಭಷಾಂತರಿಸುವರು. ಆಧರೆ ಚಿತ್ರ ಬರಹವ ಕಷ್ಟವಾಗಿತು



42

೨೦ ವರ್ಷಗಳ ನಂತರ ೧೮೨೨ರಲ್ಲಿ ಯವನಸ್ತನಾದ ಪ್ರೆಂಚ್‌ನವನಾದ ಜೇನ್ ಪ್ರಾನ್ ಕೊಯಿಸಾ ಚಂಪೋಲಿಯನ್ ಈ ಚೈತ್ರಗಳ ಭಾಷೆಯು ರೊಸೆಟಾ ಕಲ್ಲಿನಲ್ಲಿ ಇದ್ದುದ್ದನ್ನು ತರ್ಜುಮೆಮಾಡಿದನು


43

ಈ ವಿಧವಾಗಿ ಐಗುಪ್ತದ ಪುರಾತನ ಐಶ್ವರ್ಯವು ಲೋಕದಲ್ಲಿರುವ ತಜ್ಞರಿಗೆ ತೆಗೆಯಲ್ಪಟ್ಟಿತು.



44

ಅದರೆ ಬಹು ಪ್ರಮುಖ್ಯವಾದದ್ದು, ತುಂಬಾ ಕಾಲದಿಂದ ಮರೆಯಾಗಿದ್ದ ಐಗುಪ್ತದ ಚರಿತ್ರೆಯು ಸತ್ಯವೇದವನ್ನು ದೃಡೀಕರಿಸಿತು, ಕಲ್ಲಗಳು ಕೂಗುವದು. ಸತ್ಯವೇದವು ನಿಜವಾದದ್ದೆಂದು ಸಿದ್ದಾಂತ ನೀಡಿತು.

೫ – ಪುರಾತನ ಸುರುಳಿಯ ಮರ್ಮಗಳು.


45

ಹೆಚ್ಚಾದ ಭೂಸಂಶೋಧಕರು ಇನ್ನೂ ಅಗೆಯಲು ಮುಂದುವರಿಸುತ್ತಿದ್ದಾರೆ. ಹಿಂದಣ ನಾಗರೀಕತೆಯ ಚರಿತ್ರೆಯ ದಾಖಲೆಗಳು ಸತ್ಯವೇದದ ಚರಿತ್ರೆಯನ್ನು ದೃಢಿಕರಿಸುತ್ತವೆ.



46

ಮರ್ ಡಕ್ ಗುಡ್ಡದಲ್ಲಿ ಕಂಡು ಹಿಡಿಯಲ್ಪಟ್ಟ ಕಾರ್ಯಗಳು ಭೂಸಂಶೋಧನ ವಿಷಯದಲ್ಲಿ ಚಕಿತಗೊಳಿಸಿದವು. ಸಿರಿಯದಲ್ಲಿ ಈ ಪಟ್ಟಣವು ಎಬ್ಲ ಎಂದು ಕರೆಯಲ್ಪಟ್ಟಿತು ಇದರಲ್ಲಿ ಐಶ್ವರ್ಯದಿಂದಲೂ ಇದ್ದ ಭ್ರಾಂತಿ ಗೊಳಿಸಲು ಸಂಘವಾಗಿದ್ದು ೩೦ ಲಕ್ಷ ಜನರಿದ್ದರು.


47

ಕಂಡು ಹಿಡಿದದ್ದನ್ನು ಕೇಳಿ ಆಶ್ಚರ್ಯ ಪಟ್ಟದ್ದು ಮೃತ್ಯಸಾಗರದ ಬಳಿ ಕಂಡು ಹಿಡಿಯಲ್ಪಟ್ಟ ಸುರುಳಿಗಳಿಂದಲೇ. ಆದರೆ ವಿಧ್ಯಾರ್ಥಿಗಳಿಗೆ ಆಶ್ಚರ್ಯವನ್ನುಂಟು ಮಾಡುತ್ತದೆ.


48

ಪಟ್ಟಣದ ಅರಮನೆಯ ಪಕ್ಕದ ಒಂದು ಬರವಣಿಗೆಯ ಶಾಲೆಯಲ್ಲಿ ೧೪ ಸಾವಿರ ಮಣ್ಣಿನ ಹಲಗೆಗಳು ಮತ್ತು ಚೂರುಗಳು ಕಂಡು ಹಿಡಿಯಲ್ಪಟ್ಟವು. ಕ್ರಿ. ಪೂ ೨೩೦೦ ಎಂದಿತ್ತು.
ಲೋಕದ ಹಳೆಯ ಕಂಡುಹಿಡಿಯಲ್ಪಟ್ಟ ಸರ್ಕಾರದ ರಾಜ್ಯದ ದಾಖಲೆಯು ಒಂದು ಶತಮಾನಕ್ಕಿಂತಲೂ ಹೆಚ್ಚಾಗಿ ಎಬ್ಲಾ ರಾಜ್ಯದ ದಾಖಲೆಗಳು ಕಂಡು ಹಿಡಿಯಲ್ಪಟ್ಟವು.


49

ಇಬ್ರಿಯರು ಮೋಶೆಯ ಕಾಲದಲ್ಲಿ ಬರವಣಿಗೆಯನ್ನು ಅಭಿವೃದ್ಧಿಪಡಿಸಿದರೋ ಎಂದು ಕೆಲವು ಚರಿತ್ರೆಗಾರರು ಪ್ರಶ್ನಿಸಿದರು. ೧೯ನೇ ಶತಮಾನದವರೆಗೆ ಇದನ್ನು ಸಿದ್ದಾಂತ ಪಡಿಸಲು ಯಾವ ಚರಿತ್ರೆಯ ಸಿದ್ದಾಂತವಿರಲಿಲ್ಲ


50

ಹೇಗಿದ್ದರೂ ಎಬ್ಲಾ ಮಣ್ಣಿನ ಹಲಗೆಗಳು ಮತ್ತು ಬೇರೆ ಸಂಶೋಧನೆಗಳು ಮೋಶೆಯ ಕಾಲಕ್ಕಿಂತಿಲೂ ಮುಂದೆ ಬಂದಿವೆ. ಭೂಸಂಶೋಧಕರು ಇಡೀ ಪ್ರಸ್ತಕ ಭಂಡಾರಗಳನ್ನು ಮೋಶೆಗಿಂತಲೂ ಮೊದಲೇ ಇದ್ದವುಗಳೆಂದು ಕಂಡುಹಿಡಿದಿದ್ದಾರೆ.

೫ – ಪುರಾತನ ಸುರುಳಿಯ ಮರ್ಮಗಳು.


51

ಎಬ್ಲಾ ಮಣ್ಣಿನ ಹಲಗೆಗಳು ಸೃಷ್ಟಿಯ ಕತೆ ಮತ್ತು ಒಂದು ಪ್ರಳಯದ ಕಥೆಯನ್ನು ತಿಳಿಸುತ್ತವೆ.
ಸತ್ಯವೇದಕ್ಕೆ ಅನುಗುಣವಾದ ಹೆಸರು ಮತ್ತು ಸ್ಥಾಳಗಳನ್ನು ತಿಳಿಸುತ್ತದೆ.
ಏಸಾವನ, ಅಬ್ರಹಾಮನ ಇಸ್ರಾಯೇಲ್ಲರ, ಸಿನಾಯಿಯ, ಯೆರುಸಲೇಮು ಸಹ ತಿಳಿಸಲ್ಪಟ್ಟಿದೆ.


52


ಪಾಪದ ೨ ಪಟ್ಟಣಗಳಾದ ಸೋದೋಮ್ ಗೊಮೋರಗಳನ್ನು ತಿಳಿಸಿರುವದು ಆಶ್ಚರ್ಯವಾಗಿದೆ. ಈ ಹಲಗೆಗಳನ್ನು ಕಂಡುಹಿಡಿಯಲು ಮೊದಲು ಸತ್ಯವೇದವಲ್ಲದೆ, ಯಾವ ಚರಿತ್ರೆಯ ಸಿದ್ಧಾಂತವಿರಲಿಲ್ಲ. ಇದು ಮರ್ಮದಸ್ಥಳಗಳೆಂದು ಪರಿಗಣಿಸಲ್ಪಟ್ಟಿದೆ.


53

ಕಂಡುಹಿಡಿಯಲ್ಪಟ್ಟ ಕಾರ್ಯಗಳ ವಿಚಾರವಾಗಿ ಅನೇಕ ಪುಸ್ತಕಗಳು ಬರೆಯಲ್ಪಡಬೇಕು. ಆ ದಿನದ ಭೂಗೋಳದ ಹೆಸರುಗಳು ದೃಢೀಕರಿಸಲ್ಪಟ್ಟಿದೆ.


54

ಆದಿಕಾಂಡ ಪುಸ್ತಕವು ಪುರಾತನ ಕುರುಬರ ರಾಗ ಮತ್ತು ಕಥೆಗಳಿಗಿಂತಲೂ ಹೆಚ್ಚಿನವುಗಳಾಗಿವೆ ಎಂದು ಕೆಲವು ಗ್ರಂಥಕರ್ತರು ಒಪ್ಪಿಕೊಳ್ಳಬೇಕು ಎಬ್ಲ ಮತ್ತು ಬೇರೆ ಸ್ಥಳದಲ್ಲಿ ಕಂಡುಹಿಡಿದ ಕಾರ್ಯಗಳು ಸತ್ಯವೇದದ ಅಧಿಕಾರಯುಕ್ತತೆಯನ್ನು ದೃಡೀಕರಿಸುತ್ತದೆ.



55

(ವಚನ ಕೀರ್ತನೆ ೧೧೯:೧೬೦)
ದಾವೀದನು ಹೀಗೆಂದನು. ನಿನ್ನ ವಾಕ್ಯವು ಯುಗ ಯುಗಕ್ಕೂ ಸತ್ಯವಾಗಿರುವದು. ಕೀರ್ತನೆ ೧೧೯:೧೬೦



56

(ವಚನ ಯೆಶಾಯ ೪೫:೧೯)
ಯೇಶಾಯ ೪೫:೧೯ರಲ್ಲಿ ದೇವರು ಹೇಳುತ್ತಾನೆ. ಯೆಹೋವನೆಂಬ ನಾನು ಸತ್ಯಾನುಸಾರ ನುಡಿಯುವವನು, ನೆಟ್ಟನೆಯ ಮಾತುಗಳನ್ನೇ ಆಡುತ್ತೇನೆ.


57

ಸತ್ತವರು ಅಜ್ಜಿಕಥೆ ಹೇಳುವದಿಲ್ಲವೆಂದು ಅವರು ಹೇಳುತ್ತಾರೆ. ಅವರು ಹೇಳುತ್ತಾರೆ.
ಸತ್ತವರು ಮಣ್ಣಿನ ಸಮಾಧಿಗಳಿಂದ ಅದ್ಭುತವಾದ ಕಥೆಗಳನ್ನು ಹೇಳುವರು.
ಚರಿತ್ರೆಯನ್ನು ದೃಢೀಕರಿಸಿ ದೇವರ ವಾಕ್ಯವನ್ನು ದೃಡೀಕರಿಸುತ್ತಾರೆ.

೫ – ಪುರಾತನ ಸುರುಳಿಯ ಮರ್ಮಗಳು.


58

೧೯ ನೇ ಶತಮಾನದವರೆಗೆ ಕೆಲವು ತಜ್ಞರು ಸೆಮಿರಾಮಿಸ್ ರಾಣಿಯು ಬಾಬಿಲೋನನ್ನು ಕಟ್ಟಿದಳೆಂದು ನಂಬಿದರು. ಆದರೆ ಸತ್ಯವೇದದಲ್ಲಿ ನೆಬ ುಕದ್ನೇಚರ ರಾಜನ ವಿಚಾರವಾಗಿ ದಾನಿಯೇಲನು ಹೀಗೆಂದನು.



59

(ವಚನ ದಾನಿಯೇಲ ೪:೩೦)
ನಾನು ಕಟ್ಟಿಕೊಂಡಿರುವದು ಇಗೋ ಮಹಾ ಪಟ್ಟಣವಾದ ಬಾಬೇಲ್.
ದಾನಿಯೇಲ ೪:೩೦ ಯಾರು ಸರಿ?


60

೧೮೯೯ರಲ್ಲಿ ರಾಬರ್ಟ್ ಕೋಲ್ಡ್ ವೇ ಪುರಾತನ ಬಾಬಿಲೋನಿನ ಭೂಸಂಶೋದನೆ ಮಾಡಿದನು. ಸಾವಿರಾರು ಬೆಂದ ಇಟ್ಟಿಗೆಗಳನ್ನು ತೆಗೆದ ಇಟ್ಟಿಗೆಗಳಾಗಿವೆ.



61

ಒಂದು ಹಲಗೆಯಲ್ಲಿ ನೆಬೂಕದ್ನೇಚರನ ಗೆಲ್ಲುವಿಕೆಗಳು ಬಾಬಿಲೋನಿನ ಭೂಸಂಶೋಧಕರಿಂದ ಕಂಡು ಹಿಡಿಯಲ್ಪಟ್ಟಿತು.




62

ಅದರಲ್ಲಿ ರಾಜನು ಈ ರೀತಿ ಹೇಳುತ್ತಾನೆ, ಬಾಬಿಲೋನಿನ ಕೋಟೆಗಳನ್ನು ನಾನು ಭದ್ರಪಡಿಸಿದೆನು, ನನ್ನ ಆಳಿಕೆಯ ಹೆಸರನ್ನು ಸದಾ ಸ್ಥಾಪಿಸಿದೆನು.



63

(ವಚನ ದಾನಿಯೇಲ ೪:೩೦)
ಗರ್ವದ ನೆಬೂಕದ್ನೇಚರನು ಈ ದೊಡ್ಡ ಪಟ್ಟಣವಾದ ಬಾಬಿಲೋನ್ ಎಂದು ಹೇಳಿದ್ದನ್ನು ಸತ್ಯವೇದವು ತಿಳಿಸುತ್ತದೆ.



64

ನನ್ನ ಮಹಿಮೆಯು ಪ್ರಸಿದ್ಧಿಗೆ ಬರುವಂತೆ ನನ್ನ ಸಾಮರ್ಥ್ಯ ಬಲದಿಂದ ರಾಜ ನಿವಾಸಕ್ಕಾಗಿ ನಾನು ಕಟ್ಟಿಸಿ ಕೊಂಡಿರುವದು
ದಾನಿಮೇಲ ೪:೩೦


65

ಪೂರ್ವ ಇಂಡಿಯ ಮನೆಯ ಬರವಣಿಗೆ ಈಗ ಲಂಡನ್ ನಲ್ಲಿದೆ. ಬಾಬಿಲೋನಿನ ಬರವಣಿಗೆಯ ಕಂಬಗಳು ನೆಬೂಕದ್ನೇಚರನ ದೊಡ್ಡ ಕಟ್ಟಡಗಳ ಮತ್ತು ಆತನ ಕಾರ್ಯಗಳನ್ನು ತಿಳಿಸುತ್ತದೆ

೫ – ಪುರಾತನ ಸುರುಳಿಯ ಮರ್ಮಗಳು.


66


ಚರಿತ್ರಯಲ್ಲಿ ಬಾಬಿಲೋನನ್ನು ಆಳಿದ ಬೆಲ್ಶಚ್ಚರನ ವಿಚಾರವಾಗಿ ತಿಳಿಸಿಲ್ಲ. ಸತ್ಯವೇದವು ಜೌತಣ ಅರಮನೆಯ ಗೋಡೆಯಲ್ಲಿನ ಬರವಣಗೆಯನ್ನು ಬಾಬಿಲೋನಿನಲ್ಲಿ ಬೆಲ್ಶೆಚ್ಚರನು ನೋಡಿದನೆಂದು ಸತ್ಯವೇದವು ತಿಳಿಸುತ್ತದೆ.ದಾನಿಯೇಲನ ಮನಸ್ಸಿನ ಕಂಡುಹಿಡಿಯುವಿಕೆ ಆಗಿದೆಯೋ? ಇಲ್ಲವೇ ಇಲ್ಲ.


67

ನೆಬೂಕದ್ನೇಚರನ ನಂತರ ಬಂದ ನೆಬೋನೆಡಿಯಸ್, ಈತನು ಅರಬಿಯದ ತೇಮ ಎಂಬಲ್ಲಿ ೧೦ ವರ್ಷಗಳು ಇದ್ದಾಗ,
ಆತನ ಮಗನಾದ ಬೆಲ್ಶೆಚ್ಚರನಿಗೆ ರಾಜ್ಯಭಾರವನ್ನು ವಹಿಸಿದನು.



68

ಭೂಸಂಶೋಧಕರು ಕಂಡು ಹಿಡಿದ ಮಣ್ಣಿನ ಹಲಗೆಗಳಲ್ಲಿ, ರಾಜ್ಯವು ರಾಜ ಕುಮಾರನಾದ ಬೆಲ್ಶೆಚ್ಚರನಿಗೆ ಒಪ್ಪಿಸಲ್ಪಟ್ಟತೆಂದು ಹೇಳುತ್ತದೆ, ಅದರಲ್ಲಿ ಬ ರೆದಿರುವದು ಹೀಗಿದೆ.




69

ನನ್ನ ಉತ್ತಮ ಮಗನಾದ ಬೆಲ್ಶೆಚ್ಚರನಿಗೆ ನನ್ನ ದೇಹದ ಪುತ್ರವಾದವನಿಗೆ, ಆತನ ಹೃದಯದಲ್ಲಿ ದೊಡ್ಡ ದೇವರ ಭಕ್ತಿಯನ್ನುಇಡು, ಪಾಪದ ಮಾರ್ಗದಲ್ಲಿ ಆತನು ಹೋಗದಂತೆ ಮಾಡು.




70

ಅತನ ಜೀವನದಲ್ಲಿ ಸಮೃದ್ಧಿ ಇರಲಿ. ಬೆಲೆಶ್ಚರನ ಹೃದಯದಲ್ಲಿ ಮಹತ್ವವಾದ ದೇವರ ಭಕ್ತಿ ಇರಲಿ. ಈತನು ನನ್ನ ಜೇಷ್ಟ ಪುತ್ರನಾಗಿದ್ದಾನೆ.



71

(ವಚನ ದಾನಿವೇಲ ೧೨:೪)
ದಾನಿಯೇಲನ ಕೊನೆಯ ಅಧ್ಯಾಯದಲ್ಲಿ ತಿಳಿಸಿರುವದು ಆಸಕ್ತಿ ನೀಡುತ್ತದಲ್ಲವೋ? ಈ ರೀತಿ ಓದುತ್ತೇವೆ.
ದಾನಿಯೇಲನೇ, ನೀನು ಈ ಮಾತುಗಳನ್ನು ಮುಚ್ಚಿಡು. ಅವುಗಳನ್ನು ಬ ರೆಯುವ ಗ್ರಂಥಕ್ಕೆ ಮುದ್ರೆಹಾಕು. ಅಂತ್ಯ ಕಾಲದವರೆಗೆ ಮರೆಯಾಗಿರಲಿ.



72

ಬಹು ಜನರು ಅತ್ತಿತ್ತ ತಿರುಗುವರು. ತಿಳುವಳಿಕೆಯು ಹೆಚ್ಚುವದು.
ದಾನಿವೇಲ ೧೨:೪
ವಿಜ್ಞಾನದ ಲೋಕದಲ್ಲಿ ಜ್ಞಾನವು ಹೆಚ್ಚುವುದು ಮಾತ್ರವಲ್ಲದೆ ದೇವರ ವಾಕ್ಯವನ್ನು ಸರಿಯಾಗಿ ತಿಳಿಯುವುದರಲ್ಲಿ ಜ್ಞಾನವು ಹೆಚ್ಚುವದು.

೫ – ಪುರಾತನ ಸುರುಳಿಯ ಮರ್ಮಗಳು.



73

ಭೂ ಸಂಶೋದಕರು ಅಗೆದು ತೆಗೆದ ಇಟ್ಟಿಗೆಗಳು, ಕಲ್ಲಿನ ಕಂಬಗಳು, ಮಣ್ಣಿನ ಹಲಗೆಗಳು ಮತ್ತು ಕೈ ಬರಹಗಳು ಸತ್ಯ ವೇದವು ಹೇಳುವುದು ಸತ್ಯವೆಂದು ಸಿದ್ದಾಂತ ಪಡಿಸುತ್ತವೆ.



74

ಸತ್ಯವೇದವು ದೈವ ಪ್ರೇರಿತವಾದ ಪುಸ್ತಕ ಎಂಬುದಕ್ಕೆ ಇನ್ನೊಂದು ಒತ್ತಾಯ ನೀಡುವ ಸಿದ್ದಾಂತವಿದೆ. ಭವಿಷ್ಯತ್ತನ್ನು ಸರಿಯಾಗಿ ಮುಂತಿಳಿಸುವ ಸಾಮರ್ಥ್ಯವಿದೆ.



75

(ವಚನ ಯೇಶಾಯ ೪೬:೯, ೧೦)
ನಾನೆ ದೇವರು; ನನಗೆ ಸರಿಸಮಾನರಿಲ್ಲ



76

ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದೇನೆ. ನನ್ನ ಸಂಕಲ್ಪವು ನಿಲ್ಲುವುದು. ಯೇಶಾಯ ೪೬: ೯, ೧೦


77

ಹೌದು ದೇವರು ಕಾಲದ ಪರದೆಯನ್ನು ಎಳೆಯುವಾಗ ಭವಿಷ್ಯತ್ತಿನ ವಿಚಾರ ತಿಳಿಸುತ್ತಾನೆ. ಸತ್ಯವೇದವು ಬರೀ ಒಂದು ಪುಸ್ತಕವಲ್ಲವೆಂಬ ಸಿದ್ದಾಂತವನ್ನು ಲೋಕಕ್ಕೆ ನೀಡುತ್ತಾನೆ. ಇದು ಆತನ ಪುಸ್ತಕ


78

ಬಾಬಿಲೋನು ಅಧಿಕಾರಕ್ಕೆ ಇಲ್ಲವೇ ಮಹಿಮೆಗೆ ಬರಲು ಮೊದಲೇ ಅದರ ಬೀಳುವಿಕೆಯನ್ನು ಸತ್ಯವೇದವು ಮುಂತಿಳಿಸಿತು.



79

(ವಚನ ಯೇಶಾಯ ೧೩:೧೯)
ಬಾಬಿಲೋನು ರಾಜ್ಯಗಳಿಗೆ ಶಿರೋರತ್ನವು, ಕಸ್ದೀಯದ ಮಹಿಮೆಗೆ ಭೂಷಣವು ಆಗಿದೆ.

೫ – ಪುರಾತನ ಸುರುಳಿಯ ಮರ್ಮಗಳು.



80

ದೇವರು ಕೆಡವಿದ ಸೋದೋಮ್‌ನ ಗೊಮೋರಗಳ ಗತಿಯು ಆಗುವುದು. ಯೇಶಾಯ ೧೩:೧೯
ಈ ಪರಾಕ್ರಮವಾದ ರಾಜ್ಯವನ್ನು ಜಯಿಸುವವರು ಯಾರೆಂದು ಸತ್ಯವೇದವು ಮುಂತಿಳಿಸಿದೆ.



81

(ವಚನ ಯೆರೆಮೀಯ ೫೧:೧೧)
ಬಾಬಿಲೋನನ್ನು ಹಾಳು ಮಾಡಬೇಕೆಂದು ಉದ್ದೇಶಿಸಿ ಮೇದ್ಯರ ಅರಸನು ಅದನ್ನು ನಾಶಮಾಡುವಂತೆ ಅವನ ಮನಸ್ಸನ್ನು ಪ್ರೇರೇಪಿಸಿದ್ದಾನೆ. ಯೆರೆಮೀಯ ೫೧:೧೧


82

ಬಾಬಿಲೋನನಿಗೆ ವಿರುದ್ದವಾಗಿ ಸ್ಯೈನ್ಯವನ್ನು ನಡೆಸುವವನ ಹೆಸರು ಆತನು ಹುಟ್ಟಲು ೧೫೦ ವರ್ಷಗಳ ಹಿಂದೆ ತಿಳಿಸಿದೆ.



83

(ವಚನ ಯೆಶಾಯ ೪೫:೧)
ತಾನು ಅಭಿಷೇಕಿಸಿದ ಕೊರೇಷನಿಗೆ ಹೀಗೆನ್ನುತ್ತಾನೆ. ನಾನು ನಿನ್ನ ಮುಂದೆ ಹೋಗಿ ತಾಮ್ರದ ಕದಗಳನ್ನು ತೆರೆಯುವೆನು. ಯೇಶಾಯ ೪೫ : ೧)
ಸತ್ಯವೇದದ ಪ್ರವಾದನೆಗಳು ನೆರವೇರಿದವೋ? ತಪ್ಪದೆ ನೆರವೇರಿದವು.




84

ಬ್ರಿಟೀಷ್ ವಸ್ತುಪ್ರದರ್ಶನದ ಪರ್ಶಿಯದ ಕೋಣೆಯಲ್ಲಿ ಕೊರೇಷನ ಸ್ಥಂಭವಿದೆ. ಇದು ಬಾಬಿಲೋನಿನಲ್ಲಿ ತೆಗೆಯಲ್ಪಟ್ಟಿತು. ಈ ಸ್ಥಂಭದಲ್ಲಿ ಕೊರೇಷನು ತನ್ನ ಜಯವನ್ನು ತಿಳಿಸುತ್ತಾನೆ. ತಿಳಿಸಿರುವುದು ಸರಿಯಾಗಿದೆ.



85

ಸತ್ಯವೇದವು ಬಾಬಿಲೋನಿನ ನಾಶವನ್ನು ಮುಂತಿಳಿಸಿದ್ದು ಮಾತ್ರವಲ್ಲದೆ, ಮುಂದಿನ ಕಾರ್ಯವನ್ನು ತಿಳಿಸುತ್ತದೆ.



86


(ವಚನ ಯೆರೆಮೀಯ ೫೧:೩೭)
ಬಾಬಿಲೋನು ಹಾಳು ದಿಬ್ಬಗಳಾಗುವುದು
ಯೆರೆಮೀಯ ೫೧:೩೭

೫ – ಪುರಾತನ ಸುರುಳಿಯ ಮರ್ಮಗಳು.



87

(ವಚನ, ಯೇಶಾಯ ೧೩:೨೦, ೨೧)
ಯೇಶಾಯನು ಹೀಗೆ ಬರೆದನು.
ತಲತಲಾಂತರಕ್ಕೂ ಅಲ್ಲಿ ಜನರು ಒಕ್ಕಲಿರರು.



88


ಅದು ಕಾಡು ಮೃಗಗಳಿಗೆ ಹಕ್ಕೆಯಾಗುವುದು, ಅಲ್ಲಿನ ಮನೆಗಳಲ್ಲಿ ಗೂಬೆಗಳು ವಾಸಿಸುವವು. ಯೇಶಾಯ (೧೩:೨೦,೨೧)


89

ದೇವರು ಮಾತ್ರ ಭವಿಷ್ಯತ್ತನ್ನು ನೋಡಿ, ಪರಾಕ್ರಮವಾದ ಬಾಬಿಲೋನಿನ ವಿಧಿಯನ್ನು ಮುಂತಿಳಿಸಬಲ್ಲನು. ಭೂಸಂಶೋದನೆ ಮಾಡಿದ ಆಸ್ಟನ್ ಹೆಚ್ ಲೆಯೊಡ್ ಪುರತನ ಬಾಬಿಲೋನನ್ನು ಕುರಿತು ವಿವರಣೆ ನೀಡುತ್ತಾನೆ.


90

ಆಕಾರವಲ್ಲದೆ ದಿಣ್ಣೆ ಮತ್ತು ಕಸವು ಅನೇಕ ಎಕರೆ ಜಮೀನಿನಲ್ಲಿದೆ. ಬಟ್ಟಬರಿದಾದ ಸ್ಥಳವಾಗಿದೆ.



91

ಗೂಬೆಗಳು ತುಂಬಿಕೊಳ್ಳುವುವು, ತೋಳಗಳು ಕೂಗುವವು. ಬಾಬಿಲೋನ್ ಮತ್ತು ನಿನವೆಯಲ್ಲಿ ಕಂಡು ಹಿಡಿಯಲ್ಪಟ್ಟದ್ದು. ಪುಟ ೪೧೩



92

ಬಾಬಿಲೋನಿನ ಹಿಂದಣ ಮಹಿಮೆಯಲ್ಲಿ ಏನೂ ಉಳಿದಿಲ್ಲ, ಆದರೆ ಅದರ ಹೆಸರು ಬಂದು ಕೈಮರದಲ್ಲಿದೆ. ದೊಡ್ಡ ದಿಣ್ಣೆಗಳು ಚದುರಿರುವುದು, ಸತ್ಯವೇದವು ದೇವಪ್ರೇರಿತವಾದ ಪುಸ್ತಕವೆಂಬುದಕ್ಕೆ ಸಿದ್ಧಾಂತವಾಗಿದೆ.



93

(ವಚನ ಯೇಶಾಯ ೪೦:೮)
ಪ್ರವಾದಿಯ ಜೊತೆ ನಾವು ಒಪ್ಪಿಕೊಳ್ಳಬೇಕು. ಹುಲ್ಲು ಒಣಗಿ ಹೋಗುವುದು, ಹೂವು ಬಾಡಿಹೋಗುವುದು, ನನ್ನ ದೇವರ ಮಾತೋ ಸದಾಕಾಲ ಇರುವುದು.

೫ – ಪುರಾತನ ಸುರುಳಿಯ ಮರ್ಮಗಳು.


94

ಪುರಾತನ ರಾಜ್ಯಗಳ ವಿಚಾರವಾದ ಭವಿಷ್ಯತ್ತನ್ನು ದೇವರು ಅನೇಕ ಶತಮಾನಗಳ ಹಿಂದೆ ಪರಿಷ್ಕಾರವಾಗಿ ಹೇಳಿರುವಾಗ ನಮ್ಮ ಭವಿಷ್ಯತ್ತನ್ನು ಹೀಗಿದೆ ಎಂದು ಸರಿಯಾಗಿ ಮುಂತಿಳಿಸಲು ಆತನು ಜ್ಞಾನವುಳ್ಳವನು, ಮತ್ತು ಸಾಮರ್ಥ್ಯದ ವಿಚಾರವಾಗಿ ಅನುಮಾನ ಪಡದವರಾಗಿರಬೇಕಾಗಿದೆ.


95

ಸತ್ಯವೇದದ ಪ್ರವಾದನೆಯು, ಪರದೆಯನ್ನು ಹಿಂದಕ್ಕೆ ಸರಿಸಿ, ದೇವರು ದೃಷ್ಟಿಯಿಂದ ಭವಿಷ್ಯತ್ತನ್ನು ನೋಡಿ ಲೋಕದ ಗ್ರಹದಲ್ಲಿ ಮಾನವನು ಜೀವಿಸಲು ಭಯನೀಡುವ ಸಮಸ್ಯೆಗಳಿಗೂ ಪರಿಹಾರವಿದೆ ಎಂದು ನಾವು ತಿಳಿಯಬೇಕಾಗಿದೆ.


96

ಸತ್ಯವೇದವು ಆತುಕೊಂಡಿರುವ ಚರಿತ್ರೆಗಿಂತಲೂ ಹೆಚ್ಚಿನದಾಗಿದೆ. ಸರಿಯಾದ ವಿಜ್ಞಾನದ ಅಂಶಗಳೂ, ನೆರವೇರಿದ ಪ್ರವಾದನೆಗಳಿವೆ. ಅದು ಇಲ್ಲದಿದ್ದರೆ ಮಾನವರು ಏನೂ ಮಾಡಿದರೂ ಲಕ್ಷಕ್ಕೆ ಬರುತ್ತಿರಲಿಲ್ಲ.


97

ಈ ಪುಸ್ತಕದ ಮುಖ್ಯ ಅಂಶವು ಎಲ್ಲಕ್ಕೂ ಮೂಲವು ೧೯ ಶತಮಾನಗಳ ಹಿಂದೆ ಕ್ರೂರವಾದ ಶಿಲುಬೆಯ ಮೇಲೆ ಯೆರುಸಲೇಮಿಗೆ ಹೊರಗೆ ಏನಾಯಿತೆಂದು ಹೇಳುತ್ತದೆ. ಇದರ ವಿಚಾರ ನಾವು ನಂಬುವಾಗ ಒಂದು ವ್ಯತ್ಯಾಸವನ್ನು ತರುತ್ತದೆ.



98

ಜೀವಸ್ವರೂಪನಾದ ದೇವರ ಕುಮಾರನು ಶಿಲುಬೆಯ ಮೇಲೆ ಸತ್ತನು, ಇಲ್ಲವೇ ಆತನು ಸಾಯಲಿಲ್ಲ.
ಸತ್ಯವೇದವು ತಿಳಿಸಿರುವ ಹಾಗೆ ಅಂಥವನಾಗಿದ್ದಾನೆ, ಇಲ್ಲವೇ ಅಂಥವನಾಗಿಲ್ಲ.
ಕಲ್ವೇರಿಯ ಭ್ರಮೆಯೋ, ಇಲ್ಲವೇ ನಿಜವಾದದ್ದೋ?
ಇದು ಒಂದು ವ್ಯತ್ಯಾಸವನ್ನು ತರುತ್ತದೆ. ನಮಗೆ ತಿಳಿಯುವ ಅಗತ್ಯವಿದೆ.


99

ಸತ್ಯವೇದವು ತಿಳಿಸುವ ಮಹಾ ಸಿದ್ಧಾಂತವೇನೆಂದರೆ ಈ ಪುಸ್ತಕಕ್ಕೆ ಜೀವಿತಗಳನ್ನು ಬದಲಿಸುವ ಶಕ್ತಿ ಇದೆ.
ಆ ಶಕ್ತಿಯು ಒಬ್ಬ ವ್ಯಕ್ತಿಯಾದ ಯೇಸುಕ್ರಿಸ್ತನಲ್ಲಿದೆ. ಯೇಸು ಹೇಳಿದ್ದು.

೫ – ಪುರಾತನ ಸುರುಳಿಯ ಮರ್ಮಗಳು.




100

(ವಚನ ಯೋಹಾನ ೫:೩೯)
ಶಾಸ್ತ್ರಗಳಿಂದ ನಿತ್ಯ ಜೀವವು ದೊರೆಯುತ್ತದೆಂದು ನೀವು ನೆನಸಿ ಅವುಗಳನ್ನು ವಿಚಾರಿಸುತ್ತೀರಲ್ಲ. ಅವುಗಳೂ ನನ್ನ ವಿಷಯದಲ್ಲಿ ಸಾಕ್ಷಿ ಕೊಡುವವುಗಳಾಗಿವೆ. ಯೋಹಾನ ೫:೩೯.



101

ಯೇಸು ಹಳೆ ಒಡಂಬಡಿಕೆಯನ್ನು ಕುರಿತು ಹೇಳುತ್ತಾನೆ. ಯಾಕೆಂದರೆ ಹೊಸ ಒಡಂಬಡಿಕೆ ಇನ್ನೂ ಬರೆದಿರಲಿಲ್ಲ. ಹಳೆ
ಒಡಂಬಡಿಕೆಯ ಪುಟಗಳನ್ನು ನೀವು ತಿರುಗಿಸಿದರೆ ಮುಂದೆ ಬರಲಿರುವ ಸಮಸ್ಯೆಯನ್ನು ಕುರಿತು ಮತ್ತು ಆತನ ಪ್ರೀತಿಯ ಮತ್ತು ರಕ್ಷಣೆಯ ಸೇವೆಯನ್ನು ಕುರಿತು ಇವುಗಳು ಪ್ರವಾದಿಸುತ್ತವೆ.



102

(ವಚನ ಲೂಕ ೨೪:೪೪)
ಯೇಸು ತನ್ನ ಶಿಷ್ಯರಿಗೆ ಹೀಗೆಂದನು ,
ನಾನು ಇನ್ನೂ ನಿಮ್ಮ ಸಂಗಡ ಇದ್ದಾಗ ನನ್ನ ವಿಷಯವಾಗಿ ಬರೆದಿರುವುದೆಲ್ಲಾ ನೆರವೇರುವುದು ಅಗತ್ಯವೆಂದು ನಿಮಗೆ ಹೇಳಲಿಲ್ಲವೇ ?



103

ನನ್ನ ವಿಷಯವಾಗಿ ಮೋಶೆಯ ದರ್ಮ ಶಾಸ್ತ್ರದಲ್ಲಿಯೂ, ಪ್ರಮಾದಿಗಳ ಗ್ರಂಥಗಳಲ್ಲಿಯೂ, ಕೀರ್ತನೆಗಳಲ್ಲಿಯೂ ಬರೆದಿದೆ.   ಲೂಕ ೨೪:೪೪


104

ಕ್ರಿಸ್ತನ ವಿಚಾರವಾಗಿ ಪ್ರವಾದನೆಯನ್ನು ಹಳೆ ಒಡಂಬಡಿಕೆಯಲ್ಲಿ ತಿಳಿಸಿದೆ ಮತ್ತು ಹೊಸ ಬಡಂಬಡಿಕೆಯು ಆತನ ಜೀವನ ಚರಿತ್ರೆಯಾಗಿದೆ.
ಇಡೀ ಸತ್ಯ ವೇದವು ಯೇಸುಕ್ರಿಸ್ತನ ವಿಚಾರದ ಒಂದು ಪ್ರಕಟಣೆಯಾಗಿದೆ.
ತಂದೆಯು ಯಾರೆಂದು ಸಿದ್ಧಾಂತಪಡಿಸಲು ಯೇಸುಕ್ರಿಸ್ತನು ದಂಗೆಯಿಂದ ಕೂಡಿದ್ದ ಒಂದು ಗ್ರಹಕ್ಕೆ ಬಂದನು.

೫ – ಪುರಾತನ ಸುರುಳಿಯ ಮರ್ಮಗಳು.



105

ಇದಕ್ಕಾಗಿ ಸತ್ಯವೇದವು ಜೀವದ ದೇವರ ವಾಕ್ಯವೆಂದು ಕರೆದಿದೆ.
ಅದು ಹೊಗುವ ಸ್ಥಳಗಳಲ್ಲೆಲ್ಲಾ ಅದ್ಭುತವಾದ ಶಕ್ತಿಯನ್ನು ತೆಗೆದುಕೊಂಡು ಹೋಗುತ್ತದೆ. ಆ ಶಕ್ತಿಯು ಜೀವಿತಗಳನ್ನು ಬದಲಿಸುವದಾಗಿದೆ, ಅದು ಮಾತ್ರವಲ್ಲದೆ ಮಾನವನ ಸ್ವಭಾವವನ್ನು ಬದಲಿಸುತ್ತದೆ, ಬಲಹೀನರಿಗೆ ಬಲವನ್ನು ನೀಡುತ್ತದೆ, ಸೋತವರಿಗೆ ಧೈರ್ಯ ನೀಡುತ್ತದೆ, ಸಾಯುವವರಿಗೆ ನಿರೀಕ್ಷೆಯನ್ನು ನೀಡುತ್ತದೆ.
ಇಡೀ ಚರಿತ್ರೆಯಲ್ಲಿ ಜನರನ್ನು ಬದಲಿಸುವ ಶಕ್ತಿ ಸತ್ಯ ವೇದಕ್ಕಿದೆ ಎಂದು ಪದೇಪದೇ ಸಿದ್ಧಾಂತವಿದೆ. ಸತ್ಯವೇದದ ಶಕ್ತಿಯಿಂದ ಕೋಪಿಷ್ಟರು ಶಾಂತತಗೆ ಬದಲಾಯಿಸಲ್ಪಟ್ಟರು.


106

ಕಾಮಾತುರರು, ವ್ಯಭಿಚಾರಿಗಳು ಶುದ್ದರಾಗಿ ಪವಿತ್ರರಾದರು, ಕುಡುಕರು ಕುಡಿಯುವುದನ್ನು ನಿಲ್ಲಿಸಿದರು, ಕಳ್ಳರು ಕದಿಯುವುದನ್ನು ನಿಲ್ಲಿಸಿದರು, ಮೋಸ ಮಾಡುವವರು ಮೋಸತನವನ್ನು ನಿಲ್ಲಿಸಿದರು.
ಇಂದು ನೀವು ದೂರ ನೋಡಬೇಕಿಲ್ಲ. ಕಠಿಣ ಕೊಲೆಗಾರರು, ಸೆರೆಯಲ್ಲಿದ್ದವರು ಸತ್ಯವೇದದ ಶಕ್ತಿಯಿಂದ ಸಂತೋಷ ಪಡುವ ಕ್ರೈಸ್ತರಾಗಿ ಬದಲಾವಣೆ ಹೊಂದಿದ್ದಾರೆ.


107

ಮದುವೆಯ ವಿವಾಹ ವಿಚ್ಛೇದನಕ್ಕೆ ನಡಿಸುವುದನ್ನು ನಾವು ನೋಡಬೇಕಿಲ್ಲ ಸತ್ಯವೇದದ ಮೂಲಕ ಕುಟುಂಬವು ಕಾಪಾಡಲ್ಪಟ್ಟು ಹೊಸ ಪ್ರೀತಿಯಿಂದ ಬಾಳುತ್ತಾರೆ.
ಪ್ರಮಾಣಿಕತೆಯಿಂದ ಪ್ರತಿದಿನ ಸತ್ಯವೇದವನ್ನು ಓದಿದರೆ ಆತನನ್ನು ಇಲ್ಲವೇ ಆಕೆಯನ್ನು ಬದಲಿಸುತ್ತದೆ.
ನೀವು ಪ್ರತಿನಿತ್ಯ ಸತ್ಯವೇದ ಓದುವದರಲ್ಲಿ ನೀವು ಸಮಯವನ್ನು ಕಳೆದರೆ ಅದು ನಿಮ್ಮನ್ನು ಬದಲಿಸುತ್ತದೆ.


108

ಜನರನ್ನು ಬದಲಿಸಲು ಯೇಸು ಆತನ ಸಮಯವನ್ನು ತೆಗೆದುಕೊಂಡನು.
ಇದೇ ಕ್ರೈಸ್ತ ದರ್ಮದ ತಿರುಳು. ಇದು ಸತ್ಯವೇದದ ತಿರುಳು. ಆತನ ಶಕ್ತಿಯ ಮರ್ಮ ಇದಾಗಿದೆ.



109

(ವಚನ ಯೋಹಾನ ೮:೩೨)
ಮಾನವರನ್ನು ಬದಲಿಸಿದ್ದು ಯಾವ ಶಕ್ತಿ ಎಂದು ಯೇಸುವಿಗೆ ತಿಳಿದಿತ್ತು.
ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು. ಯೋಹಾನ ೮:೩೨.

೫ – ಪುರಾತನ ಸುರುಳಿಯ ಮರ್ಮಗಳು.



110

ಸತ್ಯವು ಮಾನವರನ್ನು ಬಿಡುಗಡೆಮಾಡುತ್ತದೆ.ಇದು ಮಾನವರನ್ನು ಬದಲಿಸುತ್ತದೆ.
ಈ ಸತ್ಯವು ಒಬ್ಬ ಕುಡಕನನ್ನು ಸಭ್ಯನನ್ನಾಗಿಯೂ ಪ್ರೀತಿಸುವ ತಂದೆಯನ್ನಾಗಿ ಮಾಡುತ್ತದೆ.
ಸತ್ಯವು ಮಾದಕ ಪದಾರ್ಥಗಳನ್ನು ತೆಗೆದುಕೊಳ್ಳುವವನನ್ನು ಬಿಡಿಸುತ್ತದೆ.
ಈ ಲೋಕದಲ್ಲಿ ಇಂದು ಮೋಸತನವನ್ನು ಹೆಚ್ಚಾಗಿ ಅಭ್ಯಾಸಿಸುವಾಗ ಸತ್ಯವೆಂದರೆ ಏನೆಂದು ನಾವು ಕೇಳುತ್ತೇವೆ?



111

(ವಚನ ಯೋಹಾನ ೧೭:೧೭)
ಯೇಸು ಉತ್ತರ ನೀಡಿದನು.
ನಿನ್ನ ವಾಕ್ಯವೇ ಸತ್ಯವು. ಯೋಹಾನ ೧೭:೧೭
ಸತ್ಯವೇದ ದೇವರ ವಾಕ್ಯ ಸತ್ಯವಾಗಿದೆ.
ಈ ವಾಕ್ಯದ ಶಕ್ತಿಯು ಸ್ತ್ರೀ ಪುರುಷರ ಹೃದಯಗಳನ್ನು ಬದಲಾಯಿಸಲು ಸಾದ್ಯವಿದೆ.


112

ಬದಲಾಗಲು ಇಷ್ಟವಿರುವವರನ್ನು ಮಾತ್ರ ದೇವರ ವಾಕ್ಯ ಬದಲಾಯಿಸುತ್ತದೆ. ಪುಸ್ತಕದಲ್ಲಿ ತಿಳಿಸಿರುವ ವ್ಯಕ್ತಿಯಾದ ಯೇಸುಕ್ರಿಸ್ತನನ್ನು ಅಂಗೀಕರಿಸುವುದರಿಂದ ಬದಲಾವಣೆ ಬರುತ್ತದೆ. ಸತ್ಯವೇದವನ್ನು ಕಲಿತ ಲಕ್ಷಾಂತರ ಜನರು ಬದಲಾಗಿದ್ದಾರೆ.
ಹೃದಯವನ್ನು ತಾಕಲು ಜೀವಿತಗಳನ್ನು ಬದಲಿಸಲು ಈ ಲೋಕದಲ್ಲಿ ಯಾವ ಹೆಚ್ಚಿನ ಶಕ್ತಿಯೂ ಇಲ್ಲ.
ಸ್ನೇಹಿತನೇ ಸತ್ಯವೇದದ ವಿಚಾರ ಏನು ಮಾಡುತ್ತೀ ಎಂಬುದರಲ್ಲಿ ವ್ಯತ್ಯಾಸ ಕಾಣಬರುತ್ತದೆ.
ದೇವಾಲಯಕ್ಕೆ ಕೊಂಡುಹೋಗುವ, ಇಲ್ಲವೇ ಕಪಾಟಿನಲ್ಲಿ ಇಡುವ ಪುಸ್ತಕಕ್ಕಿಂತಲೂ ಇದು ಹೆಚ್ಚಿನದಾಗಿದೆ. ಸಹಾಯ ನೀಡುವ ಬುದ್ದಿ ಹೇಳುವ ವಿಷಯಗಳಿಗಿಂತಲೂ ಇದು ಹೆಚ್ಚಿನದಾಗಿದೆ.
ದೇವರು ನಮ್ಮ ಹೃದಯಗಳಲ್ಲಿ ಮಾತಾಡುತ್ತಾನೆ, ಈ ಭೂಮಿಯ ಗ್ರಹದಲ್ಲಿರುವ ಆತನ ಮಕ್ಕಳಿಗೆ ಆತನು ಕಳುಹಿಸುವ ಪ್ರೀತಿಯ ಕಾಗದವಾಗಿದೆ. ಉಳಿಯಲು ಮರ್ಮ, ನಿತ್ಯ ಸಂತೋಷ ,ಮನಸ್ಸಿಗೆ ಸಮಾಧಾನ ಇದರಲ್ಲಿದೆ.

೫ – ಪುರಾತನ ಸುರುಳಿಯ ಮರ್ಮಗಳು.



113

(ವಿಡಿಯೋ ೧೨ ಸೆಕೆಂಡುಗಳು)
ಜೀವಿತಗಳನ್ನು ದೇವರ ವಾಕ್ಯದ ಶಕ್ತಿ ಹೇಗೆ ಬದಲಾಯಿಸಿತೆಂಬ ಒಂದು ಕಥೆಯನ್ನು ನಿಮಗೆ ಹೇಳುತ್ತೇನೆ. ಅನೇಕ ವರ್ಷಗಳ ಹಿಂದೆ ಬವುಂಟಿ ಎಂಬ ಒಂದು ಹಡಗಿತ್ತು.ಅಲ್ಲಿ ನಾವಿಕನಾದ ಬ್ಲೈ ಮತ್ತು ಸಂಗಡಿಗರು ಇಂಗ್ಲೇಂಡಿನಿಂದ ಹೊರಟು ಹಣ್ಣಿನ ಮರಗಳನ್ನು ತಂದು ವೆಸ್ಟ್ಇಂಡೀಸ್‌ನಲ್ಲಿ ನಡಲು ಹೋದರು. ಆಗಿನ ಗುಲಾಮರಿಗೆ ಅದು ಕಡಿಮೆ ಬೆಲೆಯ ಆಹಾರವಾಗಿತ್ತು.



114

(ವಿಡಿಯೋ ೭ ಸೆಕೆಂಡುಗಳು)
ಬ್ಲೈಯಿನ ಕ್ರೂರ ನಾಯಕತ್ವ ಮತ್ತು ಜನರ ಜೊತೆ ಸರಿಯಾಗಿ ವರ್ತಿಸದೆ ಇದ್ದಾಗ ಪ್ಲೆಟ್‌ಚರ್ ಕ್ರಿಶ್ಚಿಯನೆಂಬ ದಂಗೆಕೋರ ನಾಯಕನಿದ್ದನು ಈತನ ಬ್ಲೈಯನನ್ನು ೧೮ ಪ್ರಯಾಣಿಕರನ್ನು ಒಂದು ಸಣ್ಣ ದೋಣಿಗೆ ಸಾಗಿಸಿದನು. ಅವರೆಲ್ಲಾ ಇಂಗ್ಲೆಂಡಿಗೆ ಸುರಕ್ಷಿತವಾಗಿ ಸೇರಿದರು. ಯಾಕೆಂದರೆ ನಾವಿಕನಾದ ಬ್ಲೈಯ ಸಾಮರ್ಥ್ಯದಿಂದ ಸಾದ್ಯವಾಯಿತು.



115

(ವಿಡಿಯೋ ೪ ಸೆಕೆಂಡುಗಳು)
ದಂಗೆಕೊರರ ಗುಂಪು ಸರಿಯಾಗಿ ಪ್ರಯಾಣ ಮಾಡಲಾರದೆ ಜನರಿಲ್ಲದ ಪಿಟ್ ಕೆರೀನ್ ದ್ವೀಪವನ್ನು ಸೇರಿದರು.



116

(ವಿಡಿಯೋ ಭಾಗ ೧೦) ದಂಗೆ ಕೋರರು ಬೌಂಟಿ ಎಂಬ ಹಡಗನ್ನು ಸುಟ್ಟರೂ ಗುರಿತಿಸಲಾಗಲಿಲ್ಲ. ಅವರು ತಾಯಿಟಿಗೆ ಬಂದಾಗ ಬ್ಲೈಯವರು ಅಲ್ಲಿದ್ದ ಕೆಲವರನ್ನು ಹೆಂಗಸರು ಮಕ್ಕಳನ್ನು ಕರಕೊಂಡು ಹೋದರು. ಮದ್ಯವನ್ನು ತಯಾರಿಸುವಾಗ ದಂಗೆಕೋರರಲ್ಲಿ ಜಗಳ ಪ್ರಾರಂಭವಾಯಿತು, ಕೊಲೆಗಳಾದವು, ಅಪರಾಧಗಳಾದವು ಮತ್ತು ಜಾನ್ ಆಡಮ್ಸ್ ಎಂಬ ಒಬ್ಬ ವ್ಯಕ್ತಿ ಮತ್ತು ಕೆಲವು ಸ್ತ್ರೀಯರು, ಮಕ್ಕಳೂ ಉಳಿದರು.

೫ – ಪುರಾತನ ಸುರುಳಿಯ ಮರ್ಮಗಳು.



117

(ವಿಡಿಯೋ ೮ ಸೆಕೆಂಡುಗಳು)
ಜಾನ್ ಆಡಮ್ ಡಂಗೆಕೋರರ ಒಂದು ಸತ್ಯವೇದವು ಕಪಾಟಿನಲ್ಲಿ ಸಿಕ್ಕುವವರೆಗೂ ಹುಡಿಕಿದರು. ಆತನು ಓದಲು ಪ್ರಾರಂಭಿಸಿದಾಗ ಆತನಲ್ಲಿ ಹೆಚ್ಚಿನ ಬದಲಾವಣೆ ಕಂಡು ಬಂತು. ಈ ಮಕ್ಕಳಿಗೆ ಮುಂದೆ ಒದಗಿಸುವ ಹೆಚ್ಚಿನ ಜವಾಬ್ದಾರಿಯನ್ನು ತಿಳಿದುಕೊಂಡನು. ಆತನು ಅವರಿಗೆ ಓದುವುದು, ಬರೆಯುವುದು, ಹೇಗೆ ಜೀವಿಸುವುದೆಂದು ಶಿಕ್ಷಣವನ್ನು ನೀಡಿದನು.
ಈ ದ್ವೀಪದ ಜನರಲ್ಲಿ ಆದ ಸಂಪೂರ್ಣ ಬದಲಾವಣೆಯು ಹಾದು ಹೋಗುವ ಹಡಗಿನ ಪ್ರಾಯಣಿಕರ ಗಮನಕ್ಕೆ ಬಂದಿತು. ನಂತರ ಬ್ರಿಟಿಷ್ ಸರ್ಕಾರ ಮತ್ತು ಇಡೀ ಲೋಕದ ಗಮನ ಸೆಳೆಯಿತು.


118

ಈ ಸತ್ಯವೇದವು ನಿಮ್ಮ ಜೀವಿತವನ್ನು ಬದಲಾಯಿಸಬಹುದು. ಸತ್ಯವೇದದ ಬರವಣಿಗೆಗಾರರನ್ನು ದೇವರ ವಾಕ್ಯವನ್ನು ಬರೆಯಲು ಪ್ರೇರೇಪಿಸಿದ ಅದೇ ಪವಿತ್ರಾತ್ಮನು ; ಅದನ್ನು ಕಲಿಯುವಾಗ ನಮ್ಮ ಜೀವಿತಗಳನ್ನು ಬ ದಲಿಸುವನು. ತೆರೆದ ಮನಸ್ಸಿನಿಂದ ಮತ್ತು ಸರಳವಾದ ವಿಶ್ವಾಸದಿಂದ ದೇವರ ವಾಕ್ಯವನ್ನು ಕಲಿಯಲು ಬರೋಣ.
ಓ ಕರ್ತನೇ ನಿನ್ನ ಸತ್ಯವನ್ನು ನನಗೆ ತೋರಿಸು ಅದನ್ನು ಹಿಂಬಾಲಿಸುತ್ತೇನೆ. ಓ ಕರ್ತನೇ ನಿನ್ನ ಜೀವಿತದಲ್ಲಿ ಬದಲಾವಣೆ ಮಾಡುವ ಅಗತ್ಯವಿದ್ದರೆ ನನಗೆ ಪ್ರಕಟಿಸು.
ಒಬ್ಬ ಪ್ರೀತಿಯುಳ್ಳ. ಕ್ಷಮಿಸುವ, ಜೀವನವನ್ನು ಬದಲಿಸುವ ರಕ್ಷಕನನ್ನು ಸಂಧಿಸಲು ನಾನೂ ಕಾಂಕ್ಷೆ ಇಂದ ಇದ್ದೇನೆ. ಇದನ್ನು ನಿನ್ನ ವೇದದಲ್ಲಿ ಕಾಣಲು ಸಹಾಯ ನೀಡೆಂದು ಹೇಳೋಣ.


119

ಹೌದು ಸ್ನೇಹಿತನೇ, ಇದು ಬರೇ ಪುಸ್ತಕವಲ್ಲ. ಇದನ್ನು ಬರೆದ ಗ್ರಂಥ ಕರ್ತರಿಂದ ಒಂದು ಬದಲಾವಣೆ ಕಂಡುಬರುತ್ತದೆ.
ಆ ಗ್ರಂಥ ಕರ್ತರನ್ನು ನಾವು ದೃಷ್ಟಿಸುವಾಗ ನಮ್ಮ ನಂಬಿಕೆ ಹೆಚ್ಚಾಗುತ್ತದೆ. ಆತನನ್ನು ತಿಳಿಯುವುದೆಂದರೆ ಆತನನ್ನು ಪ್ರೀತಿಸಿ ಆತನ ಮೇಲೆ ಬರವಸೆ ಇಡುವುದಾಗಿದೆ.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



1

ಪ್ರೀತಿ ಸ್ವರೂಪಿಯಾದ ದೇವರು ಇಂತಹ ಕಷ್ಟ ಸಂಕಟಗಳನ್ನು ಹೇಗೆ ಬರಮಾಡುವನು?


2

ಕ್ಲಾರಾ ಅಂಡರ್‌ಸನ್ ಎಂಬುವವರು ಅಮೇರಿಕಾ ದೇಶದ ಸ್ಯಾನ್ ಫ್ರಾನ್ಸಿಸ್ಕೋ ಎಂಬ ನಗರದಲ್ಲಿ ಮನೆಕೆಲಸದವರಾಗಿದ್ದರು. ಅವರು ಬಹಳ ಸಭ್ಯ ಸ್ತ್ರೀ, ಸುಮಾರು ೧೫ ವರ್ಷಗಳವರೆಗೆ ಒಬ್ಬರೇ ದಣಿಯ ಮನೆಯಲ್ಲಿ ಕೆಲಸಮಾಡುತಿದ್ದ ಕ್ಲಾರಾ ಒಂದು ದಿನ ಇದ್ದಕ್ಕಿದ್ದಂತೆ ಕಾಣೆಯಾದರು. ಆಕೆಯ ಯಾಜಮಾನರಿಗೆ ಅವರು ಎಲ್ಲಿ ಹೋದರೆಂದು ತಿಳಿದಿರಲಿಲ್ಲ, ಸುಮಾರು ದಿನಗಳಾದ ಮೇಲೆ ಆ ವರ್ಗದ ಸಮಾಜ ಸೇವಾ ಇಲಾಖೆಯೂ ಅವರನ್ನು ಕಂಡು ಹಿಡಿದರು.
ಕ್ಲಾರಾ ಹಸಿವೆಯಿಂದ ಸಾಯುವ ಸ್ಥಿತಿಯಲ್ಲಿದ್ದರು. ಸ್ಯಾನ್ ಫ್ರಾನ್ಸಿಸ್ಕೋ ನಗರದ ಹೊರಭಾಗದ ಗುಡ್ಡವೊಂದರಲ್ಲಿ ಆಕೆಯನ್ನು ಪತ್ತೆಹಚ್ಚಲಾಯಿತು. ನಾನು ಸಾಯಬೇಕು, ನನ್ನನ್ನು ತಡೆಯಬೇಡಿ ಎಂದು ಆಕೆ ಹೇಳಿದಳು. ಪತ್ರಿಕೆಯ ವರದಿಗಾರರೊಬ್ಬರು ಆಕೆಯ ಸಂದರ್ಶನ ತೆಗೆದುಕೊಂಡರು. ಆಗ ಕ್ಲಾರಾ ಹೀಗೆ ಹೇಳಿದರು, ನೋಡಿ, ನಾನು ಯಾರಿಗೂ ಬೇಡವಾಗಿದ್ದೇನೆ, ನಾನೊಬ್ಬಳು ಮನೆಕೆಲಸದವಳು, ಈ ಸಮಾಜದಲ್ಲಿ ಮನೆಕೆಲಸ ಮಾಡುವ ಸಾವಿರಾರು ಜನರಲ್ಲಿ ನಾನೊಬ್ಬಳು, ನನ್ನ ಜೀವನಕ್ಕೆ ಯಾವುದೇ ಬೆಲೆಯಿಲ್ಲ, ನನಗೆ ಕುಟುಂಬವಾಗಲಿ, ಸ್ನೇಹಿತರಾಗಲಿ, ಬಂಧುಗಳಾಗಲಿ ಇಲ್ಲ, ನಾನು ಎಷ್ಟೊಂದು ಅನಾಥಳಾಗಿದ್ದೇನೆಂದರೆ ನನಗೆ ಬದುಕಲು ಇಚ್ಛೆಯಿಲ್ಲ, ನನ್ನವರು ಎನ್ನುವವರು ನನಗೆ ಯಾರು ಇಲ್ಲ, ನಾನು ಯಾರೊಡನೆ ಮಾತಾಡಲಿ, ಯಾರೊಡನೆ ಹೃದಯ ಬಿಚ್ಚಿ ನನ್ನ ದು:ಖವನ್ನು ಹೇಳಿಕೊಳ್ಳಲಿ. ನನ್ನನ್ನು ಯಾರು ಪ್ರೀತಿಸುವುದಿಲ್ಲ, ನಾನು ಸಾಯಬೇಕು.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?


3

ನನಗಾಗಿ ಯಾರು ಚಿಂತಿಸುವುದಿಲ್ಲ, ನನ್ನನ್ನು ಯಾರು ಪ್ರೀತಿಸುವುದಿಲ್ಲ ಎಂಬ ುದು ನಿರಾಶೆಗೊಂಡ ಸ್ತ್ರೀ ಪುರುಷರ ಮೊರೆಯಾಗಿದೆ. ಅಮೇರಿಕಾ ದೇಶದಲ್ಲಿ ದೇವರ ಬಗ್ಗೆ ಒಂದು ಸಮೀಕ್ಷೆ ನಡೆಸಲಾಯಿತು. ಜನರಿಗೆ ದೇವರಿಗೆ ನೀವು ಒಂದು ಪ್ರಶ್ನೆ ಕೇಳಬೇಕಾದರೆ, ಎನು ಕೇಳುವಿರಿ? ಎಂದು ಹೇಳಲಾಯಿತು. ನಿಮ್ಮ ಬಗ್ಗೆ ಏನು? ನೀವು ದೇವರಿಗೆ ಒಂದು ಪ್ರಶ್ನೆ ಕೇಳಬೇಕಾಗಿಲ್ಲ. ಆ ಪ್ರಶ್ನೆ ಏನಾಗಿರುತ್ತದೆ?

ಲಕ್ಷಾಂತರ ಜನರು ಈ ಕೆಳಕಂಡಂತೆ ದೇವರನ್ನು ಪ್ರಶ್ನಿಸಬಹುದು, ಸ್ವಾಮಿ, ನೀನು ನಿಜವಾಗಿಯೂ ನನಗಾಗಿ ಚಿಂತಿಸುವಿಯಾ? ನೀನು ಒಳ್ಳೇಯವನಾಗಿದ್ದರೆ, ಪ್ರೀತಿಸ್ವರೂಪದವನಾಗಿದ್ದರೆ, ಈ ಲೋಕದಲ್ಲಿ ಯಾಕೆ ಇಷ್ಟೊಂದು ಕಷ್ಟ ದು:ಖ ರೋಗರುಜಿನ, ಮರಣವಿದೆ? ಯಾಕೆ ಕ್ಷಾಮ, ಪ್ರವಾಹಕ, ನೈಸರ್ಗಿಕ ವಿಕೋಪ, ಯುದ್ದ ಮುಂತಾದವು ಈ ಜಗತ್ತಿನಲ್ಲಿ ಕಂಡು ಬರುತ್ತಿವೆ.



4

ಈ ಲೋಕದಲ್ಲಿ ದುಷ್ಟಶಕ್ತಿ ಇದೆಯೆಂದು ನಮ್ಮೆಲ್ಲರಿಗೂ ತಿಳಿದಿದೆ. ಪ್ರತಿದಿನವೂ ಎಲ್ಲೆಲ್ಲಿಯೂ ಭಯಂಕರವಾದ ವಿಪತ್ತುಗಳು ಸಂಭವಿಸುತ್ತಲಿವೆ.



5

(ವಿಡಿಯೋ, ೧೫ ಸೆಕೆಂಡುಗಳು) ಈ ಲೋಕದಲ್ಲಿ ನೆಡೆಯುವ ದುರಂತಗಳು, ಕಷ್ಟ, ದು:ಖ, ರೋಗರುಜಿನಗಳಿಗೆ ಯಾರು ಕಾರಣರು? ಅನೇಕರು ತಾವು ಅನುಭವಿಸುತ್ತಿರುವ ಕಷ್ಟಗಳಿಗೆ ದೇವರನ್ನು ದೂಷಿಸುತ್ತಾರೆ, ದೇವರು ಯಾಕೆ ಇದನ್ನು ನನಗೆ ಬರಮಾಡಿದನು? ಎಂದು ಅವರು ಹೇಳುವುದನ್ನು ನೀವು ಅನೇಕ ಬಾರಿ ಕೇಳಿರಬಹುದು.



6

ದುಷ್ಟ ಮತ್ತು ಶಿಷ್ಟ ಶಕ್ತಿಗಳ ನಡುವೆ ನೆಡೆಯುತ್ತಿರುವ ಮಹಾ ಹೋರಾಟದ ಬಗ್ಗೆ ಸತ್ಯವೇದವು ಏನು ಹೇಳುತ್ತದೆಂದು ನೋಡೋಣ, ಈ ಲೋಕದಲ್ಲಿ ಸಂಭವಿಸುತ್ತಿರುವ ಎಲ್ಲಾ ಕಷ್ಟ, ದುಃಖ, ದುರಂತಗಳಿಗೆ ದೇವರು ಕಾರಣನಲ್ಲದಿದ್ದರೆ, ನಾವು ಪ್ರತಿ ದಿನ ನೋಡುತ್ತಿರುವ ಈ ದುರಂತಗಳಿಗೆ ಕಾರಣರಾರು ಎಂದು ನೀವು ಕೇಳಬಹುದು.



7

ಸತ್ಯ ವೇದದಲ್ಲಿ ಇದಕ್ಕೆಲ್ಲಾ ಯಾರು ಕಾರಣರು ಎಂಬುದನ್ನು ಸ್ಪಷ್ಟವಾಗಿ ತಿಳಿಸಿದೆ. ಯೇಸು ಸ್ವಾಮಿಯವರು ತನ್ನ ಹೊಲದಲ್ಲಿ ಒಳ್ಳೆಯ ಬೀಜವನ್ನು ಬಿತ್ತಿದ ಒಬ್ಬ ಒಕ್ಕಲಿಗನ ಕಥೆಯನ್ನು ಹೇಳುತ್ತಾರೆ. ಈ ಬೀಜಗಳು ಮೊಳೆತಾಗ

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



8

ವಿಷಕರವಾದ ಕಳೆಗಳೂ ಸಹ ಆ ಹೊಲದಲ್ಲಿದ್ದವು.



9

(ವಚನ: ಮತ್ತಾಯ ೧೩:೨೭)
ಆಗ ಯಜಮಾನನ ಆಳುಗಳು ಅವನ ಬಳಿಗೆ ಬಂದು – ಅಯ್ಯಾ, ನಿನ್ನ ಹೊಲದಲ್ಲಿ ಒಳ್ಳೆಯ ಬೀಜಗಳನ್ನು ಬಿತ್ತಿದೆಯಲ್ಲ. . .



10

ಹಣಜಿಯು ಎಲ್ಲಿಂದ ಬಂತು? ಈ ವಿಷಕರವಾದ ಕಳೆಗಳು ಎಲ್ಲಿಂದ ಬಂತು ಎಂದು ಆಳುಗಳು
ತಿಳಿದುಕೊಳ್ಳಬೇಕೆಂದರು.




11

(ವಚನ ೩ ಸ್ಲೈಡುಗಳು: ಮತ್ತಾಯ ೧೩:೩೭–೩೯)
ಅದಕ್ಕಾತನು – ಒಳ್ಳೆಯ ಬೀಜವನ್ನು ಬಿತ್ತುವವನೆಂದರೆ ಮನುಷ್ಯ ಕುಮಾರನು ಅಂದನು



12

ಹೊಲವೆಂದರೆ ಈ ಲೋಕ ಒಳ್ಳೆಯ ಬೀಜವೆಂದರೆ ಪರಲೋಕ ರಾಜ್ಯದವರು, ಹಣಜಿ (ಕಳೆ) ಅಂದರೆ ಸೈತಾನನವರು.



13


ಆದನ್ನು ಬಿತ್ತುವ ವೈರಿ ಅಂದರೆ ಸೈತಾನನು.
ಮತ್ತಾಯ ೧೩:೩೭–೩೯



14

ದೇವರು ತನ್ನ ಪ್ರೀತಿ ಮತ್ತು ಕರುಣೆಯನ್ನು ಎಲ್ಲರಿಗೂ ತೋರಿಸಲು ಪ್ರಯತ್ನಿಸುತ್ತಿರುವಾಗ, ಈ ಲೋಕದಲ್ಲಿ ಮತ್ತೊಂದು ಶಕ್ತಿಯು ದೇವರ ಮಕ್ಕಳಿಗೆ ರೋಗರುಜಿನ, ಕಷ್ಟ,ಸಂಕಟ, ದುರಂತ ಮರಣವನ್ನು ತರುವುದರಲ್ಲಿ ನಿರತವಾಗಿದೆ.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



15

ಸತ್ಯವೇದದ ಕೊನೆಯ ಪುಸ್ತಕವಾದ ಪ್ರಕಟಣೆಯಲ್ಲಿ ಇದು ಹೇಗೆ ಆರಂಭವಾಯಿತು ಎಂಬುದನ್ನು ತಿಳಿಸುತ್ತದೆ. ಇದರಿಂದ ನಾವು ಪರಲೋಕದಲ್ಲಿ ಏನು ನೆಡೆಯಿತು ಮತ್ತು ಈ ಲೋಕದಲ್ಲಿನ ಕಷ್ಟಗಳಿಗೆ ಕಾರಣವೇನು ಎಂಬುದರ ನಿಜ ಸತ್ಯವನ್ನು ತಿಳಿದುಕೊಳ್ಳಬಹುದು. ಪಾಪ ಉತ್ಪತ್ತಿಯಾಗುವುದನ್ನು ನಾವು ಕಲಿಯಬಹುದು. ನಿಮಗಿದು ಆಶ್ಚರ್ಯವೆನಿಸಬಹುದು. ಆದರೆ ಹಿಂದೆ ಪರಲೋಕದಲ್ಲಿ ಒಂದು ಯುದ್ಧ ನೆಡೆಯಿತು.



16

(ವಚನ ೪ ಸ್ಲೈಡುಗಳು: ಪ್ರಕಟನೆ ೧೨:೭–೯)
ಪರಲೋಕದಲ್ಲಿ ಯುದ್ಧ ನೆಡೆಯಿತು. ಮೀಕಾಯೇಲನೂ ಅವನ ದೂತರೂ ಘಟಸರ್ಪನ ಮೇಲೆ ಯುದ್ಧ ಮಾಡುವುದಕ್ಕೆ ಹೊರಟರು.



17

ಘಟಸರ್ಪನೂ ಅವನ ದೂತರೂ ಯುದ್ಧ ಮಾಡಿ ಸೋತು ಹೋದರು ಮತ್ತು ಪರಲೋಕದೊಳಗೆ ಅವರಿಗೆ ಸ್ಥಾನವು ತಪ್ಪಿ ಹೋಯಿತು.



18

ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾಘಟಸರ್ಪನು ಅಂದರೆ ಪಿಶಾಚನೆಂತಲೂ, ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ್ಬಲ್ಪಟ್ಟು ಭೂಮಿಗೆ ಬಿದ್ದನು.




19

ಅವನ ದೂತರೂ ಅವನೊಂದಿಗೆ ದೊಬ್ಬಲ್ಪಟ್ಟರು. ಪ್ರಕಟಣೆ ೧೨:೭–೯


20

ಪ್ರಕಟಣೆ ೧೨:೩,೪ ನೇ ವಚನಗಳಲ್ಲಿ ಈ ಘಟಸರ್ಪ ಅಥವಾ ಪಿಶಾಚನನ್ನು ಯಾವ ರೀತಿ ಪರಿಚಯಿಸಿದೆ ಎಂಬುದನ್ನು ಗಮನಿಸಿ.




21

(ವಚನ ೨ ಸ್ಲೈಡುಗಳು; ಪ್ರಕಟಣೆ ೧೨:೩,೪)
ಪರಲೋಕದಲ್ಲಿ ಮತ್ತೊಂದು ಲಕ್ಷಣವು ಕಾಣಿಸಿತು; ಅದೇನೆಂದರೆ ಕೆಂಪಾದ ಮಹಾಘಟಸರ್ಪವಿತ್ತು. ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಇದ್ದವು.



22

ಅದರ ತಲೆಗಳ ಮೇಲೆ ಏಳು ಮುಕುಟಗಳಿದ್ದವು




23

ಅದರ ಬಾಲವು ಆಕಾಶದಲ್ಲಿರುವ ನಕ್ಷತ್ರಗಳೊಳಗೆ ಮೂರರಲ್ಲೊಂದು ಭಾಗವನ್ನು ಎಳೆದು ಭೂಮಿಗೆ ಹಾಕಿತು.



24

ಸೈತಾನನು ದೇವರ ವಿರುದ್ದ ದಂಗೆ ಎದ್ದಾಗ ಪರಲೋಕದಲ್ಲಿರುವ ಮೂರರಲ್ಲೊಂದು ಭಾಗ ದೇವ ದೂತರು ಈ ವಂಚಕನನ್ನು ಹಿಂಬಾಲಿಸಿದರೆಂದು ತಿಳಿಯುತ್ತದೆ. ಪರಲೋಕದಿಂದ ದೊಬ್ಬಲ್ಪಟ್ಟ ಲೂಸಿಫರನೆಂಬ ಈ ದೇವದೂತನ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳೊಣ. ಹಳೆಯ ಒಡಂಬಡಿಕೆಯಲ್ಲಿ ಇವನನ್ನು ತೂರಿನ ಆರಸನೆಂದು ವರ್ಣಿಸಲ್ಪಟ್ಟು ಅವನ ಬಗ್ಗೆ ಈ ರೀತಿ ಹೇಳುತ್ತದೆ




25

(ವಚನ ೪ ಸ್ಲೈಡುಗಳು ಯೆಹೆಜ್ಕೇಲನು ೨೮:೧೨–೧೪)
ಕರ್ತನಾದ ಯೆಹೋವನು ಇಂತೆನ್ನುತ್ತಾನೆ – ನೀನು ಸರ್ವಸುಲಕ್ಷಣ ಶಿರೋಮಣಿ; ಪೂರ್ಣಜ್ಞಾನಿ, ಪರಿಪೂರ್ಣ ಸುಂದರ. ಯೆಹೆಜ್ಕೇಲನು ೨೮:೧೨.



26

ದೇವರ ಉದ್ಯನವಾದ ಏದೆನಿನಲ್ಲಿ ನೀನಿದ್ದು; ಮಾಣಿಕ್ಯ ಪುಷ್ಯರಾಗ.. . . .
ಈ ನವರತ್ನಗಳಿಂದ ಭೂಷಿತನಾಗಿದ್ದೀ.
ಯೆಹೆಜ್ಕೇಲನು ೨೮:೧೩



27

ನೀನು ರೆಕ್ಕೆ ತೆರೆದು ನೆರಳು ಕೊಡುವ ಕೆರೂಬಿಯಾಗಿದ್ದಿ; ನಾನು ನಿನ್ನನ್ನು ದೇವರ ಪರಿಶುದ್ದ ಪರ್ವತದಲ್ಲಿ ನೆಲೆಗೊಳಿಸಿದೆನು.



28

ನೀನು ಕೆಂಡದ ಮಳೆಯಲ್ಲಿ ವಿಹಾರ ಮಾಡುತ್ತಾ ಇದ್ದಿ ಯೆಹೆಜ್ಕೇಲನು ೨೮:೧೪

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?


29

ಲೂಸಿಫರನು ಒಬ್ಬ ಸುಂದರನಾದ ದೇವದೂತನಾಗಿದ್ದು, ಎಲ್ಲಾ ವಿಧದಲ್ಲಿಯೂ ಪರಿಪೂರ್ಣವಾಗಿ ಸೃಷ್ಟಿಸಲ್ಪಟ್ಟಿದ್ದನು. ದೇವರ ಬಳಿಯಲ್ಲಿ ರೆಕ್ಕೆ ತೆರೆದು ನೆರಳು ಕೊಡುವ ಕೆರೂಬಿಯಾದ ದೇವದೂತನಾಗಿದ್ದನು.


30

ಲೂಸಿಪರನು ಪರಲೋಕದಲ್ಲಿ ಉನ್ನತಸ್ಥಾನವನ್ನು ಹೊಂದಿದ್ದನು. ದೇವಸಿಂಹಾಸನ ಅಥವಾ ಕೃಪಾಸನದ ಎರಡೂ ಕಡೆಯಲ್ಲಿ ಇಬ್ಬರೂ ದೇವದೂತರಿದ್ದರು – ಒಬ್ಬನು ಬಲಗಡೆಯಲ್ಲಿ ಮತ್ತೊಬ್ಬನು ಎಡಗಡೆಯಲ್ಲಿ, ಲೂಸಿಫರನು ಅವರಲ್ಲಿ ಒಬ್ಬನಾಗಿದ್ದನು.


31

ದೇವರ ಬಳಿಯಲ್ಲಿದ್ದರೂ ಅವನಿಗೆ ತೃಪ್ತಿಯಾಗಿರಲಿಲ್ಲ. ಅವನು ತಾನೇ ದೇವರಾಗಲು ಬಯಸಿದನು! ದೇವರೊಂದಿಗೆ ಅವನಿಗಿದ್ದ ಸಂಬಂಧವು ಕೆಟ್ಟು ಹೋಯಿತು, ದೇವರು ಲೂಸಿಫರನಿಗೆ ಹೀಗೆ ಹೇಳಿದನು;



32

ನಿನ್ನ ಸೃಷ್ಟಿಯ ದಿನದಿಂದ ನಿನ್ನಲ್ಲಿ ಅಪರಾಧವು ಸಿಕ್ಕುವ ತನಕ ನಿನ್ನ ನಡತೆಯು ನಿರ್ದೋಷವಾಗಿ ಕಾಣುತ್ತಿತ್ತು.
ಯೆಹೆಜ್ಕೇಲನು ೨೮:೧೭.




33

ಯೆಹೆಜ್ಕೇಲನು ೨೮:೧೭.ನೀನು ನಿನ್ನ ಸೊಬಗಿನ ನಿಮಿತ್ತ ಉಬ್ಬಿದ ಮನಸ್ಸುಳ್ಳವನಾಗಿ ನಿನ್ನ ಮೆರೆತದಿಂದ ನಿನ್ನ ಬುದ್ಧಿಯನ್ನು ಹಾಳು ಮಾಡಿಕೊಂಡೆ.
ಯೆಹೆಜ್ಕೇಲನು ೨೮:೧೭.



34

ಉನ್ನತ ಸ್ಥಾನದಲ್ಲಿದ್ದ ಪರಿಪೂರ್ಣ ಸುಂದರನಾದ ಈ ದೇವದೂತನು ಸ್ವಾರ್ಥಿಯಾದನು, ದೇವರು ಮಾತ್ರ ಹೊಂದಲು ಸಾದ್ಯವಾದ ಮಹಿಮೆ ಮತ್ತು ಗೌರವವನ್ನು ತಾನೂ ಹೊಂದಬೇಕೆಂದು ಆಶಿಸಿದನು, ಆತನು ಅಧಿಕಾರದಾಹಿಯಾದನು. ಈ ಲೋಕದ ಮೇಲೆ ತಾನು ಅಧಿಕಾರ ನಡೆಸಬೇಕೆಂಬ ಉದ್ದೇಶದಿಂದ ತನ್ನ ಸೃಷ್ಟಿಕರ್ತನಾದ ದೇವರಿಗೆ ಸವಾಲು ಹಾಕುವ ಧೈರ್ಯವು ಅವನಲ್ಲಿ ಉಂಟಾಯಿತು, ಗಮನವಿಟ್ಟು ಕೇಳಿ:



35

(ವಚನ ೩ ಸ್ಲೈಡುಗಳು: ಯೆಶಾಯ ೧೪:೧೨–೧೪.)
ಆಹಾ, ಉದಯ ನಕ್ಷತ್ರವೇ, ಬೆಳ್ಳಿಯೇ, ಆಕಾಶದಿಂದ ಹೇಗೆ ಬಿದ್ದೆ! . . .



36

ನೀನು ನಿನ್ನ ಮನಸ್ಸಿನಲ್ಲಿ – ನಾನು ಆಕಾಶಕ್ಕೆ ಹತ್ತಿ ನನ್ನ ಸಿಂಹಾಸನವನ್ನು ದೇವರ ನಕ್ಷತ್ರಗಳಿಗಿಂತ ಮೇಲೆ ಏರಿಸಿ ಆಸೀನನಾಗುವೆನು. . .



37

ಉನ್ನತೋನ್ನತನಿಗೆ ಸರಿಸಮಾನನಾಗುವೆನು . . .
ಯೆಶಾಯ ೧೪:೧೨–೧೪


38

ಈ ಅಹಂಕಾರದ ಮಾತುಗಳು ಲೂಸಿಫರನ ಬಾಯಿಂದ ಹೊರಟಾಗ, ಪರಲೋಕದಲ್ಲಿದ್ದ ಪ್ರೀತಿ ಮತ್ತು ಸಾಮರಸ್ಯವು ಒಡೆದು ಹೋಗಿ ಸ್ವಾರ್ಥದಿಂದ ತುಂಬಿಕೊಂಡಿತು.


39

ಶೀಘ್ರದಲ್ಲಿಯೇ ಲೂಸಿಫರನು ತನ್ನ ಅತೃಪ್ತಿಯನ್ನು ಇತರ ದೇವದೂತರಿಗೂ ಹರಡಿದನು. ನಿಧಾನವಾಗಿ ಆತನು ದೇವರ ಪ್ರೀತಿ ಮತ್ತು ನ್ಯಾಯವನ್ನು ಕಡೆಗಣಿಸಲು ತೊಡಗಿದನು.


40

ಹಣ್ಣಿನ ಬುಟ್ಟಿಯಲ್ಲಿರುವ ಕೊಳೆತ ಹಣ್ಣಿನಂತೆ ಆತನ ದಂಗೆಯು ಪರಲೋಕದಲ್ಲಿರುವ ಇತರ ದೇವದೂತರಿಗೂ ಹರಡಿತು. ಆ ಸಮಯದಲ್ಲಿ ದೇವರು ಯಾಕೆ ಸೈತಾನನನ್ನು ನಾಶಮಾಡಲಿಲ್ಲವೆಂದು ನಿಮಗೆ ಆಶ್ಚರ್ಯವಾಗಬಹುದು. ದೇವರು ಲೂಸಿಫರನನ್ನು ಮತ್ತು ಆತನ ದೂತರನ್ನು ಒಂದೇ ಕ್ಷಣದಲ್ಲಿ ನಾಶಮಾಡಬಹುದಿತ್ತು. ಆದರೆ ದೇವರು ಹಾಗೆ ಮಾಡಿದ್ದಲ್ಲಿ, ಆತನ ಸೃಷ್ಟಿಗಳು ಅವನನ್ನು ಭಯದಿಂದ ಆರಾಧಿಸುವವರಾಗುತಿದ್ದರು.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?


41

ದೇವರು ನಮ್ಮ ಆಯ್ಕೆಯ ಸ್ವತಂತ್ರವನ್ನು ತೆಗೆದು ಹಾಕಿ ನಮ್ಮೆಲ್ಲರನ್ನು ರೊಬೋಟ್ ಎಂಬ ಯಂತ್ರದಂತೆ ಮಾಡಿದನೆಂದು ಊಹೆಮಾಡಿಕೊಳ್ಳಿ. ನಿಮ್ಮಲ್ಲಿ ಎಷ್ಟೋ ಜನರಿಗೆ ಮಕ್ಕಳಿವೆ? ಸ್ವಲ್ಪ ಜನರಿಗೆ ಮಾತ್ರ. ನಿಮಗೆ ರೊಬೊಟ್ ಯಂತ್ರದಂತಹ ಮಗುವು ಬೇಕೆ? ನೀನು ಹೇಳಿದುದ್ದನ್ನೆಲ್ಲ ಚಾಚೂತಪ್ಪದೇ ಅನುಸರಿಸಿ ನೆಡೆಯುವಂತೆ ಕಾರ್ಯಕ್ರಮ ರೂಪಿಸಿ ವಿಧೇಯನಾಗುವಂತ ಮಗುವನ್ನು ನೀವು ಇಷ್ಟಪಡುತ್ತಿರೋ? ಬೆಳಿಗ್ಗೆ ನಿಮ್ಮ ಮಗುವು ಅಮ್ಮಾ ನಾನು ಊಟ ಮಾಡುತ್ತೆನೆ. ಅಪ್ಪ ನಾನು ಮನೆ ಸ್ವಚ್ಛ ಮಾಡುತ್ತೆನೆ ಎಂದು ಹೇಳುತ್ತದೆ. ಜೀವಂತ ಮಗುವಲ್ಲ ಉಕ್ಕಿನಿಂದ ಮಾಡಿದ, ತಣ್ಣಗಾದ ಯಾಂತ್ರಿಕವಾದ ರೊಬೋಟ್ ನಿಮಗಿದೆ. ಇಂತಹ ಮಗುವು ನಿಮಗೆ ಬೇಕೆ? ಖಂಡಿತವಾಗಿಯೂ ಬೇಡ ಅಲ್ಲವೇ? ಅದೇ ರೀತಿ ದೇವರಿಗೂ ಸಹ.


42

ದೇವರು ಪ್ರೀತಿ ಸ್ವರೂಪಿಯಾದ ದೇವರಾಗಿದ್ದಾನೆ. ಆತನ ಸೃಷ್ಠಿಗಳು ಆತನನ್ನು ಪ್ರೀತಿಸಿ ವಿಶ್ವಾಸವಿಟ್ಟು ಆರಾಧಿಸುವಂತಹ ಪ್ರೀತಿಯ ಸಂಬ ಂದದಲ್ಲಿ ಮಾತ್ರ ದೇವರು ಸಂತೋಷ ಪಡುತ್ತಾನೆ.


43

ಸೈತಾನನು ದೇವರ ನ್ಯಾಯಪ್ರಮಾಣ ಮತ್ತು ನ್ಯಾಯವನ್ನು ಪ್ರತಿಭಟಿಸಿ ಸವಾಲು ಹಾಕಿದನು. ಆದರೆ ಯಾರು ಸೃಷ್ಟಿಕರ್ತನೆಂದು ತೋರಿಸುವ ಸಲುವಾಗಿ ದೇವರು ಈ ನ್ಯಾಯಪ್ರಮಾಣಗಳನ್ನು ಕೈಕೊಳ್ಳಬೇಕೆಂದು ಬ ಲತ್ಕರಿಸಲಿಲ್ಲ. ತನ್ನ ಸೃಷ್ಟಿಗಳನ್ನು ಸಂರಕ್ಷಿಸಿ ಅವರು ಸಂತೋಷ ಮತ್ತು ಸಮಾಧಾನದಿಂದಿರಬೇಕೆಂಬ ಉದ್ದೇಶದಿಂದ ಅವುಗಳನ್ನು ಕೊಟ್ಟನು.



44

ದೇವರ ಆಜ್ಞೆಗಳು ಸಿಗ್ನಲ್ ಲೈಟುಗಳಂತೆಯೂ ವೇಗ ನಿಯಂತ್ರಕಗಳಂತೆಯೂ ಇದ್ದು ನಮ್ಮ ರಕ್ಷಣೆಗಾಗಿ ಯೋಜಿಸಲ್ಪಟ್ಟಿದೆ. ಆದರೆ ಎಲ್ಲಾ ದೇವದೂತರುಗಳಲ್ಲಿ ಘನವಾದ ಸ್ಥಾನ ಹೊಂದಿದ್ದು ಸೈತಾನನು ಈ ವಿಶ್ವವನ್ನು ಸೃಷ್ಠಿಕರ್ತವಾದ ದೇವರಿಗಿಂತಲೂ ಉತ್ತಮವಾಗಿ ನಡೆಸುತ್ತೇನೆಂದು ಕೊಂಡನು.


45

ದೇವರ ವಿರೋಧಿಯಾದ ಸೈತಾನನು ತನ್ನನ್ನು ತಾನೇ ಪಿಶಾಚನನ್ನಾಗಿ ಮಾಡಿಕೊಂಡನು.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



46

(ವಿಡಿಯೋ: ೧೦ ಸೆಕೆಂಡುಗಳು) ದೇವರು ಪ್ರತಿಯೊಬ್ಬರಿಗೂ ವಿಧೇಯರಾಗುವ ಅಥವಾ ಅವಿಧೇಯರಾಗುವ ಆಯ್ಕೆಯ ಶಕ್ತಿಯನ್ನು ಕೊಟ್ಟಿದ್ದಾನೆ, ಪ್ರೀತಿಯಿಂದಲೂ ನ್ಯಾಯದಿಂದಲೂ ದೇವರು ಸೈತಾನನಿಗೆ ಈ ವಿಶ್ವವನ್ನು ಯಾವ ರೀತಿ ನಡೆಸುವನು ಎಂಬುದನ್ನು ತೋರಿಸಲು ಅವಕಾಶ ನೀಡಿದನು. ದೇವರು ಮಹಾ ಪ್ರೀತಿ ಸ್ವರೂಪಿಯೂ, ಎಲ್ಲರಿಗೂ ಒಳ್ಳೆಯವನು ಆಗಿದ್ದರೂ ಇವೆಲ್ಲವೂ ಹೇಗೆ ನಡೆಯಿತು ಎಂಬುದನ್ನು ನಾವು ತಿಳಿದುಕೊಳ್ಳಲು ಸಾದ್ಯವಿಲ್ಲ.



47

ಪರಲೋಕದಲ್ಲಿ ಆರಂಭವಾದ ಯುದ್ದವು ಇನ್ನೂ ಮುಗಿದಿಲ್ಲ, ಆದರೆ ನೆಡೆಯುತ್ತಿರುವ ಸ್ಥಳವು ಬೇರೆಯಾಗಿದೆ;?ಈ ಲೋಕದಲ್ಲಿ ತಾನೇ ಶಿಷ್ಟ ಮತ್ತು ದುಷ್ಟ ಶಕ್ತಿಗಳ ನಡುವಣ ಹೋರಾಟವು ನೆಡೆಯಲಿದೆ. ಇಲ್ಲಿ ಸೈತಾನನು ತನ್ನ ಸರ್ಕಾರವು ಎಂತದ್ದು ಮತ್ತು ತಾನು ಅದನ್ನು ಹೇಗೆ ನೆಡೆಸುತ್ತೇನೆಂಬುದನ್ನು ತೋರಿಸಲಿದ್ದಾನೆ.



48

ಈ ಲೋಕವೇ ಯಾಕೆ? ಯಾಕೆ ನಮ್ಮ ಗ್ರಹವು



49

(ವಚನ : ೧ ಕೊರಿಂಥದವರಿಗೆ ೪:೯)
. . .ದೇವದೂತರಿಗೂ ಮನುಷ್ಯರಿಗೂ ಅಂತೂ ಜಗತ್ತಿಗೆಲ್ಲಾ ನೋಟವಾಗ ಬೇಕಾಯಿತು . . .
೧ ಕೊರಿಂಥದವರಿಗೆ ೪:೯


50

ಈ ಜಗತ್ತನ್ನು ಸೃಷ್ಠಿಕರ್ತನು ಅದೇ ತಾನೇ ಸೃಷ್ಟಿಸಿದ್ದನು. ಅದು ಪರಿಪೂರ್ಣವಾಗಿಯೂ, ವೈಭವಯೂತವಾಗಿಯು ಇದ್ದು ವರ್ಣಿಸಲಶಕ್ಯವಾದಷ್ಟು ಮನೋಹರವಾಗಿತ್ತು. ಸೈತಾನನು ಈ ಲೋಕವನ್ನು ನೋಡಿ ಇದನ್ನು ಹಿಡಿದುಕೊಳ್ಳುವುದು ಒಂದು ದೊಡ್ಡ ಬಹುಮಾನದಂತೆ ಎಂದು ಭಾವಿಸಿದನು. ಹೊಸದಾಗಿ ಸೃಷ್ಟಿಯಾದ ಈ ಸುಂದರ ಲೋಕವನ್ನು ತನ್ನ ವಶಪಡಿಸಿಕೊಳ್ಳಲು ಆತನು ಪ್ರಯತ್ನಿಸಿದನು.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?


51

ಮಾನವ ಜನಾಂಗದ ಮೂಲ ತಂದೆ ತಾಯಿಯರಾದ ಆದಾಮು ಮತ್ತು ಹವ್ವರು ಪರಿಪೂರ್ಣವಾಗಿ ಸೃಷ್ಟಿಸಲ್ಪಟ್ಟಿದ್ದರೂ. ಅವರೂ ಸಹ ಪಾಪಮಾಡುವ ಸಾಧ್ಯತೆಯಿಂದ ದೂರವೇನೂ ಇರಲಿಲ್ಲ. ಅವರು ದೇವರನ್ನು ಪ್ರೀತಿಸಿ ಅನುಸರಿಸುವುದಕ್ಕೂ ಅಥವಾ ಆತನ ಆಜ್ಞೆ, ಸೂಚನೆಗಳನ್ನು ತಿರಸ್ಕರಿಸುವುದಕ್ಕೂ ಅವರಿಗೆ ಮುಕ್ತವಾದ ಆಯ್ಕೆಮಾಡಿಕೊಳ್ಳಬಹುದಾಗಿತ್ತು. ಆದರೆ ಅವರ ದೇವರ ಮೇಲಿನ ನಿಷ್ಠೆಯೂ ಪರೀಕ್ಷೆಗೊಳಪಡುತಿತ್ತು. ಹಾಗು ಆ ಪರೀಕ್ಷೆಯು ಒಂದು ಮರದ ಮೇಲೆ ಕೇಂದ್ರೀಕೃತವಾಗಿತ್ತು. ದೇವರು ಅವರಿಗೆ ಎಚ್ಚರಿಕೆ ನೀಡಿ.



52

(ವಚನ ೨ ಸ್ಲೈಡುಗಳು; ಆದಿಕಾಂಡ ೨:೧೬, ೧೭,) ತೋಟದಲ್ಲಿರುವ ಎಲ್ಲ ಮರಗಳ ಹಣ್ಣುಗಳನ್ನು ನೀನು ಯಥೇಚ್ಛವಾಗಿ ತಿನ್ನಬಹುದು.



53

ಒಳ್ಳೇದು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು. ಆದಿಕಾಂಡ ೨:೧೬, ೧೭

ಅದೊಂದು ನ್ಯಾಯಯುತವಾದ ಬೇಡಿಕೆಯಾಗಿತ್ತು. ತಾವು ಸಾಕಷ್ಟು ಸುರಕ್ಷಿತವಾಗಿದ್ದೇವೆಂದು ಅವರಿಗೆ ಅನಿಸಿರಬಹುದು, ಮನುಷ್ಯನಿಗೆ ತಾನು ಸುರಕ್ಷಿತವಾಗಿದ್ದೇನೆಂಬ ಅತಿಯಾದ ಆತ್ಮವಿಶ್ವಾಸ ಉಂಟಾದಾಗ ಶೋಧನೆಗೆ ಒಳಗಾಗುವ ಸಂಭವವು ಹೆಚ್ಚಾಗಿರುತ್ತದೆ.


54

ಹವ್ವಳಲ್ಲಿ ಆ ಭಾವನೆ ಉಂಟಾಯಿತು. ಸೈತಾನನು ಆಕೆಯನ್ನು ಮರಳುಗೊಳಿಸಲು ಅತಿಮಾನುಷ ಶಕ್ತಿಯನ್ನು ಉಪಯೋಗಿಸಿದನು. ಸೈತಾನನು ಬಹಿರಂಗವಾಗಿ ಕಾರ್ಯ ಮಾಡುವುದು ಅತಿ ಅಪರೂಪ. ಆತನು ಸಂಸ್ಥೆಗಳನ್ನು, ಜನರನ್ನು ಅಥವಾ ಸರ್ಪವನ್ನೂ ಸಹ ಉಪಯೋಗಿಸುವನು.


55

ಆದುದರಿಂದಲೇ ಪೌಲನು ಹೀಗೆ ಹೇಳುತ್ತಾನೆ.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



56

(ವಚನ ೩ ಸ್ಲೈಡುಗಳು; ಎಫೆಸದವರಿಗೆ ೬:೧೧ – ೧೨)
ಸೈತಾನನ ತಂತ್ರೋಪಾಯಗಳನ್ನು ನೀವು ಎದುರಿಸಿ ನಿಲ್ಲುವುದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ.



57

ನಾವು ಹೋರಾಡುವುದು ಮನುಷ್ಯ ಮಾತ್ರದವರ ಸಂಗಡವಲ್ಲ ರಾಜತ್ವಗಳ ಮೇಲೆಯೂ, ಅಧಿಕಾರಗಳ ಮೇಲೆಯೂ.



58

. . . ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ, ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ.
ಎಫೆಸದವರಿಗೆ ೬:೧೧,೧೨



59

ಹವ್ವಳು ಮೋಸಹೋದಳು. ಹಾವಿನ ಬಾಯಿಂದ ಬಂದ ಮಾತುಗಳು ನಿಜವಾಗಿಯೂ ಸೈತಾನನಿಂದ ಬಂದಿದ್ದೆಂದು ಹವ್ವಳಿಗೆ ಸಂದೇಹವೇ ಬರಲಿಲ್ಲ. ಸರ್ಪದ ಮೂಲಕ ಮಾತನಾಡಿದ ಸೈತಾನನು ಅವಳಿಗೆ ಹೀಗೆ ಕೇಳಿದನು.



60

(ವಚನ; ಆದಿಕಾಂಡ ೩:೧)
ಏನವ್ವಾ – ತೋಟದಲ್ಲಿರುವ ಯಾವ ಮರದ ಹಣ್ಣನ್ನು ನೀವು ತಿನ್ನಬಾರದೆಂದು ದೇವರು ಅಪ್ಪಣೆ ಕೊಟ್ಟಿರುವುದು ನಿಜವೋ?



61

(ವಚನ ೩ ಸ್ಲೈಡುಗಳು; ಆದಿಕಾಂಡ ೩:೨–೪)
. . . ತೋಟದಲ್ಲಿರುವ ಮರಗಳ ಹಣ್ಣುಗಳನ್ನು ನಾವು ತಿನ್ನಬಹುದು.



62


ಆದರೆ ತೋಟದ ಮಧ್ಯದಲ್ಲಿರುವ ಈ ಮರದ ಫಲದ ವಿಷಯವಾಗಿ. . .

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



63

. . . ಇದನ್ನು ತಿನ್ನಲೂ ಕೂಡದು, ಮುಟ್ಟಲೂ ಕೂಡದು; ತಿಂದರೆ ಸಾಯುವಿರಿ ಎಂದು ದೇವರು ಹೇಳಿದ್ದಾನೆ ಅಂದಳು.




64

ಆಗ ಸರ್ಪವು ಸ್ತ್ರೀಗೆ – ನೀವು ಹೇಗೂ ಸಾಯುವುದಿಲ್ಲ
ಆದಿಕಾಂಡ ೩:೨–೪


65

ಹವ್ವಳು ಸರ್ಪದ ಮಾತುಗಳನ್ನು ಕೇಳುತ್ತಿದ್ದಂತೆ, ಅವಳ ಮನಸ್ಸಿನಲ್ಲಿ ಸರ್ಪದ ಮಾತುಗಳು ದೇವರು ಅವರಿಗೆ ಹೇಳಿದ್ದಕ್ಕಿಂತ ಭಿನ್ನವಾಗಿದೆ ಎಂದು ಅನಿಸಿರಬಹುದು. ಹವ್ವಳು ಗಲಿಬಿಲಿಗೆ ಒಳಗಾಗಿದ್ದಾಳೆಂದು ಗ್ರಹಿಸಿದ ಸರ್ಪವು ತಕ್ಷಣದಲ್ಲಿ ಹೀಗೆ ನುಡಿಯಿತು:




66

(ವಚನ: ಆದಿಕಾಂಡ ೩:೫)
ನೀವು ಹೇಗೂ ಸಾಯುವುದಿಲ್ಲ, ನೀವು ಇದರ ಹಣ್ಣನ್ನು ತಿಂದಾಗಲೇ ನಿಮ್ಮ ಕಣ್ಣುಗಳು ತೆರೆಯುವವು; ನೀವು ದೇವರಂತೆ ಆಗಿ ಒಳ್ಳೇದರ ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ. ಇದು ದೇವರಿಗೆ ಚೆನ್ನಾಗಿ ಗೊತ್ತುಂಟು ಅಂದಿತು.



67

ಸೈತಾನನು ಹವ್ವಳಿಗೆ ದೇವರು ನಿಮಗೆ ಉತ್ತಮವಾದ ಕೆಲವನ್ನು ಕೊಟ್ಟಿಲ್ಲವಾದ್ದರಿಂದ ಅವನು ಅನ್ಯಾಯಗಾರ ಎಂದು ಹೇಳಿದನು. ದೇವರಂತಾಗ ಬೇಕೆಂಬುದು ಸೈತಾನನ ಹೆಬ್ಬಯಕೆಯಾಗಿದ್ದು, ಅದರ ಫಲವಾಗಿ ಆತನು ದೊಬ್ಬಲ್ಪಟ್ಟನು. ಸೈತಾನನು ಹೇಳಿದ್ದು ಹವ್ವಳಿಗೆ ಒಳ್ಳೆದೆಂದು ತೋಚಿತು. ಒಂದು ಕ್ಷಣದಲ್ಲಿ ಆಕೆ ಅವನ ಬಲೆಯಲ್ಲಿ ಬಿದ್ದಳು.



68

(ವಚನ ೨ ಸ್ಲೈಡುಗಳು – ಆದಿಕಾಂಡ ೩:೬)
ಆಗ ಸ್ತ್ರೀಯು – ಆ ಮರದ ಹಣ್ಣು ತಿನ್ನುವುದಕ್ಕೆ ಉತ್ತಮವಾಗಿಯೂ ನೋಡುವುದಕ್ಕೆ ರಮ್ಯವಾಗಿಯೂ . . .



69

. . . ಜ್ಞಾನೋದಯಕ್ಕೆ ಆಪೇಕ್ಷಿಸ ತಕ್ಕದ್ದಾಗಿಯೂ ಇದೆ ಎಂದು ತಿಳಿದು ಅದನ್ನು ತೆಗೆದುಕೊಂಡು ತಿಂದಳು. ಆದಿಕಾಂಡ ೩:೬

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?


70

ಸಂಗಡ ಇದ್ದ ಗಂಡನಿಗೂ ಕೊಡಲು ಅವನೂ ತಿಂದನು.


71

ಆದಾಮ ಮತ್ತು ಹವ್ವಳು ದೇವರ ಮೇಲಿನ ಪ್ರೀತಿ ಮತ್ತು ನಿಷ್ಠೆಯ ಪರೀಕ್ಷೆಯಲ್ಲಿ ಸೋತು ಹೋದರು. ಸ್ವಲ್ಪ ಸಮಯದಲ್ಲಿಯೇ ತಾವು ಏನೋ ತಪ್ಪು ಮಾಡಿದ್ದೇವೆಂದು ಅವರಿಗೆ ತಿಳಿಯಿತು.


72

ಸೈತಾನನು ನೂತನವಾಗಿ ಸೃಷ್ಟಿಸಲ್ಪಟ್ಟ ಈ ಲೋಕವನ್ನು ಅಪಹರಿಸಿದನು. ಆ ಕ್ಷಣದಿಂದ ಅವನು 'ಈ ಲೋಕದ ಅಧಿಪತಿ' ಎಂಬ ಬಿರುದಿಗಾಗಿ ಹಕ್ಕು ಸಾಧಿಸುತ್ತಿದ್ದಾನೆ. ದಂಗೆಕೋರನಾದ ವ್ಯಕ್ತಿ ಈ ಲೋಕದ ಅಧಿಪತಿ. ಆದಾಮ ಮತ್ತು ಹವ್ವಳು ದುಷ್ಟನಾದ ಸೈತಾನನ ಮಾತಿಗೆ ಕಿವಿಗೊಟ್ಟರು.


73

ಈ ದುರಂತ ನಡೆದ ದಿನವು ಇನ್ನೇನು ಮುಕ್ತಾಯವಾಗುವ ಸಮಯದಲ್ಲಿ ದೇವರು ಎಂದಿನಂತೆ ಸಂಜೆಯ ತಂಗಾಳಿಯಲ್ಲಿ ಏದೆನ್ ತೋಟಕ್ಕೆ ಬಂದು ಆದಾಮ ಹವ್ವಳನ್ನು ಕರೆದನು. ಇಲ್ಲಿಯವರೆಗೆ ದಿನದ ಈ ಸಮಯವು ಅತ್ಯಂತ ಸಂತೋಷಕರವಾದ ಸಮಯವಾಗಿತ್ತು. ತಮ್ಮ ಸೃಷ್ಟಿಕರ್ತನಾದ ದೇವರೊಂದಿಗೆ ಒಟ್ಟಾಗಿ ನಡೆದು ಮುಖಾಮುಖಿಯಾಗಿ ಮಾತನಾಡುವ ಅವಕಾಶವು ಅದಾಗಿತ್ತು. ಆದರೆ ಇಂದು ಅವರು ಓಡಿಹೋಗಿ ತೋಟದ ಮರಗಳ ಹಿಂದೆ ಅಡಗಿಕೊಂಡರು.


74

ಕಡೆಯಲ್ಲಿ ಆದಾಮನು ಮರಗಳ ಹಿಂದಿನಿಂದ ಬಂದು ತನ್ನ ತಪ್ಪನ್ನು ಒಪ್ಪಿಕೊಂಡನು.



75

(ವಚನ: ಆದಿಕಾಂಡ ೩:೧೦)
. . . ನೀನು ತೋಟದಲ್ಲಿ ಸಂಚರಿಸುವ ಸಪ್ಪಳವನ್ನು ನಾನು ಕೇಳಿ ಬೆತ್ತಲೆಯಾಗಿದ್ದೇನಲ್ಲಾ ಎಂದು ಹೆದರಿ ಅಡಗಿಕೊಂಡೆನು. ಆದಿಕಾಂಡ ೩:೧೦


76


ಈ ಮೊದಲು ಆದಾಮನು ಎಂದೂ ಹೆದರಿಕೊಂಡಿರಲಿಲ್ಲ. ಆದರೆ ಇದು ಪಾಪದ ಪರಿಣಾಮ. ಪಾಪವು ಒಬ್ಬ ವ್ಯಕ್ತಿಯು ದೇವರಿಗೂ ಸಹ ಹೆದರಿಕೊಳ್ಳುವಂತೆ ಮಾಡುತ್ತದೆ.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



77

(ವಚನ: ಆದಿಕಾಂಡ ೩:೧೧)
. . . ಅದಕ್ಕೆ ದೇವರು – ತಿನ್ನಬಾರದೆಂದು ನಾನು ನಿನಗೆ ಆಜ್ಞಾಪಿಸಿದ ಮರದ ಹಣ್ಣನ್ನು ತಿಂದೆಯಾ?. ಎಂದು ಕೇಳಿದನು.



78

(ವಚನ: ಆದಿಕಾಂಡ ೩:೧೨)
. . . ನನ್ನ ಜೊತೆಯಲ್ಲಿರುವುದಕ್ಕೆ ನೀನು ಕೊಟ್ಟ ಸ್ತ್ರೀಯು ಆ ಮರದ ಹಣ್ಣನ್ನು ನನಗೆ ಕೊಟ್ಟಳು; ನಾನು ತಿಂದೆನು.
ಕೆಲವು ಗಂಟೆಗಳ ಮೊದಲು ಆದಾಮನ ಹವ್ವಳೊಂದಿಗೆ ಸಾಯುವುದಕ್ಕೆ ಸಿದ್ಧನಾಗಿದ್ದನು. ಈಗ ಆತನು ಹವ್ವಳನ್ನು ಮಾತ್ರವಲ್ಲದೆ, ಅವಳನ್ನು ಉಂಟುಮಾಡಿದ ದೇವರನ್ನೂ ಸಹ ಧೂಷಿಸುತ್ತಿದ್ದಾನೆ. ಪಾಪವು ಪರಿಪೂರ್ಣ ಪ್ರೀತಿಯನ್ನು ಹೇಗೆ ನಾಶಮಾಡುತ್ತಿದೆ!


79

ಹವ್ವಳೂ ಸಹ ದೂಷಿಸುವುದರಲ್ಲಿ ಹಿಂದೆ ಬಿದ್ದಿಲ್ಲ. ನೀನೇನು ಮಾಡಿದಿ ಎಂದು ದೇವರು ಕೇಳಿದಾಗ ಹವ್ವಳು ಹೇಳಿದಳು:




80

ವಚನ: ಆದಿಕಾಂಡ ೩:೧೩
. . . ಸರ್ಪವು ನನ್ನನ್ನು ವಂಚಿಸಿತು; ನಾನು ತಿಂದೆನು.
ಆದಿಕಾಂಡ ೩:೧೩, ಹವ್ವಳು ದೇವರ ಮೇಲೆಯೇ ದೋಷಾರೋಪಣೆ ಮಾಡಿದಳು. ಸರಳವಾಗಿ ಹೇಳುವುದಾದರೆ ನೀನು ಉಂಟುಮಾಡಿದ ಸರ್ಪವೇ ನನ್ನನ್ನು ತೊಂದರೆಗೊಳಪಡಿಸಿತು. ಎಂದು ಹವ್ವಳು ದೇವರಿಗೆ ಹೇಳಿದಳು.


81

ಆ ದಿನವೇ ಆದಾಮ ಮತ್ತು ಹವ್ವಳು ಮರಣಕ್ಕೆ ಪಾತ್ರರಾದರು. ಆದಾಮ ಮತ್ತು ಹವ್ವಳು ಜೀವವೃಕ್ಷದ ಹಣ್ಣನ್ನು ತಿನ್ನದಂತೆ ದೇವರು ಅವರನ್ನು ಏದೆನ್ ತೋಟದಿಂದ ಹೊರಡಿಸಿಬಿಟ್ಟನು, ಪಿಶಾಚನು ಅವರು ಸಾಯುವುದಿಲ್ಲವೆಂದು ಹೇಳಿದನು, ಆದರೆ ಸತ್ಯವೇದವು;



82

ವಚನ: ಆದಿಕಾಂಡ ೫:೫
ಆದಾಮನು ಒಟ್ಟು ಒಂಭೈನೂರ ಮೂವತ್ತು ವರುಷ ಬದುಕಿ ಸತ್ತನು.
ಆದಿಕಾಂಡ ೫:೫
ಬಹಳ ತಡವಾಯಿತು. ಪಿಶಾಚನು . . .

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



83

(ವಚನ: ಯೋಹಾನ ೮:೪೪) . . .ಸೈತಾನನು ಸುಳ್ಳುಗಾರನೂ ಸುಳ್ಳಿಗೆ ಮೂಲಪುರುಷನೂ ಆಗಿದ್ದಾನೆ
ಯೋಹಾನ ೮:೪೪


84

ಲೋಕದಲ್ಲಿ ನೆಡೆಯುುವ ನಾಶ, ಸಂಕಟಗಳಿಗೆ ದೇವರನ್ನು ದೂಷಿಸುವುದು ಬಹಳ ಸುಲಭ. ಆದರೆ ಈ ಎಲ್ಲಾ ನಾಶಕ್ಕೆ ಸೈತಾನಾನೇ ನಿಜವಾದ ಕಾರಣನಾಗಿದ್ದಾನೆ.



85


(ವಿಡಿಯೋ: ೧೦ ಸೆಕೆಂಡುಗಳು)
ಈ ಲೋಕಕ್ಕೆ ಕಷ್ಟವನ್ನು ತಂದವನು ಆತನೇ ಮತ್ತು ಅಂದಿನಿಂದಲೂ ಪಾಪ ಮತ್ತು ಕಷ್ಟ ನೋವುಗಳಿಗೆ ಆತನೇ ಕಾರಣ. ಯೇಸುಸ್ವಾಮಿಯವರು ಸೈತಾನನ ಮುಖವಾಡವನ್ನು ಕಳಚಿ ಆತನು ಹೇಗೆ ಜನರನ್ನು ತೊಂದರೆಗೊಳಿಸುತ್ತಿದ್ದಾನೆಂದು ತೋರಿಸಿಕೊಟ್ಟರು.


86

ಒಂದು ಸಬ್ಬತ್ತಿನಲ್ಲಿ ಯೇಸುಸ್ವಾಮಿಯವರು ದೇವಾಲಯದಲ್ಲಿ ಭೋದಿಸುತ್ತಿರುವಾಗ ದೆವ್ವ ಹಿಡಿದು ನಡು ಬೊಗ್ಗಿ ಹೋದ ಒಬ್ಬ ಸ್ತ್ರೀಯನ್ನು ಕಂಡರು. ಆಕೆಯ ತೊಂದರೆಯನ್ನು ನೋಡಿದ ಅವರು ಹೃದಯ ಕರಗಿದವರಾಗಿ ಅವಳನ್ನು ಸ್ವಸ್ಥ ಮಾಡಿದರು.



87

ಆ ದಿನವು ದೇವರ ಪರಿಶುದ್ಧ ಆರಾಧನೆಯ ಸಬ್ಬತ್ ದಿನವಾದ್ದರಿಂದ ದೇವಾಲಯದ ಅಧಿಕಾರಿಯು ತಕ್ಷಣವೇ ಸ್ವಾಮಿಯನ್ನು ಟೀಕಿಸಿದನು. ಆದರೆ ಯೇಸುವು ಕೊಟ್ಟ ಉತ್ತರ ನೋಡಿ;



88

(ವಚನ ೨ ಸ್ಲೈಡುಗಳು ಲೂಕ ೧೩:೧೬)
ಹಾಗಾದರೆ ಹದಿನೆಂಟು ವರುಷಗಳ ತನಕ ಸೈತಾನನು ಕಟ್ಟಿ ಹಾಕಿದ್ದವಳೂ, ಅಬ್ರಹಾಮನ ವಂಶದವಳೂ ಆಗಿರುವ. . .



89

 . . .ಈಕೆಯನ್ನು ಸಬ್ಬತ್‌ದಿನದಲ್ಲಿ ಈ ಕಟ್ಟಿನೊಳಗಿಂದ ಬಿಡಿಸಬಾರದೋ?
ಲೂಕ ೧೩:೧೬

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



90

ಸೈತಾನನು ಈ ಸ್ತ್ರೀಯನ್ನು ಹದಿನೆಂಟು ವರುಷಗಳ ಕಾಲ ಕಟ್ಟಿಹಾಕಿದ್ದನು ಎಂದು ಯೇಸು ಹೇಳಿದನು. ಸೈತಾನನು ತಾನೇ ತಪ್ಪಿತಸ್ಥ! ಸೈತಾನನು ಮಾತ್ರವೇ ಎಲ್ಲಾ ವಿಧವಾದ ರೋಗರುಜಿನಗಳು, ಕಷ್ಟ, ಸಂಕಟ, ನೋವು ಮತ್ತು ಮರಣಕ್ಕೆ ಕಾರಣವಾಗುವ ದುಷ್ಟಶಕ್ತಿಯಾಗಿದ್ದಾನೆ.




91

ಯೋಬನ ಗ್ರಂಥ ಮೊದಲನೆ ಅಧ್ಯಾಯದಲ್ಲಿ ಸೈತಾನನು ಮತ್ತು ದೇವರ ನಡುವೆ ನಡೆದ ಸಂಭಾಷಣೆಯಲ್ಲಿ ಸೈತಾನನ ಕುಟಿಲ ತಂತ್ರವು ಬಹಳ ಸ್ಪಷ್ಟವಾಗಿ ತೋರಿಸಲ್ಪಟ್ಟಿದೆ.



92

ಸೈತಾನನು ಪರಲೋಕದಿಂದ ದೊಬ್ಬಲ್ಪಟ್ಟ ಕೆಲವು ಕಾಲದ ನಂತರ ದೇವಕುಮಾರರು ದೇವರ ಸನ್ನಿಧಿಯಲ್ಲಿ ಕೂಡಿ ಬಂದರು. ಸೈತಾನನು ಸಹ ಅಲ್ಲಿಗೆ ಬಂದನು. ಅದರ ಬಗ್ಗೆ ಯೋಚಿಸಿ! ದೇವಕುಮಾರರ ಸಭೆಗೆ ಸೈತಾನನು ಆಹ್ವಾನಿಸಲ್ಪಡದೆ ಬಂದಿದ್ದನು.



93

(ವಚನ ೨ ಸ್ಲೈಡುಗಳು : ಯೋಬನು ೧:೭)
ಯೆಹೋವನು ಸೈತಾನನನ್ನು ಎಲ್ಲಿಂದ ಬಂದಿ ಎಂದು ಕೇಳಿದನು. ಯೋಬನು ೧:೭
ಬೇರೆ ಮಾತಿನಲ್ಲಿ ಹೇಳುವುದಾದರೆ ನಿನ್ನನ್ನು ಯಾರು ಆಹ್ವಾನಿಸಿದರು? ಇಲ್ಲಿಗೆ ಬರಲು ನಿನಗೆ ಯಾವ ಹಕ್ಕಿದೆ? ಅದಕ್ಕೆ ಸೈತಾನನು ದೇವರಿಗೆ ಹೀಗೆ ಉತ್ತರಿಸಿದನು;



94

ಭೂಲೋಕದಲ್ಲಿ ಸಂಚರಿಸುತ್ತಾ ಅಲ್ಲಲ್ಲಿ ತಿರುಗುತ್ತಾ ಇದ್ದು ಬಂದೆನು. ಯೋಬನು ೧:೭, ಸೈತಾನನು ಭೂಲೋಕದ ಮೇಲೆ ತನ್ನ ಅಧಿಕಾರವುಂಟೆಂದು ಪ್ರತಿಪಾದಿಸಿದನು. ಆತನು ಆದಾಮನ ಸ್ಥಾನವನ್ನು ತೆಗೆದುಕೊಂಡನು!




95

ಆದಾಮನು ದೇವರ ಮಗನೆಂದು ಕರೆಯಲ್ಪಟ್ಟಿದ್ದಾನೆ. (ಲೂಕ ३:३८) ಆ ದಿನ ದೇವರನ್ನು ಭೇಟಿ ಮಾಡಲು ಬಂದ ಇತರರೂ ಸಹ ದೇವರ ಮಕ್ಕಳೆಂದು ಕರೆಯಲ್ಪಟ್ಟಿದ್ದಾರೆ.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



96

ಆದಾಮನು ಆರಂಭದಲ್ಲಿ ನಮ್ಮ ಲೋಕದ ಪ್ರಮುಖನಾಗಿದ್ದಂತೆಯೇ ಅವರೂ ಸಹ ಒಂದು ವೇಳೆ ಇತರ ಲೋಕಗಳ ಪ್ರಮುಖರೋ? ಹೇಗಿದ್ದರೂ, ಸೈತಾನನು ತಾನು ಈ ಭೂಲೋಕದ ಅಧಿಪತಿ ಎಂದು ಹೇಳಿಕೊಂಡದ್ದನ್ನು ದೇವರು ಪ್ರಶ್ನಿಸಿದನು.
ಯೆಹೋವನು ಸೈತಾನನಿಗೆ ಹೀಗೆ ಹೇಳಿದನು:




97

(ವಚನ ೪ ಸ್ಲೈಡುಗಳು: ಯೋಬನು ೧:೮, ೯, ೧೧)
ನನ್ನ ದಾಸನಾದ ಯೋಬನ ಮೇಲೆ ಗಮನವಿಟ್ಟೆಯಾ? ಅವನಿಗೆ ಸಮಾನರು ಭೂಲೋಕದಲ್ಲಿ ಎಲ್ಲಿಯೂ ಸಿಕ್ಕುವುದಿಲ್ಲ.




98

ಅವನು ದೇವರಲ್ಲಿ ಭಯಭಕ್ತಿಯುಳ್ಳವನಾಗಿ ಕೆಟ್ಟದ್ದನ್ನು ನಿರಾಕರಿಸುತ್ತಾ ನಿರ್ದೋಷಿಯೂ ಯಥಾರ್ಥಚಿತ್ತನೂ ಆಗಿದ್ದಾನೆ.



99

ಅದಕ್ಕೆ ಸೈತಾನನು – ಯೋಬನು ದೇವರಲ್ಲಿ ಭಯಭಕ್ತಿಯನ್ನು ಲಾಭವಿಲ್ಲದೆ ಇಟ್ಟಿದ್ದಾನೋ?




100

ಆದರೆ ನಿನ್ನ ಕೈನೀಡಿ ಅವನ ಸೊತ್ತನ್ನೆಲ್ಲಾ ಅಳಿಸಿಬಿಡು; ಆಗ ಅವನು ನಿನ್ನ ಎದುರಿಗೆ ನಿನ್ನನ್ನು ದೂಷಿಸಲೇ ದೂಷಿಸುವನು ಅಂದನು. ಯೋಬನು ೧:೮, ೯, ೧೧


101


ಎಂತಹ ಸವಾಲು! ಯೋಬನು ದೇವರಿಗೆ ನಿಷ್ಠೆಯಾಗಿರುವುದು ಆತನು ದೇವರನ್ನು ಪ್ರೀತಿಸಿ ವಿಶ್ವಾಸವಿಟ್ಟಿರುವುದರಿಂದ. ಆದರೆ ದೇವರು ಆತನನ್ನು ಆಶೀರ್ವದಿಸಿ ಅಭಿವೃದ್ಧಿ ಪಡಿಸುವುದರಿಂದಲೇ ಎಂದು ಸೈತಾನನು ಪ್ರತಿಪಾದಿಸಿದನು.



102

(ವಚನ ೨ ಸ್ಲೈಡುಗಳು: ಯೋಬನು ೧:೧೨)
ಯೆಹೋವನು ಸೈತಾನನಿಗೆ – ಅವನ ಸ್ವಾಸ್ತ್ಯವೆಲ್ಲಾ ನಿನ್ನ ಕೈಯಲ್ಲಿದೆ, ನೋಡು. ಆದರೆ ಅವನ ಮೈಮೇಲೆ ಮಾತ್ರ ಕೈಹಾಕಬೇಡ ಎಂದು ಅಪ್ಪಣೆಕೊಟ್ಟನು.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



103

ಆಗ ಸೈತಾನನು ಯಹೋವನ ಸನ್ನಿಧಾನದಿಂದ ಹೊರಟುಹೋದನು. ಯೋಬನು ೧:೧೨ ಸೈತಾನನು ಯೋಬನ ಸ್ವಾಸ್ತ್ಯವನ್ನು ನಾಶಮಾಡಬೇಕೆಂಬ ಉದ್ದೇಶದಿಂದ ತ್ವರೆಯಾಗಿ ಹೊರಟುಹೋದನು.


104

ಶೀಘ್ರದಲ್ಲಿಯೇ ಯೋಬನಿಗೆ ಆಘಾತಗಳು ಆರಂಭವಾದವು. ಮೊದಲನೆಯದಾಗಿ ಶೆಬದವರು ಅವನ ಪಶುಗಳನ್ನೆಲ್ಲಾ ಸೂರೆ ಮಾಡಿ ಅವನ ಆಳುಗಳನ್ನೆಲ್ಲಾ ಕೊಂದು ಹಾಕಿದರು.


105

ಎರಡನೆಯದಾಗಿ ಬೆಂಕಿ ಆಕಾಶದಿಂದ ಬಿದ್ದು ಕುರಿಗಳನ್ನು, ಆಳುಗಳನ್ನು ದಹಿಸಿಬಿಟ್ಟಿತು.


106


ಮೂರನೇಯದಾಗಿ ಕಸ್ದೀಯರು ಯೋಬನ ಒಂಟೆಗಳನ್ನೆಲ್ಲಾ ಸೂರೆ ಮಾಡಿಕೊಂಡು ಹೋದರು.


107

ನಾಲ್ಕನೆಯದಾಗಿ ಬಹಳ ಹೃದಯವನ್ನು ಛಿದ್ರಗೊಳಿಸುವ ವಿಷಯ; ಒಂದು ದೊಡ್ಡ ಬಿರುಗಾಳಿಯು ಯೋಬನ ದೊಡ್ಡ ಮಗನ ಮನೆಯ ಮೇಲೆ ಬೀಸಿ ಅದನ್ನು ನಾಶಪಡಿಸಿತು. ಔತಣ ಕೂಟದಲ್ಲಿದ್ದ ಯೋಬನ ಎಲ್ಲಾ ಹತ್ತು ಮಂದಿ ಮಕ್ಕಳು ಕೊಲ್ಲಲ್ಪಟ್ಟರು.


108


ದೇವರು ತನ್ನ ಎಲ್ಲಾ ಸ್ವಾಸ್ತ್ಯವನ್ನು ನಾಶಪಡಿಸಿ ಮಹಾವೇದನೆಯನ್ನುಂಟು ಮಾಡಿದ್ದಾನೆಂದು ಪಾಪ, ಯೋಬನು ತಿಳಿದುಕೊಂಡನು, ಸೈತಾನನು ಇದಕ್ಕೆಲ್ಲಾ ಕಾರಣನೆಂದು ಅವನಿಗೆ ತಿಳಿಯಲಿಲ್ಲ! ಯೋಬನಿಗೆ ಬಹಳ ದುಃಖವಾದರೂ ಸಹ, ದೇವರಲ್ಲಿದ್ದ ಅವನ ನಿಷ್ಠೆಯು ಬದಲಾಗಲಿಲ್ಲ.



109


ಆದರೆ ನಿನ್ನ ಕೈಚಾಚಿ ಅವನ ಅಸ್ತಿ ಮಾಂಸಗಳನ್ನು ಹೊಡೆ; ಅವನು ನಿನ್ನ ಮುಖದೆದುರಿಗೆ ನಿನ್ನನ್ನು ದೂಷಿಸಲೇ ದೂಷಿಸುವನು ಅಂದನು.
ಯೋಬನು ೨:೬
ಯೊಹೋವನು ಸೈತಾನನಿಗೆ – ಅವನು ನಿನ್ನ ಕೈಯಲ್ಲಿದ್ದಾನೆ, ನೋಡು. ಅವನ ಪ್ರಾಣವನ್ನಾದರೋ ಉಳಿಸಲೇ ಬೇಕು. ಎಂದು ಅಪ್ಪಣೆ ಕೊಟ್ಟನು.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?




110

(ವಚನ ೩ ಸ್ಲೈಡುಗಳು: ಯೋಬನು ೨:೪ – ೬)
. . . ಒಬ್ಬ ಮನುಷ್ಯನು ತನ್ನ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ತನ್ನ ಸರ್ವಸ್ವವನ್ನೂ ಕೊಡುವನು.



111

ಆದರೆ ನಿನ್ನ ಕೈಚಾಚಿ ಅವನ ಅಸ್ತಿ ಮಾಂಸಗಳನ್ನು ಹೊಡೆ, ಅವನು ನಿನ್ನ ಮುಖದೆದುರಿಗೆ ನಿನ್ನನ್ನು ದೂಷಿಸಲೇ ದೂಷಿಸುವನು ಅಂದನು.



112

ಯೊಹೋವನು ಸೈತಾನನಿಗೆ – ಅವನು ನಿನ್ನ ಕೈಯಲ್ಲಿದ್ದಾನೆ, ನೋಡು. ಅವನ ಪ್ರಾಣವನ್ನಾದರೋ ಉಳಿಸಲೇ ಬೇಕು. ಎಂದು ಅಪ್ಪಣೆ ಕೊಟ್ಟನು.
ಯೋಬನು ೨:೪ – ೬



113

ಪರೀಕ್ಷೆಯು ನಡೆಯುತ್ತಿದೆ! ಅಂತಹ ಕಷ್ಟದ ಸಮಯದಲ್ಲಿ ಯೋಬನು ದೇವರಿಗೆ ನಿಷ್ಠನಾಗಿರುತ್ತಾನೋ ಅಥವಾ ದೇವರ ಮೇಲಿನ ತನ್ನ ವಿಶ್ವಾಸ ಕಳೆದುಕೊಳ್ಳುತ್ತಾನೆಯೋ?



114

(ವಚನ ೨ ಸ್ಲೈಡುಗಳು: ಯೋಬನು ೨:೭)
ಆಗ ಸೈತಾನನು ಯೆಹೋವನ ಸನ್ನಿಧಾನದಿಂದ ಹೊರಟುಹೋದನು. . .



115

. . . ಯೋಬನ ಅಂಗಾಲು ಮೊದಲುಗೋಂಡು ನಡು ನೆತ್ತಿಯವರೆಗೂ ಕೆಟ್ಟ ಕುರುಗಳನ್ನು ಹುಟ್ಟಿಸಿ ಅವನನ್ನು ಬಾಧಿಸಿದನು.
ಯೋಬನು ೨:೭



116

ನಿಮಗೆ ಎಂದಾದರು ಕೆಟ್ಟ ಕುರು ಬಂದಿದ್ದಲ್ಲಿ, ಒಂದು ಕುರೂಪನಿಂದ ಎಷ್ಟೊಂದು ನೋವಿರುತ್ತದೆಂಬುದನ್ನು ಬಲ್ಲಿರಿ. ಅಂಗಾಲಿನಿಂದ ನಡನೆತ್ತಿಯವರೆಗೂ ಕೆಟ್ಟ ಕುರುಗಳಿದ್ದಲ್ಲಿ ಅದರಿಂದಾಗುವ ಬಾಧೆಯನ್ನು ಊಹಿಸಿಕೊಳ್ಳಿ.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



117

ಸೈತಾನನು ಯೋಬನ ಎಲ್ಲಾ ಆಸ್ತಿ, ದನಕರುಗಳು, ಆತನ ಮಕ್ಕಳು ಮತ್ತು ಆರೋಗ್ಯವನ್ನು ನಾಶಪಡಿಸಿದರೂ ಯೋಬನು ದೇವರಿಗೆ ನಿಷ್ಠವಾಗಿಯೇ ಉಳಿದನು. ಅವನು ಎಂತಹ ಭಯಭಕ್ತಿಯುಳ್ಳ ಮನುಷ್ಯ ! ಸತ್ಯವೇದವು ಹೇಳುತ್ತದೆ:




118


ಇದೆಲ್ಲದರಲ್ಲಿಯೂ ಯೋಬನು ಪಾಪ ಮಾಡಲಿಲ್ಲ; ದೇವರ ಮೇಲೆ ತಪ್ಪು ಹೊರಿಸಲೂ ಇಲ್ಲ. ಯೋಬನು ೧:೨೨


119


ಯೋಬನನ್ನು ಬಾಧೆಪಡಿಸಿದವರು ಯಾರು? ಅವನನ್ನು ಕೆಟ್ಟ ಕುರುಗಳಿಂದ ನರಳುವಂತೆ ಮಾಡಿದವರು ಯಾರು? ಸೈತಾನನು!


120

ಆತನ ದನಕರು ಪಶುಗಳನ್ನೆಲ್ಲಾ ಅಪಹರಿಸಿ ಅವನ ಆಳುಗಳನ್ನು ಕೊಂದವನು ಯಾರು? ಸೈತಾನನು!


121

ಬಿರುಗಾಳಿ ಬೀಸುವಂತೆ ಮಾಡಿ ಯೋಬನ ಗಂಡು–ಹೆಣ್ಣು ಮಕ್ಕಳನ್ನು ಕೊಂದವರು ಯಾರು? ಸೈತಾನನು!


122

ನಮ್ಮ ಪ್ರೀತಿ ಹಾಗೂ ನಿಷ್ಠೆಯನ್ನು ಪರೀಕ್ಷಿಸುವ ಸಲುವಾಗಿ ದೇವರು ಕಷ್ಟಗಳು ಬರಲು ಅನುಮತಿ ಕೊಡಬಹುದು,


123

ಆದರೆ ಲೋಕದಲ್ಲಿ ಉಂಟಾಗುವ ಎಲ್ಲಾ ದುಷ್ಟತನಕ್ಕೆ ಸೈತಾನನೇ ಮೂಲಕಾರಣವಾದ ತಪ್ಪಿತಸ್ಥ!


124

ಸೈತಾನನೆಂಬುವನು ಕೇವಲ ಕಾಲ್ಪನಿಕ ವ್ಯಕ್ತಿ ಅಥವಾ ಒಂದು ಪ್ರಭಾವವೆಂದು ನಾವು ಭಾವಿಸಿಕೊಂಡಲ್ಲಿ, ಆ ಮಹಾ ಬುದ್ಧಿಶಾಲಿಯಾದ ಸೈತಾನನನ್ನು ಎದುರಿಸಲು ನಾವು ಸಂಪೂರ್ಣವಾಗಿ ವಿಫಲರಾಗುತ್ತೇವೆ.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



125

ಪ್ರಕಟನೆ ಗ್ರಂಥದಲ್ಲಿ ಹೀಗೆ ಹೇಳುತ್ತದೆ!
ಪರಲೋಕವೇ, ಅದರಲ್ಲಿ ವಾಸಮಾಡುವವರೇ, ಹರ್ಷಗೊಳ್ಳಿರಿ.
ಭೂಮಿಯೇ, ಸಮುದ್ರವೇ, ನಿಮ್ಮ ದುರ್ಗತಿಯನ್ನು ಏನು ಹೇಳಲಿ.




126

ಪ್ರಕಟನೆ ಗ್ರಂಥದಲ್ಲಿ ಹೀಗೆ ಹೇಳುತ್ತದೆ!




127

(ವಚನ. ೨ಸ್ಲೈಡುಗಳು: ಪ್ರಕಟಣೆ ೧೨:೧೨)
ಪರಲೋಕವೇ, ಅದರಲ್ಲಿ ವಾಸಮಾಡುವವರೇ, ಹರ್ಷಗೊಳ್ಳಿರಿ.
ಭೂಮಿಯೇ, ಸಮುದ್ರವೇ, ನಿಮ್ಮ ದುರ್ಗತಿಯನ್ನು ಏನು ಹೇಳಲಿ




128

ಸೈತಾನನು ತನಗಿರುವ ಕಾಲವು ಸ್ವಲ್ಪವೆಂದು ತಿಳಿದು ಮಹಾ
ರೌದ್ರವುಳ್ಳವನಾಗಿ ನಿಮ್ಮ ಕಡೆಗೆ ಇಳಿದುಬಂದಿದ್ದಾನೆ.
ಪ್ರಕಟನೆ ೧೨:೧೨, ಪೇತ್ರನು ಈ ಎಚ್ಚರಿಕೆಯನ್ನು ನೀಡಿದ್ದಾನೆ:



129

(ವಚನ ೨ಸ್ಲೈಡುಗಳು; ೧ಪೇತ್ರನು ೫:೮)
ಸ್ವಸ್ಥ ಚಿತ್ತರಾಗಿರಿ, ಎಚ್ಚರವಾಗಿರಿ; ನಿಮ್ಮ ವಿರೋಧಿಯಾಗಿರುವ ಸೈತಾನನು
ಗರ್ಜಿಸುವ ಸಿಂಹದೋಪಾದಿಯಲ್ಲಿ. . .



130

. . .ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ.
೧ ಪೇತ್ರನು ೫:೮


131

ಸೈತಾನನು ಎಂತಹ ದುಷ್ಟ ಕೆಲಸಗಳನ್ನೇ ಮಾಡಲಿ, ಸೃಷ್ಠಿಕರ್ತನಾದ ದೇವರು ಪುನರ್^ಸೃಷ್ಟಿಯ ಒಂದು ಯೋಜನೆ ಹೊಂದಿದ್ದನು. ನಮ್ಮ ಸಾಲವನ್ನು ತೀರಿಸಿ ನಾವು ನಿತ್ಯ ಜೀವಹೊಂದಬೇಕೆಂಬ ಉದ್ದೇಶದಿಂದ ಅಮೂಲ್ಯವಾದ ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನು ಶಿಲುಭೆಯ ಮೇಲೆ ಪ್ರಾಣವನ್ನು ಕೊಟ್ಟನು.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?


132

ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಬರುತ್ತಾನೆಂದು ಸತ್ಯವೇದವು ಹೇಳುತ್ತದೆ.


133

ಸೈತಾನನು ಹೆರೋದನ ರಾಜನ ಮೂಲಕ ಮಗುವಾದ ಕ್ರಿಸ್ತನನ್ನು ಕೊಲ್ಲುವ ವಿಫಲ ಪ್ರಯತ್ನ ಮಾಡಿದನು.



134

(ವಿಡಿಯೋ : ೧೦ ಸೆಕೆಂಡುಗಳು) ಸೈತಾನನು ಪರಲೋಕದಿಂದ ಬಂದ ದೇವದೂತನಂತೆ ವೇಷ ಮಾರಿಸಿಕೊಂಡು ಅರಣ್ಯದಲ್ಲಿದ್ದ ಯೇಸುವಿನ ಬಳಿಗೆ ಮೂರು ಮಹಾ ಶೋಧನೆಗಳೊಡನೆ ಬಂದನು. (ಆದರೆ ಈ ಪ್ರಯತ್ನದಲ್ಲಿಯೂ ಸೈತಾನನು ಸೋತುಹೋದನು.)


135


ಸೈತಾನನು ಕಲ್ವಾರಿ ಶಿಲುಭೆಯ ಬಳಿ ಜನರ ಗುಂಪಿನ ಮೂಲಕ ಕ್ರಿಸ್ತನನ್ನು ನಾಶಮಾಡಲು ಪ್ರಯತ್ನಮಾಡಿದನು. (ಆತನು ಎಂದೆಂದಿಗೂ ಸೋತುಹೋದ ಶತ್ರುವಾಗಿದ್ದಾನೆ.)


136

ಅಲ್ಲಿ ಕಲ್ವಾರಿ ಶಿಲುಭೆಯಿದ್ದರೂ, ಪುನರುತ್ಥಾನವೂ ಸಹ ಅಲ್ಲಿತ್ತು! ದೇವರಿಗೆ ಸ್ತೋತ್ರವಾಗಲಿ! ದೇವರು ತನ್ನ ಮಗನನ್ನು ಕೊಟ್ಟನು. ನನ್ನ ಮತ್ತು ನಿಮ್ಮ ಸ್ಥಿತಿಯನ್ನು ಬದಲಾಯಿಸಲು ಯೇಸುವು ತನ್ನನ್ನು ತಾನೇ ಅರ್ಪಿಸಿಕೊಂಡನು. ಅದೊಂದು ವಿಜಯದ ಕ್ಷಣವಾಗಿತ್ತು. ಈ ಲೋಕದಲ್ಲಿ ಸೈತಾನನಿಂದ ಬಂಧಿಸಲ್ಪಟ್ಟ ಎಲ್ಲಾ ಸೆರೆಯಾಳುಗಳಿಗೆ ಸ್ವಾತಂತ್ರ್ಯ ನೀಡಿದ ದಿನವಾಗಿತ್ತು.


137

ಆ ದಿನದಿಂದ ಸೈತಾನನು ಸೋಲಿಸಲ್ಪಟ್ಟ ಶತ್ರುವಾದನು. ಕ್ರಿಸ್ತನು ತನ್ನ ಮರಣದ ಮೂಲಕ ಎಲ್ಲಾ ಕಷ್ಟಸಂಕಟ ಹಾಗೂ ದುಷ್ಟತ್ವವನ್ನು ನಾಶಮಾಡುವ ಅಧಿಕಾರ ಹೊಂದಿದನು. ಪೌಲನು ಇಬ್ರಿಯ ೨:೧೪ರಲ್ಲಿ ಹೀಗೆ ಬರೆಯುತ್ತಾನೆ;



138

(ವಚನ ೨ ಸ್ಲೈಡುಗಳು: ಇಬ್ರಿಯರಿಗೆ ೨:೧೪.)
ಇದಲ್ಲದೆ ಮಕ್ಕಳು ರಕ್ತಮಾಂಸಧಾರಿಗಳಾಗಿರುವುದರಿಂದ ಆತನು ಅವರಂತೆಯೇ ಆದನು. . .

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



139

. . .ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿಬಿಟ್ಟನು.


140

ಸಮಸ್ತ ವಿಶ್ವದ ಜನರ ಮುಂದೆ ತಾನು ಎಂತಹ ವ್ಯಕ್ತಿ ಎಂಬುದನ್ನು ಸೈತಾನನು ತೋರಿಸಿಬಿಟ್ಟನು. ಅಲ್ಲದೆ ಈ ಲೋಕವನ್ನು ಯಾವ ರೀತಿ ನಡೆಸುತ್ತೇನೆಂಬುದನ್ನು ಸಹ ಆತನು ಈಗಲೂ ತೋರಿಸಿಕೊಡುತ್ತಿದ್ದಾನೆ. ಬಿರುಗಾಳಿ, ಭೂಕಂಪ, ಪ್ರವಾಹ, ಅಪರಾಧ, ರೋಗರುಜಿನಗಳು, ನೋವು! ಇವೆಲ್ಲವುಗಳನ್ನು ನಾವು ನೋಡುತ್ತೇವೆ.


141

ಇವೆಲ್ಲವುಗಳ ಹಿಂದೆ ಮಹತ್ಕಾರ್ಯಗಳನ್ನು ನಡೆಸುವ ಸೈತಾನನ ಕಾರಣ ಕೈಗಳಿವೆ.


142

ಈ ದುರಂತಗಳು ದೇವರಿಂದ ಬಂದದ್ದಲ್ಲ; ಇವೆಲ್ಲವೂ ಸೈತಾನನ ಕಾರ್ಯಗಳಾಗಿವೆ.


143

ನಿಮ್ಮ ಜೀವನದಲ್ಲಿ ಬರುವ ದುಃಖ, ನೋವು, ಕಷ್ಟಗಳ ಬಗ್ಗೆ ನಿಮಗೆ ಆಶ್ಚರ್ಯವಾಗುತ್ತದೆಯೇ) ನಿಮ್ಮ ಮಕ್ಕಳನ್ನು ಅಥವಾ ಪ್ರಿಯರಾದವರನ್ನು ಕಳೆದುಕೊಂಡಾಗ ದಿಗ್ಭ್ರಮೆಯಿಂದ 'ದೇವರು ಎಲ್ಲಿ'? ಎಂದು ನೀವು ಕೇಳಬಹುದು.


144

ದೇವರಿದ್ದಾನೆಂದು ಸತ್ಯವೇದವು ಹೇಳುತ್ತದೆ. ನಿಮ್ಮ ದುಃಖ, ನೋವು, ಕಷ್ಟಗಳ ಸಮಯದಲ್ಲಿ ದೇವರು ನಿಮ್ಮೊಂದಿಗಿರುತ್ತಾನೆ. ಆತನು ಶೀಘ್ರದಲ್ಲಿಯೇ ಬಂದು ಪಾಪ, ಕಷ್ಟ ದುಃಖಗಳ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಿಸುತ್ತಾನೆ.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?


145

ಸೈತಾನನು ಅಪಹರಿಸಿದ ನಮ್ಮ ಈ ಸುಂದರವಾದ ಲೋಕವು ಅತಿ ಶೀಘ್ರದಲ್ಲಿಯೇ ರಕ್ಷಿಸಲ್ಪಡುತ್ತದೆಂಬುದು ಒಂದು ಶುಭ ಸಮಾಚಾರವಾಗಿದೆ. ಇದನ್ನು ತಿಳಿದುಕೊಂಡಾಗ ನಮ್ಮ ಎಲ್ಲಾ ಆತಂಕ, ಭಯ ಮುಂತಾದವು ಈ ಗ್ರಹದಲ್ಲಿ ಪ್ರವಾಸಮಾಡುತ್ತಿರುವ ನಮ್ಮನ್ನು ಸಮಾಧಾನಗೊಳಿಸಬೇಕು. ಮಹಾವಂಚಕನಾದ ಸೈತಾನನೆಂಬ ಪಿಶಾಚನನ್ನು ನಾಶಮಾಡಲು ದೇವರು ಒಂದು ಯೋಜನೆಯನ್ನು ಹಾಕಿಕೊಂಡಿದ್ದಾನೆ. ಆ ಯೋಜನೆ ಏನೆಂಬುದನ್ನು ಮುಂದಿನ ಕೂಟಗಳಲ್ಲಿ ತಿಳಿದುಕೊಳ್ಳೋಣ. ಸೈತಾನನ ಬಗ್ಗೆ ಸತ್ಯವೇದದಲ್ಲಿ ಏನು ಹೇಳುತ್ತದೆಂದು ತಿಳಿಯೋಣ.



146

(ವಚನ ೩ ಸ್ಲೈಡುಗಳು: ಯೆಹೆಜ್ಕೇಲನು ೨೮:೧೬, ೧೮)
ಹೌದು, ನೆರಳುಕೊಡುವ ಕೆರುಬಿಯೇ. . . ನಾನು ನಿನ್ನನ್ನು ಕಿತ್ತು ಧ್ವಂಸಮಾಡಿದೆನು.



147

ಕೆಂಡದ ಮಳೆಯ ಮಧ್ಯದಲ್ಲಿನ ನಿನ್ನ ನೆಲೆಯಿಂದ ನಾನು ನಿನ್ನನ್ನು ಕಿತ್ತು ಧ್ವಂಸಮಾಡಿದೆನು.



148

ಆದಕಾರಣ ನಾನು ನಿನ್ನೊಳಗಿಂದ ಬೆಂಕಿಯನ್ನು ಬರಮಾಡಿದೆನು. ಅದು ನಿನ್ನನ್ನು ನುಂಗಿತು
ಯೆಹೆಜ್ಕೇಲನು ೨೮:೧೮ ಪಾಪ, ಸಂಕಟಗಳು ಶಾಶ್ವತವಾಗಿ ನಾಶವಾದವು.


149

ಹೌದು, ಪ್ರಿಯರೇ, ಯೇಸುಸ್ವಾಮಿಯವರು ಬೇಗನೆ ಬರುತ್ತಾರೆ! ಜನರಿಂದ ನಿಂದನೆಗೊಳಗಾಗಿ, ಉಗುಳಿಸಿಕೊಂಡು, ನಿರಾಕರಿಸಲ್ಪಟ್ಟ ಬಡವನಾದ ಗಲಿಲಾಯದವನಂತೆ ಅಲ್ಲ. ಶಿಲುಭೆಯಲ್ಲಿ ತೂಗಾಡುತ್ತಿದ್ದಂತೆಯೂ ಅಲ್ಲ.


150


ಆದರೆ ರಾಜಾಧಿರಾಜನೂ, ಕರ್ತರ ಕರ್ತನೂ ಆಗಿ ರಾಜ್ಯವಾಳುವ ಅಧಿಕಾರ ಹೊಂದಿ ಬರುತ್ತಾನೆ. ನಾವು ಅವನನ್ನು ಎದುರುಗೊಳ್ಳಲು ಸಿದ್ಧರಾಗಿರಬೇಕು. ಆ ಅವಕಾಶವನ್ನು ಕಳೆದುಕೊಂಡರೆ ನಾವು ಸಮಸ್ತವನ್ನು ಕಳೆದುಕೊಳ್ಳುತ್ತೇವೆ.

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?



151

(ವಿಡಿಯೋ ೧೨ ಸೆಕೆಂಡುಗಳು) ಈಗ ನಮ್ಮ ಮುಂದಿರುವ ವಿಶಯವೆಂದರೆ, ನಾವು ಯಾರನ್ನು ನಂಬಬೇಕು? ಯಾರನ್ನು ಹಿಂಬಾಲಿಸಬೇಕು? ಪ್ರೀತಿ ಸ್ವರೂಪನಾದ ದೇವರನ್ನೋ ಅಥವಾ ದೊಬ್ಬಲ್ಪಟ್ಟ ಸೈತಾನನನ್ನೋ? ಸಮರಕ್ಕೆ ಯುದ್ಧಭೂಮಿ ಸಿದ್ಧವಾಗಿದೆ; ಸಮಸ್ತ ಲೋಕವೇ ಎರಡು ಗುಂಪುಗಳಾಗಿ ವಿಂಗಡಿಸಲ್ಪಟ್ಟಿದೆ. ನಿಮ್ಮ ನಿಷ್ಠೆಯು ಯಾರಿಗೆ? ನೀವು ಯಾರ ಪಕ್ಷವನ್ನು ಹಿಡಿದಿದ್ದೀರಿ?


152

ಏಕಾಂಗಿಯಾಗಿ ತಳಮಳಗೊಳ್ಳುತ್ತಿರುವ, ವೇದನೆ ಅನುಭವಿಸುತ್ತಿರುವ ಈ ಲೋಕದ ತನ್ನ ಎಲ್ಲಾ ಮಕ್ಕಳಿಗೆ ಯೇಸು ಸ್ವಾಮಿಯವರು ಪ್ರೀತಿಯ ಆಹ್ವಾನ ನೀಡುತ್ತಾರೆ.



153

(ವಚನ: ಮತ್ತಾಯ ೧೧:೨೮)
ಎಲ್ಲೈ ಕಷ್ಟ ಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು.



154

(ವಚನ: ಯೋಹಾನ ೬:೩೭)
. . .ನನ್ನ ಬಳಿಗೆ ಬರುವವರನ್ನು ನಾನು ತಳ್ಳಿಬಿಡುವುದೇ ಇಲ್ಲ. ಯೋಹಾನ ೬:೩೭ ಇದು ಮಹಾ ವರ್ತಮಾನ

೬ – ಯಾಕೆ ಇಷ್ಟೊಂದು ಕಷ್ಟ, ಸಂಕಟ?


155

ನಮ್ಮ ಜೀವನದಲ್ಲಿ ಸಂಭವಿಸುವ ದುರಂತಗಳು, ದುಃಖ, ವೇದನೆ ಮತ್ತು ನಿರಾಶೆಯ ಸಮಯದಲ್ಲಿ ಕ್ರಿಸ್ತನು ನಮ್ಮೊಂದಿಗಿರುತ್ತಾನೆ. ಈಗ ನೀವು ಅನುಭವಿಸುತ್ತಿರುವ ದುಃಖವನ್ನು ಆತನು ಬಲ್ಲನು. ರೋಗದಿಂದ ನಿಮ್ಮ ಶರೀರವು ಎಷ್ಟೋಂದು ನೋವಿನಿಂದ ತುಂಬಿದೆ ಎಂಬುದನ್ನು ಆತನು ಅರ್ಥಮಾಡಿಕೊಳ್ಳಬಲ್ಲನು. ನಿಮ್ಮ ನೋವು ಆತನಿಗೆ ತಿಳಿದಿದೆ. ಆತನ ಕೈಗಳಿಗೆ ದುಷ್ಟರಾದ ಜನರು ಮೊಳೆಗಳನ್ನು ಹೊಡೆದಾಗ ಆ ನೋವನ್ನು ಕ್ರಿಸ್ತನು ಅನುಭವಿಸಿದ್ದಾನೆ. ಏಕಾಂಗಿತನ ಏನೆಂಬುದು ಆತನಿಗೆ ಗೊತ್ತು. ಶಿಲುಭೆಯ ಮೇಲೆ ತೂಗಾಡುವಾಗ ಆ ಅಂಧಕಾರದ ಸಮಯದಲ್ಲಿ ಕ್ರಿಸ್ತನು ಒಂಟಿತನವನ್ನು ಅನುಭವಿಸಿದ್ದಾನೆ. ಬಡತನವೇನೆಂದರೆ ಆತನಿಗೆ ಗೊತ್ತು. ಧೂಳು ತುಂಬಿದ ಪ್ಯಾಲೆಸ್ಟೈನ್ ದೇಶದ ಬೀದಿಗಳಲ್ಲಿ. ಆತನಿಗೆ ಸ್ವಂತ ಮನೆಯಿಲ್ಲದೆ, ತಿನ್ನಲು ಏನೂ ಇಲ್ಲದಿರುವ ಸಮಯದಲ್ಲಿ ಹಸಿವಿನ ಬಾಧೆಯನ್ನೂ ಕ್ರಿಸ್ತನು ಅನುಭವಿಸಿದ್ದಾನೆ. ಆತನು ನಿಮಗೆ ಹೊಸ ನಿರೀಕ್ಷೆ ಹಾಗೂ ಉತ್ತೇಜನ ನೀಡುತ್ತಾನೆ. ಒಂದು ಶುಭ ಸಮಾಚಾರ ಇಲ್ಲಿದೆ. ಅತಿ ಶೀಘ್ರದಲ್ಲಿ ಯೇಸುಸ್ವಾಮಿಯವರು ತಿರುಗಿ ಈ ಲೋಕಕ್ಕೆ ಬಂದು ಜೀವನದ ಎಲ್ಲಾ ದುಃಖ ಸಂಕಟಗಳನ್ನು ಕೊನೆಗಾಣಿಸಲಿದ್ದಾರೆ. ಹೊಸ ಪ್ರಪಂಚವನ್ನು ಸೃಷ್ಟಿಸಲು ಆತನು ಬೇಗನೆ ಬರುತ್ತಾನೆ, ಪಾಪ ಮತ್ತು ಪಾಪಿಗಳೆಲ್ಲರೂ ಸಂಪೂರ್ಣವಾಗಿ ನಿರ್ಮೂಲವಾಗುತ್ತಾರೆ. ಅಂತಿಮವಾಗಿ ಸೈತಾನನು ಸಂಪೂರ್ಣವಾಗಿ ಸೋಲಿಸಲ್ಪಡುತ್ತಾನೆ. ನೂತನ ಲೋಕದಲ್ಲಿ ನಿಮಗೆ ನಿತ್ಯಜೀವಕೊಡಲು ಮತ್ತು ದೇವರ ಕುಟುಂಬಕ್ಕೆ ಸೇರಿಸಿಕೊಳ್ಳಲು ಕ್ರಿಸ್ತನು ಕಾದುಕೊಂಡಿದ್ದಾನೆ. ಆದರೆ ಒಂದು ನಿರ್ಧಾರವಾಗಬೇಕಾದರೆ, ನಿಮ್ಮ ಕರ್ತನೂ, ಗುರುವೂ ಯಾರು? ಈ ನಿರ್ಧಾರವು ಜೀವಸ್ಮರಣದ ಪ್ರಶ್ನೆ, ಈಗಲೇ ಕ್ರಿಸ್ತನನ್ನು ನಿಮ್ಮ ರಕ್ಷಕನೂ, ರಾಜನೂ, ಆಗಿ ಆರಿಸಿಕೊಳ್ಳಲಾರಿರಾ? ಆತನು ಕಾದುಕೊಂಡಿದ್ದಾನೆ. ತನ್ನ ಕರಗಳನ್ನು ಚಾಚಿಕೊಂಡು ಕರೆಯುತ್ತಿದ್ದಾನೆ. ನಾವು ಪ್ರಾರ್ಥಿಸುತ್ತಿರುವಾಗ ನೀವು ತಲೆಬಾಗಿ ಹೌದು ಸ್ವಾಮಿ, ನಾನು ಬರುತ್ತೇನೆ ಎಂದು ಹೇಳುವಿರಾ?

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.



1

ನಿಮ್ಮ ಜೀವನವನ್ನು ಸಹ ಆತನು ಬದಲಾಯಿಸಬಲ್ಲನು.


2

ಇಬ್ಬರು ಪ್ರಯಾಣಿಕರು ಅಮೆರಿಕಾ ದೇಶದಲ್ಲಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಪ್ರಯಾಣವು ಧೀರ್ಘವಾಗಿದ್ದರಿಂದ ಅವರು ನಾನಾ ವಿಷಯಗಳನ್ನು ಕುರಿತು ಮಾತಾಡುತ್ತಿದ್ದರು. ಅವರು ಹವಾಮಾನದ ಬಗ್ಗೆ ಮಾತಾಡಿದರು. ರಾಜಕೀಯದ ಬಗ್ಗೆ ಮಾತಾಡಿದರು. ತಮ್ಮ ಬಾಲ್ಯದ ಅನುಭವಗಳು, ಅವರ ಕುಟುಂಬ, ಮದುವೆ ಮುಂತಾದವುಗಳ ಬಗ್ಗೆಯೂ ಮಾತಾಡಿದರು. ಅನಂತರ ಅವರ ಸಂಭಾಷಣೆಯೂ ಧರ್ಮದ ಬಗ್ಗೆ ಹೊರಳಿತು. ಇಬ್ಬರು ಪ್ರಯಾಣಿಕರಲ್ಲಿ ಒಬ್ಬನು ದೇವರನ್ನು ನಂಬದ ನಾಸ್ತಿಕ; ಮತ್ತೊಬ್ಬನು ಕ್ರೈಸ್ತ, ಒಬ್ಬನು ದೇವರನ್ನು ಸಂಪೂರ್ಣವಾಗಿ ನಂಬದವನು, ಮತ್ತೊಬ್ಬನು ದೇವರಲ್ಲಿ ಬಲವಾದ ವಿಶ್ವಾಸ ಹೊಂದಿದ್ದವನು. ಒಬ್ಬನು ಸತ್ಯವೇದವನ್ನು ಎಂದೂ ಓದಿರಲಿಲ್ಲ; ಮತ್ತೊಬ್ಬನು ಯಾವಾಗಲೂ ತಪ್ಪದೆ ಓದುವವನು.


3

ಆ ಬಿಸಿಲು ಕಾಲದ ಮಧ್ಯಾಹ್ನದಲ್ಲಿ ಅವರು ಕ್ರಿಸ್ತನ ಬಗ್ಗೆ ಮಾತಾಡುತ್ತಿದ್ದರು, ದೇವರನ್ನು ನಂಬದ ವ್ಯಕ್ತಿಯು ತನ್ನ ಕ್ರೈಸ್ತ ಮಿತ್ರನಿಗೆ ಕೆಲವು ಪ್ರಮುಖವಾದ ಪ್ರಶ್ನೆಗಳನ್ನು ಕೇಳಿದನು. ಪ್ರಶ್ನೆಗಳು ಹೀಗಿದ್ದವು; ನೀನು ಯಾಕೆ ಕ್ರೈಸ್ತನಾಗಿದ್ದೀ? ಭೌಗೋಳಿಕ ಸನ್ನಿವೇಶದಿಂದಿಲ್ಲವೇ? ನೀನೊಂದು ಕ್ರೈಸ್ತ ದೇಶದಲ್ಲಿ ಹುಟ್ಟಿದ್ದರಿಂದಲ್ಲವೇ? ಇತರ ಮಹಾನ್ ವ್ಯಕ್ತಿಗಳಿಗಿಂತ ಯೇಸುಕ್ರಿಸ್ತನು ಹೇಗೆ ಭಿನ್ನವಾಗಿದ್ದಾನೆ? ಯೇಸುವು ಒಬ್ಬ ತತ್ವಜ್ಞಾನಿ ಅಥವಾ ಗುರುವಿಗಿಂತ ಹೆಚ್ಚಿನವನೇ? ಯೇಸು ತನ್ನ ಬಗ್ಗೆ ಹೇಳಿಕೊಂಡಿರುವುದೆಲ್ಲಾ ನಿಜವೆಂದು ನೀನು ಹೇಗೆ ಹೇಳಬಲ್ಲೆ? ಯೇಸುವು ದೇವರಾಗಿದ್ದಾನೆ ಮತ್ತು ನಿತ್ಯಜೀವದ ಆತನ ಆಹ್ವಾನವು ಸತ್ಯವೆಂದು ಹೇಗೆ ಹೇಳಬಲ್ಲೆ? ರೈಲಿನ ಪ್ರಯಾಣದಲ್ಲಿ ಆ ನಾಸ್ತಿಕನು ಕೇಳಿದ ಪ್ರಶ್ನೆಗಳು ಉತ್ತಮವಾಗಿದ್ದವು. ಆ ಕ್ರೈಸ್ತ ಸಹೋದರನು ಮೇಲಿನ ಪ್ರಶ್ನೆಗಳಿಗೆ ಅತ್ಯುತ್ತಮ ಉತ್ತರಗಳಿವೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ಮತ್ತು ಈ ಉತ್ತರಗಳನ್ನು ತಿಳಿದುಕೊಳ್ಳುವುದೆಂದರೆ ನಿತ್ಯ ಜೀವವನ್ನು ತಿಳಿದುಕೊಳ್ಳ ಬಹುದು.



4

ಈ ಲೋಕದಲ್ಲಿ ಅನೇಕ ಪ್ರಸಿದ್ಧ ವ್ಯಕ್ತಿಗಳಿದ್ದರು, ಅದರಲ್ಲಿ ಸಂದೇಹವಿಲ್ಲ, ಈ ಲೋಕವನ್ನು ಉತ್ತಮಪಡಿಸಬೇಕೆಂದು ಅನೇಕರು ಪ್ರಯತ್ನಿಸಿ ತಮ್ಮ ಕೊಡುಗೆ ನೀಡಿದ್ದಾರೆ.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.


5

ಚಕ್ರವರ್ತಿಗಳು, ಅಧ್ಯಕ್ಷರು, ಧಾರ್ಮಿಕ, ರಾಜಕೀಯ, ಸೇವಾನಾಯಕರುಗಳು, ವಿಜ್ಞಾನಿಗಳು, ಇವರೆಲ್ಲರೂ ಈ ಲೋಕದಲ್ಲಿ ತಮ್ಮ ಹೆಸರು ಬಿಟ್ಟು ಹೋಗಿದ್ದಾರೆ. ಅವರು ಲೋಕದಾಧ್ಯಂತ ಪ್ರಸಿದ್ಧರಾಗಿದ್ದಾರೆ.


6

ಇತರ ಎಲ್ಲಾ ಹೆಸರುಗಳಿಗಿಂತ ಒಬ್ಬ ವ್ಯಕ್ತಿಯ ಹೆಸರು ಉನ್ನತವಾಗಿದೆ. ಆತನ ಜನನದ ನಂತರ ಇತಿಹಾಸವೂ ಸಹ ಕ್ರಿಸ್ತಶಕ ಮತ್ತು ಕ್ರಿಸ್ತಪೂರ್ವ ಎಂದು ವಿಭಾಗಿಸಲ್ಪಟ್ಟಿದೆ. ಆತನ ಹೆಸರೇ ಯೇಸು, ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದ ಹೆಸರು ಯೇಸು, ಆತನ ಹೆಸರನ್ನು ಕೇಳಿರುವುದೂ ಬೇರೆ, ಆದರೆ ಆತನು ನಿಜವಾಗಿಯೂ ಯಾರೆಂಬುದನ್ನು ತಿಳಿದುಕೊಳ್ಳುವುದು ಬೇರೆ ವಿಷಯ.


7


ಸತ್ಯವೇದದಲ್ಲಿ ತಿಳಿಸಿರುವ ಐತಿಹಾಸಿಕ ವ್ಯಕ್ತಿಯಾದ ಯೇಸುವನ್ನು ಈ ರಾತ್ರಿ ನಿಮಗೆ ಪರಿಚಯಿಸುತ್ತೇನೆ. ಆರಂಭದಿಂದಲೇ ಪ್ರಾರಂಭಿಸೋಣ. ನಿಮಗೆ ಆಶ್ಚರ್ಯವಾಗಬಹುದು ಈ ಯೇಸು ಎಂದರೆ ಯಾರು? ಇತರರಿಗಿಂತ ಆತನು ಯಾವ ರೀತಿ ಭಿನ್ನವಾಗಿದ್ದಾನೆ? ಆತನು ಕೇವಲ ಒಬ್ಬ ಒಳ್ಳೆಯ ವ್ಯಕ್ತಿಯೋ? ನೀತಿ ಬೋಧಕನೋ ಅಥವಾ ತತ್ವಜ್ಞಾನಿಯೋ? ಆತನ ಇಬ್ಬರು ಶಿಷ್ಯರು ಈ ವಿಶಯವಾಗಿ ತಮ್ಮಲ್ಲಿ ಆಶ್ಚರ್ಯಪಡುತ್ತಿದ್ದರು.


8

ಯೇಸುಸ್ವಾಮಿಯವರು ಪುನರುತ್ಥಾನ ಹೊಂದಿದ ಆ ಭಾನುವಾರದಂದು ಎಮ್ಮಾಹು ಎಂಬ ಹಳ್ಳಿಗೆ ಹೊರಟಿದ್ದ ಇಬ್ಬರು ಶಿಷ್ಯರನ್ನು ಸಂಧಿಸಿದಾಗ.



9

ಕಳೆದ ಕೆಲವಾರು ದಿನಗಳಿಂದ ನೆರವೇರಿದ ಪ್ರವಾದನೆಗಳನ್ನು ಅವರಿಗೆ ವಿವರಿಸಿದನು.




10

(ವಚನ ೩ ಸ್ಲೈಡುಗಳು: ಲೂಕ ೨೪:೨೫, ೨೭) ಎಲಾ, ಬ
ುದ್ಧಿಯಿಲ್ಲದವರೇ, ಪ್ರವಾದಿಗಳು ಹೇಳಿದ್ದೆಲ್ಲವನ್ನು ನಂಬುವುದರಲ್ಲಿ ಮಂದ ಹೃದಯರೇ. . .



11

ಮೋಶೆಯ ಮತ್ತು ಎಲ್ಲಾ ಪ್ರವಾದಿಗಳ ಗ್ರಂಥಗಳು ಮೊದಲುಗೊಂಡು. . .




12

. . .ಸಮಸ್ತ ಗ್ರಂಥಗಳಲ್ಲಿ ತನ್ನ ವಿಷಯವಾಗಿರುವ ಸೂಚನೆಗಳನ್ನು ಅವರಿಗೆ ವಿವರಿಸಿದನು.

ಲೂಕ ೨೪:೨೫,೨೭



13

ಯೇಸುಕ್ರಿಸ್ತನೇ ಬರಬೇಕಾದ ಮೆಸ್ಸೀಯನು ಎಂಬುದನ್ನು ಸಮರ್ಥಿಸುವ ಸಾಕ್ಷಾಧಾರಗಳನ್ನು ನೋಡೋಣ.


14

ಆತನ ಅದ್ಭುತವಾದ ಜನನ


ಯೇಸುವು ಮರಿಯಳಲ್ಲಿ ಹುಟ್ಟುವುದಕ್ಕೆ ಬಹಳ ಕಾಲದ ಮೊದಲೇ ಯೇಶಾಯನು ಪ್ರವಾದಿಸಿದನು:



15

(ವಚನ ೨ ಸ್ಲೈಡುಗಳು: ಯೆಶಾಯ ೭:೧೪.)

ಇದರಿಂದ ಕರ್ತನು ತಾನೇ ನಿಮಗೆ ಒಂದು ಗುರುತನ್ನು ಕೊಡುವನು.




16

. . .ಇಗೋ, ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು.

ಯೇಶಾಯ ೭:೧೪


17

(ವಿಡಿಯೋ : ೫ ಸೆಕೆಂಡುಗಳು) ಯೇಸುವಿಗೆ ಇಮ್ಮಾನುವೇಲ್, ಯೇಸು ರಕ್ಷಕನು, ಕ್ರಿಸ್ತನು, ಮೇಸ್ಸೀಯನು ಎಂಬ ಹಲವಾರು ಹೆಸರುಗಳಿದ್ದವು, ಯೇಸುಸ್ವಾಮಿಯವರು ಕನ್ಯೆಯ ಗರ್ಭದಲ್ಲಿ ಜನಿಸುವರು ಎಂಬ ಯೇಶಾಯನ ಪ್ರವಾದನೆಯು ಆತನ ಜನನಕ್ಕಿಂತ ೬೦೦ ವರ್ಷಗಳ ಮೊದಲೇ ತಿಳಿಸಲ್ಪಟ್ಟಿತ್ತು. ಯೇಸುವೇ ಮೇಸ್ಸೀಯನು ಎಂಬುದನ್ನು ಒಬ್ಬ ದೇವದೂತನು ಈ ಪ್ರವಾದನೆಯ ಆಧಾರದ ಮೇಲೆ ಹೇಳಿದ್ದಾನೆ. ಯೇಸುವು ಕನ್ಯೆಯಾದ ಮರಿಯಳಲ್ಲಿ ಹುಟ್ಟುತ್ತಾನೆಂಬುದನ್ನು ದೇವದೂತನು ಹೇಗೆ ವಿವರಿಸಿದ್ದಾನೆಂಬುದನ್ನು ತಿಳಿಯೋಣ.




18

(ವಚನ ೨ ಸ್ಲೈಡುಗಳು: ಯೆಶಾಯ ೭:೧೪.)

ಇದರಿಂದ ಕರ್ತನು ತಾನೇ ನಿಮಗೆ ಒಂದು ಗುರುತನ್ನು ಕೊಡುವನು.


೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.



19

. . . ಅವರು ಕೂಡುವುದಕ್ಕೆ ಮುಂಚೆ ಆಕೆಯು ಪವಿತ್ರಾತ್ಮನಿಂದ ಬ ಸುರಾಗಿದ್ದದ್ದು ತಿಳಿದುಬಂತು.
ಮತ್ತಾಯ ೧:೧೮



20

ಆತನ ಜನ್ಮ ಸ್ಥಳ



21

(ವಚನ: ಮೀಕ ೫:೨)
ಎಫ್ರಾತದ ಬೆತ್ಲೆಹೇಮೇ... ಇಸ್ರಾಯೇಲನ್ನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವೆನು.
೭೦೦ ವರ್ಷಗಳ ಮೊದಲೇ ಪ್ರವಾದಿಸಲ್ಪಟ್ಟ ಹಾಗೆ ಯೇಸು ಸ್ವಾಮಿಯವರು ಅದೇ ಬೆತ್ಲೆಹೇಮೆಂಬ ಊರಿನಲ್ಲಿ ಜನ್ಮ ತಾಳಿದದ್ದು ಒಂದು ಮಹತ್ತರವಾದ ಘಟನೆಯಾಗಿದೆ.



22

(ವಚನ: ಮತ್ತಾಯ ೨:೧)
ಯೂದಾಯ ಸೀಮೆಯ ಬೆತ್ಲೆಹೇಮ್ ಎಂಬ ಊರಲ್ಲಿ ಯೇಸು ಹುಟ್ಟಿದನು.
. . ಮತ್ತಾಯ ೨:೧
ಮೀಕನ ಪ್ರವಾದನೆಯ ನೆರವೇರುವಿಕೆಯನ್ನು ಹೊಸ ಒಡಂಬಡಿಕೆಯು ದೃಢಪಡಿಸುತ್ತದೆ. ಯೇಸುವು ಒಬ್ಬ ಒಳ್ಳೆಯ ಮನುಷ್ಯನಿಗಿಂತಲೂ ಹೆಚ್ಚಿನವನು, ಆತನು ದೈವೀಕವಾಗಿ ದೇವರ ಮಗನಾಗಿದ್ದನು.
ಪ್ರವಾದಿಯಾದ ಯೇಶಾಯನು ಪ್ರವಾದಿದಿಸೆದಂತೆ ಕನ್ಯೆಯಲ್ಲಿ ಹುಟ್ಟಿದನು.
ಪ್ರವಾದಿಯಾದ ಮೀಕನು ಹೇಳಿದಂತೆ ಬೆತ್ಲೆಹೇಮಿನಲ್ಲಿ ಜನಿಸಿದನು.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.


23

ನೂರಾರು ವರ್ಷಗಳ ಮೊದಲೇ ಸತ್ಯವೇದದಲ್ಲಿನ ಪ್ರವಾದನೆಗಳು ಕ್ರಿಸ್ತನ ಜೀವಿತದ ಪ್ರಮುಖ ಘಟನೆಗಳನ್ನು ಮುಂತಿಳಿಸಿವೆ. ಈ ಎಲ್ಲಾ ಪ್ರವಾದನೆಗಳು ಖಚಿತವಾಗಿ ನೆರವೇರಲ್ಪಟ್ಟಿವೆ. ಆದಾಮ ಮತ್ತು ಹವ್ವಳು ಪಾಪಮಾಡಿದಾಗ ದೇವರು ಒಂದು ಯೋಜನೆ ಹಾಕಿದ್ದನು. ಆತನು ಮಹಾ ಪ್ರೀತಿಯಿಂದಲೇ ತನ್ನ ಕುಮಾರನಾದ ಯೇಸುವು ಸಂಪೂರ್ಣ ಜೀವನವನ್ನು ನಡೆಸಿ ನಮ್ಮ ಪಾಪಗಳಿಗೋಸ್ಕರ ತನ್ನ ಪ್ರಾಣವನ್ನು ನೀಡುವುದಕ್ಕಾಗಿ ಈ ಲೋಕಕ್ಕೆ ಕಳುಹಿಸಿದನು. ಆತನ ಮಹಾ ಯೋಜನೆಯಂತೆ ಆತನನ್ನು ರಕ್ಷಕನನ್ನಾಗಿ ಅಂಗೀಕರಿಸಿದಲ್ಲಿ ನಾವು ನಿತ್ಯ ಜೀವವನ್ನು ಪಡೆಯುವಂತೆ ನಮಗೆ ಬದಲಾಗಿ ತನ್ನ ಪ್ರಾಣವನ್ನು ಕೊಟ್ಟನು. ಇದು ತಾನೇ ರಕ್ಷಣೆಯ ಯೋಜನೆ.


24

ಎರಡು ಸಾವಿರ ವರ್ಷಗಳ ಹಿಂದೆ ಮೂಡಣ ದೇಶದ ಜ್ಞಾನಿಗಳು ಸತ್ಯವೇದವನ್ನು ಅಧ್ಯಯನ ಮಾಡಿದರು.


25

ಒಬ್ಬ ರಾಜನು ಹುಟ್ಟಿದ ಸಮಯವು ಹತ್ತಿರವಾಗಿದೆ ಮತ್ತು ನಕ್ಷತ್ರವು ಆತನ ಜನನದ ಸೂಚನೆಯಾಗಿದೆ ಎಂದು ಅವರು ತಿಳಿದಿದ್ದರು. ಬೆತ್ಲೆಹೇಮಿನಲ್ಲಿ ಯೇಸುವನ್ನು ಕಂಡು ಆತನಿಗೆ ಅಡ್ಡಬಿದ್ದು ನಮಸ್ಕರಿಸಿದರು.



26

(ವಚನ ೨ ಸ್ಲೈಡುಗಳು: ಲೂಕ ೨:೭)
ಆಕೆಯು ತನ್ನ ಚೊಚ್ಚಲ ಮಗನನ್ನು ಹೆತ್ತು ಬಟ್ಟೆಯಲ್ಲಿ ಸುತ್ತಿ. . .



27

. . .ಚತ್ರದಲ್ಲಿ ಅವರಿಗೆ ಸ್ಥಳವಿಲ್ಲದ ಕಾರಣ ಅವನನ್ನು ಗೋದಲಿಯಲ್ಲಿ ಮಲಗಿಸಿದಳು.
ಲೂಕ ೨:೭


28

ಚತ್ರದಲ್ಲಿ ಸ್ಥಳವಿರಲಿಲ್ಲ, ಆದುದರಿಂದ ಯೇಸುವನ್ನು ದನಗಳ ಕೊಟ್ಟಿಗೆಯಲ್ಲಿ ಮಲಗಿಸಲಾಯಿತು, ಆತನು ಅಸಹಾಯಕನಾಗಿ ಜನಿಸಿದನು.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.



29

ಆತನ ತಾಯಿಯಾದ ಮರಿಯಳು ಬಹಳ ಕರುಣೆಯುಳ್ಳವಳಾಗಿದ್ದಳು, ಆದರೂ ದೇವದೂತನು ದೇವಕುಮಾರನಿಗೆ ಜನ್ಮ ನೀಡುತ್ತೀಯೆಂದು ಅವಳಿಗೆ ಹೇಳಿದಾಗ ಅವಳು ಇನ್ನೂ ಬಹಳ ಚಿಕ್ಕವಳಾಗಿದ್ದಳು.



30

ಯೇಸು ಸ್ವಾಮಿಯವರು ದೇವಕುಮಾರನಾಗಿದ್ದರೂ, ತನ್ನ ತಂದೆಯಂತೆಯೇ ಅವರು ಸಂಪೂರ್ಣವಾಗಿ ದೇವರಾಗಿದ್ದಾರೆ, ಆತನು ದೇವರಿಗೆ ಸರಿಸಮಾನನಾಗಿದ್ದರೂ, ದಾಸನ ರೂಪವನ್ನು ಧರಿಸಿ ಮನುಷ್ಯರಿಗೆ ಸದೃಶನಾದನು ಎಂದು ಅಪೋಸ್ತಲನಾದ ಪೌಲನು ಹೇಳುತ್ತಾನೆ.




31

(ವಚನ ೩ ಚಿತ್ರಗಳು ಫಿಲಿಪ್ಪಿ ೨:೬)
ದೇವರಿಗೆ ಸರಿಸಮಾನನಾಗಿರುವೆನೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ.



32

ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು,




33

ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡನು. ಫಿಲಿಪ್ಪಿ ೨:೬,೭


34


ಈ ಲೋಕದಲ್ಲಿ ಜೀವಿಸಲು ಯೇಸು ನಮ್ಮ ಹಾಗೆ ಆದನು. ಆತನು ಪರಿಶುದ್ಧನೂ, ಪವಿತ್ರನೂ ಮತ್ತು ನಿಷ್ಕಳಂಕನೂ ಆಗಿದ್ದನು. ಆದಕಾರಣ ನಮಗೆ ನಿತ್ಯಜೀವವನ್ನು ಕೊಡಲು ಆತನು ಜೀವವನ್ನು ತ್ಯಾಗ ಮಾಡಲಾಯಿತು.
ಕ್ರಿಸ್ತನ ಜೀವಿತದ ಕೊನೆಯ ೨೪ಘಂಟೆಗಳ ಅವಧಿಯಲ್ಲಿ ಹಳೆಕಾಲದಲ್ಲಿ ತಿಳಿಸಿದ್ದ ಪ್ರವಾದನೆಗಳು ಪರಿಪೂರ್ಣವಾಗಿ ನೆರವೇರಿದವು.



35

ಯೂದನು ಆತನನ್ನು ಹಿಡಿದುಕೊಟ್ಟದ್ದನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.




36

(ವಚನ ಕೀರ್ತನೆ ೪೧:೯)
ನಾನು ಯಾವನನ್ನು ನಂಬಿದ್ದೆನೋ, ಯಾವನು ನನ್ನ ಮನೆಯಲ್ಲಿ ಅನ್ನಪಾನಗಳನ್ನು ತೆಗೆದುಕೊಂಡನೋ ಅಂಥ ಆಪ್ತ ಸ್ನೇಹಿತನು ನನಗೆ ಕಾಲನ್ನು ಅಡ್ಡಗೊಟ್ಟಿದ್ದಾನೆ.
ಯಾರು ಆತನನ್ನು ಹಿಡಿದುಕೊಡುತ್ತಾರೆಂದು ಪೇತ್ರನು ಯೇಸುವನ್ನು ಕೇಳಿದನು, ಮತ್ತು ಯೇಸು ಹೀಗೆ ಉತ್ತರಿಸಿದನು.



37

ನಾನು ಈ ತುತ್ತನ್ನು ಅದ್ದಿ ಯಾರಿಗೆ ಕೊಡುತ್ತೇನೋ ಅವನೇ ಯೋಹಾನ ೧೩:೨೬



38

ಹಿಡಿದುಕೊಟ್ಟವನಿಗೆ ಸಂಬಳ ಕೊಟ್ಟದ್ದು




39

ಮೂವತ್ತು ತೊಲ ಬೆಳ್ಳಿಯನ್ನು ತೂಗಿ ನನ್ನ ಸಂಬಳಕ್ಕಾಗಿ ಕೊಟ್ಟರು. ಜಕರ್ಯ ೧೧:೧೨



40

(ವಚನ ೨ ಚಿತ್ರಗಳು, ಮತ್ತಾಯ ೨೬:೧೪, ೧೫)
ಆಮೇಲೆ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಇಸ್ಕರಿಯೋತ ಯೂದನೆಂಬುವನು ಮಹಾಯಾಜಕರ ಬಳಿಗೆ ಹೋದನು.



41

ನಾನು ಅವನನ್ನು ನಿಮಗೆ ಹಿಡುಕೊಟ್ಟರೆ ನನಗೆ ಏನು ಕೊಡುತ್ತೀರಿ? ಅಂದನು, ಅವರು ಅವನಿಗೆ ಮೂವತ್ತು ನಾಣ್ಯಗಳಿಗೆ ತೂಗಿಕೊಟ್ಟರು.




42

ಆತನನ್ನು ಹೊಡೆದದ್ದು ಮತ್ತು ಪರಿಹಾಸ್ಯ ಮಾಡಿದ್ದು


೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.



43

(ವಚನ ೨ ಚಿತ್ರಗಳು. ಯೆಶಾಯ ೫೦:೬)
ಹೊಡೆಯುವವರಿಗೆ ಬೆನ್ನುಕೊಟ್ಟು ಕೂದಲು ಕೀಳುವವರಿಗೆ ಗಡ್ಡವನ್ನು ಒಡ್ಡಿದೆನು.



44

ಉಗುಳಿಸಿಕೊಳ್ಳುವ ಅವಮಾನಕ್ಕೆ ನನ್ನ ಮುಖವನ್ನು ಮರೆಮಾಡಲಿಲ್ಲ. ಯೆಶಾಯ ೫೦:೬



45

ಆಗ ಆತನ ಮುಖದ ಮೇಲೆ ಉಗುಳಿ ಆತನನ್ನು ಗುದ್ದಿದರು, ಕೆಲವರು ಆತನ ಕೆನ್ನೆಗೆ ಏಟು ಹಾಕಿದರು. ಮತ್ತಾಯ ೨೬:೬೭



46

ಆತನ ಕೈಗಳನ್ನು ಕಾಲುಗಳನ್ನು ತಿವಿದರು



47

(ವಚನ ಕೀರ್ತನೆ ೨೨:೧೬)
ಅವರು ನನ್ನ ಕೈಕಾಲುಗಳನ್ನು ತಿವಿದಿದ್ದಾರೆ. ಕೀರ್ತನೆ ೨೨:೧೬
ಕ್ರಿಸ್ತನ ಪುನರುತ್ಥಾನದ ನಂತರ ಆತನ ಶಿಷ್ಯರಲ್ಲಿ ಥೋಮನು ಹೀಗೆಂದನು




48

(ವಚನ ೨ ಚಿತ್ರಗಳು. ಯೋಹಾನ ೨೦:೨೫)
ನಾನು ಆತನ ಕೈಗಳಲ್ಲಿ ಮೊಳೆಗಳಿಂದಾದ ಘಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕಿದರೆ ಹೊರತು.



49

ನಾನು ನಂಬುವುದಿಲ್ಲ. ಯೋಹಾನ ೨೦:೨೫



50

ಆತನು ದ್ರೋಹಿಗಳೊಂದಿಗೆ ಎಣಿಸಲ್ಪಟ್ಟನು ಕ್ರಿಸ್ತನ ಈ ಪ್ರವಾದನೆ ಹೇಗೆ ನೇರವಾಗಿ ನೆರವೇರಿತೆಂದು ಗಮನಿಸಿರಿ.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.



51

(ವಚನ ಯೆಶಾಯ ೫೩:೧೨)
ದ್ರೋಹಿಗಳೊಂದಿಗೆ ಎಣಿಸಲ್ಪಟ್ಟನು.




52

(ವಚನ ೨ ಚಿತ್ರಗಳು. ಮಾರ್ಕ ೧೫:೨೭, ೨೮)
ಇದಲ್ಲದೆ ಇಬ್ಬರು ಕಳ್ಳರನ್ನು ತಂದು ಒಬ್ಬನನ್ನು ಆತನ ಬಲಗಡೆಯಲ್ಲಿ ಒಬ್ಬನನ್ನು ಎಡಗಡೆಯಲ್ಲಿ ಆತನ ಸಂಗಡ ಶಿಲುಭೆಗೆ ಹಾಕಿದರು.




53

ಆತನು ಅಧರ್ಮಿಗಳ ಸಂಗಡ ಎಣಿಸಲ್ಪಟ್ಟನು ಎಂಬ ಶಾಸ್ತ್ರ ವಚನವು ಹೀಗೆ ನೆರವೇರಿತು. ಮಾರ್ಕ ೧೫:೨೭, ೨೮



54

ಆತನ ಅಂಗಿಗಾಗಿ ಚೀಟು ಹಾಕಿದರು
ಯೇಸು ಸಾಯಲು ಒಂದು ಸಾವಿರ ವರುಷಗಳಿಗೆ ಮೊದಲು
ಏನಾಗುತ್ತದೆಂದು ರಾಜನಾದ ದಾವೀದನು ಹೇಳಿದನು .



55

(ವಚನ ಕೀರ್ತನೆ ೨೨:೧೮)
ನನ್ನ ಮೇಲೊದಿಕೆಯನ್ನು ತಮ್ಮಲ್ಲಿ ಪಾಲುಮಾಡಿಕೊಳ್ಳುತ್ತಾರೆ. ನನ್ನ ಅಂಗಿಗೊಸ್ಕರ ಚೀಟು ಹಾಕುತ್ತಾರೆ.




56

(ವಚನ ೩ ಚಿತ್ರಗಳು. ಯೋಹಾನ ೧೯:೨೩, ೨೪)
ಸಿಪಾಯಿಗಳು ಆತನ ಮೇಲ್ಹೊದಿಕೆಯನ್ನು ತಕ್ಕೊಂಡು ೪ ಪಾಲು ಮಾಡಿದರು.



57


ಆತನ ಒಳಂಗಿಯನ್ನು ಸಹ ತಕ್ಕೊಂಡರು; ಆ ಅಂಗಿಗೆ ಹೊಲಿಗೆ ಇರಲಿಲ್ಲ, ಅದು ಮೇಲಿನಿಂದ ಅಖಂಡವಾಗಿ ಹೆಣೆದದ್ದಾಗಿತ್ತು.



58

ನಾವು ಇದನ್ನು ಹರಿಯಬಾರದು ಚೀಟಿಹಾಕಿ ಇದು ಯಾರಿಗೆ ಬರುವುದೋ ನೋಡೋಣ ಅಂದರು.
ಯೊಹಾನ ೧೯:೨೩, ೨೪

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.




59

ಶಿಲುಭೆಯ ಮೇಲೆ ಆತನ ಮಾತುಗಳು



60

(ವಚನ ಕೀರ್ತನೆ ೨೨:೧)
ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈ ಬಿಟ್ಟದ್ದೀ?
ಕೀರ್ತನೆ ೨೨:೧. ಹಳೆ ಒಡಂಬಡಿಕೆಯ ವಚನವನ್ನು ಮತ್ತಾಯ ೨೭:೪೬ಕ್ಕೆ ಹೋಲಿಸಿರಿ?



61

(ವಚನ ಮತ್ತಾಯ ೨೭:೪೬)
ನನ್ನ ದೇವರೇ, ನನ್ನನ್ನು ದೇವರೇ, ಯಾಕೆ ನನ್ನನ್ನು ಕೈ ಬಿಟ್ಟದ್ದೀ?
ಯೇಸು ಈ ಮಾತುಗಳನ್ನು ಆತನು ಸಾಯಲು ೩ ಗಂಟೆಗೆ ಮೊದಲು ತಿಳಿಸಿದನು.



62

ಅನೇಕ ಪ್ರವಾದನೆಗಳು ಯೇಸುವಿನ ಮಾನವ ಬಂಧನಕ್ಕಿಂತಲೂ ಹೆಚ್ಚಿನವು.




63

ಹುಟ್ಟಬೇಕಾದ ಸ್ಥಳವನ್ನು ಆತನು ಸರಿಪಡಿಸಲಾಗಲಿಲ್ಲ.



64

ಆತನ ಜನನದ ವಿಧಾನ



65

ಆತನನ್ನು ಹಿಡಿದುಕೊಟ್ಟದ್ದು

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.



66

ಇಲ್ಲವೇ ಆತನ ಮರಣಕ್ಕೆ ಸೇರಿದ ಸಂಭವನೆಗಳು


67

ಯೇಸು ತಾನು ಹೇಳಿಕೊಂಡಂತೆ ನಿಜವಾಗಿ ಆತನು ಮೆಸ್ಸೀಯನಾಗಿದ್ದಾನೆ ಕ್ರೂರವಾಗಿ ಶಿಲುಭೆಯ ಮೇಲೆ ಆತನು ತೂಗಿದಾಗ, ಏಟಿನಿಂದ ಗಾಯಗೊಂಡ ದೇಹ, ಕೈ ಕಾಲುಗಳಲ್ಲಿ ಮೊಳೆ ಏಟು, ಮುಳ್ಳಿನ ಒಂದು ಕಿರೀಟ ಧರಿಸಿ ಪರಿಹಾಸ್ಯಮಾಡಿ, ಗೇಲಿಮಾಡಿದರು.


68

ಆತನು ಸಾವಿರಾರು ದೂತರನ್ನು ಕರೆದು ಲೋಕವನ್ನು ನಾಶಮಾಡಿ, ಆತನನ್ನು ಬಿಡಿಸಿಕೊಳ್ಳಬಹುದಾಗಿತ್ತು, ಆತನು ತನ್ನನ್ನು ರಕ್ಷಿಸಿಕೊಳ್ಳಲಿಲ್ಲ. ನಮ್ಮನ್ನು ರಕ್ಷಿಸಲಿಲ್ಲ.


69

ನನ್ನ ವಿಚಾರವಾಗಿ ಯಾರಾದರೂ ಚಿಂತಿಸುತ್ತಾರೋ ಎಂದು ಕೆಲವುವೇಳೆ ಆಶ್ಚರ್ಯಪಡುತ್ತೇವೆ? ಆತನು ಯೆರುಸಲೇಮಿನ ಹೊರಗೆ ಒಂದು ಗುಡ್ಡದಲ್ಲಿ ಅನೇಕ ಕಾಲದ ಹಿಂದೆ ಸಿದ್ಧಾಂತ ಪಡಿಸಿದನು.
ಎಂಥಾ ಪ್ರೀತಿ!
ನಮ್ಮ ಗರ್ವದ ಹೃದಯವನ್ನು ಒಡೆಯುತ್ತಾನೆ. ಆತನು ೧೦ ಸಾವಿರ ದೂತರನ್ನು ಕರೆಯ ಬಹುದಿತ್ತು. ಆದರೆ ಕರೆಯಲಿಲ್ಲ. ಇದಕ್ಕಾಗಿ ದೇವರಿಗೆ ದನ್ಯವಾದಗಳನ್ನು ಹೇಳೋಣ. ಅದಕ್ಕೆ ಬದಲಾಗಿ ನಿನಗಾಗಿ ಮತ್ತು ನನಗಾಗಿ ಸತ್ತನು.



70

ಬಹು ಪ್ರಾಮುಖ್ಯವಾದ ಪ್ರಶ್ನೆಯು. ನಿಮಗೆ ಯೇಸು ಯಾರಾಗಿದ್ದಾನೆ?


71

ನಮ್ಮ ಪಾಪದ ಜೀವಿತಗಳಿಗೆ ಬದಲಾಗಿ ಒಂದು ಪರಿಪೂರ್ಣ ಜೀವಿತವನ್ನು ಜೀವಿಸಲು ಯೇಸು ನಮ್ಮ ಗ್ರಹಕ್ಕೆ ಬಂದನು. ನಮ್ಮ ಮರಣವನ್ನು ಆತನು ಅನುಭವಿಸಲು ಆತನು ಸತ್ತನು. ಇದರಿಂದ ಸದಾಕಾಲ ಜೀವಿಸಲು ಸಾಧ್ಯವಾಯಿತು. ಆತನ ತ್ಯಾಗ ಬಲಿಯ ವಿಚಾರವಾಗಿ ಸತ್ಯವೇದವು ಹೇಳುತ್ತದೆ.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.



72

(ವಚನ ೪ ಚಿತ್ರಗಳು, ಯೆಶಾಯ ೫೩: ೩–೭)
ಅವನು ದಿಕ್ಕರಿಸಲ್ಪಟ್ಟವನು ಮನುಷ್ಯರು ಸೇರಿಸಿಕೊಳ್ಳದವನು, ಸಂಕಷ್ಟಕ್ಕೊಳಗಾದವನು, ವ್ಯಾಧಿ ಪೀಡಿತನು.



73

ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು, ನಮಗೆ ಸುಕ್ಷೇಮವನ್ನುಂಟು ಮಾಡುವ ಡಂಡನೆಯನ್ನು ಅನುಭವಿಸಿದನು, ಅವನ ಭಾಸುಂಡೆಗಳಿಂದ ನಮಗೆ ಗುಣವಾಯಿತು.



74

ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು.




75

ಅವನು ಭಾಧೆಗೆ ಒಳಗಾದನು ಬಾಯಿ ತೆರೆಯಲೇ ಇಲ್ಲ, ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆ ಇದ್ದನು. ಯೆಶಾಯ ೫೩:೩–೭


76

ಇಲ್ಲಿ ಯೇಸುವನ್ನು ಕುರಿಮರಿ ಎಂದು ತಿಳಿಸಿದೆ. ಸತ್ಯವೇದದಲ್ಲಿ ಅನೇಕ ಸಾರಿ ಕುರಿಮರಿ ಎಂದು ಕರೆಯಲ್ಪಟ್ಟಿದ್ದಾನೆ.



77

(ವಚನ ೨: ಪ್ರಕಟನೆ ೧೩:೮)
ಪ್ರಕಟನೆ ೧೩:೮ರಲ್ಲಿ ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟ ಕುರಿಮರಿಯ ಜೀವ ಬಾದ್ಯರ ಪುಸ್ತಕವೆಂದು ಹೇಳಿದೆ.



78

(ವಚನ ೨ ಚಿತ್ರಗಳು. ಪ್ರಕಟನೆ ೫:೧೮, ೧೨)
೨೪ ಹಿರಿಯರು ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದರು.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.



79

ವಧಿತನಾದ ಕುರಿಯಾದಾತನು ಯೋಗ್ಯನು
ಪ್ರಕ ೫:೧೮, ೧೨
ಕುರಿಮರಿಯಾದ ಯೇಸು ನಿತ್ಯಮರಣದಿಂದ ನಮ್ಮನ್ನು ರಕ್ಷಿಸಿ, ಅದಕ್ಕೆ ಬದಲಾಗಿ ನಮಗೆ ನಿತ್ಯಜೀವವನ್ನು ಕೊಟ್ಟನು.



80

(ವಚನ ೨ ಚಿತ್ರಗಳು, ರೋಮಾಯ ೬:೨೩)
ಪಾಪದ ಸಂಬಳ ಮರಣ.



81

ದೇವರ ಉಚಿತಾರ್ಥವಾದ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ. ರೋಮಾಯ ೬:೨೩


82

ಆದಾಮ ಹವ್ವಳು ಪಾಪಮಾಡಿದರು ಮತ್ತು ದೇವರಿಂದ ಬೇರ್ಪಟ್ಟರು. ಅವರ ತೋಟದಿಂದ ದೇವರು ಅವರನ್ನು ಹೊರಡಿಸಿದನು, ಅವರು ಜೀವವೃಕ್ಷದ ಹಣ್ಣನ್ನು ತಿನ್ನಲಾಗಲಿಲ್ಲ, ಅವರು ಸಾಯುವವರೆಗೂ ಅವರ ಬಲವು ಕುಂದುತ್ತಾ ಬಂತು.



83

(ವಚನ ೨ ಚಿತ್ರಗಳು, ಆದಿಕಾಂಡ ೩:೨೪)
ಅವರನ್ನು ಏದೆನ್ ತೋಟದಿಂದ ಹೊರಡಿಸಿ, ವನದ ಪೂರ್ವ ದಿಕ್ಕಿನಲ್ಲಿ ಕೆರೂಬಿಯರನ್ನು ಇರಿಸಿದನು.



84


ದಾರಿಯನ್ನು ಕಾಯುವದಕ್ಕೆ ಆತನು ಏದೆನ್ ವನದ ಪೂರ್ವ ದಿಕ್ಕಿನಲ್ಲಿ ಧಗಧಗನೆ ಪ್ರಜ್ವಲಿಸುತ್ತಾ ಸುತ್ತುವ ಕತ್ತಿಯನ್ನು ಇರಿಸಿದನು ಆದಿಕಾಂಡ ೩:೨೪


85

ಅವರನ್ನು ರಕ್ಷಿಸಲು ದೇವರು ಅವರಿಗೆ ಆತನ ಯೋಜನೆಯುನ್ನು ತಿಳಿಸಿದನು.


೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.



86

(ವಚನ ೨ ಚಿತ್ರಗಳು, ಆದಿಕಾಂಡ ೩:೧೫)
ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ (ಸೈತಾನನ ಹಿಂಬಾಲಕರಿಗೂ) ಈ ಸ್ತ್ರೀಯ ಸಂತಾನಕ್ಕೂ (ಕ್ರಿಸ್ತನ ಹಿಂಬಾಲಕರಿಗೂ) ಹಗೆತನವಿರುವ ಹಾಗೆ ಮಾಡುವೆನು.



87

ಆತನು (ಯೇಸು) ಸೈತಾನನ ತಲೆಯನ್ನು ಜಜ್ಜುವನು, ನೀನು (ಸೈತಾನನು) ಯೇಸುವಿನ ಹಿಮ್ಮಡಿಯನ್ನು ಕಚ್ಚುವನು. ಆದಿಕಾಂಡ ೩:೧೫



88

ಗಾಯ ಪಡಿಸುವದೆಂಬುದರ ಅರ್ಥವೇನು?



89


ಗಾಯಮಾಡುವದೆಂಬ ಇಬ್ರಿಯ ಪದಕ್ಕೆ ಜಜ್ಜುವದೆಂಬ ಅರ್ಥನೀಡುತ್ತದೆ.
ಹಿಮ್ಮಡಿಯಲ್ಲಿ ಕಚ್ಚುವದಕ್ಕಿಂತ ಒಬ್ಬರ ತಲೆಯನ್ನು ಜಜ್ಜುವದು ತೀವ್ರವಾದದು.
ಕ್ರಿಸ್ತನು ಸೈತಾನನ ಮೇಲೆ ಜಯಗೊಳ್ಳುವನು.
ದೇವರು ತನ್ನ ಯೋಜನೆಯನ್ನು ಜ್ಞಾಪಿಸಲು ಅವರನ್ನು ಹಿಂದಕ್ಕೆ ತರಲು ದೇವರು ಒಂದು ಕಾರ್ಯವನ್ನು ಮಾಡಿದನು.


90

ಆತನು ಬಲಿಯ ಪದ್ಧತಿಯನ್ನು ನೇಮಿಸಿದನು. ಒಂದು ದಿನ ಆತನು ಸತ್ತು ನಿತ್ಯ ಜೀವವನ್ನು ಯೇಸು ನೀಡುವ ಆ ಕುರಿಮರಿಯ ಮೇಲೆ ಅವರು ನಂಬಿಕೆಯನ್ನು ತೋರಿಸಬೇಕಾಗಿತ್ತು.


91


ಬಲಿಕೊಡುವ ಪದ್ಧತಿ ಯಾವಾಗ ಪ್ರಾರಂಭವಾಯಿತೆಂದು ಸತ್ಯವೇದವು ಹೇಳುವುದಿಲ್ಲ.
ಆದಾಮ ಮತ್ತು ಹವ್ವಳು ಬೆತ್ತಲೆಯಾಗಿದ್ದರು, ದೇವರು ಅವರಿಗೆ ಚರ್ಮದ ಅಂಗಿಗಳನ್ನು ಮಾಡಿ ತೊಡಿಸಿದನು, ಮುಂದಿನ ಅಧ್ಯಾಯದಲ್ಲಿ ಕಾಯನನು ಮತ್ತು ಹೇಬೇಲನು ಬಲಿಗಳನ್ನು ತಂದರು.



92


(ವಚನ ೨ ಚಿತ್ರಗಳು, ಆದಿಕಾಂಡ ೪:೪, ೫)
ಹೇಬೇಲನು ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ಕಾಣಿಕೆಯಾಗಿ ತಂದು ಅವುಗಳ ಕೊಬ್ಬನ್ನು ಹೋಮಮಾಡಿದನು.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.



93

ಯೆಹೋವನು ಹೇಬೇಲನನ್ನು ಅವನ ಕಾಣಿಕೆಯನ್ನು ಮೆಚ್ಚಿದನು.
ಆದಿಕಾಂಡ ೪:೪



94

ದೇವರು ಕಾಯನನನ್ನು ಮತ್ತು ಆತನ ಕಾಣಿಕೆಯನ್ನು ಮೆಚ್ಚಲಿಲ್ಲ, ಇದರಿಂದ ಕಾಯನನಿಗೆ ಕೋಪಬಂತು. ಹೇಬೇಲನು ದೇವರ ಕುರಿಮರಿಯನ್ನು ಸೂಚಿಸುವ ಒಂದು ಕುರಿಮರಿಯನ್ನು ತಂದನು; ಆದರೆ ಕಾಯನನು ಹೊಲದ ಬೆಳೇಯನ್ನು ತಂದನು.
ಕಾಯನನ ಕಾಣಿಕೆಯು ದೇವರ ಕುರಿಮರಿ ಕೊಲ್ಲಲ್ಪಡುವದರಲ್ಲಿ ನಂಬಿಕೆಯನ್ನು ತೋರಿಸಲಿಲ್ಲ.



95

(ವಚನ ಇಬ್ರಿಯ ೯:೨೨)
ರಕ್ತಧಾರೆಯಿಲ್ಲದೆ ಪಾಪಪರಿಹಾರವಿಲ್ಲ.


96

ದೇವರು ಇಸ್ರಾಯೇಲ್ಯರನ್ನು ಐಗುಪ್ತದಿಂದ ಹೊರತಂದಾಗ ದೇವದರ್ಶನ ಗುಡಾರದ ಮೂಲಕ ಅನೇಕ ಪಾಠಗಳನ್ನು ಕಲಿಸಿದನು. ಮೋಶೆ ಗುಡಾರವನ್ನು ಕಟ್ಟಲು ತಿಳಿಸಲ್ಪಟ್ಟಿತು. ಪರಲೋಕದಲ್ಲಿರುವ ಗುಡಾರದ ಪ್ರತಿರೂಪವು ಇದಾಗಿತ್ತು.


97

ಇದರಲ್ಲಿ ಒಂದು ಸಂಸ್ಕಾರವು ಪಸ್ಕ ಹಬ್ಬವಾಗಿತ್ತು.


98

ಮೊದಲ ತಿಂಗಳ ೧೪ನೇ ದಿನದಲ್ಲಿ ಒಂದು ಕುರಿಮರಿಯನ್ನು ಜನರು ಕೊಯ್ದು ಅದರ ರಕ್ತವನ್ನು ಬಾಗಲಿನ ನಿಲವು ಪಟ್ಟಿಗಳಿಗೆ ಜನರು ಹಚ್ಚಬೇಕಾಗಿತ್ತು. ಕುರಿಮರಿಯ ರಕ್ತದಿಂದ ಮುಚ್ಚಲ್ಪಟ್ಟಿದ್ದರೆಂದು ಅದು ಸೂಚಿಸಿತು.



99

ಸಂಹಾರಕ ದೂತನು ರಾತ್ರಿಯಲ್ಲಿ ಮನೆಗಳನ್ನು ಹಾದು ಹೋಗುವಾಗ ರಕ್ತವನ್ನು ಬಾಗಿಲಿಗೆ ಹಚ್ಚಿರುವವರಿಗೆ ಒಳಗೆ ಯಾವ ಕೇಡೂ ಆಗಲಿಲ್ಲ.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.


100

ನಾಶನದಿಂದ ನಮ್ಮನ್ನು ಬಿಡಿಸಲು ಕುರಿಮರಿಯ ರಕ್ತಮಾತ್ರ ಸಾಧ್ಯವೆಂದು ಪಸ್ಕ ಹಬ್ಬವು ಜ್ಞಾಪಕ ಪಡಿಸಿತು.
ಬಲಿ ಅರ್ಪಿಸಿದ ಪ್ರಾಣಿಗಳು ಪಾಪವನ್ನು ತೊಳೆಯಲಾಗಲಿಲ್ಲ.
ದೇವರ ಬಲಿಯಲ್ಲಿ ಜನರು ತೋರಿಸುವ ನಂಬಿಕೆಯಿಂದ ಮಾತ್ರ ಪಾಪದಿಂದ ರಕ್ಷಿಸಲ್ಪಡಲು ಸಾಧ್ಯವಿದೆ.



101

(ವಚನ ಇಬ್ರಿಯ ೯:೨೬)
ಆತನು ಪಾಪ ನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ತನ್ನನ್ನು ಯಜ್ಞಮಾಡಿಕೊಳ್ಳುವವನಾಗಿ ಪ್ರತ್ಯಕ್ಷನಾದನು. ಇಬ್ರಿಯ ೯:೨೬




102

(ವಚನ ಇಬ್ರಿಯ ೧೦:೪)
ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವುದು ಅಸಾಧ್ಯವಾಗಿದೆಯಲ್ಲಾ. ಇಬ್ರಿಯ ೧೦:೪


103

ಮೆಸ್ಸೀಯನನ್ನು ಕುರಿತು ಸ್ನಾನಿಕನಾದ ಹೋಹಾನನು ಪ್ರಕಟಿಸಿದನು?
ಯೇಸುವನ್ನು ಸೂಚಿಸಿ ಹೀಗೆಂದನು.



104

(ವಚನ ಯೋಹಾನ ೧:೨೯)
ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿಮರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು.


105

ವಿಧಿ ರೂಪವಾದ ಬಲಿಗಳ ಪದ್ದತಿಯು ದೇವರ ಕುರಿಮರಿಯಾದ ಮೆಸ್ಸೀಯನಿಗೆ ಮುನ್ಸೂಚಿಸಿತು. ಅನೇಕ ಶತಮಾನಗಳಿಂದ ಹಳೆ ಒಡಂಬಡಿಕೆಯಲ್ಲಿ ಸತ್ತ ಪ್ರತಿ ಪ್ರಾಣಿಯ ಚೆಲ್ಲಲ್ಪಟ್ಟ ರಕ್ತವು, ನಮಗಾಗಿ ಕ್ರಿಸ್ತನ ಸುರಿಸಲ್ಪಟ್ಟ ರಕ್ತವನ್ನು ಸೂಚಿಸಿತು.

೬ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.


106

ಯೇಸು ಲೋಕ ರಕ್ಷಕನಾಗಿದ್ದಾನೆ
ಯೇಸು ಕ್ಷಮೆ ನೀಡಿದ್ದಾನೆ
ಯೇಸು ಪಾಪ ವಿಮೋಚನೆ ನೀಡುತ್ತಾನೆ
ಯೇಸು ದೋಷದಿಂದ ನಮ್ಮನ್ನು ಬಿಡಿಸುತ್ತಾನೆ
ಯೇಸು ಹೇಗೆ ಜೀವಿಸಬೇಕೆಂದು ಕಲಿಸುತ್ತಾನೆ
ಯೇಸುವಿನ ಜೀವಿತವು ನಮಗೆ ಮಾದರಿಯಾಗಿದೆ
ಯೇಸು ನಮ್ಮ ಜೀವಿತಗಳಿಗೆ ಬಲ ನೀಡುತ್ತಾನೆ
ಯೇಸು ಆಂತರ್ಯದಲ್ಲಿ ನಮಗೆ ಬದಲಾವಣೆಯನ್ನು ನೀಡುತ್ತಾನೆ
ಯೇಸು ನಮಗೆ ಒಂದು ಹೊಸ ಜೀವಿತವನ್ನು ಕೊಡುತ್ತಾನೆ


107

೧೯೧೪ರಲ್ಲಿ ಅಂಟಾರ್ಟಿಕ್ ಸಮುದ್ರವನ್ನು ದಾಟಲು ಅರ್ ನೆಸ್ಟ್ ಶ್ಯಾಕಲಟನ್ನಿನ ಪ್ರಯತ್ನ ಒಂದರಲ್ಲಿ ಆತನ ಸಹಿಸುವದೆಂಬ ಹೆಸರುಳ್ಳ ಹಡಗು ಒಂದು ಮಂಜುಗಡ್ಡೆಯ ತೇಲುತ್ತಿರುವ ಚಪ್ಪಡಿಯಿಂದ ಹೊಡೆದುಹೋಯಿತು. ಅನೇಕ ದಿನಗಳವರೆಗೆ ಜನರು ಅಲೆದಾಡುತ್ತ ಎಲೆಫೆಂಟ್ ದ್ವೀಪಕ್ಕೆ ಸೇರಿದರು. ಅಲ್ಲಿ ಜನರ ಶಿಬಿರವನ್ನು ಶಾಕಲೆಂಟಿನ್ ನಿರ್ಮಿಸಿದನು. ಮುಂದಿನ ಚಳಿಗಾಲದವರೆಗೆ ಜೀವಿಸಲು ವಸ್ತುಗಳನ್ನು ಭದ್ರಪಡಿಸಿದನು. ಅವರನ್ನು ರಕ್ಷಿಸಲು ಯಾರೂ ಬರಲಿಲ್ಲವೆಂದು ತಿಳಿದನು. ಅವರು ಎಲ್ಲಿದ್ದಾರೆಂದು ಯಾರಿಗೂ ತಿಳಿಯಲಿಲ್ಲ. ಅವರು ಲೋಕದಿಂದ ದೂರವಾಗಿ, ಅಂಟಾರ್ಟಿಕ್ ಸಮುದ್ರದ ಬಿರುಗಾಳಿ ಮತ್ತು ಚಳಿಯಿಂದ ನಡುಗಿದರು. ರಕ್ಷಿಸಲು ಒಂದು ನಿರೀಕ್ಷೆ ಮಾತ್ರ ಇತ್ತು, ಒಬ್ಬರು ಬಿರುಗಾಳಿಯಿಂದ ಇರುವ ಸಮುದ್ರವನ್ನು ದಾಟಿ ಸಹಾಯಕ್ಕೆ ಬರಬೇಕಾಗಿತ್ತು. ಶ್ಯಾಕೆಲ್ಟನ್ ೫೦ ಅಡಿ ಮರದ ದೋಣಿಮಾಡಿ ಪ್ರಯಾಣಕ್ಕೆ ಸಿದ್ದನಾದನು, ೬ ಜನರನ್ನು ಮಾತ್ರ ಆರಿಸಿದನು. ಅವರು ನಾರ್ವೆಯ ಪಟ್ಟಣವನ್ನು ಸೇರಿ ದಕ್ಷಿಣ ಜಾರ್ಜಿಯಕ್ಕೆ ಹೋಗಲು ೮೦೦ ಮೈಲಿಗಳಿತ್ತು.

೭ –ಒಂದು ಜೀವಿತವು ಲೋಕವನ್ನೇ ಬದಲಾಯಿಸಿತು.


108

ಆ ವರ್ಷದ ಚಂಡಮಾರುತದ ಮಧ್ಯೆ ಪ್ರಯಾಣ ಬೆಳೆಯಿಸಲು ಅಸಾಧ್ಯವಾಗಿ ತೋರಿತು. ಆದರೆ ಶ್ಯಾಕಲೇಟನ್ ತನ್ನ ಜನರ ಜೊತೆ ಹೊರಟನು. ಅನೇಕ ದಿನಗಳು ಬಟ್ಟೆಯನ್ನು ಮುಚ್ಚಿದ ಹಡಗಿನಲ್ಲಿ ಪ್ರಯಾಣ ಬೆಳೆಯಿಸಿ, ಗಾಳಿ ಬಟ್ಟೆಯನ್ನು ಹರಿಯದ ಹಾಗೆ ಪ್ರಾರ್ಥಿಸಿದರು. ಅವರು ತೀವ್ರ ಚಳಿ, ಮಂಜುಗಡ್ಡೆಯ ನೀರು ಚೆನ್ನಾಗಿ ತಾಕಿತು, ಹಸಿವೆ ಮತ್ತು ಬಾಯಾರಿಕೆಯಿಂದ ಬಳಲಿದರು.

ಅವರ ಪ್ರಯಾಣ ಪ್ರಾರಂಭಿಸಿದ ೧೪ ದಿನಗಳ ನಂತರ ಬಾಯಾರಿಕೆಯಿಂದ ಬಳಲಿ ದಕ್ಷಿಣ ಜಾರ್ಜಿಯಾದ ಕಪ್ಪು ಬಂಡೆಗಳನ್ನು ಕಂಡರು.

ಶ್ಯಾಕಲ್ ಟನ್ ಅದನ್ನು ದಾಟಿ ಬೇರೆ ಉಳಿದವರನ್ನು ರಕ್ಷಿಸಲು ಒಂದು ಹಡಗು ಬರುವುದನ್ನು ಕಂಡನು.

ದೇವರು ನಮ್ಮ ಪರಿಸ್ಥಿತಿಯನ್ನು ಕಂಡಾಗ ನಮ್ಮ ದ್ವೀಪದಲ್ಲಿ ನಾವು ಪ್ರತ್ಯೇಕವಾಗಿರುವಾಗ ಪಾಪದ ಸಮುದ್ರದಲ್ಲಿ ಇರುವಾಗ, ಆತನು ತಾನೇ ಅಲೆಗಳಿಂದ ಕೂಡಿದ್ದ ಸಮುದ್ರದಲ್ಲಿ ಇಳಿದನು. ಮಾನವರ ದುಷ್ಟತನವಾದ ಕಾರ್ಯದಲ್ಲಿ ತಾನೇ ಪಾಲುಗೊಂಡನು.


109

ಯೇಸುವಿನ ಹಾಗೆ ಜಗತ್ತಿನಲ್ಲಿ ಯಾರೂ ಇಲ್ಲ. ನಮ್ಮನ್ನು ರಕ್ಷಿಸಲು ಆತನೊಬ್ಬನಿಂದಲೇ ಸಾಧ್ಯವಾಗಿದೆ. ನಮ್ಮ ದೋಷಗಳನ್ನು ನಮ್ಮಿಂದ ತೆಗೆದು ನಮ್ಮ ಜೀವಿತಗಳನ್ನು ಬದಲಿಸಲು ಸಾಧ್ಯವಿದೆ. ಆತನೊಬ್ಬನೇ ನಿತ್ಯಜೀವವನ್ನು ಕೊಡಬಲ್ಲನು. ಈಗಲೇ ನಿಮ್ಮ ಕೈಯನ್ನು ಮೇಲೆತ್ತಿ ಹೀಗೆ ಹೇಳಿರಿ. ಹೌದು, ಯೇಸುವೇ, ಈ ರಾತ್ರಿ ನಿನ್ನನ್ನು ನನ್ನ ಕರ್ತನು ಮತ್ತು ರಕ್ಷಕನೆಂದು ಅಂಗೀಕರಿಸುತ್ತೇನೆ. ನೀನು ನನಗಾಗಿ ಸತ್ತೆ ಎಂದು ಕರ್ತನೇ ನಾನು ನಂಬುತ್ತೇನೆ. ಹೌದು ಕರ್ತನೇ ನನ್ನ ಜೀವಿತವನ್ನು ನಿನಗೆ ಕೊಡುತ್ತೇನೆ.

ನಾನು ಪ್ರಾರ್ಥನೆ ಮಾಡುವಾಗ ನಿಮ್ಮ ಕರವನ್ನು ಮೇಲೆತ್ತಿರಿ.

೮ – ಸದಾ ಜೀವಿಸಲು ಹುಟ್ಟುವುದು



1

ಅಮರತ್ವದ ಮಾರ್ಗ.



2

(ವಿಡಿಯೋ ೧೯ ಸೆಕೆಂಡುಗಳು)
ಭೂಮಿಯು ಅದುರಿತು, ಇಡೀ ಪಟ್ಟಣದಲ್ಲಿ ಶಕ್ತಿಯುತವಾದ ಅದುರುವಿಕೆ ಉಂಟಾಯಿತು. ಆಫೀಸು ಕಟ್ಟಡಗಳು ಬಿದ್ದವು, ಮನೆಗಳು ಕುಸಿದು ಬಿದ್ದವು, ಆಸ್ಪತ್ರೆಗಳು, ಶಾಲೆಗಳು ಮತ್ತು ದೇವಾಲಯಗಳು ನಾಶವಾದವು.
ಫೆಬ್ರವರಿ ೨೦೦೧ ರಲ್ಲಿ ಎಲ್ ಸಲ್ ವೇಡರ್ ನಲ್ಲಿ ಆದ ಭೂಕಂಪದಲ್ಲಿ ೩೦೦೦ ಜನರು ಒಂದೇ ಕ್ಷಣದಲ್ಲಿ ಸತ್ತರು. ಸಾವಿರಾರು ಜನರು ಮನೆಗಳನ್ನು ಕಳೆದುಕೊಂಡರು, ಹೂತಿದ್ದ ಜನರನ್ನು ಹೊರತೆಗೆಯಲು ತ್ವರಿತದ ಸಹಾಯದ ಕೆಲಸಗಾರರು ವಿಶ್ರಮಿಸಿಕೊಳ್ಳದೆ ರಾತ್ರಿ ಹಗಲು ಹುಡುಕಿದರು. ಕೆಲವರು ಮಾತ್ರ ಬದುಕಿರುವುದನ್ನು ಕಂಡರು.
೪ ದಿನಗಳ ಕಾಲ ತಪ್ಪದೆ ಅಗೆಯುತ್ತ ಹುಡುಕುವುದನ್ನು ನಿಲ್ಲಿಸಲು ಪ್ರಯತ್ನಿಸುತ್ತಿರುವಾಗ ಕಸದ ಗುಡ್ಡೆಯ ಮಧ್ಯೆ ಚಲಿಸಿತು. ಕೋಪದಿಂದ ಅಗೆದರು.
ಆ ಸ್ಥಳದಲ್ಲಿ ೪ ಗಂಟೆಗಳ ಕಾಲ ಅಗೆದು ಮಧ್ಯ ವಯಸ್ಸಿನ ಒಬ್ಬ ವ್ಯಕ್ತಿಯನ್ನು ತೆಗೆದರು. ಆತನಲ್ಲಿ ಜೀವವಿತ್ತು, ೪ ದಿನಗಳು ಊಟ ನೀರಿಲ್ಲದೆ ಆತನು ಜೀವಿಸಿದನು. ಈ ಕಷ್ಟದ ಪರಿಸ್ಥಿತಿಯಲ್ಲಿ ಬದುಕಿರುವುದು ಹೇಗೆಂದು ಆಸ್ಪತ್ರೆಯಲ್ಲಿ ನಂತರ ಕೇಳಿದರು.
ಆತನ ಉತ್ತರವೇನೆಂದರೆ , ನಾನು ಜೀವಿಸಲು ಇಷ್ಟ ಪಟ್ಟೆ, ನಾನು ಉಸಿರಿಗಾಗಿ ತವಕ ಕೊಂಡೆನು, ನಾನು ಸಾಯಲು ಆಶಿಸಲಿಲ್ಲ. ಸಹಾಯ ಬ ರುತ್ತದೆಂದು ನಾನು ನಂಬಿದೆನು.


3

ನಾವು ಜೀವಿಸುವ ಆಸೆಯಿಂದ ಹುಟ್ಟಿದೆವು. ಈ ಲೋಕಕ್ಕೆ ನಾವು ಪ್ರವೇಶಿಸಿದಾಗ ನನಗೂ ಮತ್ತು ನಿಮಗೂ ಆ ಆಸೆ ಇತ್ತು.
ಈ ಲೋಕದಲ್ಲಿ ಜೀವಿಸಿದ ಪ್ರತಿಯೊಬ್ಬರಿಗೂ ಇತ್ತು. ನಮಗೆ ಇರುವ ಆಸೆಗಳಲ್ಲಿ ಇದು ದೊಡ್ಡದಾಗಿದೆ.
ಮಾನವರಾದ ನಾವು ಜೀವಿಸಬೇಕೆಂದು ಆಸೆಯಿಂದ ಒಟ್ಟಿಗೆ ಇದ್ದೇವೆ.


4

ಒಬ್ಬ ಮಾನವನ ಜೀವಿತವನ್ನು ಹೆದರಿಸಿದರೆ, ಇತರರನ್ನು ರಕ್ಷಿಸಲು ಜನರು ವೀರರಾಗಿ ಬಹು ದೂರ ಹೋಗುತ್ತಾರೆ.
ಒಂದು ಮಗು ಬಾವಿಯಲ್ಲಿ ಬಿದ್ದಿರಬಹುದು, ಜನರು ಹೊರ ದೇಶದಲ್ಲಿ ಹಡಗು ಒಡೆದು ಸಮುದ್ರದಲ್ಲಿರಬಹುದು.

೮ – ಸದಾ ಜೀವಿಸಲು ಹುಟ್ಟುವುದು



5

ಬೆಟ್ಟ ಹತ್ತುವವನು ಬೆಟ್ಟದ ತುದಿಯಲ್ಲಿ ಅಪಾಯಕ್ಕೆ ಸಿಕ್ಕಿಕೊಂಡಿರಬಹುದು. ಭೂಕಂಪದಿಂದ ಕಸದ ಗುಡ್ಡೆಯಲ್ಲಿ ಜನರು ಸಿಕ್ಕಿಹಾಕಿ ಕೊಂಡಿರಬಹುದು. ಆದರೆ ಒಬ್ಬನು ಜೀವಿತ ಸಮತೋಲನದಲ್ಲಿರುವಾಗ ಒಬ್ಬರಿಗೊಬ್ಬರು ಮುಂದಾಗಲು ಪ್ರಯತ್ನಿಸುತ್ತಾರೆ.



6

ಪ್ರತಿಯೊಬ್ಬರ ಜೀವಿತವನ್ನು ನಾವು ಗಮನಹರಿಸಿದರೆ, ಅಪಾಯ ಸ್ಥಿತಿಯಲ್ಲಿ ಇದ್ದೇವೆಂಬ ಸತ್ಯವನ್ನು ನಾವು ಯೋಚಿಸುವುದಕ್ಕೆ ಇಷ್ಟಪಡುವುದಿಲ್ಲ. ಅಪಾಯವಿಲ್ಲದೆ ಇರಬಹುದು. ಇಲ್ಲವೇ ನಾವೆಲ್ಲರೂ ಸಾಯಲು ತೀರ್ಮಾನವಿದೆ.




7

(ವಚನ– ರೋಮಾಪುರದವರಿಗೆ ೬:೨೩)
ಯಾಕಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವಾದ ವರವು ನಮ್ಮ ಕರ್ತನಾದ ಕ್ರಿಸ್ತಯೇಸುವಿನ್ನಲ್ಲಿರುವ ನಿತ್ಯ ಜೀವ.ರೋಮಾಪುರದವರಿಗೆ ೬:೨೩



8

ಪಾಪವು ವಿಷಕರವಾದದ್ದು , ಅದು ಮಾದಕ ವಸ್ತುವಿನಂತೆ ಅಪಾಯಕಾರಿಯಾಗಿದೆ. ಯಾಕೆ ? ಯಾಕೆಂದರೆ ಅದು ನಮ್ಮನ್ನು ಜೀವದ ಮೂಲನಾದ ದೇವರಿಂದ ನಮ್ಮನ್ನು ಸೃಷ್ಟಿಸಿದವನಿಂದ ಬೇರ್ಪಡಿಸುತ್ತದೆ. ಪ್ರತಿಯೊಬ್ಬರೂ ಪಾಪಮಾಡಿದ್ದೇವೆ.




9

(ವಚನ. ರೋಮಾಪುರದವರಿಗೆ ೩:೨೩)
ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ.ರೋಮಾಪುರದವರಿಗೆ ೩:೨೩



10


(ವಚನ. ರೋಮಾಪುರದವರಿಗೆ ೩:೧೦–೧೨)
ನೀತಿವಂತನು ಇಲ್ಲ; ಒಬ್ಬನಾದರೂ ಇಲ್ಲ.



11

ತಿಳುವಳಿಕೆಯುಳ್ಳವನು ಇಲ್ಲ; ದೇವರನ್ನು ಹುಡುಕುವವನು ಇಲ್ಲ.

೮ – ಸದಾ ಜೀವಿಸಲು ಹುಟ್ಟುವುದು




12

ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ, ಒಳ್ಳೇದನ್ನು ಮಾಡುವವನು ಇಲ್ಲ; ಒಬ್ಬನಾದರೂ ಇಲ್ಲ.ರೋಮಾಪುರದವರಿಗೆ ೩:೧೦–೧೨



13

ನಮ್ಮ ಮೂಲ ತಂದೆ ತಾಯಿಗಳಾದ ಆದಾಮ ಹವ್ವಳು ಇವರ ಮೂಲಕ ಇಡೀ ಮಾನವ ಜನಾಂಗವು ದೇವರಿಗೆ ಅವಿಧೇಯರಾಗಿ ಅವರ ಸ್ವಂತ ಮಾರ್ಗವನ್ನು ಹಿಡಿದು ದೇವರಿಂದ ಬೇರ್ಪಡಲು ಆರಿಸಿಕೊಂಡರು.



14

(ವಚನ. ರೋಮಾಪುರದವರಿಗೆ ೫:೧೨)
ಒಬ್ಬ ಮನುಷ್ಯನಿಂದಲೇ ಪಾಪವೂ, ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು.



15


ಎಲ್ಲರೂ ಪಾಪ ಮಾಡಿದ್ದರಿಂದ ಹೀಗೆ ಮರಣವು ಎಲ್ಲರಲ್ಲಿಯೂ ವ್ಯಾಪಿಸಿತು. ರೋಮಾಪುರದವರಿಗೆ ೫:೧೨.


16

ಪಾಪದ ಫಲಿತಾಂಶ ಮರಣವಾಗಿದೆ.
ಪಾಪದಿಂದ ಬರುವ ಮರಣ ಶೇಖಡ ೧೦೦ ಭಾಗವಾಗಿದೆ.
ಅವನ ಪಾಪಕ್ಕಾಗಿ ಆದಾಮನು ಸಾಯಬಹುದಾಗಿತ್ತು. ನಾವು ಪ್ರತಿಯೊಬ್ಬರೂ ಅದರಲ್ಲಿ ಸೇರಿದವರಾಗಿದ್ದೇವೆ.


17

ನಾವು ಒಂದು ಹಳ್ಳದಲ್ಲಿ ಸಹಾಯವಿಲ್ಲದೆ ಸಿಕ್ಕಿ ಹಾಕಿಕೊಂಡಿದ್ದೇವೆ.
ಯಾರಾದರೂ ನಮ್ಮನ್ನು ಕಾಪಾಡದಿದ್ದರೆ ಸಾಯಲು ಅರ್ಹರಾಗಿದ್ದೇವೆ.
ನಮ್ಮನ್ನು ಒಬ್ಬರು ರಕ್ಷಿಸದಿದ್ದರೆ ಸಾವಿಗೆ ಗುರಿಯಾಗುತ್ತೇವೆಂದು ಕೆಟ್ಟ ಸಂದೇಶವಿದೆ.
ಒಬ್ಬರು ರಕ್ಷಿಸಲಿದ್ದಾರೆಂಬುದು ಶುಭ ಸಂದೇಶವಾಗಿದೆ.




18

(ವಚನ. ಎಫೆಸ ೨:೮,೯)
ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದಾದದ್ದಲ್ಲ. ಅದು ದೇವರ ವರವೇ.

೮ – ಸದಾ ಜೀವಿಸಲು ಹುಟ್ಟುವುದು

೮ – ಸದಾ ಜೀವಿಸಲು ಹುಟ್ಟುವುದು



19

ಅದು ಪುಣ್ಯ ಕ್ರಿಯೇಗಳಿಂದ ಉಂಟಾದದ್ದಲ್ಲ. ಆದದರಿಂದ ಹೊಗಳಿ ಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ. ಎಫೆಸ ೨:೮,೯
ಹೌದು ನಾವೆಲ್ಲರೂ ಪಾಪ ಮಾಡಿದ್ದೇವೆ.
ಇದರ ವಿಷಯದಲ್ಲಿ ಸಂದೇಹವಿಲ್ಲ.
ನಾವು ಸ್ವಾರ್ಥಕಾರ್ಯದಲ್ಲಿ, ಮಾತಿನಲ್ಲಿ, ಪ್ರತಿ ಯೋಚನೆಯಲ್ಲಿ ಪಾಪ ಮಾಡುತ್ತೇವೆ.




20

ನಾವು ಪ್ರತಿ ದಿನ ಎಷ್ಟು ಸಾರಿ ಪಾಪ ಮಾಡಿದ್ದೇವೆಂದು ಯೋಚಿಸಿರಿ. ನಮ್ಮ ಸಮಸ್ಯೆ ನಾವು ಮಾಡಿದ ಪಾಪಗಳಲ್ಲಿ, ನಾವು ಪಾಪಿಗಳೆಂದು ನಿಶ್ಚಯವಾಗಿದೆ.


21

ತೀವ್ರ ಕಾಯಿಲೆ ಇರುವ ಒಬ್ಬನು, ಆತನ ಇಲ್ಲವೇ ಆಕೆಯ ಸಮಸ್ಯೆಯನ್ನು ತಿಳಿಯದವನು, ಇಲ್ಲವೇ ವೈದ್ಯಕೀಯ ಸಹಾಯ ವಿಲ್ಲದವನು ಸಾಯುತ್ತಾನೆ. ಪಾಪಿಗಳು ಅವರ ಅಧ್ಯಾತ್ಮಿಕ ಸ್ಥಿತಿಯನ್ನು ತಿಳಿದುಕೊಳ್ಳದೆ ಮತ್ತು ಸಹಾಯವನ್ನು ಹುಡುಕದೆ ಇರುವವನಿಗೆ ಅದೇ ರೀತಿ ಇರುತ್ತದೆ.



22


(ವಚನ. ಯೇಶಾಯ ೫೯:೨)
ಆದರೆ ನಿಮ್ಮ ಅಪರಾಧಗಳೇ ನಿಮ್ಮ ದೇವರಿಂದ ನಿಮ್ಮನ್ನು ಅಗಲಿಸುತ್ತಾ ಬ ಂದಿವೆ. ಯೇಶಾಯ ೫೯:೨
ದೇವರು ಎಲ್ಲಾ ಜೀವಕ್ಕೆ ಮೂಲನು, ಮತ್ತು ಆದಾಮನು ಪಾಪ ಮಾಡಿದಾಗ ಆತನು ಸಾಯಲು ಪ್ರಾರಭಿಸಿದನು.
ನಾವೆಲ್ಲರು ಮರಣದ ತಿರ್ಮಾನದ ಕಟ್ಟೆಯಲ್ಲಿ ಇದ್ದೇವೆ.
ಆದರೆ ಪ್ರೀತಿಯ ದೇವರು ರಕ್ಷಣೆಗೆ ಬಂದು ನಿರೀಕ್ಷೆಯನ್ನು ನೀಡದೆ ಪಾಪದ ಪಲಿತಾಂಶವನ್ನು ನಮಗೆ ಹೇಳಲಿಲ್ಲ.



23

(ವಚನ– ರೋಮಾಪುರದವರಿಗೆ ೬:೨೩)
ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವಾದ ವರವು ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿರುವ ನಿತ್ಯಜೀವ. ರೋಮಾಪುರದವರಿಗೆ ೬:೨೩

೮ – ಸದಾ ಜೀವಿಸಲು ಹುಟ್ಟುವುದು



24

ವಿಡಿಯೋ
ರಕ್ಷಣೆಯು ಒಂದು ಕೊಡುಗೆ.
ನಾವು ಅದನ್ನು ಪಡೆಯಲು ಅರ್ಹರಲ್ಲ.
ನಾವು ನಮ್ಮ ಒಳ್ಳೆಯ ಕ್ರಿಯೆಗಳಿಂದ ಸಂಪಾದಿಸಲಾಗದು.
ಯಾವ ಬೆಲೆಗೂ ಅದನ್ನು ಕೊಂಡುಕೊಳ್ಳಲಾಗದು.


25

ಮಾನವರು ಕ್ಷಮೆಯನ್ನು ಮತ್ತು ನಿತ್ಯ ಜೀವವನ್ನು ಒಳ್ಳೆ ಕಾರ್ಯಗಳನ್ನು ಮಾಡುವುದರಿಂದ ಪಡೆಯುತ್ತಾರೆಂದು ಅನೇಕ ಜನರು ನಂಬುತ್ತಾರೆ. ಜನರು ಮುಳ್ಳಿನ ಮಂಚದ ಮೇಲೆ ಮಲಗಿ ತಮ್ಮ ದೇಹಗಳನ್ನು ಧಂಡಿಸುವದರಿಂದ ದೇವರ ಅನುಗ್ರಹ ಪಡೆಯಬಹುದೆಂದು ನಂಬುತ್ತಾರೆ.


26

ಕೆಲವು ಜನರು ಅವರ ದೇಹಗಳನ್ನು ಚಾವಟಿಯಿಂದ ಹೊಡೆದುಕೊಂಡು ಗಾಯ ಮಾಡುವದರಿಂದ ಶಾರೀರಿಕ ತೊಂದರೆ ಪಡುವದರಿಂದ ದೇವರ ಅನುಗ್ರಹವನ್ನು ಹುಡುಕುತ್ತಾರೆ.


27

ಶರೀರವನ್ನು ಕುಂದಿಸುವ ಕಾರ್ಯವನ್ನು ಬರೀ ಕಾಲಿನಲ್ಲಿ ಬೆಂಕಿಯ ಕೆಂಡದ ಮೇಲೆ ನಡೆದು ಕೆಲವರು ದೇವರ ಆನುಗ್ರಹವನ್ನು ಹುಡುಕುತ್ತಾರೆ.


28

ದೊಡ್ಡ ದೇವರ ಗುಡಿಗಳನ್ನು ಕಟ್ಟುವುದರಿಂದ ಮತ್ತು ಸನ್ಯಾಸಿಗಳಿಗೆ ಕೊಡುವುದರಿಂದ ಮುಂದಿನ ಜೀವಿತಕ್ಕೆ ಒಂದು ಅರ್ಹತೆಯೆಂದು ಬೇರೆಯವರು ನಂಬುತ್ತಾರೆ.


29

ಇನ್ನೂ ಕೆಲವರಿಗೆ ದೇವರ ಅನುಗ್ರಹ ಪಡೆಯುವ ಉತ್ತಮ ಮಾರ್ಗ ಮೆಕ್ಕಾಕ್ಕೆ ಯಾತ್ರೆ ಹೊಗುವುದು ಇಲ್ಲವೇ ಇಸ್ಲಾಮ್ ಧರ್ಮಕ್ಕಾಗಿ ಸಾಯುವದಕ್ಕಿಂತಲೂ ಹೆಚ್ಚಿನ ಸಂತೋಷವು ಬೇರೊಂದಿಲ್ಲ ಅನ್ನುತ್ತಾರೆ.

೮ – ಸದಾ ಜೀವಿಸಲು ಹುಟ್ಟುವುದು


30

ಅನೇಕ ಕ್ರೈಸ್ತರು ತಿಳಿಯದೆ ಅದನ್ನೇ ಮಾಡುತ್ತಾರೆ.
ಅವರು ದೇವಾಲಯಕ್ಕೆ ಹೋಗುತ್ತಾರೆ. ಕಾಣಿಕೆಗಳನ್ನು ಕೊಡುತ್ತಾರೆ . ಸತ್ಯ ವೇದದ ಸುವರ್ಣ ನಿಯಮವನ್ನು ಪಾಲಿಸುತ್ತಾರೆ. ಇದರಿಂದ ದೇವರ ಅನುಗ್ರಹ ದೊರೆಯುತ್ತದೆ. ಹೀಗೆ ಮಾಡಿದರೆ ನಿತ್ಯಜೀವವನ್ನು ಪಡೆಯಬಹುದೆಂದು ನೆಡೆಸುತ್ತಾರೆ.
ಆದರೆ ಅದು ಸಾಧ್ಯವೇ ?



31

ಮಾನವನು ಯಾವುದಾದರೂ ಶಾರೀರಿಕ ಶಿಕ್ಷೆಯಿಂದ ಮಾನಸಿಕ ಯೋಚನೆಯಿಂದ ಇಲ್ಲವೇ ಕರುಣೆಯ ಕಾರ್ಯಗಳಿಂದ, ಕ್ಷಮೆ ಮತ್ತು ನಿತ್ಯ ಜೀವನವನ್ನು ಪಡೆಯಲು ದೇವರಿಗೆ ಲಂಚ ಕೊಡಬಹುದೋ ?




32

ಒಬ್ಬನು ಆಟದಲ್ಲಿ ಬಂಗಾರದ ಪದಕವನ್ನು, ಇಲ್ಲವೇ ಬಹುಮಾನವನ್ನು ಗೆದ್ದು ಪಡೆಯುವ ಹಾಗೆ ನಾವು ರಕ್ಷಣೆಯನ್ನು ಸಂಪಾದಿಸಬಹುದೋ ?



33

(ವಚನ– ಎಫೆಸ ೨:೮,೯)
ಸತ್ಯ ವೇದವು ಹೀಗೆ ಹೇಳುತ್ತದೆ. ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ. ಅದು ದೇವರ ವರವೇ.



34

ಅದು ಪುಣ್ಯ ಕ್ರಿಯೆಗಳಿಂದ ಉಂಟಾದದ್ದಲ್ಲ. ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ.
ಎಫೆಸ೨:೯


35

ನಮ್ಮ ಸ್ವಂತ ಕ್ರಿಯೆಗಳಿಂದ ನಮ್ಮನ್ನು ನಾವೇ ರಕ್ಷಸಿಕೊಳ್ಳಲಾಗದು. ನಾವು ದೇವರ ಕೃಪೆ, ಪ್ರೀತಿ ಮತ್ತು ಅನುಗ್ರಹದ ಮೇಲೆ ನಾವು ಆಕುಕೊಂಡಿರಬೇಕು; ಅದನ್ನು ಉಚಿತವಾಗಿ ಆತನು ನಮಗೆ ಕೊಡುವನು. ನಾವು ರಕ್ಷಣೆಯನ್ನು ಸಂಪಾದಿಸಿದರೆ ಅದು ಒಂದು ಕೊಡುಗೆಯಾಗಿ ಇರಲಾಗದು.


36

ಒಂದು ವೇಳೆ ನಿಮ್ಮ ಕೆಲಸದ ಯಾಜಮಾನನು ಒಂದು ಲಕೋಟೆಯನ್ನು ಕೊಟ್ಟು ನಿನಗೊಂದು ಕೊಡುಗೆಯದೆ ಎಂದು ಹೇಳಿದರೆ..

೮ – ಸಧಾ ಜೀವಿಸಲು ಹುಟ್ಟುವುದು


37

ಅದರೊಳಗೆ ಕಳೆದ ೨ ವಾರಗಳ ಸಂಬಳದ ಚೆಕ್ ಇದ್ದರೆ ಅದು ಒಂದು ಕೊಡುಗೆಯಾಗುತ್ತದೋ ? ನೀವು ಸಂಪಾದಿಸಿದ್ದರೆ ಅದು ಕೊಡುಗೆಯಾಗಲಾರದು


38


ಜಗತ್ತನ್ನು ಆಳುವ ಪರಾಕ್ರಮ ದೇವರು ಯಾಕೆ ಶ್ರದ್ದೆ ವಹಿಸಿದ್ದಾನೆ?



39

(ವಿಡಿಯೋ ೧೨ ಸೆಕೆಂಡುಗಳು)
ಈ ಗ್ರಹದ ಕೊನೆಯ ತುದಿಯಲ್ಲಿರುವ ಜನರ ಮೇಲೆ ಯಾಕೆ ಚಿಂತಿಸಬೇಕು?

ಯಾಕೆ ಸ್ವಾರ್ಥತೆಯ, ಹಟಮಾರಿ ವ್ಯಕ್ತಿಯನ್ನು ತಳ್ಳಿ ಹೀಗೆ ಪಾಪದ ಫಲಿತಾಂಶದಲ್ಲಿ ಕಷ್ಟಪಡುವ ಹಾಗೆ ಯಾಕೆ ಬಿಡಬಾರದು ?



40

(ವಚನ–೧ ಯೋಹಾನ ೪:೮)
ಉತ್ತರವು ಯೋಹಾನನ ಪತ್ರಿಕೆಯಲ್ಲಿದೆ.
೧ ಯೋಹಾನ ೪:೮


41

ಕೆಲವರು ನೀವು ತಂದೆ ತಾಯಿಗಳಾಗಿದ್ದೀರಿ.


42

ಒಬ್ಬ ಮಗುವಿಗೆ ಕಾಯಲೆಯಾಗಿ ಮತ್ತು ಹಗಲು ರಾತ್ರಿ ಅಳಲು ಪ್ರಾರಂಬಿಸಿದರೆ ಹೇಗಿರುತ್ತದೆಂದು ಕೆಲವರಿಗೆ ತಿಳಿದಿದೆ.
ಉತ್ತಮವಾದ ಕಾರ್ಯಗಳನ್ನು ಎಲ್ಲದರಲ್ಲಿ ಮಾಡುತ್ತೀರಿ, ಆದರೆ ಯಾವುದು ಸಹಾಯ ಮಾಡುವಂತೆ ಕಾಣಲಿಲ್ಲ. ನೆಲದಲ್ಲಿ ನಡೆದು, ಮಗುವಿಗೆ ಜೋಗುಳ ಹಾಡಿ, ಸ್ನೇಹಿತರಿಂದ ಸಲಹೆ ಪಡೆದರೂ ಪ್ರಯೋಜನವಾಗಲಿಲ್ಲ,
ಆದರೆ ಇನ್ನೊಂದನ್ನು ಕೇಳುತ್ತೇನೆ
ನೀವು ಎಷ್ಟೇ ಆಯಾಸದಿಂದಿದ್ದರೂ, ಮಗು ಎಷ್ಟುಕಾಲ ಕಾಯಲೆಯಿಂದ ಇದ್ದರೂ, ಮಗು ತಾನೇ ಕಷ್ಟಪಡಲೆಂದು ಮಗುವನ್ನು ಬಿಟ್ಟು ಬಿಡಲು ಯೋಚಿಸಿದ್ದೀರೋ?

೮ – ಸದಾ ಜೀವಿಸಲು ಹುಟ್ಟುವುದು



43

ಇಲ್ಲ? ಯಾಕೆ? ಅಸಾಯಕ ಮಗುವನ್ನು ಹೆಚ್ಚಾಗಿ ಪ್ರೀತಿಸುತ್ತೀರಿ. ಯಾಕೆಂದರೆ ಆ ಮಗು ಅನುಭವಿಸುವ ಕಷ್ಟ ನೋವಿಗಾಗಿ ದೇವರು ಇದೇರೀತಿ ಇದ್ದಾನೆ.


44


ಈ ಭೂಮಿ ಗ್ರಹದಲ್ಲಿರುವ ಆತನ ಮಕ್ಕಳು ಪಾಪವೆಂಬ ರೋಗದಲ್ಲಿ ಕಾಯಲೆ ಬಿದ್ದರು.


45

ಅವರು ನೋವು ಕಷ್ಟಗಳನ್ನು ಪಡುತ್ತಿರುವಾಗ ದೇವರು ಅವರನ್ನು ಇನ್ನೂ ಹೆಚ್ಚಾಗಿ ಪ್ರೀತಿಸುತ್ತಾನೆ.


46

ದೇವರು ನಮ್ಮಿಂದ ದೂರ ನಡೆಸಿಕೊಂಡು ಹೋಗಲು ಯೋಚಿಸಲಿಲ್ಲ. ನಮ್ಮ ವಿರೋಧತೆಯು ಪಲವಾಗಿ ಕಷ್ಟಪಟ್ಟು ಸಾಯಲೆಂದು ಆತನು ಯೋಚಿಸಲೇ ಇಲ್ಲ.



47

(ವಚನ ೨ ಪೇತ್ರ ೩:೯)
ಸತ್ಯ ವೇದವು ಹೀಗೆ ಹೇಳುತ್ತದೆ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿವುಳ್ಳವನಾಗಿದ್ದಾನೆ.
೨ ಪೇತ್ರ ೩:೯


48

ನೀವು ಒಳ್ಳೆಯವರೋ, ಇಲ್ಲವೇ ಕೆಟ್ಟವರಾಗಿದ್ದರೂ ಕೂಡ ದೇವರು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನಿಮ್ಮನ್ನು ರಕ್ಷಿಸಲು ಆಶಿಸುತ್ತಾನೆ. ಯಾರೂ ಸಾಯುವದು ಆತನಿಗೆ ಇಷ್ಟವಿಲ್ಲ.


49

ಹೇಗಿದ್ದರೂ, ನಾವೆಲ್ಲರೂ ಪಾಪಮಾಡಿದ್ದೇವೆ.
ನಾವೆಲ್ಲರೂ ದೇವರಿಗೆ ವಿರುದ್ದವಾಗಿ ತಿರುಗಿ ಆತನ ನ್ಯಾಯ ಪ್ರಮಾಣವನ್ನು ಮೀರಿದ್ದೇವೆ.

೮ – ಸದಾ ಜೀವಿಸಲು ಹುಟ್ಟುವುದು


50

ನ್ಯಾಯ ಪ್ರಮಾಣಗಳನ್ನು ಮೀರುವದನ್ನು ಸರ್ಕಾರವು ಸಹಿಸಲಾಗದು ಮತ್ತು ಹೆಚ್ಚು ಹಾಗೆ ಇರಲಾಗದು.


51

ಮೀರಿದವರು ಶಿಕ್ಷೆಗೆ ಗುರಿಯಾಗಿದ್ದಾರೆ.
ಆದರೆ ದೇವರ ನ್ಯಾಯ ಪ್ರಮಾಣವನ್ನು ಮೀರುವದು ಇನ್ನೂ ಭಯಂಕರವಾದದ್ದು. ಯಾಕೆಂದರೆ ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ಆತನೊಬ್ಬನೇ ನಮಗೆ ಸಹಾಯ ಮಾಡಿ ನಮ್ಮನ್ನು ರಕ್ಷಿಸುವವನಾಗಿದ್ದಾನೆ.


52

ನಮ್ಮ ದೇವರು ನಿತ್ಯ ಪ್ರೀತಿಯುಳ್ಳವನಾಗಿದ್ದರೂ ಸಹ, ಆತನು ಒಬ್ಬ ನ್ಯಾಯವಂತನಾದ ದೇವರು, ಸಿನಾಯಿ ಬೆಟ್ಟದಲ್ಲಿ ಆತನು ತನ್ನನ್ನು ವಿವರಿಸಿದ್ದಾನೆ.




53

(ವಚನ ವಿಮೋಚನ ಕಾಂಡ ೩೪:೬,೭)
ಯಹೋವ ಕನಿಕರವೂ, ದಯೆಯೂ ಉಳ್ಳ ದೇವರು; ದೀರ್ಘಶಾಂತನೂ, ಪ್ರೀತಿಯೂ, ನಂಬಿಕೆಯೂ ಉಳ್ಳವನು!



54

ಸಾವಿರಾರು ತಲೆಗಳವರೆಗೂ ದಯೆತೋರಿಸುವವನು, ದೋಷಾಪರಾಧಗಳನ್ನು ಕ್ಷಮಿಸುವವನೂ, ಆದರೂ ಅಪರಾಧಗಳನ್ನು ಶಿಕ್ಷಿಸದೆ ಬಿಡದವನಾಗಿದ್ದಾನೆ.
ವಿಮೋಚನಕಾಂಡ ೩೪:೭


55

ಪರಿಹಾರ ವಿಲ್ಲವೇ? ಯಾವ ಮಾರ್ಗವು ಇಲ್ಲವೇ?
ಹೌದು ಒಂದು ಮಾರ್ಗವಿದೆ.
ಒಬ್ಬ ಪ್ರೀತಿಮಯನಾದ ದೇವರು ನಮ್ಮನ್ನು ರಕ್ಷಿಸಲು ಒಂದು ಮಾರ್ಗವನ್ನು ಕಂಡುಹಿಡಿದನು, ಇನ್ನೂ ನ್ಯಾಯವಂತನಾಗಿರಲು ಸಾಧ್ಯವಾಯಿತು.


56

ನಮ್ಮ ಪಾಪಕ್ಕೆ ದಂಡವನ್ನು ನೀಡಿ, ನಾವು ಬದುಕಲು ನಮಗೆ ಬದಲಾಗಿ ಒಬ್ಬ ಪರಿಪೂರ್ಣನಾದ ಬದಲಿಯನ್ನು ಆತನು ಕಂಡುಹಿಡಿದನು.
ಪ್ರಿಯ ಶಿಷ್ಯನಾದ ಯೋಹನನು ಈ ರೀತಿ ವಿವರಿಸುತ್ತಾನೆ.

೮ – ಸದಾ ಜೀವಿಸಲು ಹುಟ್ಟುವುದು



57

(ವಚನ ಯೋಹಾನ ೩:೧೬)
ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು




58

ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.
ಯೋಹಾನ ೩:೧೬



59

ಯೇಸು ಈ ಭೂಮಿಗೆ ಒಬ್ಬ ಮಾನವನಾಗಿ ಜೀವಿಸಲು ಬಂದನು, ಪ್ರತಿ ಮಾನವನು ಎದುರಿಸುವ ಸಮಸ್ಯೆಗಳನ್ನು, ಶೋಧನೆಗಳನ್ನು ಎದುರಿಸಿದನು. ಆತನು ಪರಿಪೂರ್ಣ ವಿಧೇಯತೆಯ ಜೀವಿತವನ್ನು ಜೀವಿಸಿದನು. ನಂತರ ಮಾನವ ಸಂತತಿಗೆ ಪಾಪಮಾಡದ ರಾಯಭಾರಿಯಾಗಿ ಕ್ರಿಸ್ತನು ಸ್ವೇಚೆಯಿಂದ ಜೀವಿಸಿದ ಪ್ರತಿಯೊಬ್ಬರ ದೋಷವನ್ನು ತನ್ನ ಮೇಲೆ ತೆಗೆದುಕೊಂಡು ಅವರ ಪರವಾಗಿ ಸತ್ತನು.



60

ವಚನ ರೋಮಾಪುರದವರಿಗೆ ೫:೧೯
ಒಬ್ಬನ ಅವಿಧೇಯತೆಯಿಂದ ಎಲ್ಲರೂ ಪಾಪಿಗಳಾದರು.



61

ಒಬ್ಬನ ವಿಧೇಯತೆಯಿಂದ ಎಲ್ಲರೂ ನೀತಿವಂತರಾಗುವರು.
ರೋಮಾಪುರದವರಿಗೆ ೫:೧೯


62

ಯೇಸುವಿನ ಮರಣವು ಒಬ್ಬ ಕೋಪದ ದೇವರನ್ನು ತೃಪ್ತಿಪಡಿಸಲು ಮಾಡಿದ ಕಾರ್ಯವಲ್ಲ.
ನಮ್ಮ ಪಾಪದಿಂದ ನಮ್ಮನ್ನು ರಕ್ಷಿಸಲು ಯೇಸು ಸಾಯಲು ಒಪ್ಪಿಸಿಕೊಟ್ಟನು, ಮತ್ತು ದೇವರು ನಮ್ಮನ್ನು ಹೆಚ್ಚಾಗಿ ಪ್ರೀತಿಸಿದ್ದರಿಂದ ನಮಗಾಗಿ ತನ್ನ ಒಬ ್ಬನೇ ಮಗನನ್ನು ಬಲಿ ಅರ್ಪಿಸಲು ಚಿತ್ತೈಸಿದನು. ಯೇಸು ದೇವರ ಕುರಿಮರಿ ಮತ್ತು ಬಲಿಯಾಗುವ ಕುರಿಮರಿ.

೮ – ಸದಾ ಜೀವಿಸಲು ಹುಟ್ಟುವುದು



63

(ವಿಡಿಯೋ ೨೫ ಸೆಕೆಂಡುಗಳು)
ದೇವರ ಆರಿಸಿದ ಜನರಾದ ಇಸ್ರಾಯೇಲ್ಯರು, ಮೋಶೆಯ ಮೂಲಕ ಬಿಡುಗಡೆ ಹೊಂದಿದನಂತರ ಸಿನಾಯಿ ಬೆಟ್ಟದ ಪಕ್ಕದಲ್ಲಿ ಅಲೆದಾಡಿದರು; ಅವರು ಪ್ರತಿ ದಿನವು ಸಂಕೇತಗಳ ಸಂಸ್ಕಾರಗಳ ಮೂಲಕ, ತಪ್ಪಿಹೋದ ಮಾನವನನ್ನು ವಿಮೋಚಿಸಲು, ದೇವರ ಯೋಜನೆಯು ಸೂಚಿಸಿರುವದನ್ನು ಕಂಡರು.
ಅರಣ್ಯದ ಗುಡಾರವು ದೇವರ ಅಪ್ಪಣೆಯ ಮೇರೆಗೆ ಕಟ್ಟಲ್ಪಟ್ಟು, ದೇವರಿಂದ ಆರಾಧನೆಗಳು ನೇಮಕ ಮಾಡಲ್ಪಟ್ಟವು. ಮುಂದಿನ ಕಲ್ವೇರಿಯ ಕಡೆಗೆ ಮಾನವನ ಗಮನವನ್ನು ಯಾವಾಗಲೂ ಸೆಳೆಯಿತು. ಯೇಸು ಸಾಯಲಿರುವ ಬೆಟ್ಟದ ಮೇಲಿನ ಗಮನ ಸೆಳೆಯಿತು, ಅಲ್ಲಿ ನಿಜವಾದ ಕುರಿಮರಿ, ಮಾನವರ ಪಾಪಗಳಿಗಾಗಿ ಕೊಲ್ಲಲ್ಪಡುವದು. ಇದರಿಂದ ಕ್ಷಮಾಪಣೆ ಮತ್ತು ರಕ್ಷಣೆಯ ಭರವಸೆಯ ನಿರೀಕ್ಷೆಯನ್ನು ನೀಡಿತು.


64

ಪಾಪಿಯು ಬಂದು ಜೊತೆಯಲ್ಲಿ ಒಂದು ಬಲಿಗಾಗಿ ಪ್ರಾಣಿಯನ್ನು ತರಬೇಕಾಗಿತ್ತು.
ಆತನು ಆ ಪ್ರಾಣಿಯ ತಲೆಯ ಮೇಲೆ ಕೈಗಳನ್ನು ಇಟ್ಟು ಆತನ ಪಾಪವನ್ನು ಅರಿಕೆಮಾಡಿದನು, ನಂತರ ಬಂದು ಕತ್ತಿಯನ್ನು ತೆಗೆದುಕೊಂಡು ಅದನ್ನು ಕೊಂದನು.
ಆತನ ಪಾಪಗಳು ಈ ಬಲಿಗಾಗಿ ತಂದ ಕುರಿ ಮರಿಯ ಪ್ರಾಣವು ಹೋಗುವಂತೆ ಮಾಡಿತೆಂದು ಸೂಚಿಸಿತು, ಈ ಕುರಿಮರಿ ಯೇಸುವನ್ನು ಸೂಚಿಸಿತು.



65

ಅಹಿತಕರವಲ್ಲ, ಹೌದು ಆದರೆ ಕಲ್ವೇರಿಯ ಶಿಲುಭೆಯು ಮಾನವರ ಹೃದಯಕ್ಕೆ ನಿತ್ಯಜೀವದ ವಾಗ್ದಾನವನ್ನು ಕಂಡ ವಿಜ್ಞಾನವು ಇನ್ನೂ ಅಹಿತಕರವಾಗಿರಲಿಲ್ಲ, ಈ ಕಾರ್ಯದಿಂದ ಪಾಪವು ಮರಣವನ್ನು ತರುತ್ತದೆ, ಪಾಪಿಗೆ ಇಲ್ಲವೇ ನಿಷ್ಕಳಂಕ ಬಲಿಗೆ ಮರಣವನ್ನು ತರುತ್ತದೆಂದು ದೇವರು ಸಿದ್ಧಾಂತ ಪಡಿಸಿದನು.


66

ಸತ್ಯವೇದದ ಕಾಲದಲ್ಲಿ ದೇವರ ಜನರು ಬಲಿಗಳನ್ನು ಅರ್ಪಿಸುತ್ತಿದ್ದರು, ದೇವ ಕುಮಾರನ ಮುಂದೆ ಬರಲಿರುವ ಮರಣದಲ್ಲಿ ಮಾನವನ ಪರವಾಗಿ ಸಾಯತಕ್ಕವನೆಂದು ಅವರ ನಂಬಿಕೆಯನ್ನು ತೋರಿಸಬೇಕಾಗಿತ್ತು.

೮ – ಸದಾ ಜೀವಿಸಲು ಹುಟ್ಟುವುದು



67

(ವಚನ ಯೋಹಾನ ೧:೨೯)
ಯೇಸು ನಿಜವಾದ ಬಲಿ. ಯೇಸು ದೀಕ್ಷಾಸ್ನಾನವನ್ನು ತೆಗೆದುಕೊಳ್ಳಲು ಬಂದಾಗ ಯೋಹಾನನು ಹೀಗೆಂದನು, ಇಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿಮರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು.
ಯೋಹಾನ ೧:೨೯
ರಕ್ಷಿಸಲು ಬಂದ ಕೆಲವು ಜನರು ಆತನ ಪ್ರಾಣವನ್ನು ತೆಗೆಯಲು ಒಳಸಂಚುಮಾಡಿದ್ದು ಎಂಥಾ ಕ್ರೂರವಾದದ್ದು. ಯೇಸುವನ್ನು ಹೊಡೆದರು, ಪರಿಹಾಸ್ಯ ಮಾಡಿದರು, ಕ್ರೂರವಾದ ಶಿಕ್ಷೆ ನೀಡುವ ಕ್ರೂಜೆಗೆ ಹಾಕಲು ತೀರ್ಮಾನಮಾಡಲ್ಪಟ್ಟಿತು.



68


(ವಚನ ೧ ಪೇತ್ರ ೨:೨೨)
ಸತ್ಯವೇದವು ಹೀಗೆ ಹೇಳುತ್ತದೆ. ಆತನು ಯಾವ ಪಾಪವನ್ನು ಮಾಡಲಿಲ್ಲ, ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ, ಈತನು ಶಿಲುಬೆಯ ಮೇಲೆ ಸತ್ತನು.
೧ ಪೇತ್ರ ೨:೨೨


69

ಪಸ್ಕ ಹಬ್ಬದ ಸಮಯದಲ್ಲಿ ಯೇಸು ಕ್ರೂಜೆಗೆ ಹಾಕಲ್ಪಟ್ಟನು. ಒಂದು ಒಳ್ಳೆಯ ನಂಬಿಕೆಯನ್ನು ತೋರಿಸಲಿಕ್ಕಾಗಿ ಒಬ್ಬ ಕೈದಿಯನ್ನು ಬಿಡುಗಡೆ ಮಾಡುವದು ರೋಮ್ ಅಧಿಕಾರಿಗಳ ಪದ್ದತಿಯಾಗಿತ್ತು. ಗುಂಪು ಬರಬ್ಬನನ್ನು ಆರಿಸಿಕೊಂಡಿತು. ಯೇಸುವನ್ನು ಸಾಯಲು ಒಪ್ಪಿಸಿದರು.



70

ಮರಣದಲ್ಲಿ ಯೇಸು ಪಾಪಿಗಳ ಜೊತೆ ಎಣಿಸಲ್ಪಟ್ಟನು, ೨ ಕಳ್ಳರ ಮಧ್ಯೆ ಕ್ರೂಜೆಗೆ ಹಾಕಲ್ಪಟ್ಟನು ಮತ್ತು ದೇವರು ಇಡೀ ಲೋಕದವರ ಪಾಪಗಳನ್ನು ಆತನ ಮೇಲೆ ಹಾಕಿದನು.



71

ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈ ಬಿಟ್ಟಿದ್ದೀ? ಎಂದು ಕೂಗಿದನು ಮತ್ತಾಯ ೨೭:೪೬
ಪಾಪವು ತರುವ ಭಯಂಕರವಾದ ಬೇರ್ಪಡುವಿಕೆ ಆತನಿಗಾಯಿತು.
ತಂದೆಯಿಂದ ಪ್ರತ್ಯೇಕಿಸಲ್ಪಟ್ಟ ವೇದನೆಯನ್ನು ಯೇಸು ಸಹಿಸಲಾಗಲಿಲ್ಲ. ಆತನ ಹೃದಯವು ಒಡೆಯಿತು.



72

(ವಚನ ಮಾರ್ಕ ೧೫:೩೧)
ಗುಂಪು ಹೀಗೆ ಕೂಗಿತು, ಆತನು ಮತ್ತೊಬ್ಬನನ್ನು ರಕ್ಷಿಸಿದನು. ತನ್ನನ್ನು ರಕ್ಷಿಸಿ ಕೊಳ್ಳಲಾರನು. ಮಾರ್ಕ ೧೫:೩೧

೮ – ಸದಾ ಜೀವಿಸಲು ಹುಟ್ಟುವುದು


73

ಅದು ಸತ್ಯವಾದದ್ದು
ಆತನು ತನ್ನನ್ನು ರಕ್ಷಿಸಿಕೊಳ್ಳಲಾಗಲಿಲ್ಲ, ಇನ್ನೂ ಬೇರೆಯವರನ್ನು ರಕ್ಷಿಸಿದನು. ಆತನು ದೇವರಾಗಿ, ತಪ್ಪಿಹೋದ ಜನರಿಗೆ, ಮಾಡಿದ ನ್ಯಾಯ ಪ್ರಮಾಣಕ್ಕೆ ಪಾಪದ ಸಂಬಳಕ್ಕೆ ಕ್ರಯ ಕೊಟ್ಟನು, ಮಾನವನನ್ನು ಆತನ ಕುಟುಂಬಕ್ಕೆ ತರಲ್ಪಡುವವರೆಗೆ ಆತನಿಗೆ ಅಂದರೆ ದೇವರ ಪ್ರೀತಿಯಿಂದ ತೃಪ್ತಿಪಡಲಾಗಲಿಲ್ಲ. ಮಾನವನಿಗೆ ಪ್ರತಿಯಾಗಿ ಆತನ ಸ್ವಂತ ಮಗನನ್ನೇ ಕೊಟ್ಟನು.


74

ನಮಗೆ ಆಗಬೇಕಾದ ಶಿಕ್ಷೆಯನ್ನು ಆತನು ಅನುಭವಿಸಿದನು, ನಮಗೆ ಬದಲಾಗಿ ಅನುಭವಿಸಿದನು, ನಮ್ಮ ಪಾಪಗಳಿಗಾಗಿ ಆತನು ಖಂಡನೆಗೆ ಒಳಗಾದನು ಮತ್ತು ನಮಗೆ ನಿತ್ಯಜೀವವನ್ನು ಕೊಡಲು ನಮ್ಮ ಮರಣವನ್ನು ಅನುಭವಿಸಿದನು.
ಈ ರೀತಿಯಾಗಿ ದೇವರು ನಿತ್ಯಜೀವವನ್ನು ಕೊಡಬಹುದು ಮತ್ತು ಇನ್ನೂ ನ್ಯಾಯವಂತನಾಗಿರಬಹುದು. ನಾವು ಮಾಡಿದ ಯಾವ ಒಳ್ಳೆಯ ಕಾರ್ಯಗಳಿಗಾಗಿ ಅಲ್ಲ, ಕ್ರಿಸ್ತನು ಮಾಡಿದ, ಆತನ ಜೀವಿಸಿದ ಪರಿಪೂರ್ಣ ಜೀವಿತಕ್ಕಾಗಿ ದೇವರು ನಮಗೆ ಅರ್ಹತೆಯನ್ನು ನೀಡುತ್ತಾನೆ.




75

(ವಚನ ಎಫೆಸ ೨:೮)
ಅನ್ಯರಿಗೆ ಅಪೋಸ್ತಲನಾದ ಪೌಲನು ಹೀಗೆಂದನು.
ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಎಫೆಸ ೨:೮
ನಂಬಿಕೆಯು ರಕ್ಷಣೆಯ ತಿರುಳಾಗಿದೆ.


76

ನಾನು ರಕ್ಷಣೆ ಹೊಂದಲು ಏನು ಮಾಡಬೇಕೆಂದು ಫಿಲಿಪ್ಪದ ಸೆರೆ ಯಜಮಾನನು ಕೇಳಿದಾಗ ಪೌಲನು ಹೀಗೆ ಉತ್ತರ ನೀಡಿದನು.




77

(ವಚನ ಅಪೋಸ್ತಲರ ಕೃತ್ಯಗಳು ೧೬:೩೧)
ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆ ಹೊಂದುವಿ. ಅಪೋಸ್ತಲರ ಕೃತ್ಯಗಳು ೧೬:೩೧


೮ – ಸದಾ ಜೀವಿಸಲು ಹುಟ್ಟುವುದು

೮ – ಸದಾ ಜೀವಿಸಲು ಹುಟ್ಟುವುದು



78

ಕ್ರಿಸ್ತನು ಈ ಲೋಕದಲ್ಲಿ ಜೀವಿಸಿದನೆಂದು ಮನಸ್ಸಿನಲ್ಲಿ ಒಪ್ಪಿಕೊಳ್ಳುವದು ಸಾಲದು, ಇದು ರಕ್ಷಿಸುವ ನಂಬಿಕೆಯಲ್ಲ.
ಇದಕ್ಕಿಂತಲೂ ಹೆಚ್ಚಿನದು ಇರಬೇಕು




79

(ವಚನ ಯಾಕೋಬ ೨:೧೯)
ಸತ್ಯವೇದವು ಹೀಗೆ ಹೇಳುತ್ತದೆ.
ದೆವ್ವಗಳೂ ಕೂಡ ಹಾಗೆಯೆ ನಂಬಿ, ಹೆದರಿ, ನಡುಗುತ್ತವೆ. ಯಾಕೋಬ ೨:೧೯



80

ಯೇಸುವನ್ನು ನಂಬುವದೆಂದರೆ, ೧೯೦೦ ವರ್ಷಗಳ ಹಿಂದೆ ಆತನು ಸತ್ತನೆಂದು ತಿಳಿಯುವದಕ್ಕಿಂತಲೂ ಹೆಚ್ಚಿನದಾಗಿದೆ, ಸತ್ಯವೇದವು ಹೀಗೆ ಹೇಳುತ್ತದೆ.



81

(ವಚನ ಜ್ಞಾನೋಕ್ತಿ ೩:೫,೬)
ಸ್ವಬುದ್ಧಿಯನ್ನೇ ಆಧಾರ ಮಾಡಿಕೊಳ್ಳದೆ ಪೂರ್ಣಮನಸ್ಸಿನಿಂದ ಯೆಹೋವನಲ್ಲಿ ಭರವಸವಿಡು.




82

ನಿನ್ನ ಎಲ್ಲಾ ನಡವಳಿಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು, ಆತನೇ ನಿನ್ನ ಮಾರ್ಗಗಳನ್ನು ಸರಾಗಮಾಡುವನು ಜ್ಞಾನೋಕ್ತಿ ೩:೫,೬
ನೀವು ಆತನ ಮೇಲೆ ಭರವಸೆ ಇಡುವಿರೋ? ನೀವು ನಿಜವಾಗಿ ಆತನ ಮೇಲೆ ಭರವಸೆ ಇಡುವಿರೋ?
ನಿಮ್ಮ ಜೀವಿತವನ್ನು ಭಂದಿಸುವ ಹಾಗೆ ಅವಕಾಶವನ್ನು ನೀಡುವಿರೋ?


83

ರಕ್ಷಿಸುವ ನಂಬಿಕೆಯು ನಾವು ಮಾಡಿದ ಎಲ್ಲಾ ಪಾಪಗಳಿಗೆ ಸಂಪೂರ್ಣ ಕ್ರಯವು ಕ್ರಿಸ್ತನ ತ್ಯಾಗ ಬಲಿಯಿಂದ ಕೊಡಲ್ಪಟ್ಟಿತ್ತೆಂದು ಭರವಸದಿಂದ ಇರುವದಾದರೆ ನಮ್ಮನ್ನು ರಕ್ಷಿಸಿಕೊಳ್ಳಲು ನಾವು ಏನು ಮಾಡಲಾಗದು, ಕಲ್ವೇರಿಯಲ್ಲಿ ಕ್ರಿಸ್ತನು ಮಾಡಿದ ಕಾರ್ಯವನ್ನು ನಂಬಬೇಕೆಂಬ ಅರ್ಥವನ್ನು ನೀಡುತ್ತದೆ.



84

ಯಾವ ಮಾನವನು ತನ್ನನ್ನು ತಾನೇ ರಕ್ಷಿಸಿಕೊಂಡಿದ್ದೇನೆಂದು ಹೆಚ್ಚಳಪಡಲಾಗದು.
ಮಹಿಮೆಯು ದೇವರಿಗೆ ಸೇರಿದ್ದು! ನಂಬಿಕೆಯು ನಮಗೆ ಸೇರಿದ್ದು.
ಸಂಪೂರ್ಣವಾಗಿ ಭರವಸೆಯಿಂದ ನಮ್ಮ ಜೀವಿತವನ್ನು ಆತನ ಭಂದನಕ್ಕೆ ಕೊಡುವುದಾಗಿದೆ.


85

ಭೂಕಂಪವು ಸೆರೆಮನೆಯ ಬಾಗಿಲುಗಳನ್ನು ತೆರೆದಾಗ ಆ ಭಯಂಕರವಾದ ರಾತ್ರಿಯಲ್ಲಿ, ಸೆರೆಯ ಯಜಮಾನನು ಪೌಲನಿಗೂ ಮತ್ತು ಶೀಲನಿಗೂ ಕೂಗಿ ಕೇಳಿದ ಪ್ರಶ್ನೆಗೆ ನಾವು ಉತ್ತರ ನೀಡಬೇಕು.




86

(ವಚನ ಅಪೋಸ್ತಲರ ಕೃತ್ಯಗಳು ೧೬:೩೦)
ರಕ್ಷಣೆ ಹೊಂದಲು ನಾನು ಏನು ಮಾಡಬೇಕು?



87

ನೀವು ರಕ್ಷಣೆ ಹೊಂದಬೇಕಾದರೆ ರಕ್ಷಣೆಯ ವಿಚಾರವಾಗಿ ನೀವು ೪ ಅಂಶಗಳನ್ನು ತಿಳಿಯ ಬೇಕಾದ ಅಗತ್ಯವಿದೆ.



88

(ವಚನ ಎಫೆಸ. ೨:೮,೯)
೧ನೇ ಅಂಶ – ರಕ್ಷಣೆಯು ಉಚಿತವಾದ ಒಂದು ವರ.
ನಂಬಿಕೆಯ ಮೂಲಕ ಕೃಪಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮಿಂದುಂಟಾದ್ದಲ್ಲ, ಅದು ದೇವರ ವರವೇ, ಅದು ಪುಣ್ಯ ಕ್ರಿಯೆಗಳಿಂದ ಉಂಟಾದದ್ದಲ್ಲ, ಆದುದರಿಂದ ಹೊಗಳಿ ಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ.
ಎಫೆಸ ೨:೮,೯
ಈಗ ಒಂದು ಪ್ರಶ್ನೆ ಬರುತ್ತದೆ. ರಕ್ಷಣೆಯು ಯಾಕೆ ಒಂದು ಉಚಿತವಾದ ವರವಾಗಿರಬೇಕು?
ಯಾಕೆ ಇದು ಒಂದು ಉಚಿತವಾದ ವರವಾಗಿದೆ ಎಂಬ ಕಾರಣವು ೨ನೇ ಅಂಶಕ್ಕೆ ನಮ್ಮನ್ನು ತರುತ್ತದೆ.

೮ – ಸದಾ ಜೀವಿಸಲು ಹುಟ್ಟುವುದು




89

(ವಚನ ರೋಮಾಪುರದವರಿಗೆ ೩:೨೩)
೨ನೇ ಅಂಶ. ಎಲ್ಲರೂ ಪಾಪಮಾಡಿದ್ದೇವೆ.ರೋಮಾಪುರದವರಿಗೆ ೩:೨೩ರಲ್ಲಿ ಹೀಗೆ ಹೇಳುತ್ತದೆ.
ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ.


90

ಇದರ ಅರ್ಥವೇನೆಂದರೆ ಈ ವರಕ್ಕೆ ನಾನು ಅರ್ಹನಲ್ಲ, ನಾನು ರಕ್ಷಣೆಗೆ ಅರ್ಹನಲ್ಲ, ನಾನು ಪಾಪಮಾಡಿದ್ದೇನೆ, ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದೇನೆ.
ನನ್ನ ಒಳ್ಳೆಯ ತನದಿಂದ ರಕ್ಷಣೆಯು ಆತುಕೊಂಡಿದ್ದರೆ, ನಾನು ಅವನ್ನು ಗಳಿಸಲಾಗದು, ಯಾಕೆಂದರೆ ನಾನು ಪಾಪಮಾಡಿದ್ದೇನೆ. ನಾನು ಒಳ್ಳೆಯವನಾಗಿರಲು ಆಗದು.
ಇದಕ್ಕಾಗಿ ತಾನೇ ರಕ್ಷಣೆಯು ಒಂದು ಉಚಿತವಾದ ವರವಾಗಿರಬೇಕಾಗಿದೆ, ಇದು ಉಚಿತವಾಗಿ ಕೊಡಲ್ಪಟ್ಟಿದೆ, ಯಾಕೆಂದರೆ, ನಾನು ಅದನ್ನು ಗಳಿಸಲಾಗದು, ಮತ್ತು ಅದಕ್ಕೆ ನಾನು ಅರ್ಹನಲ್ಲ. ನಾವೆಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದೇವೆ.



91

(ವಚನ ರೋಮಾಪುರದವರಿಗೆ ೬:೨೩)
೩ನೇ ಅಂಶ. ಸಮಸ್ಯೆ ಪಾಪವೆಂದರೆ ಮರಣ.
ರೋಮಾಪುರದವರಿಗೆ ೬:೨೩ ಪಾಪದ ಸಂಬಳ ಮರಣ.
ದೊಡ್ಡ ಸಮಸ್ಯೆಯನ್ನು ನಾವೆಲ್ಲರೂ ಎದುರಿಸುತ್ತಿದ್ದೇವೆ.
ನಾನು ಒಬ್ಬ ಪಾಪಿ, ಸಾಯಲು ಅರ್ಹನು,
ನಾನು ರಕ್ಷಣೆಯ ವರವನ್ನು ಪಡೆಯಲು ಅರ್ಹನಲ್ಲ.
ನಾನು ಉಚಿತ ವರವನ್ನು ಪಡೆಯಲು ಅರ್ಹನಲ್ಲ.
ಅದಕ್ಕಾಗಿ ಅದು ಒಂದು ಉಚಿತ ವರವಾಗಿರಬೇಕು, ಯಾಕೆಂದರೆ ನಾವೆಲ್ಲರೂ ಪಾಪಮಾಡಿದ್ದೇವೆ, ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದೇನೆ, ಸಮಸ್ಯೆ ಏನೆಂದರೆ ನಾನು ಒಬ್ಬ ಪಾಪಿಯಾಗಿ ಸಾಯಲು ಅರ್ಹನು, ಆದರೆ ಈ ಸಮಸ್ಯೆಗೆ ದೇವರಲ್ಲಿ ಒಂದು ಪರಿಹಾರವಿದೆ.



92

(ವಚನ ರೋಮಾಪುರದವರಿಗೆ ೫:೮)
೪ನೇ ಅಂಶ. ಪರಿಹಾರ: ಯೇಸು ನಮಗಾಗಿ ಸತ್ತನು, ರೋಮಾಪುರದವರಿಗೆ ೫:೮ರಲ್ಲಿ ಈ ರೀತಿ ಹೇಳುತ್ತದೆ. ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ.
ಇದು ಆಧರಣೆಯಲ್ಲವೇ? ಒಬ್ಬ ಪಾಪಿಯಾದ ನನಗಾಗಿ ಯೇಸು ಸತ್ತನು, ಮತ್ತು ಸ್ನೇಹಿತನೇ, ನಿನಗಾಗಿಯೂ ಆತನು ಸತ್ತನು.



93

೪. ಸುಲಭವಾದ ಅಂಶಗಳು, ವಿಮರ್ಷಿಸೋಣ




94

೧. ರಕ್ಷಣೆಯು ಉಚಿತವಾದ ಒಂದು ವರ.




95

೨. ನಾವೆಲ್ಲರೂ ಪಾಪಮಾಡಿದ್ದೇವೆ.



96

೩. ಸಮಸ್ಯೆ, ಪಾಪವೆಂದರೆ ನಮಗೆ ಮರಣ



97

೪. ಪರಿಹಾರ. ಯೇಸು ನಮಗಾಗಿ ಸತ್ತನು. ನಾವು ಆತನನ್ನು ನಮ್ಮ ರಕ್ಷಕ್ಕನನ್ನಾಗಿ ಅಂಗೀಕರಿಸಿದರೆ ನಮಗೆ ಜೀವವಿರುತ್ತದೆಂಬ ಅರ್ಥವನ್ನು ನೀಡುತ್ತದೆ.

೮ – ಸದಾ ಜೀವಿಸಲು ಹುಟ್ಟುವುದು


೮ – ಸದಾ ಜೀವಿಸಲು ಹುಟ್ಟುವುದು


98

ನಾವು ಇನ್ನೂ ಪಾಪಿಗಳಾಗಿದ್ದಾಗಲೂ ಯೇಸು ನಮಗಾಗಿ ಸತ್ತನು, ನನ್ನ ಸ್ನೇಹಿತರೇ ಆತನನ್ನು ಪ್ರೀತಿಸಲಾರಿರಾ? ನನ್ನ ಮತ್ತು ನಿಮ್ಮ ಪಾಪಗಳಿಗಾಗಿ ಆತನು ಸತ್ತದ್ದರಿಂದ ನೀವು ಆತನನ್ನು ಪ್ರೀತಿಸುವಿರಾ?
ರಕ್ಷಣೆಯೆಂಬ ಉಚಿತವಾದ ವರವನ್ನು ನಮಗೆ ಕೊಟ್ಟದ್ದಕ್ಕಾಗಿ ಆತನನ್ನು ಪ್ರೀತಿಸುವಿರಾ?


99

ಈ ಉಚಿತವಾದ ವರವನ್ನು ನಾನು ಅಂಗೀಕರಿಸುವುದು ಹೇಗೆಂದು ನೀವು ಕೇಳಬಹುದು?



100

(ವಚನ ಪ್ರಕಟನೆ ೩:೨೦)
ಅದಕ್ಕೆ ಸತ್ಯವೇದವು ಉತ್ತರ ನೀಡುತ್ತದೆ. ಪ್ರಕಟನೆ ೩:೨೦
ಇಗೋ, ಬಾಗಿಲಿನ ಬಳಿ ನಿಂತು ತಟ್ಟುತ್ತಾ ಇದ್ದೇನೆ.
ನಿಮ್ಮ ಮನೆಯ ಬಾಗಿಲಿನ ಬಳಿ ನಿತ್ಯ ಜೀವವನ್ನು ತಂದಿರುವವನು ಬಾಗಿಲನ್ನು ತಟ್ಟಿದರೆ, ಹೊರಗೆ ನಿಲ್ಲಿಸುವಿರೋ ಇಲ್ಲವೇ ಒಳಗೆ ಆಹ್ವಾನಿಸುವಿರೋ?


101

ಹೌದು ನೀವು ಬಾಗಿಲನ್ನು ತೆರೆದು ಒಳಗೆ ಆಹ್ವಾನಿಸುವಿರಿ.
ಯೇಸುವನ್ನು ಅಂಗೀಕರಿಸುವುದರಿಂದ ಆತನು ತರುವ ನಿತ್ಯ ಜೀವವನ್ನು ಅಂಗೀಕರಿಸುತ್ತೇವೆ. ಇದು ಆಶ್ಚರ್ಯವಲ್ಲವೇ? ನಮ್ಮ ಜೀವಿತಗಳಿಗೆ ಯೇಸು ಬರಲು ಆಶಿಸುತ್ತಾನೆ. ನಾವು ಒಳಗೆ ಆತನನ್ನು ಆಹ್ವಾನಿಸುತ್ತೇವೆ.


102

ಈ ವಿಧವಾಗಿ ನಾವು ಉಚಿತವಾಗಿ ವರವನ್ನು ಅಂಗೀಕರಿಸುತ್ತೇವೆ.
ನಾವು ಕೈನೀಡಿ, ಯೇಸುವೇ ದನ್ಯವಾದಗಳೆಂದು ಹೇಳುತ್ತೇವೆ.
ನಮ್ಮ ಹೃದಯದೊಳಗೆ ಬಾ.
ನನ್ನ ಜೀವಿತವನ್ನು ನಿನ್ನ ಭಂದನಕ್ಕೆ ತೆಗೆದುಕೋ.
ನನ್ನ ಹೃದಯವನ್ನು ನಿನ್ನ ಭಂದನಕ್ಕೆ ತೆಗೆದುಕೋ ಮತ್ತು ಯೇಸು ಒಳಗೆ ಬ ಂದಾಗ, ನಮ್ಮ ಸ್ನೇಹಿತನನ್ನಾಗಿ ನಾವು ಅಂಗೀಕರಿಸುತ್ತೇವೆ. ನಮ್ಮ ರಕ್ಷಣೆಗಾಗಿ, ನಮ್ಮ ಕರ್ತನು ಮತ್ತು ಗುರುವೆಂದು ನಾವು ಅಂಗೀಕರಿಸುತ್ತೇವೆ.



103

ನಮ್ಮ ಹೃದಯಗಳೊಳಗೆ ಯೇಸುವನ್ನು ಬರಲು ಕೇಳಿದಾಗ ನಮ್ಮ ಜೀವಿತಗಳಿಗೆ ಆತನನ್ನು ಅಂಗೀಕರಿಸುವಾಗ ೨ ಕಾರ್ಯಗಳಾಗುತ್ತವೆ.

೮ – ಸದಾ ಜೀವಿಸಲು ಹುಟ್ಟುವುದು



104

(ವಚನ ೧ ಯೋಹಾನ ೧:೯)
ಮೊದಲನೆಯದಾಗಿ ನಾವು ನಮ್ಮ ಪಾಪಗಳನ್ನು ಅರಿಕೆ ಮಾಡಿದರೆ ಆತನ ಕ್ಷಮೆಯನ್ನು ಪಡೆಯುತ್ತೇವೆ.
ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸುವನು.



105

ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು ೧ ಯೋಹಾನ ೧:೯
ಸ್ನೇಹಿತರೇ, ಇದು ಒಂದು ಅಮೂಲ್ಯ ವಾಗ್ದಾನವಾಗಿದೆ.


106

ನಾವು ಏನೇ ಮಾಡಿದ್ದರೂ ಇಲ್ಲವೇ ಇಲ್ಲಿಗೆ ಹೋಗಿದ್ದರೂ ಚಿಂತೆಯಿಲ್ಲ, ನಾವು ಎಂಥಾ ತೆರೆನಾದ ಜೀವಿತವನ್ನು ಜೀವಿಸಿದ್ದರೂ ಚಿಂತೆಯಿಲ್ಲ, ಎಂಥ ಕಠಿಣ ಪಾಪಿಯಾಗಿದ್ದರೂ ಸರಿ, ನಾವು ಯೇಸುವಿನ ಬಳಿಗೆ ಬಂದು ಉಚಿತವಾದ ರಕ್ಷಣೆಯ ವರವನ್ನು ನಾವು ಪಡೆಯಬಹುದು.


107

ಯೇಸು ನಮ್ಮ ಪಾಪಗಳನ್ನು ಸಮುದ್ರದ ತಳಕ್ಕೆ ಬಿಸಾಡುವನು, ತಿರಿಗಿ ಜ್ಞಾಪಕ ಮಾಡಿಕೊಳ್ಳುವುದಿಲ್ಲ.



108

ನನ್ನ ಸ್ನೇಹಿತರೇ, ಯೇಸು ಕ್ಷಮಿಸುವಾಗ, ಆತನು ಮರೆಯುತ್ತಾನೆ.
ಯಾವದಾದರೂ ಪಾಪವನ್ನು ದೇವರಿಗೆ ಅರಿಕೆಮಾಡಿ ಇನ್ನೂ ಅಪರಾಧದಿಂದ, ಭಾರದಿಂದ ಇದ್ದು ಖಂಡನೆಗೆ ಒಳಗಾಗಿರುವಿರೋ? ದೇವರು ಕ್ಷಮಿಸದೆ ಕೆಲವು ದೊಡ್ಡ ಪಾಪವಿರಬಹುದೆಂದು ನೀವು ಭಾವಿಸುವಿರೆಂದು ನೆನೆಸುತ್ತೀರಿ.
ದೇವರು ಹೇಳುವದನ್ನು ನಾವು ನಂಬಬೇಕು. ೧ಯೋಹಾನ ೫:೧೦ರಲ್ಲಿ ಹೀಗೆ ಹೇಳಿದೆ. ನಾವು ದೇವರನ್ನು ನಂಬದಿದ್ದರೆ ಆತನನ್ನು ಸುಳ್ಳುಗಾರನನ್ನಾಗಿ ಮಾಡುತ್ತೇವೆ.



109

(ವಚನ ೧ ಯೋಹಾನ ೫:೧೦) ದೇವರ ಮಗನಲ್ಲಿ ನಂಬಿಕೆ ಇಟ್ಟವನು ಆ ಸಾಕ್ಷಿಯನ್ನು ತನ್ನಲ್ಲೇ ಹೊಂದಿದ್ದಾನೆ.

೮ – ಸದಾ ಜೀವಿಸಲು ಹುಟ್ಟುವುದು



110

ದೇವರನ್ನು ನಂಬದವನು ಆತನನ್ನು ಸುಳ್ಳುಗಾರನನ್ನಾಗಿ ಮಾಡಿದ್ದಾನೆ.




111

ಹೇಗೆಂದರೆ ದೇವರು ತನ್ನ ಮಗನ ವಿಷಯವಾಗಿ ಹೇಳಿರುವ ಸಾಕ್ಷಿಯಲ್ಲಿ ಅವನು ನಂಬಿಕೆ ಇಡಲಿಲ್ಲ.
೧ಯೋಹಾನ ೫:೧೦. ನಮ್ಮ ಪಾಪಗಳನ್ನು ಆತನು ಕ್ಷಮಿಸುವೆನೆಂದು ಮತ್ತು ನಮ್ಮ ದೋಷವನ್ನು ತೆಗೆಯುತ್ತೇನೆಂದು ಯೇಸು ವಾಗ್ದಾನ ಮಾಡುವಾಗ, ಆತನು ಏನು ಮಾಡುತ್ತೇನೆಂದು ಹೇಳುತ್ತಾನೋ ಅದನ್ನು ಮಾಡುವನು.


112

ಯೇಸು ಕ್ಷಮಿಸುವಾಗ ಆತನು ಮರೆಯುತ್ತಾನೆ ಮತ್ತು ನಾವೂ ಕೂಡ ಮರೆಯಬೇಕು.



113

(ವಚನ ಅಪೋಸ್ತಲರ ಕೃತ್ಯಗಳು ೩:೧೯)
ಪೇತ್ರನು ಅಪೋಸ್ತಲರ ಕೃತ್ಯಗಳು ೩:೧೯ರಲ್ಲಿ ಹೀಗೆ ಹೇಳುತ್ತಾನೆ.
ಆದುದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿ ಬಿಡುವ ಹಾಗೆ ನೀವು ಪಶ್ಚಾತ್ತಾಪ ಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ.


114

ನಾವು ಯೇಸುವಿನ ಬಳಿಗೆ ಬರುತ್ತೇವೆ, ನಾವು ರಕ್ಷಣೆಯ ಉಚಿತವಾದ ವರವನ್ನು ಅಂಗೀಕರಿಸುತ್ತೇವೆ, ನಮ್ಮ ಜೀವಿತಗಳಿಗೆ ಆತನನ್ನು ಆಹ್ವಾನಿಸುತ್ತೇವೆ ಮತ್ತು ಆಗುವ ಮೊದಲ ಕಾರ್ಯವು ಆತನು ಕ್ಷಮಿಸುತ್ತಾನೆ ಮತ್ತು ನಮ್ಮನ್ನು ಶುಚಿಮಾಡುತ್ತಾನೆ, ಆತನು ನಮ್ಮನ್ನು ತೊಳೆಯುತ್ತಾನೆ.
ನಮ್ಮ ಪಾಪಗಳನ್ನೆಲ್ಲಾ ಸಮುದ್ರದ ತಳಕ್ಕೆ ಬೀಸಾಡುತ್ತಾನೆ.
ಪ್ರಿಯ ಸ್ನೇಹಿತರೇ ಇದು ಅದ್ಭುತವಲ್ಲವೇ?
ನೀವು ನಿಮ್ಮ ಮತ್ತು ನನ್ನ ರಕ್ಷಕನನ್ನು ಪ್ರೀತಿಸುವದಿಲ್ಲವೋ? ನಾವು ಯೇಸುವನ್ನು ನಮ್ಮ ಹೃದಯಗಳಿಗೆ ಆಹ್ವಾನಿಸುವಾಗ ಬೇರೆ ಒಂದು ಕಾರ್ಯವಾಗುತ್ತದೆ.

೮ – ಸದಾ ಜೀವಿಸಲು ಹುಟ್ಟುವುದು



115

ನಮ್ಮ ಪಾಪಗಳನ್ನು ಜಯಿಸಲು ನಮಗೆ ಶಕ್ತಿಯನ್ನು ನೀಡುತ್ತಾನೆ ಮತ್ತು
ಆತನು ಹೆಜ್ಜೆಜ್ಜಾಡಿನಲ್ಲಿ ನಡೆಯಲು ಆತನ ಹಾಗೆ ಆಗುತ್ತೇವೆ.
ಕಳ್ಳನು ಇನ್ನು ಕದಿಯುವುದಿಲ್ಲ.
ಸುಳ್ಳುಗಾರನು ಸುಳ್ಳು ಹೇಳುವುದಿಲ್ಲ
ಕುಡುಕನು ಇನ್ನು ಕುಡಿಯುವುದಿಲ್ಲ



116

(ವಚನ ಯೋಹಾನ ೧:೧೨)
ಯೋಹಾನ ೧:೧೨ನ್ನು ಗಮನಿಸಿರಿ, ಯಾರಾರು ಆತನನ್ನು
ಅಂಗೀಕರಿಸಿದರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು.



117

ಆತನ ಹೆಸರಿನಲ್ಲಿ ನಂಬಿಕೆ ಇಟ್ಟವರು
ಆತನ ಮಕ್ಕಳಾಗಲು ಪುತ್ರ ಮತ್ತು ಪೌತ್ರಿಯರಾಗಲು ಶಕ್ತಿ ನೀಡುತ್ತಾನೆ.
ನಾವು ಸೈತಾನನ ಭಂದನದಲ್ಲಿ ಇರುವುದಿಲ್ಲ, ನಾವು ಅಂಧಕಾರದ
ಮಕ್ಕಳಾಗಿರುವುದಿಲ್ಲ.


118

ಆತನ ಹೆಜ್ಜೆಜ್ಜಾಡಿನಲ್ಲಿ ನಾವು ನಡೆಯಲು ನಮಗೆ ಶಕ್ತಿ ನೀಡುತ್ತಾನೆ.
ಆತನಲ್ಲಿ ನಂಬಿಕೆ ಇಡುವಾಗ, ರಕ್ಷಣೆಯ ವರವನ್ನು ನಾವು ಅಂಗೀಕರಿಸುವಾಗ
ನಾವು ಜಯಶಾಲಿಗಳಾಗಲು ನಮಗೆ ಶಕ್ತಿ ನೀಡುತ್ತಾನೆ.


119

ನಾವು ಆ ವರವನ್ನು ಹೊಂದಿದನಂತರ ನಾವು ಎಡವಿಬಿದ್ದರೆ, ನಮ್ಮನ್ನು
ಪದೇಪದೆ ಕ್ಷಮಿಸುತ್ತಾನೆ.
ಯೇಸುವಿನ ಹಾಗೆ ಹೆಚ್ಚಾಗಿ ಬೆಳೆಯಲು, ಜಯಗಳಿಸಲು ಆತನು ನಮಗೆ
ಶಕ್ತಿಯನ್ನು ಕೊಡುತ್ತಾನೆ ನಮ್ಮ ರಕ್ಷಕನಾದ ಯೇಸುವಿನ ಮೇಲೆ, ಭರವಸೆ,
ನಂಬಿಕೆಯನ್ನು ಕಲಿಯಲು ಇದು ಬೆಳೆಯುವ ಮಾರ್ಗವಾಗಿದೆ.
ನಾವು ಪರಿಪೂರ್ಣರಾಗಿರುವುದಿಲ್ಲ, ಆದರೆ ನಾವು ಕ್ಷಮಿಸಲ್ಪಡುತ್ತೇವೆ,
ಸೈತಾನನು ನಮ್ಮ ಕರ್ತನಲ್ಲ, ಯೇಸು ನಮ್ಮ ಕರ್ತನಾಗಿರುವನು.


120

ನಂಬುವದೆಂದರೆ, ನಾವು ನಂಬಿಕೆ ಮತ್ತು ಭರವಸೆಯಿಂದ ಇದ್ದು, ರಕ್ಷಣೆಯ
ವರವನ್ನು ಅಂಗೀಕರಿಸುವುದಾಗಿದೆ. ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ,
ಮತ್ತು ಆತನ ಹೆಜ್ಜೆಯಜಾಡಿನಲ್ಲಿ ನಡೆಯಲು ಶಕ್ತಿಯನ್ನೂ ಕೂಡ
ನೀಡುತ್ತಾನೆ.

೮ – ಸದಾ ಜೀವಿಸಲು ಹುಟ್ಟುವುದು


121

ಹೃದಯ ಬಾಗಿಲನ್ನು ತಟ್ಟುವಾಗ ನಾವು ಯೇಸುವನ್ನು ಒಳಗೆ ಆಹ್ವಾನಿಸಲು ಉತ್ತರ ನೀಡುವಾಗ ನಮ್ಮ ಪಾಪದ ಹೃದಯಗಳನ್ನು ಶುಚಿಮಾಡುವನು ಮತ್ತು ನಮ್ಮನ್ನು ಕ್ಷಮಿಸುವನು; ನಮ್ಮನ್ನು ಬದಲಿಸಲು ಮತ್ತು ಪಾಪದಿಂದ ಜಯಗಳಿಸಲು ಆತನ ಹಾಗೆ ಹೆಚ್ಚಾಗಿ ಆಗಲು ನಮಗೆ ಶಕ್ತಿ ನೀಡುತ್ತಾನೆ.


122

ಮತ್ತು ಯೇಸು ನಮ್ಮಲ್ಲಿ ಜೀವಿಸುವಾಗ, ನಮಗೆ ನಿತ್ಯ ಜೀವವು ಖಂಡಿತವಾಗಿ ಇದೆ ಎಂದು ನಾವು ತಿಳಿಯಬಹುದು.
ಇದು ನಿಮಗೆ ಗೊತ್ತೇ?
ನಾವು ರಕ್ಷಿಸಲ್ಪಡುತ್ತೇವೋ ಮತ್ತು ಯೇಸುವಿನ ಜೊತೆ ಸದಾ ಜೀವಿಸುತ್ತೇವೋ ಎಂದು ನಾವು ಚಿಂತಿಸ ಬೇಕಿಲ್ಲ.



123

(ವಚನ ೧ ಯೋಹಾನ ೫:೧೨,೧೩)
ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ.



124

ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮಗೆ ಬರೆದಿದ್ದೇನೆ.




125

ನಿಮ್ಮಲ್ಲಿ ನಿತ್ಯ ಜೀವ ಉಂಟೆಂದು ಗೊತ್ತಾಗುವಂತೆ ಬರೆದಿದ್ದೇನೆ.
೧ಯೋಹಾನ ೫:೧೨,೧೩


126

ಇಲ್ಲಿ ಈಗಲೇ ನಮಗೆ ನಿತ್ಯಜೀವ ಉಂಟೆಂದು ತಿಳಿಯಲು ಯೇಸು ಆಶಿಸುತ್ತಾನೆ.
ಇಲ್ಲಿ ಮತ್ತು ಈಗಲೇ ಯೇಸುವನ್ನು ನಮ್ಮ ಹೃದಯಗಳೊಳಗೆ ಅಂಗೀಕರಿಸುವಾಗ, ನಮಗೆ ರಕ್ಷಣೆಯ ಭರವಸೆ ಸಿಗುವುದೆಂದು ನಮಗೆ ತಿಳಿಯಬೇಕು, ಯೇಸು ಆಹ್ವಾನವನ್ನು ಪ್ರತಿಯೊಬ್ಬರಿಗೂ, ಎಲ್ಲೆಲ್ಲಿಯೂ ನೀಡುತ್ತಾನೆ.

೮ – ಸದಾ ಜೀವಿಸಲು ಹುಟ್ಟುವುದು



127

(ವಚನ ಯೋಹಾನ ೩:೧೬)
ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಕೊಟ್ಟನು.
ಯೋಹಾನ ೩:೧೬
ಒಂದು ವೇಳೆ ನಿರೀಕ್ಷೆಯಿಲ್ಲದ ಪಾಪಿಯೆಂದು ನೀವು ಭಾವಿಸಬಹುದು ಆದರೆ ಅದು ಸರಿಯಲ್ಲ.
ಬಹು ಅಸಾದ್ಯವಾದ ಪರಿಸ್ಥಿತಿಯನ್ನು ಜಯಕ್ಕೆ ಬದಲಿಸಬಹುದು.
ಕ್ರಿಸ್ತನು ಕ್ಷಮಿಸಲು ಕೆಟ್ಟದಾದ ಜೀವಿತವಿಲ್ಲ, ದೊಡ್ಡ ಪಾಪವೂ ಇಲ್ಲ.

೮ – ಸದಾ ಜೀವಿಸಲು ಹುಟ್ಟುವುದು


128

ಡಿಸೆಂಬರೆ ೩೧, ೧೯೯೭ರಲ್ಲಿ, ಜಾನ್ ಕ್ಲಾನ್ಸಿ ಹಳೆಯ ಅಗ್ನಿ ಶಾಮಕ ದಳದ ವ್ಯಕ್ತಿ ನ್ಯೂಯಾರ್ಕಿನಲ್ಲಿ ತನ್ನ ಸಿಬ್ಬಂದಿಗಳನ್ನು ಉರಿಯುತ್ತಿರುವ ಕಾಲಿ ಕಟ್ಟಡವಿದ್ದ ಮ್ಯಾನ್ ಹಟನ್ ಜಿಲ್ಲೆಗೆ ಕರ ಕೊಂಡು ಹೋದನು.
ಬೆಂಕಿ ಅಧಿಕವಾದಾಗ, ಅಗ್ನಿ ಶಾಮಕ ದಳದವರು ಯಾರಾದರೂ ಕಟ್ಟಡದ ಬ ಳಗೆ ಇರಬೇಕೆಂದು ಯೋಚಿಸಿದರು. ಅಲ್ಲಿ ವಾಸಿಸುತ್ತಿದ್ದವರು ಸುತ್ತಾಡುವವರೂ, ಮಾದಕ ಪದಾರ್ಥಗಳನ್ನು ಉಪಯೋಗಿಸುವವರೂ, ಕುಡುಕರು, ವ್ಯಭಿಚಾರಿಗಳು ಇದ್ದರು.
ಹೇಗಾದರೂ ಒಳಗೆ ಹೋಗಿ ಜನರನ್ನು ಕಾಪಾಡೋಣವೆಂದು ಕ್ಲಾನ್ಸಿ ಮತ್ತು ಆತನ ಸ್ನೇಹಿತರು ತೀರ್ಮಾನಿಸಿದರು. ಕಟ್ಟಡ ಹೊಗೆಯಿಂದ ಕೂಡಿತ್ತು. ಏನೂ ನೋಡಲಾಗಲಿಲ್ಲ. ಸ್ವಲ್ಪಕಾಲಕ್ಕೆ ತಂಗಿರುವ ಜನರನ್ನು ರಕ್ಷಿಸಲು ತೀರ್ಮಾವಿಸಿದರು. ತಕ್ಷಣವೇ ಕಟ್ಟಡದ ೨ನೇ ಅಂತಸ್ತಿನ ಮೇಲ್ ಚಾವಣಿ ಕೆಳಗೆ ಬಿದ್ದಿತು. ಜಾನ್ ಕ್ಲಾನ್ಸಿ ಬೆಂಕಿಯಲ್ಲಿ ಸಿಕ್ಕಿಹಾಕಿ ಕೊಂಡಿದ್ದರು, ಸ್ನೇಹಿತರು ಬೆಂಕಿಯಿಂದ ಅವರನ್ನು ಕಾಪಾಡಲು ಶತ ಪ್ರಯತ್ನ ಪಟ್ಟರು ಕೊನೆಯದಾಗಿ ಅವರನ್ನು ಹೊರಗೆ ತೆಗೆದಾಗ ತಡವಾಯಿತು, ಅವರ ದೇಹ ಆಕಾರ ವಿಲ್ಲದ ಹಾಗೆ ಸುಟ್ಟುಹೋಯಿತು. ೧೯೯೫ನೇ ವರ್ಷದ ಕೊನೆಯ ದಿನವು, ದೈರ್ಯಶಾಲಿಯಾದ ಅಗ್ನಿಶಾಮಕದ ವ್ಯಕ್ತಿಯ ಜೀವಕ್ಕೆ ಅಂತ್ಯವಾಯಿತು. ಆತನ ಹೆಂಡತಿ ೬ ತಿಂಗಳ ಗರ್ಬಿಣಿಯಾಗಿದ್ದಳು, ಮುಂದೆ ಏನು ಮಾಡಬೇಕೆಂದು ಯೋಚಿಸಿದ್ದೆಲ್ಲವನ್ನೂ ಬಿಟ್ಟು ಹೋದರು. ಎಲ್ಲಾ ಜೀವಿಗೂ ಬೆಲೆಯುಳ್ಳದ್ದೆಂದು ಜಾನ್ ಕ್ಲಾನ್ಸಿ ನಂಬಿದನು.
ಆ ಕಟ್ಟಡದಲ್ಲಿದ್ದವರನ್ನು ರಕ್ಷಿಸಲು ತನ್ನ ಪ್ರಾಣವನ್ನು ಕೊಡಲು ಸಿದ್ದನಾದನು, ಸುರಕ್ಷಿತವಾದ ಮನೆಯನ್ನು ಬಿಟ್ಟು ಉರಿಯುತ್ತಿದ್ದ ಬೆಂಕಿಯ ಅಪಾಯಕ್ಕೆ ಒಪ್ಪಿಸಿಕೊಟ್ಟರು; ಜೀವಗಳನ್ನು ಉಳಿಸಲು ಬೆಂಕಿಯ ಉರಿಗೆ ಪ್ರವೇಶಿಸಿದರು, ಮತ್ತು ಆತನ ಜೀವವನ್ನು ಕಳಕೊಂಡರೂ ಕರ್ತವ್ಯ ಮಾಡಲಿಕ್ಕಾಗಿ ಆತನ ಜೀವ ಹೋಯಿತು.
ಬೇರೆಯವರು ಸಾಯುತ್ತಾರೆಂದು ತಿಳಿದು ಅವರು ಸುಮ್ಮನೆ ಇರಲಾಗಲಿಲ್ಲ. ಈ ಕಥೆಯ ವಿವರಣೆಯಲ್ಲಿ ಬೆಂಕಿ ಅಲ್ಲಿಂದಲೇ ಪ್ರಾರಂಭವಾಗಿತ್ತು. ಎಡ್ ವಿನ್ ಸ್ಮಿತ್ ಎಂಬ ಒಬ್ಬನು ಕಟ್ಟಡದಲ್ಲಿದ್ದು ಬೆಂಕಿ ಹೊತ್ತಿಸಿದನು, ಕಟ್ಟಡವನ್ನು ಸುಟ್ಟವನನ್ನೇ ಕಾಪಾಡಲು, ರಕ್ಷಿಸಲು ಜಾನ್ ಕ್ಲಾನ್ಸಿ ಪ್ರಯತ್ನ ಪಟ್ಟನು. ಒಬ್ಬ ಕಿಚ್ಚಿಟ್ಟವನಿಗಾಗಿ ಆತನು ಪ್ರಾಣಕೊಟ್ಟನು.
ಯೇಸು ಕ್ರಿಸ್ತನು ಮಾದರಿ ಎಂಥದ್ದಾಗಿದೆ.

೮ – ಸದಾ ಜೀವಿಸಲು ಹುಟ್ಟುವುದು


129


ಯೇಸು ತನ್ನ ಭದ್ರವಾಗಿದ್ದ ಮನೆಯನ್ನು ಬಿಟ್ಟನು, ಲೋಕದಲ್ಲಿದ್ದ ಕಿಚ್ಚನ್ನು ಇಟ್ಟ ಲೋಕಕ್ಕೆ ಪ್ರವೇಶಿಸಿದನು.
ನಮ್ಮ ರಕ್ಷಕನು ಶಿಲುಭೆಯಲ್ಲಿ ತೂಗಿದನು, ಪಾಪದ ಬೆಂಕಿ ಸಂಪೂರ್ಣವಾಗಿ ಆತನನ್ನು ಸುಟ್ಟುಹಾಕಿತು.
ನಾವು ಇಷ್ಟದ ಅರಿಸುವಿಕೆಯಿಂದ ಪಾಪ ಮಾಡಿದೆವು.
ಈ ಲೋಕಕ್ಕೆ ನಮ್ಮ ಕೋಪ, ಅಪ್ರಮಾಣಿಕತೆ, ಕಾಮಾಸಕ್ತಿ ಅತ್ಯಾಶೆಯಿಂದ, ನಮ್ಮ ವ್ಯಭಿಚಾರ ಮತ್ತು ಸುಳ್ಳಿನಿಂದ ಲೋಕಕ್ಕೆ ಬೆಂಕಿ ಹೊತ್ತಿಸಿದೆವು.
ನಾವು ಜೀವಿಸಲು ಯೇಸು ಸತ್ತನು.
ಶಿಲುಭೆಯ ಮೇಲೆ ಪಾಪವೆಂಬ ಬೆಂಕಿಯನ್ನು ಅನುಭವಿಸಿದನು, ಇದರಿಂದ ಪಾಪವನ್ನು ಸಂಪೂರ್ಣವಾಗಿ ಸುಡಲು ಯೇಸು ಬರುವಾಗ ನರಕದ ಬೆಂಕಿಯನ್ನು ಅನುಭವಿಸದೆ ಇರಬಹುದು.
ನೀವು ಸದಾಕಾಲ ಜೀವಿಸಬಹುದೆಂಬ ಭವರಸೆಯನ್ನು ಯೇಸು ಇಂದು ಕೊಡುತ್ತಾನೆ.


130

ಆತನು ಕೇಳುತ್ತಾನೆ ಮತ್ತು ಕಾದಿದ್ದಾನೆ.
ನಿಮ್ಮ ಹೃದಯದ ಬಾಗಿಲನ್ನು ಇಂದು ತೆರೆದು, ನಿಮ್ಮ ಜೀವಿತದ ರಕ್ಷಕನೂ ಮತ್ತು ಕರ್ತನು ಆಗುವ ಹಾಗೆ ಯಾಕೆ ನಾವು ಆಹ್ವಾನಿಸಬಾರದು?
ಆತನು ಕಾಯುತ್ತಿದ್ದಾನೆ ಮತ್ತು ಕೇಳುತ್ತಿದ್ದಾನೆ.
ಯೇಸು ಒಂದು ಕಾರ್ಯವನ್ನು ಮಾಡಲಾಗದು, ಆತನಿಗಾಗಿ ಹೃದಯದ ಬಾಗಿಲನ್ನು ತೆರೆಯಲು ಒತ್ತಾಯಮಾಡುವುದಿಲ್ಲ.
ನಮ್ಮ ಪ್ರತಿಯೊಬ್ಬರಿಗೂ ಆರಿಸಿಕೊಳ್ಳುವ ಶಕ್ತಿಯನ್ನು ನೀಡುತ್ತಾನೆ.
ನಾವು ಬಾಗಿಲನ್ನು ತೆರೆಯಬೇಕು, ನಾವು ಬಾಗಿಲನ್ನು ತೆರೆದರೆ ಆತನು ಸಂತೋಷದಿಂದ ಒಳಗೆ ಬರುತ್ತಾನೆ. ಸ್ನೇಹಿತನೇ, ಈಗಲೇ ಇದನ್ನು ಮಾಡಲು ಆರಿಸುತ್ತೀರೋ?
ನೀವು ಒಂದು ಕ್ಷಣವೂ ಕಾಯದೆ ಯೇಸುವನ್ನು ನಿಮ್ಮ ಹೃದಯಗಳಿಗೆ ಆಹ್ವಾನಿಸುವಿರಾ?


131

ಹಾಗಿದ್ದರೆ ನನ್ನ ಜೊತೆ ಈ ಪ್ರಾರ್ಥನೆಯನ್ನು ಮಾಡಿರಿ


132


ಪ್ರಿಯ ದೇವರೆ, ನಾನು ಒಬ್ಬ ಪಾಪಿ ಎಂದು ಅರಿತಿದ್ದೇನೆ ಮತ್ತು ನನಗೆ ಸಹಾಯ ಬೇಕಾಗಿದೆ.

೮ – ಸದಾ ಜೀವಿಸಲು ಹುಟ್ಟುವುದು




133

ಯೇಸುವನ್ನು ನನ್ನ ರಕ್ಷಕನೆಂದು ಮತ್ತು ಕರ್ತನೆಂದು ಅಂಗೀಕರಿಸಲು ನಾನು ಆಶಿಸುತ್ತೇನೆ.



134

ಆತನ ತಟ್ಟುವಿಕೆಗೆ ಉತ್ತರ ನೀಡಿ ಮತ್ತು ಈಗಲೇ ಆತನನ್ನು ನನ್ನ ಹೃದಯದಲ್ಲಿ ಬರಲು ಆಹ್ವಾನಿಸಲು ಆಶಿಸುತ್ತೇನೆ.



135

ನಾನು ಮಾಡಿದ ಎಲ್ಲಾ ಪಾಪಗಳನ್ನು ದಯಮಾಡಿ ಕ್ಷಮಿಸು. ನನ್ನ ಜೀವಿತವನ್ನು ಸಂಪೂರ್ಣವಾಗಿ ನಿನ್ನ ಭಂದನಕ್ಕೆ ದಯಮಾಡಿ ತೆಗೆದುಕೋ.


136

ಯೇಸು ನನ್ನ ಹೃದಯದೊಳಗೆ ಬಂದು, ಶುದ್ದವಾಗಿ ತೊಳೆದು, ಆತನಿಗಾಗಿ ಜೀವಿಸಲು ಆತನಿಗೆ ಸಹಾಯ ಮಾಡಲು ನಾನು ಆತಿಸುತ್ತೇನೆ.
ನನ್ನ ಪ್ರಾ್ರರ್ಥನೆಯನ್ನು ಕೇಳಿ ಮತ್ತು ಉತ್ತರ ನೀಡಿದ್ದಕ್ಕಾಗಿ ನಿನಗೆ ದನ್ಯವಾದಗಳು. ಯೇಸುವಿನ ಹೆಸರಿನಲ್ಲಿ ಕೇಳಿ ಕೊಳ್ಳುತ್ತೇನೆ. ಆಮೆನ್

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.



1

ನಿಮ್ಮ ಕಡೆ ನ್ಯಾಯಾಧೀಶನು


2

ಮೊದಲನೆಯ ಜೇಮ್ಸ್ ಇಂಗ್ಲೆಂಡಿನ ಒಬ್ಬ ರಾಜನು ಆತನು ಒಬ್ಬ ನ್ಯಾಯದೀಶನಾಗಿದ್ದನು, ಆತನು ಜಾಗರೂಕತೆಯಿಂದ ಒಬ್ಬನು ಹೇಳಿದ್ದನ್ನು ಕೇಳಿದನು. ಆತನು ತೀರ್ಮಾನವನ್ನು ತೆಗೆದುಕೊಳ್ಳಲಿರುವಾಗ, ಇನ್ನೊಬ್ಬನು ಹೇಳಿದನು.

ಆತನು ಗಲಿಬಿಲಿಯಿಂದ ಕೂಡಿದವನಾಗಿ ಏನು ಮಾಡಲು ತಿಳಿಯಲಿಲ್ಲ. ನಿರಾಪರಾಧಿಗಳೆಂದು ಮೊದಲು ಯೋಚಿಸಿದ ಜನರು, ಈಗ ಅಪರಾಧಿಗಳೆಂದು ಕಂಡರು. ಮೊದಲು ಅಪರಾಧಿಗಳೆಂದು ಕಂಡವರು ನಿರಾಪರಾಧಿಗಳಾಗಿ ಕಂಡರು. ಆತನು ಕೊನೆಯಲ್ಲಿ ನ್ಯಾಯಾಧೀಶನ ಸ್ಥಾನವನ್ನು ಬಿಟ್ಟನು.

ರಾಜನಾದ ಜೇಮ್ಸ್ ಈ ರೀತಿ ಹೇಳಿದನು. ಒಬ್ಬರು ಹೇಳಿದಾಗ ಎಲ್ಲವೂ ಚೆನ್ನಾಗಿತ್ತು. ನಾನು ಇಬ್ಬರು ಹೇಳಿದ ಮಾತುಗಳನ್ನು ಕೇಳಿದಾಗ ಯಾವದು ಸರಿ ಎಂದು ತಿಳಿಯಲಾಗಲಿಲ್ಲ.

ಗಲಿಬಿಲಿಯಾದ ಒಬ್ಬ ನ್ಯಾಯಾಧೀಶನಿಗೆ ಸರಿಯಾದ ತೀರ್ಮಾನ ಮಾಡಲು ಕಷ್ಟಕರವಾಗಿರುತ್ತದೆ.

ದೇವರು ಪಕ್ಷಪಾತಿಯಲ್ಲ, ನ್ಯಾಯವಾದ ಸರಿಯಾದ ನ್ಯಾಯದೀಶನಾಗಿದ್ದಾನೆ. ನಮಗೆ ನ್ಯಾಯ ತೀರಿಸುವಾಗ ಆತನು ಗಲಿಬಿಲಿಯಿಂದ ಇರುವದಿಲ್ಲ.



3

(ವಿಡಿಯೋ ೪ಸೆಕೆಂಡುಗಳು) ಪ್ರತಿಯೊಬ್ಬರೂ ದೇವರ ನ್ಯಾಯಾಸನದ ಮುಂದೆ ನಿಲ್ಲಬೇಕೆಂದು ಸತ್ಯವೇದವು ತಿಳಿಸುತ್ತದೆ.




4

(ವಿಡಿಯೋ ೧೨ಸೆಕೆಂಡುಗಳು) ಈಗಲೂ ಕೂಡ, ನಾವು ಹೇಗೆ ಜೀವಿಸಿದೆವು ಮತ್ತು ಏನು ಮಾಡಿದೆವು ಎಂಬ ವಿಚಾರವಾಗಿ ಲೆಕ್ಕ ಕೊಡಲು ನ್ಯಾಯತೀರ್ಪಿನಲ್ಲಿ ಕರೆಯಲ್ಪಡುತ್ತೇವೆ.


ಈ ಜಗತ್ತಿನ ಉನ್ನತವಾದ ನ್ಯಾಯಾಲಯದಲ್ಲಿ ಪ್ರತಿ ಸ್ತ್ರೀ ಪುರುಷನು ದೇವರ ನ್ಯಾಯಾಸನದ ಮುಂದೆ ನಿಲ್ಲಬೇಕಾಗುತ್ತದೆ. ಇಡೀ ಲೋಕವೇ ನಿಲ್ಲಬೇಕೆಂದು ಅಪೋಸ್ತಲನಾದ ಪೌಲನು ಹೇಳುತ್ತಾನೆ.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.



5

(ವಚನ, ಅಪೋಸ್ತಲರ ಕೃತ್ಯಗಳು ೧೭:೩೧)
ಭೂಲೋಕದ ನ್ಯಾಯ ವಿಚಾರಣೆ ಮಾಡುವದಕ್ಕೆ ಒಂದು ದಿನವನ್ನು ಗೊತ್ತುಮಾಡಿದ್ದಾನೆ. ಅಪೋಸ್ತಲರ ಕೃತ್ಯಗಳು ೧೭:೩೧
ಯಾರೂ ಬಿಡಲ್ಪಡುವದಿಲ್ಲ, ಅಪ್ಪಣೆಯಿಂದ ಯಾರೂ ತಪ್ಪಿಸಿಕೊಳ್ಳಲಾಗದು. ಪ್ರತಿಯೊಬ್ಬರು ಕಾಣಿಸಿಕೊಳ್ಳಬೇಕೆಂದು ಸತ್ಯವೇದವು ಪರಿಷ್ಕಾರವಾಗಿ ತಿಳಿಸುತ್ತದೆ.



6

(ವಚನ, ೨ ಕೋರಿಂಥ ೫:೧೦೦
ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು. ೨ ಕೋರಿಂಥ ೫:೧೦


7

ನಾವು ನಂಬಿದರೂ, ನಂಬದೆ ಇದ್ದರೂ ಸರಿ.
ನಮಗೆ ಇಷ್ಟವಿದ್ದರೂ, ಇಷ್ಟ ಇಲ್ಲದಿದ್ದರೂ ಸರಿ.
ನಾವು ಕ್ರೈಸ್ತರೆಂದು ಹೇಳಿಕೊಂಡರೂ, ಹೇಳಿಕೊಳ್ಳದಿದ್ದರೂ ಸರಿ.
ನಾವು ಯಾರೇ ಆಗಿದ್ದರೂ ಸರಿ. ಎಲ್ಲರೂ ಕಾಣಿಸಿಕೊಳ್ಳಬೇಕು. ದೇವರಿಗೆ ಅಚ್ಚುಮೆಚ್ಚಿನವರಾರೂ ಇಲ್ಲ.
ಪರಲೋಕದ ನ್ಯಾಯಾಲಯದಿಂದ ಕರೆಯುವಿಕೆ ನಮಗೆ ಬಂದರೆ ನಾವು ಕಾಣಿಸಿಕೊಳ್ಳಬೇಕು. ಯಾಕೆ? ಪೌಲನು ಉತ್ತರ ನೀಡುತ್ತಾನೆ.



8

(ವಚನ, ರೋಮಾಪುರದವರಿಗೆ ೧೪:೧೨)
ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು.
ರೋಮಾಪುರದವರಿಗೆ ೧೪:೧೨


9


ಪರಲೋಕದ ನ್ಯಾಯಾಲಯದ ತೀರ್ಮಾನವು ಪ್ರತಿ ವ್ಯಕ್ತಿಯ ವಿಧಿಯನ್ನು ಮುದ್ರಿಸುವದು. ತೀರ್ಮಾನವನ್ನು ಹಿಂದಕ್ಕೆ ತೆಗೆಯಲಾಗದು.
ತಿರಿಗಿ ಬೇಡಲು ಅದಕ್ಕಿಂತಲೂ ಉನ್ನತವಾದ ನ್ಯಾಯಾಲಯವಿರದು.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.




10

(ವಿಡಿಯೋ ೧೫ ಸೆಕೆಂಡುಗಳು)
ಆದರೆ ಒಂದು ತೀರ್ಪು ನೀಡಲು ಮೊದಲು ತೀರ್ಮಾನವನ್ನು ತಿಳಿಸಲು ಮೊದಲು ನ್ಯಾಯವಿಚಾರಣೆಯು ಇರಬೇಕು. ಸತ್ಯವೇದವನ್ನು ತೆಗೆದು ನ್ಯಾಯಾಲಯದ ದೃಶ್ಯವನ್ನು ಪರಲೋಕದಲ್ಲಿ ನಡೆಯುವದನ್ನು ಗಮನಿಸೋಣ.
ಪ್ರವಾದಿಯಾದ ದಾನಿಯೇಲನು ಬರೆದನು.



11

(ವಚನ, ದಾನಿಯೇಲ ೭:೯,೧೦)
ನಾನು ನೋಡುತ್ತಿದ್ದ ಹಾಗೆ ನ್ಯಾಯಾಸನಗಳು ಹಾಕಲ್ಪಟ್ಟವು, ಮಹಾ ವೃದ್ಧನೊಬ್ಬನು ಆಸೀನನಾದನು.



12

ಆತನ ಉಡುಪು ಹಿಮದಂತೆ ಶುಭ್ರವಾಗಿತ್ತು. ಆತನ ತಲೆಯ ಕೂದಲು ನಿರ್ಮಲವಾದ ಬಿಳಿಯ ಉಣ್ಣೆಯಂತಿತ್ತು.




13

ಆತನ ಸಿಂಹಾಸನವು ಅಗ್ನಿ ಜ್ವಾಲೆಗಳು, ಅದರ ಚಕ್ರಗಳು ಧಗ ಧಗಿಸುವ ಬೆಂಕಿಯೇ.




14

ನ್ಯಾಯಾಸನದ ಮುಂದೆ ಉರಿಯ ಪ್ರವಾಹವು ಉಕ್ಕಿ ಹರಿದು ಬಂತು.



15

ಲಕ್ಷೋಪಲಕ್ಷ ದೂತರು ಆತನನ್ನು ಸೇವಿಸುತ್ತಿದ್ದರು.



16

ಕೋಟ್ಯಾನು ಕೋಟಿ ಕಿಂಕರರು ಆತನ ಮುಂದೆ ನಿಂತುಕೊಂಡಿದ್ದರು. ನ್ಯಾಯ ಸಭೆಯವರು ಕೂತುಕೊಂಡರು. ಪುಸ್ತಕಗಳು ತೆರೆಯಲ್ಪಟ್ಟವು. ದಾನಿಯೇಲ ೭:೯,೧೦

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.


17

ದಾನಿಯೇಲನು ದೇವರನ್ನು ಮಹಾ ವೃದ್ದನೆಂದು ಚಿತ್ರೀಕರಿಸುತ್ತಾನೆ. ನಿತ್ಯ ಸಿಂಹಾಸನದ ಮೇಲೆ ಕೂತಿದ್ದಾನೆ. ಸುತ್ತಲೂ ದೂತರಿದ್ದಾರೆ. ನಂತರ ದರ್ಶನದಲ್ಲಿ ದಾನಿಯೇಲನು ಕಂಡದನ್ನು ಈಗ ಗಮನಿಸಿರಿ.



18

(ವಚನ, ದಾನಿಯೇಲ ೭:೧೩)
ನಾನು ರಾತ್ರಿ ಕಂಡ ಕನಸಿನಲ್ಲಿ ನೋಡಿದೆನು.



19

ಇಗೋ, ಮನುಷ್ಯಕುಮಾರನಂತಿರುವವನು ಆಕಾಶದ ಮೇಘಗಳೊಂದಿಗೆ ಬ
ಂದನು
ದಾನಿಯೇಲ ೭:೧೩




20

ಆ ಮಹಾ ವೃದ್ಧನನ್ನು ಸಮೀಪಿಸಿದನು. ಅವನನ್ನು ಆತನ ಸನ್ನಿಧಿಗೆ ತಂದರು.
ದಾನಿಯೇಲ ೭:೧೩


21

ಇಲ್ಲಿ ಮನುಷ್ಯಕುಮಾರನು ಮಹಾವೃದ್ಧನ ಮುಂದೆ ನಿಂತಿರುವುದನ್ನು ಚಿತ್ರೀಕರಿಸಿದೆ.
ಈ ಲೋಕದ ನ್ಯಾಯಾಸನದ ದೃಶ್ಯದ ಹಾಗೆ ಇದೆ.
ನ್ಯಾಯಾಧೀಶನಿದ್ದಾನೆ, ಮಹಾವೃದ್ಧನೂ, ಶಾಕ್ಷಿಗಳಿದ್ದಾರೆ, ಪರಿಶುದ್ಧ ದೂತರು ಎಲ್ಲವನ್ನು ನೋಡಿ, ಪ್ರತಿಯೊಂದನ್ನು ದಾಖಲುಮಾಡಿದ್ದಾರೆ.
ಸಿಂಹಾಸನದ ಮುಂದೆ ಯೇಸು ಮಾನವನ ವಕೀಲನಾಗಿ ನಿಂತಿದ್ದಾನೆಂದು ಯೋಹಾನನು ಬರೆದಿದ್ದಾನೆ.



22

(ವಚನ, ೧ ಯೋಹಾನ ೨:೧)
ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ. ೧.ಯೋಹಾನ ೨:೧

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.




23

(ವಿಡಿಯೋ ೫ ಸೆಕೆಂಡುಗಳು)
ಎಲ್ಲರೂ ಅಲ್ಲಿರುವ ಹಾಗೆ ತೋರುತ್ತದೆ. ಆದರೆ ವಿಚಾರಿಸಲ್ಪಡುವವರು ಯಾರೆಂದು ನೀವು ಕೇಳಬಹುದು?
ಕಾರ್ಯ ರೂಪದಲ್ಲಿ ಅದು ಸತ್ಯ, ಸತ್ಯವೇದವು ಹೇಳುವದನ್ನು ಗಮನಿಸೋಣ.




24

(ವಚನ, ದಾನಿಯೋಲ ೭:೧೦)
ನ್ಯಾಯ ಸಭೆಯವರು ಕೂತುಕೊಂಡರು, ಪುಸ್ತಕಗಳು ತೆರೆಯಲ್ಪಟ್ಟವು.
ದಾನಿಯೇಲ ೭:೧೦
ವಿಚಾರಿಸಲ್ಪಡಲಿರುವವರ ಕಾರ್ಯಗಳ ದಾಖಲೆಗಳು ಈ ಪುಸ್ತಕಗಳಲ್ಲಿ ಇರುತ್ತವೆ.




25

(ವಚನ, ಪ್ರಸಂಗಿ ೧೨:೧೪)
ಒಳ್ಳೇದಾಗಲಿ, ಕೆಟ್ಟದಾಗಲಿ ಸಕಲ ರಹಸ್ಯ ಸಂಗತಿಗಳನ್ನು ವಿಮರ್ಶಿಸುವ ನ್ಯಾಯ ವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನು ಗುರಿಮಾಡುವನು. ಪ್ರಸಂಗಿ ೧೨:೧೪
ಪ್ರಸಂಗಿ ೧೨:೧೪



26


(ವಚನ, ಮಲಾಕೀಯ ೩:೧೬)
ಮಲಾಕೀಯನು ಸೇರಿಸುತ್ತಾನೆ.
ಯೆಹೋವನ ಭಕ್ತರು ಒಬ್ಬರಿಗೊಬ್ಬರು ಮಾತಾಡಿಕೊಳ್ಳಲು ಯೆಹೋವನು ಆಲಿಸಿದನು.



27

ಭಯ ಭಕ್ತಿಯಿಂದ ತನ್ನ ನಾಮಸ್ಮರಣೆ ಮಾಡುವವರ ಹೆಸರುಗಳನ್ನು ತನ್ನ ಮುಂದೆ ಜ್ಞಾಪಕದ ಪುಸ್ತಕದಲ್ಲಿ ಬರೆಯಿಸಿದನು.
ನಮ್ಮ ಹೃದಯಗಳು ಆತನ ಕಡೆಗೆ ಎಳೆಯಲ್ಪಟ್ಟ ಪ್ರತಿ ಸಮಯವನ್ನು ದೇವರು ಗಮನಿಸುತ್ತಾನೆ. ನಾವು ಇತರರಿಗೆ ಕೊಡುವ ಆಧರಣೆಯನ್ನು ಮತ್ತು ಪ್ರತಿ ಕರುಣೆಯ ಕಾರ್ಯವನ್ನು ಆತನು ಗುರುತಿಸುತ್ತಾನೆ. ದಾವೀದ ರಾಜನಿಗೂ ಕೂಡ ದಾಖಲೆಗಳ ವಿಚಾರವಾಗಿ ತಿಳಿದಿತ್ತು. ಆತನ ಹೀಗಂದನು

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.



28

(ವಚನ, ಕೀರ್ತನೆ ೫೬:೮)
ನನ್ನ ಕಣ್ಣೀರು ನಿನ್ನ ಬುದ್ದಲಿಯಲ್ಲಿ ತುಂಬಿದೆ. ಅದರ ವಿಚಾರ ನಿನ್ನ ಪುಸ್ತಕದಲ್ಲಿ ಬರೆದದೆಯಲ್ಲಾ ನಿಮ್ಮ ಜೀವಿತದ ಆಳವಾದ ದುಃಖಗಳನ್ನು ದೇವರು ಬಲ್ಲನು, ದೇವರಿಗೆ ನಮ್ಮ ವಿಷಯವೆಲ್ಲಾ ತಿಳಿದಿದೆ. ದಾವೀದನು ಹೀಗೆ ಬರೆದನು.



29

(ವಚನ, ಕೀರ್ತನೆ ೧೩೯:೧,೩,೧೬)
ಯೆಹೋವನೇ, ನೀನು ನನ್ನನ್ನು ಪರೀಕ್ಷಿಸಿ ತಿಳುಕೊಂಡಿದ್ದೀ.



30

ನನ್ನ ಮಾರ್ಗಗಳ ವಿಚಾರವಾಗಿ ಅರಿತಿದ್ದೀ.



31

ನನ್ನ ಆಯುಷ್ಕಾಲದ ಪ್ರಥಮ ದಿನವು ಪ್ರಾರಂಭವಾಗುವ ಮೊದಲೇ ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು. ಕೀರ್ತನೆ ೧೩೯,೧,೩,೧೬


32

ದೇವರು ನಮ್ಮ ವಿಚಾರ ತಿಳಿದಿರುವಾಗ, ಆತನ ಪ್ರಯೋಜನಕ್ಕಾಗಿ ದಾಖಲೆಗಳನ್ನು ಇಡಬೇಕಾದ ಅಗತ್ಯವಿಲ್ಲ.
ದಾಖಲೆಗಳು ಜಗತ್ತಿನ ಪ್ರಯೋಜನಕ್ಕಾಗಿ ಇಡಲ್ಪಟ್ಟಿವೆ. ಪ್ರತಿಯೊಂದು ಕಾರ್ಯದಲ್ಲಿ ದೇವರ ಪ್ರೀತಿ ಮತ್ತು ನ್ಯಾಯದ ವಿಚಾರವಾಗಿ ಸರಿಯಾದ ಸಿದ್ಧಾಂತವಿರುವದು. ದೇವರಿಗೆ ನಾವು ಲೆಕ್ಕ ಕೊಡಬೇಕಾಗಿರುವುದು ಒಂದು ಗಂಭೀರವಾದ ವಿಚಾರವಾಗಿದೆ.


33

ಜೀವನದ ಅಮೂಲ್ಯವಾದ ವಿಚಾರವಾಗಿ ಪ್ರತಿಯೊಬ್ಬರು ದೇವರಿಗೆ ಲೆಕ್ಕ ಕೊಡಬೇಕಾಗಿದೆ. ಇದನ್ನು ಕುರಿತು ಸೊಲೊಮೋನನು ಬರೆದು ಹೇಳಿದನು.



34

(ವಚನ ಪ್ರಸಂಗಿ ೧೧:೯)
ಯವನಸ್ತನೇ, ಪ್ರಾಯದಲ್ಲಿ ಆನಂದಿಸು, ಯವ್ವನದ ದಿನಗಳಲ್ಲಿ ಹೃದಯವು ನಿನ್ನನ್ನು ಹರ್ಷಗೊಳಿಸಲಿ.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.




35

ಮನಸ್ಸಿಗೆ ತಕ್ಕಂತೆಯೂ, ಕಣ್ಣಿಗೆ ಸರಿಬೀಳುವ ಹಾಗೆಯೂ ನಡೆದುಕೋ.




36

ಆದರೆ ಈ ಎಲ್ಲಾ ವಿಷಯಗಳಲ್ಲಿಯೂ ದೇವರು ನಿನ್ನನ್ನು ನ್ಯಾಯ ವಿಚಾರಣೆಗೆ ಗುರಿಮಾಡುವನೆಂದು ತಿಳಿದಿರು.
ಪ್ರಸಂಗಿ ೧೧:೯



37

(ವಚನ, ಮತ್ತಾಯ ೧೨:೩೬,೩೭)
ಮತ್ತಾಯನು ಹೀಗೆ ಬರೆದನು. ಮನುಷ್ಯರು ಸುಮ್ಮನೆ ಆಡುವ ಪ್ರತಿಯೊಂದು ಮಾತಿನ ವಿಷಯದಲ್ಲಿ ನ್ಯಾಯವಿಚಾರಣೆಯ ದಿನದಲ್ಲಿ ಉತ್ತರಕೊಡಬೇಕು.



38

ನಿನ್ನ ಮಾತುಗಳಿಂದಲೇ ನೀತಿವಂತನೆಂಬ ತೀರ್ಪು ಹೊಂದಿದೆ. ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪುಹೊಂದುವಿ. ಮತ್ತಾಯ ೧೨:೩೬,೩೭




39

ಒಂದು ವಾರದಲ್ಲಿ ಒಬ್ಬ ವ್ಯಕ್ತಿಯು ಸರಾಸರಿ ಮಾತಾಡುವದನ್ನು ೩೨೦ ಪುಟಗಳನ್ನೊಳಗೊಂಡ ಪುಸ್ತಕವನ್ನು ತುಂಬಿಸಬಹುದೆಂದು ಒಬ್ಬರು ಅಂದಾಜು ಮಾಡಿದ್ದಾರೆ.
೬೦ ವರ್ಷಗಳಲ್ಲಿ ಅಂಥ ೩೦೦೦ ಪುಸ್ತಕಗಳನ್ನು ತುಂಬಿಸಬಹುದು.


40

ನ್ಯಾಯ ವಿಚಾರಣೆಯಲ್ಲಿ ನಿಮ್ಮ ಪುಸ್ತಕ ಬಂಡಾರವು ಏನು ಹೇಳುತ್ತದೆ? ಅದಕ್ಕಿಂತಲೂ ಹೆಚ್ಚಾಗಿ, ಆ ಮಾತುಗಳ ಹಿಂದೆ ಇದ್ದ ಉದ್ದೇಶಗಳು ಮತ್ತು ಕಾರ್ಯಗಳು ಬಟ್ಟ ಬಯಲಾಗುತ್ತವೆ.



41

(ವಚನ ೧ ಕೋರಿಂಥ ೪:೫)
ಆತನು ಕತ್ತಲೆಯಲ್ಲಿರುವ ಗುಪ್ತಕಾರ್ಯಗಳನ್ನು ಬೆಳಕಿಗೆ ತರುತ್ತಾನೆ. ಹೃದಯದ ಯೋಚನೆಗಳನ್ನು ಪ್ರತ್ಯಕ್ಷ ಪಡಿಸುವನು. ೧ ಕೊರಿಂಥ ೪:೫
೧ ಕೊರಿಂಥ ೪:೫


೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.


42

ಆ ದಿನದಲ್ಲಿ ಅಳಿಸಲಾಗದು, ಇಲ್ಲವೇ ಮುಚ್ಚಲಾಗದು. ಜನರು ಅವರ ಸ್ನೇಹಿತರಿಗೆ ಮತ್ತು ಅವರ ಕುಟುಂಬಗಳಿಗೆ ಮೋಸ ಮಾಡಬಹುದು. ಆದರೆ ಯಾರೂ ದೇವರನ್ನು ಮೋಸ ಗೊಳಿಸಲಾಗದು. ಆತನು ಹೃದಯದ ಗುಟ್ಟುಗಳನ್ನು ಓದುತ್ತಾನೆ.


43

ನ್ಯಾಯ ತೀರ್ಪಿನ ದಿನ ಬರುವಾಗ, ನಾವು ೨ ಸ್ಥಾನಗಳ ಒಂದರಲ್ಲಿ ಇರುವದನ್ನು ಕಾಣುತ್ತೇವೆ. ನಮ್ಮ ಹಿಂದಿನ ಸೋಲುವಿಕೆಗಳ ಇಡೀ ದಾಖಲುಗಳು ಯೇಸುವಿನ ರಕ್ತದಿಂದ ಮುಚ್ಚಲ್ಪಟ್ಟಿರುತ್ತವೆ. ಇಲ್ಲವೇ ನಮ್ಮ ದಾಖಲುಗಳು ನಮ್ಮನ್ನು ಖಂಡಿಸುತ್ತವೆ.
ನಾನು ಏನು ನಂಬುತ್ತೇನೆಂಬುದಲ್ಲ, ನಾವು ಏನಾಗಿದ್ದೇವೆ ಮತ್ತು ಎನು ಮಾಡುತ್ತೇವೆಂಬುದು ವ್ಯತ್ಯಾಸವನ್ನು ನೀಡುತ್ತದೆ.




44

(ವಚನ, ಮತ್ತಾಯ ೧೬:೨೭)
ಯೇಸು ಬರುವಾಗ, ಆತನು ಒಬ್ಬೊಬ್ಬನಿಗೆ ಅವನವನ ನಡತೆಗೆ ತಕ್ಕ ಫಲವನ್ನು ಕೊಡುವನು. ಮತ್ತಾಯ ೧೬:೨೭
ನಮ್ಮ ಒಳ್ಳೆಯ ಕ್ರಿಯೆಗಳು ನಮ್ಮ ರಕ್ಷಣೆಗೆ ಆಧಾರವಲ್ಲ. ದೇವರ ಕೃಪೆಯಾಗಿದೆ. ನಮ್ಮ ಕ್ರಿಯೆಗಳು ಪ್ರಕಟಿಸುತ್ತವೆ.




45

ನಾವು ಕೃಪೆಯಿಂದ ರಕ್ಷಿಸಲ್ಪಟ್ಟರೆ ನಮ್ಮ ಕ್ರಿಯಗಳ ಮೂಲಕ ಯಾಕೆ ತೀರ್ಮಾನಿಸಲ್ಪಡುತ್ತೇವೆಂದು ನೀವು ಕೇಳಬಹುದು?
ಇದು ಒಂದು ಒಳ್ಳೆಯ ಪ್ರಶ್ನೆ
ಡಾಕ್ಟರ್ ಸಹಾಯ ಕುಬೋ ಈ ರೀತಿ ಬರೆದನು.



46

ಸಭೆಯ ಸದಸ್ಯತ್ವ ಇಲ್ಲವೇ ಕ್ರಿಸ್ತನವರು ಎಂದು ಹೇಳಿಕೊಳ್ಳುವದರಿಂದಲೋ? ನಮ್ಮ ಒಳ್ಳೆಯ ಇಲ್ಲವೇ ಕೆಟ್ಟ ಕ್ರಿಯೆಗಳ ಮೂಲಕ ದೇವರು ನ್ಯಾಯ ತೀರಿಸುವನು.


47

ಯಾವುದರ ಮೇಲೆ ದೇವರು ನ್ಯಾಯ ತೀರಿಸುವನು. ನಮ್ಮ ಚರ್ಮ, ನಮ್ಮ ಜಾತಿ, ನಮ್ಮ ಸಾಮಾಜಿಕ ತರಗತಿ, ನಮ್ಮ ವಿಧ್ಯೆ, ನಮ್ಮ ನೋಟಗಳು, ನಮ್ಮ ತಲಾಂತು, ನಮ್ಮ ಬಲದ ಆಧಾರದ ಮೇಲೆ ತೀರ್ಪು ನೀಡುವನೋ?

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.


48

ಸಭೆಯ ಸದಸ್ಯತ್ವ ಇಲ್ಲವೇ ಕ್ರಿಸ್ತನವರು ಎಂದು ಹೇಳಿಕೊಳ್ಳುವದರಿಂದಲೋ? ನಮ್ಮ ಒಳ್ಳೆಯ ಇಲ್ಲವೇ ಕೆಟ್ಟ ಕ್ರಿಯೆಗಳ ಮೂಲಕ ದೇವರು ನ್ಯಾಯ ತೀರಿಸುವನು.
ನ್ಯಾಯಸಭೆಗೆ ನಿನ್ನ ಕರೆಯುವಿಕೆ. ಪುಟ ೨೦
ನಿಜವಾದವರಲ್ಲಿ ಒಳ್ಳೆಯ ಕ್ರಿಯೆಗಳು ಮಾಡಲ್ಪಟ್ಟಿಲ್ಲ.



49

(ವಿಡಿಯೋ ೮ ಸೆಕೆಂಡುಗಳು) ದೇವರಿಗೂ ಮತ್ತು ಮಾನವನಿಗೂ ಪ್ರೀತಿ ತುಂಬಿರುವ ಒಂದು ಹೃದಯದಲ್ಲಿ ಪಲಿತಾಂಶವು ಹೆಚ್ಚಿಗಿರುತ್ತದೆ. ಯೇಸುವಿನ ಜೊತೆಯ ಪ್ರೀತಿಯ ಸಂಭಂದವು ಆತನ ಹಿಂಬಾಲಕರು ಒಳ್ಳೆಯ ಕಾರ್ಯಗಳನ್ನು ಮಾಡಲು ನಡಿಸುತ್ತದೆ. ಪ್ರಸಂಗಿ ಪುಸ್ತಕದಲ್ಲಿ ಎಲ್ಲವನ್ನು ಒಟ್ಟಿಗೆ ಸೇರಿಸಿ ಸೋಲೋವೋನನು ಹೀಗಂದನು



50

(ವಚನ, ಪ್ರಸಂಗಿ ೧೨:೧೩,೧೪)
ಇಡೀ ಕಾರ್ಯದ ಅಂತ್ಯವನ್ನು ಕೇಳೋಣ



51

ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಕೊಳ್ಳು, ಮನುಷ್ಯರೆಲ್ಲರ ಕರ್ತವ್ಯವು ಇದೇ.



52

ನ್ಯಾಯ ವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನು ಗುರಿಮಾಡುವನು. ಪ್ರಸಂಗಿ ೧೨:೧೩,೧೪
ಕ್ರಿಸ್ತನಿಗೆ ಮಾನವನ ಸಂಭಂಧವು ಆತನ ನಡತೆಯಿಂದ ನ್ಯಾಯ ತೀರ್ಪು ನೀಡುವದರಿಂದ, ಈ ನಡತೆಯನ್ನು ಅಳತೆ ಮಾಡಲು ಒಂದು ಮಟ್ಟಗೋಲು ಇರಬೇಕು.


53

ನೀವು ಬಿಡುಗಡೆಯನ್ನುಂಟು ಮಾಡುವ ಧರ್ಮ ಪ್ರಮಾಣದ ಪ್ರಕಾರ ತೀರ್ಮಾನವನ್ನು ಹೊಂದತಕ್ಕವರೆಂದು ಮಾತಾಡಿರಿ, ನಡೆಯಿರಿ. ಯಾಕೋಬ ೨:೧೨


54


ನೀವು ಬಿಡುಗಡೆಯನ್ನುಂಟು ಮಾಡುವ ಧರ್ಮ ಪ್ರಮಾಣದ ಪ್ರಕಾರ ತೀರ್ಮಾನವನ್ನು ಹೊಂದತಕ್ಕವರೆಂದು ಮಾತಾಡಿರಿ, ನಡೆಯಿರಿ. ಯಾಕೋಬ ೨:೧೨

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.



55

(ವಚನ. ಯೊಕೋಬ ೨:೧೨)
ನೀವು ಬಿಡುಗಡೆಯನ್ನುಂಟು ಮಾಡುವ ಧರ್ಮ ಪ್ರಮಾಣದ ಪ್ರಕಾರ ತೀರ್ಮಾನವನ್ನು ಹೊಂದತಕ್ಕವರೆಂದು ಮಾತಾಡಿರಿ, ನಡೆಯಿರಿ. ಯಾಕೋಬ ೨:೧೨
ಯಾಕೋಬ ೨:೧೨



56

(ವಚನ. ಯೊಕೋಬ ೨:೧೧)
ಹಿಂದಿನ ವಚನದಲ್ಲಿ ಯಾಕೋಬನು ೨ಆಜ್ಞೆಗಳನ್ನು ತಿಳಿಸುತ್ತಾನೆ, ವ್ಯಭಿಚಾರಮಾಡಬಾರದು, ನರಹತ್ಯ ಮಾಡಬಾರದು.
ದೇವರ ೧೦ ಕಟ್ಟಳೆಗಳು ಬಿಡುಗಡೆಯನ್ನುಂಟು ಮಾಡುವ ಧರ್ಮ ಪ್ರಮಾಣವೆಂದು ಕರೆದಿವೆ. ಮಾನವರ ಜೀವಿತಗಳು ಇವುಗಳ ಆಧಾರದ ಮೇಲೆ ತೀರ್ಪು ಹೊಂದುತ್ತವೆ.



57

(ವಿಡಿಯೋ, ೪ಸೆಕೆಂಡುಗಳು)
ಕ್ರಿಸ್ತನಿಗೂ ಮತ್ತು ಸೈತಾನನಿಗೆ ಮಧ್ಯೆ ನಡೆಯುತ್ತಿರುವ ಹೋರಾಟದಲ್ಲಿ ಯಾವ ಕಡೆ ನಿಲ್ಲುತ್ತೇವೆಂದು ತೀರ್ಮಾನಿಸಲು ನ್ಯಾಯ ತೀರ್ಪು ಇದೆ.
ನಮ್ಮಲ್ಲಿ ಕ್ರಿಸ್ತನು ಆತನ ಜೀವಿತವನ್ನು ಜೀವಿಸಲು ಅನುಮತಿ ನೀಡಿದ್ದೇವೋ?


58

ಆತನಿಗಾಗಿ ಹೆಚ್ಚಿನ ಪ್ರೀತಿಯನ್ನು ೧೦ ಕಟ್ಟಳೆಗಳಲ್ಲಿ ತಿಳಿಸಿರುವ ಆತನ ಚಿತ್ತವನ್ನು ಪಡೆದಿದ್ದೇವೋ?
ಆತನ ಬಲದಿಂದ ಆತನ ಚಿತ್ತವನ್ನು ಹಿಂಬಾಲಿಸಲು ನಮ್ಮ ಕಾಂಕ್ಷೆಯಾಗಿದೆಯೋ?
ನಮ್ಮ ಹೃದಯಗಳಲ್ಲಿ ಆತನ ಆಜ್ಞೆಗಳನ್ನು ಬರೆದಿದ್ದಾನೋ?



59

ಬೇರೆ ದೇಶದಿಂದ ಹೋಗಿ ಅಲ್ಲಿರುವ ಆಶೆಯುಳ್ಳವರು ಆ ದೇಶದಲ್ಲಿ ಪ್ರಜೆಗಳಾಗುವಾಗ ಆ ದೇಶಕ್ಕೆ ಒತ್ತಾಸೆ ನೀಡುತ್ತೇವೆಂದು ಪ್ರಮಾಣ ಮಾಡಬೇಕು. ಮತ್ತು ದೇಶದ ಆಜ್ಞೆಗಳನ್ನು ಎತ್ತಿ ಹಿಡಿಯುತ್ತೇವೆಂದು ವಾಗ್ದಾನ ಮಾಡಬೇಕು



60

ವಿಡಿಯೋ ೧೦ ಸೆಕೆಂಡುಗಳು) ಅದೇ ವಿಧವಾಗಿ ಕ್ರೈಸ್ತರಿಗಿದೆ. ಅವರು ಕ್ರಿಸ್ತನನ್ನು ಅಂಗೀಕರಿಸಿ ಆತನ ರಾಜ್ಯದ ಪ್ರಜೆಗಳಾದಾಗ, ಅವರ ಪ್ರೀತಿ ಮತ್ತು ಗೌರವವನ್ನು ತೋರಿಸುತ್ತೇವೆಂದು, ಸರ್ಕಾರದ ಆಜ್ಞೆಗಳಿಗೆ ಬದ್ಧರಾಗುತ್ತೇವೆಂದು ಮಾತೂಡಬೇಕು.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.



61

ಅಲ್ಲಿ ಹೋದವರೆಲ್ಲರೂ ಅವರ ಪ್ರತಿಜ್ಞೆಗೆ ತಕ್ಕಂತೆ ಪ್ರಮಾಣಿಕರಾಗಿರುವದಿಲ್ಲ.
ಹೊರಗಿನ ತೋರಿಕೆಯಲ್ಲಿ ಪ್ರಮಾಣಿಕರಾದ ಪ್ರಜೆಗಳಾಗಿದ್ದಾರೆಂದು ತೋರುತ್ತಾರೆ, ಆದರೆ ನಂತರ ಅದಕ್ಕೆ ವಿರುದ್ಧವಾಗಿ ಹೋಗುವರು.
ಇದು ಸಿದ್ದಾಂತವಾದಾಗ, ಆವ್ಯಕ್ತಿಯು ಹಕ್ಕು ಅಳಿಸಲ್ಪಡುವದು, ಮತ್ತು ಹಿಂದಕ್ಕೆ ಅವರ ದೇಶಕ್ಕೆ ಕಳುಹಿಸುತ್ತಾರೆ.




62

ಅದೇ ವಿಧವಾಗಿ ಎಲ್ಲಾ ಕ್ರೈಸ್ತರು ಪ್ರತಿಜ್ಞೆಗೆ ತಕ್ಕ ಹಾಗೆ ಪ್ರಮಾಣಿಕರಾಗಿಲ್ಲ.
ನೀತಿವಂತರೆಂದು ಹೇಳಿದರೆ ಮಾತ್ರ ಸಾಲದು ಆತನು ಬರುವವರೆಗೆ ಪ್ರಮಾಣಿಕರಾಗಿರಬೇಕಾಗಿದೆ.
ನಾವು ಕ್ರಿಸ್ತನ ಹಿಂಬಾಲಕರೆಂದು ಹೇಳಿಕೊಂಡರೆ ಸಾಲದು. ಯೇಸುವಿನ ವಿಧೇಯತೆಯ ಪರಿಪೂರ್ಣ ಜೀವಿತವನ್ನು ಮತ್ತು ಪ್ರಮಾಣಿಕತೆಯನ್ನು ಜೀವಿಸಬೇಕಾಗಿದೆ.



63

(ವಚನ. ಮತ್ತಾಯ ೭:೨೧)
ಯೇಸು ಹೇಳಿದನು, ನನ್ನನ್ನು ಸ್ವಾಮಿ ಸ್ವಾಮಿ ಅನ್ನುವವರೆಲ್ಲರೂ ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸ ಬೇಡಿರಿ.



64

ಆದರೆ ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ.
ಮತ್ತಾಯ ೭:೨೧
ಒಳ್ಳೇದಕ್ಕೂ ಮತ್ತು ಕೆಟ್ಟದ್ದಕ್ಕೂ ಮದ್ಯೆ ಕ್ರಿಸ್ತನಿಗೂ ಮತ್ತು ಸೈತನನಿಗೂ ಇರುವ ಮಹಾ ಹೋರಾಟವು ದೇವರ ಪ್ರೀತಿಯ ಸ್ವಭಾವದ ಮೇಲೆ ಆಗಿದೆ.


65

ಆ ಸ್ವಭಾವದ ಒಂದು ಬರೆದ ಮಟ್ಟಗೋಲು ನ್ಯಾಯ ಪ್ರಮಾಣವಾಗಿರುತ್ತದೆ.
ಸಣ್ಣ ಆಶ್ಚರ್ಯ. ನ್ಯಾಯತೀರ್ಪಿನಲ್ಲಿ ಬಹು ವಿಶೇಷವಾಗಿ ಲೆಕ್ಕ ಹಾಕುತ್ತದೆ.


66


ಪರಲೋಕದಲ್ಲಿ ನ್ಯಾಯ ಸಭೆಯು ಈಗ ನಡೆಯುತ್ತದೆ ಎಂಬುದು ಕ್ರೈಸರಿಗೆ ಆಶ್ಚರ್ಯವಾದ ಅಂಶವಾಗಿ ಸ್ವಲ್ಪ ಮಾತ್ರ ತಿಳಿದಿದೆ.
ಸತ್ಯವೇದದ ಕೊನೆಯ ಪುಸ್ತಕವಾದ ಪ್ರಕಟನೆಯು, ದೇವರ ನ್ಯಾಯ ವಿಚಾರಣೆ ಈಗ ನಡೆಯುತ್ತದೆಂದು ಪ್ರಕಟಿಸುತ್ತದೆ.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.




67

ಅದಕ್ಕಾಗಿ, ಪ್ರಕಟನೆ ಪುಸ್ತಕದ ಕೊನೆಯ ಅಧ್ಯಾಯಗಳಲ್ಲಿ ಯೋಹಾನನು ಲೋಕದ ಕೊನೆಯ ಎಚ್ಚರಿಕೆಯನ್ನು ಆಹ್ವಾನವನ್ನು ಈ ಮಾತುಗಳಲ್ಲಿ ತಿಳಿಸುತ್ತಾನೆ.




68

(ವಚನ ಪ್ರಕಟನೆ ೧೪:೬,೭)
ಮತ್ತೊಬ್ಬ ದೇವದೂತನು ಆಕಾಶದ ಮಧ್ಯದಲ್ಲಿ ಹಾರಿ ಹೋಗುವದನ್ನು ಕಂಡೆನು.




69

ಲೋಕದವರಿಗೆ ಸಾರಿಹೇಳುವದಕ್ಕೆ ನಿತ್ಯವಾದ ಶುಭ ವರ್ತಮಾನವು ಅವನಲ್ಲಿತ್ತು.




70

ಸಕಲ ಜನಾಂಗ, ಕುಲ, ಪ್ರಜೆಗಳವರಿಗೂ, ಸಕಲ ಭಾಷೆಗಳನ್ನಾಡುವವರಿಗೂ.



71

ಅವನು ಗಟ್ಟಿಯಾದ ಧ್ವನಿಯಿಂದ ನೀವೆಲ್ಲರು ದೇವರಿಗೆ ಭಯಪಟ್ಟು ಆತನನ್ನು ಘನಪಡಿಸಿರಿ. ಆತನು ನ್ಯಾಯ ತೀರ್ಪು ಮಾಡುವ ಗಳಿಗೆ ಬಂದದೆ ಅಂದನು.



72

ಭೂಲೋಕ ಪರಲೋಕಗಳನ್ನೂ, ಸಮುದ್ರವನ್ನೂ, ನೀರಿನ ಬುಗ್ಗೆಗಳನ್ನು ಉಂಟುಮಾಡಿದಾತನಿಗೆ ನಮಸ್ಕಾರ ಮಾಡಿರಿ ಅಂದನು. ಪ್ರಕಟನೆ ೧೪:೬, ೭



73


ಈ ಸಂದೇಶವು ನ್ಯಾಯ ತೀರ್ಪು ಬರುತ್ತದೆಂದು ಹೇಳಿಲ್ಲ, ನ್ಯಾಯ ತೀರ್ಪಿನ ಗಳಿಗೆ ಬಂದಿದೆ ಎಂದು ಹೇಳುತ್ತದೆ.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.



74

ಮೂರು ದೂತರ ಸಂದೇಶದ ಎರಡನೆಯ ಭಾಗವು ಕೊನೆಯ ದಿನಗಳಲ್ಲಿ ಇರುವ ಸುಳ್ಳು ದಾರ್ಮಿಕ ಪದ್ದತಿಗಳಿಂದ ಹೊರಗೆ ಬನ್ನಿರೆಂದು ದೇವ ಜನರನ್ನು ಕರೆಯುತ್ತದೆ.
ಕೊನೆಯ ಸಂದೇಶದ ಕೊನೆಯ ಭಾಗವು ದೇವಜನರಿಗೆ ಪ್ರಕಟನೆಯಲ್ಲಿರುವ ಮೃಗದ ಅಧಿಕಾರವನ್ನು ಆರಾಧಿಸದೆ ಎಚ್ಚರಿಕೆಯಿಂದ ಇರಬೇಕೆಂದು ತಿಳಿಸುತ್ತದೆ.




75

(ವಚನ, ಪ್ರಕಟನೆ ೧೪:೯, ೧೦)
ಯಾವನಾದರೂ ಮೊದಲನೆಯ ಮೃಗಕ್ಕೂ, ಅದರ ವಿಗ್ರಹಕ್ಕೂ ನಮಸ್ಕಾರ ಮಾಡಿ ತನ್ನ ಹಣೆಯ ಮೇಲಾಗಲಿ, ಕೈಯ ಮೇಲಾಗಲಿ ಗುರುತು ಹಾಕಿಸಿಕೊಂಡರೆ.



76

ಅವನು ಸಹ ದೇವರ ರೌದ್ರವೆಂಬ ದ್ರಾಕ್ಷಾರಸವನ್ನು ಕುಡಿಯುವನು.
ಪ್ರಕಟನೆ ೧೪:೯, ೧೦
ಈಗ ೧೪ ಮತ್ತು ೧೫ನೇ ವಚನವನ್ನು ಗಮನಿಸಿರಿ, ೩ ದೂತರ ಸಂದೇಶಗಳಾದ ನಂತರ ಬರುತ್ತದೆ.




77

(ವಚನ, ಪ್ರಕಟನೆ ೧೪:೧೪, ೧೫)
ನಾನು ನೋಡಲಾಗಿ, ಇಗೋ, ಪ್ರಕಾಶಮಾನವಾದ ಒಂದು ಮೇಘವು ನನಗೆ ಕಾಣಿಸಿತು. ಆ ಮೇಘದ ಮೇಲೆ ಮನುಷ್ಯ ಕುಮಾರನಂತಿದ್ದವನೊಬ್ಬನು ಕೂತಿರುವುದನ್ನು ಕಂಡೆನು.




78

ಆತನ ತಲೆಯ ಮೇಲೆ ಬಂಗಾರದ ಕಿರೀಟವೂ, ಆತನ ಕೈಯಲ್ಲಿ ಹದವಾದ ಕುಡುಗೋಲು ಇತ್ತು.



79

ಆಗ ದೂತನಾದ ಮತ್ತೊಬ್ಬನು ದೇವಾಲಯದೊಳಗಿಂದ ಬಂದು, ಮೇಘದ ಮೇಲೆ ಕೂತ್ತಿದ್ದವನಿಗೆ ಗಟ್ಟಿಯಾಗಿ ಕೂಗಿದನು.



80

ಪೈರು ಮಾಗಿ ಒಣಗಿದೆ, ಕೊಯ್ಯುವ ಕಾಲ ಬಂತು, ನಿನ್ನ ಕುಡುಗೋಲನ್ನು ಹಾಕಿ ಕೊಯ್ಯಿ.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.




81

ಭೂಮಿಯ ಪೈರು ಮಾಗಿಯದೆ. ಪ್ರಕಟನೆ ೧೪:೧೪, ೧೫



82

ಲೋಕದ ಕೊಯ್ಲು ಅಂದರೆ ಏನು? ಇದು ಲೋಕದ ಅಂತ್ಯ. ಕೊಯ್ಲು, ಕ್ರಿಸ್ತನ ಎರಡನೆಯ ಬರೋಣವವನ್ನು ಸೂಚಿಸುತ್ತದೆ. ಯೇಸು ಎರಡನೆ ಸಾರಿ ಬರಲು ಮೊದಲೇ ಏನಾಗುತ್ತದೆ. ನ್ಯಾಯ ವಿಚಾರಣೆಯಾಗುತ್ತದೆ. ಆತನ ಬರೋಣಕ್ಕೆ ಯಾರು ಸಿದ್ದರಾಗಿದ್ದಾರೆಂದು ಆತನ ನ್ಯಾಯ ವಿಚಾರಣೆ ತಿಳಿಸುತ್ತದೆ. ಇನ್ನೂ ಈ ವಿಷಯವನ್ನು ನಾವು ನಿಧಾನಿಸಿ ಅರ್ಥಮಾಡಿಕೊಳ್ಳಬೇಕು. ನ್ಯಾಯ ವಿಚಾರಣೆ ಯಾವಾಗ ಪ್ರಾರಂಭವಾಗುತ್ತದೆಂದು ನೀವು ಯೋಚಿಸಬಹುದು.




83

ದಾನಿಯೇಲನ ಪುಸ್ತಕದಲ್ಲಿ ಆಶ್ಚರ್ಯಕರವಾದ ಬೀಗದ ಕೈಯಿದೆ.



84

(ವಚನ, ದಾನಿಯೇಲ ೮:೧೪)
ಉದಯಾಸ್ತಮಾನಗಳ ೨೩೦೦ ರವರೆಗೆ ನಡೆಯುವವು. ಅನಂತರ ಪವಿತ್ರಾಲಯಕ್ಕೆ ಪುನಃ ನ್ಯಾಯ ಸ್ಥಾಪನೆಯಾಗುವದು. ದಾನಿಯೇಲ ೮:೧೪. ಇದು ಸತ್ಯವೇದದಲ್ಲಿ ಬಹು ಕಾಲದ ಪ್ರವಾದನೆಯಾಗಿದೆ.



85

(ವಚನ, ಯೆಹೆಜ್ಕೇಲ ೪:೬)
ಪ್ರವಾದನೆಯಲ್ಲಿ ಒಂದು ದಿನವು ಒಂದು ವರ್ಷವನ್ನು ಸೂಚಿಸುತ್ತದೆ. ನಾನು ನಿನಗೆ ಒಂದು ದಿನವನ್ನು ಒಂದು ವರ್ಷಕ್ಕೆ ನೇಮಿಸಿದ್ದೇನೆ. ಯೆಹೆಜ್ಕೇಲ ೪:೬ ಆದಕಾರಣ ೨೩೦೦ ದಿನಗಳು ೨೩೦೦ ವರ್ಷಗಳನ್ನು ಸೂಚಿಸುತ್ತವೆ.



86

೨೩೦೦ ವರ್ಷಗಳು ದಾನಿಯೇಲ ೭ ಮತ್ತು ೮, ೯ ಅಧ್ಯಾಯಗಳಲ್ಲಿ ಕಾಣುವ ಪ್ರವಾದನೆಯ ಒಂದು ಗ್ರಹಿಕೆಯ ಒಂದು ಭಾಗವಾಗಿದೆ.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.




87

ಈ ಪ್ರವಾದನೆಯು ನಮ್ಮ ಕರ್ತನ ದೀಕ್ಷಾಸ್ನಾನ ಮತ್ತು ಕ್ರೂಜೆಯ ಮರಣದ ಸರಿಯಾದ ತಾರೀಖನ್ನು ತಿಳಿಸುತ್ತದೆ. ನ್ಯಾಯ ವಿಚಾರಣೆ ಯಾವಾಗ ಪ್ರಾರಂಭವಾಗುವದೆಂದು ತಿಳಿಸುತ್ತದೆ.



88

ಈ ೨೩೦೦ ಪ್ರವಾದನೆ ದಿನಗಳು ಇಲ್ಲವೇ ೨೩೦೦ ವರ್ಷಗಳು, ಅರ್ತಶಸ್ತ ರಾಜನ ಅಪ್ಪಣೆಯಿಂದ ಪ್ರಾರಂಭವಾಯಿತು. ಆತನು ಯೆರೂಸಲೇಮನ್ನು ಪುನಃ ಕಟ್ಟಲು ಬರವಣಿಗೆಯ ಮೂಲಕ ಅಪ್ಪಣೆ ನೀಡಿದನು.


89

ಕೊನೆಯಲ್ಲಿ ಕ್ರಿ. ಪೂ ೪೫೭ ರಲ್ಲಿ ರಾಜನು ಅಪ್ಪಣೆ ನೀಡಿದನು. ಆ ತಾರೀಖಿನಿಂದ ೨೩೦೦ ವರ್ಷಗಳು
ಕ್ರಿ. ಶ೧೮೪೪ ಕ್ಕೆ ಮುಗಿಯುತ್ತದೆ.
ನಾವು ಹಿಂದಕ್ಕೆ ನಮ್ಮ ವಚನಕ್ಕೆ ಹೋಗೋಣ. ಉದಯಾಸ್ತಮಾನಗಳ ೨೩೦೦ ದಿನಗಳವರೆಗೆ ಇರುತ್ತದೆ. ನಂತರ ಗುಡಾರವು ಶುದ್ದೀಕರಿಸಲ್ಪಡುವದು, ಈ ಪ್ರವಾದನೆ ೧೮೪೪ರಲ್ಲಿ ಮುಗಿಯುತ್ತದೆ. ಗುಡಾರವು ಶುದ್ದೀಕರಿಸಲ್ಪಡುವದು ಅಂದರೇನು?



90

೧೮೪೪ ರಲ್ಲಿ ದೇವರ ನ್ಯಾಯವಿಚಾರಣೆಯು ಪ್ರಾರಂಭವಾದದ್ದನ್ನು ಸತ್ಯವೇದವು ವಿವರಿಸುತ್ತದೆ. ೨೩೦೦ ದಿನಗಳ ಅಂತ್ಯದಲ್ಲಿ ದಾನಿಯೇಲನು ಮುಂತಿಳಿಸಿದ ಹಾಗೆ ಗುಡಾರದ ಶುದ್ದೀಕರಣೆಗೂ ಮತ್ತು ನ್ಯಾಯವಿಚಾರಣೆಗೂ ಯಾವ ಸಂಭಂದವಿದೆ?


91

ಗುಡಾರದ ಶುದ್ದೀಕರಣೆ ಅಂದರೇನು?
ಇದಕ್ಕೂ ನ್ಯಾಯ ವಿಚಾರಣೆಗೂ ಯಾವ ಸಂಭಂದವಿದೆ?
ಸತ್ಯವೇದವು ೨ ಗುಡಾರಗಳನ್ನು ವಿವರಿಸುತ್ತದೆ. ಒಂದು ಭೂಲೋಕದ್ದು, ಇನ್ನೊಂದು ಪರಲೋಕದ್ದು.


92

ಹಳೇ ಕಾಲದ ಇಸ್ರಾಯೇಲ್ಯರು ಗುಡಾರಕ್ಕೆ ಪ್ರತಿದಿನ ಬಲಿಗಳನ್ನು ತಂದರು.


93

ಅಲ್ಲಿ ಅವರು ತಮ್ಮ ಪಾಪಗಳನ್ನು ಅರಿಕೆ ಮಾಡಿ, ಮತ್ತು ಒಂದು ಕುರಿಮರಿಯ ಜೀವವನ್ನು ತೆಗೆದು ದೇವ ಕುಮಾರನಾದ ಯೇಸು ಮುಂದೆ ಸಾಯುತ್ತಾನೆಂಬುದರಲ್ಲಿ ಅವರ ನಂಬಿಕೆಯನ್ನು ತೋರಿಸಬೇಕಿತ್ತು.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.


94

ಇಂದು ನಾವು ಪಾಪಮಾಡಿದರೆ, ನಮ್ಮ ಪಾಪಗಳನ್ನು ಕ್ಷಮಿಸಲು ಕೇಳುತ್ತೇವೆ; ಯಾಕೆಂದರೆ ಯೇಸು ನಮ್ಮ ಪಾಪಗಳಿಗೆ ಬೆಲೆಕೊಟ್ಟು ನಮಗೆ ಬದಲಾಗಿ ಸತ್ತನು.


95

ಹೇಗಿದ್ದರೂ, ಕಲ್ವೇರಿಗೆ ಮೊದಲು, ಜನರು ಬಲಿಗಾಗಿ ಹಿಂದಕ್ಕೆ ನೋಡ ಬೇಕಾಗಿರಲಿಲ್ಲ. ಅವರು ನಂಬಿಕೆಯಿಂದ, ದೇವರ ಕುರಿಮರಿಯು ಸಾಯುವ ಕಾಲಕ್ಕಾಗಿ ಮುಂದಕ್ಕೆ ನೋಡಿದರು. ಒಂದು ನಿಷ್ಕಳಂಕ ಕುರಿಮರಿಯನ್ನು ಬ ಲಿ ಅರ್ಪಿಸುವ ಕಾರ್ಯದಲ್ಲಿ ಒಬ್ಬ ರಕ್ಷಕನು ಬಂದು ಸತ್ತು ಕ್ಷಮೆಯನ್ನು ಪಡೆಯುವ ಹಾಗೆ ಸಾದ್ಯವಾಗಿ ಮಾಡುವನೆಂಬ ನಂಬಿಕೆಯನ್ನು ಅವರು ದೃಡ ಪಡಿಸಬೇಕಾಗಿತ್ತು.


96

ಯಾಜಕನು ಪ್ರಾಣಿಯ ರಕ್ತವನ್ನು ಗುಡಾರದ ಮಹಾ ಪರಿಶುದ್ದ ಸ್ಥಳದ ಪರದೆಯ ಮೇಲೆ ಚಿಮುಕಿಸುವುದರಿಂದ ಅವರ ಪಾಪಗಳು ಸಂಕೇತವಾಗಿ ಗುಡಾರಕ್ಕೆ ವರ್ಗಾಯಿಸಲ್ಪಟ್ಟವು.




97

ನಂತರ ವರ್ಷಕ್ಕೆ ಒಂದು ದಿನ, ಇಸ್ರಾಯೇಲ್ಯರು ಒಂದು ಗಂಭೀರವಾದ ಮತ್ತು ಪವಿತ್ರವಾದ ಆರಾಧನೆಯನ್ನು ನಡೆಸಿದರು, ಇದು ದೋಷ ಪರಿಹಾರಕ ಮಹಾದಿನ, ಇಲ್ಲವೇ ಗುಡಾರದ ಶುದ್ದೀಕರಣೆಯ ದಿನವೆಂದು ಕರೆಯಲ್ಪಟ್ಟಿತು. ಇಸ್ರಾಯೇಲ್ಯರಿಗೆ ಇದು ನ್ಯಾಯ ತೀರ್ಪಿನ ಒಂದು ದಿನ.



98

ದೋಷ ಪರಿಹಾರಕ ದಿನಕ್ಕೆ ೧೦ ದಿನಗಳಿಗೆ ಮುಂಚೆ, ತುತೂರಿಗಳು ಊದಲ್ಪಟ್ಟವು. ಇಸ್ರಾಯೇಲ್ಯರು ಅವರ ಜೀವಿತಗಳನ್ನು ಸರಿಪಡಿಸಿಕೊಳ್ಳಲು, ಅವರ ಪಾಪಗಳಿಗೆ ಪಶ್ಚಾತ್ತಾಪ ಪಡಬೇಕೆಂದು ಜ್ಞಾಪಿಸಿಕೊಳ್ಳಬೇಕಿತ್ತು. ಈ ರೀತಿ ಮಾಡಲು ನಿರಾಕಿಸಿದವರು ಪಾಳೆಯದಿಂದ ಹೊರಗೆ ಕಳುಹಿಸಲ್ಪಟ್ಟರು.



99

ಆ ದಿನದಲ್ಲಿ ಯಾಜಕನು ದೋಷ ಪರಿಹಾರ ಮಾಡಿ ನಿಮ್ಮನ್ನು ಶುದ್ದಮಾಡಿದನು.




100

ಯೆಹೋವನ ದೃಷ್ಟಿಯಲ್ಲಿ ನಿಮ್ಮ ಎಲ್ಲಾ ದೋಷಗಳು ನಿವಾರಣೆಯಾಗುವವು. ಯಾಜಕಕಾಂಡ ೧೬:೩೦

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.



101

ಈಗ ಭೂಲೋಕದ ಗುಡಾರವು ಮತ್ತು ಆರಾಧನೆಯು, ನಮ್ಮ ಮಹಾಯಾಜಕನು ನಮ್ಮ ಪಾಪಗಳನ್ನು ಕ್ಷಮಿಸಲು ಪರಲೋಕ ಗುಡಾರವು ಒಂದು ಉದಾರಣೆಯಾಗಿತ್ತು.



102

(ವಚನ – ಇಬ್ರಿಯ ೮:೧, ೨)
ಪೌಲನು ಹೀಗೆ ಹೇಳುತ್ತಾನೆ, ಪರಲೋಕದಲ್ಲಿ ಮಹತ್ವವುಳ್ಳ ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾದಂತ ಮಹಾಯಾಜಕನು ನಮಗಿದ್ದಾನೆ. ಇಬ್ರಿಯ ೮:೧



103

ಆತನು ಪವಿತ್ರ ಸ್ಥಾನದಲ್ಲಿ ಅಂದರೆ ಮನುಷ್ಯನು ಹಾಕದೆ ಕರ್ತನೇ ಹಾಕಿದ ನಿಜವಾದ ದೇವ ದರ್ಶನ ಗುಡಾರದಲ್ಲಿ ಯಾಜಕೋದ್ಯೋಗ ನಡಿಸುತ್ತಾನೆ. ಇಬ್ರಿಯ ೮:೧, ೨



104

(ವಚನ, ಇಬ್ರಿಯ ೯:೧೧, ೧೨, ೨೪)
ಆದರೆ ಕ್ರಿಸ್ತನು ಮಹಾ ಯಾಜಕನಾಗಿ ಬಂದನು.



105

ಆತನ ಸ್ವಂತ ರಕ್ತವನ್ನೇ ತೆಗೆದುಕೊಂಡು ದೇವರ ಸನ್ನಿದಾನಕ್ಕೆ ಪ್ರವೇಶಿಸಿದನು.



106

ನಮಗೋಸ್ಕರ ನಿತ್ಯ ವಿಮೋಚನೆಯನ್ನು ಸಂಪಾದಿಸಿಕೊಂಡನು.



107

ಕ್ರಿಸ್ತನು ಕೈಯಿಂದ ಕಟ್ಟಲ್ಪಟ್ಟ ಪವಿತ್ರ ಸ್ಥಳಗಳಿಗೆ ಪ್ರವೇಶಿಸಲಿಲ್ಲ.



108


ನಿಜವಾದದ್ದಕ್ಕೆ ಸಂಕೇತಗಳಾಗಿದ್ದವು, ಆದರೆ ಪರಲೋಕಕ್ಕೆ ಪ್ರವೇಶಿಸಿದನು.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.




109

ನಮಗಾಗಿ ದೇವರ ಸನ್ನಿದಿಯಲ್ಲಿ ಈಗ ಕಾಣಿಸಿಕೊಳ್ಳುತ್ತಾನೆ. ಇಬ್ರಿಯ ೯:೧೧, ೧೨, ೨೪




110

(ವಚನ. ಇಬ್ರಿಯ ೭:೨೫)
ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ.



111

ಅವರಿಗಾಗಿ ವಿಜ್ಞಾಪನೆ ಮಾಡಲು ಸದಾ ಜೀವಿಸುವದರಿಂದ. ಇಬ್ರಿಯ ೭:೨೫
ನಿಜವಾದ ಗುಡಾರವು ಪರಲೋಕದಲ್ಲಿದೆ, ಈ ಲೋಕದಲ್ಲಿ ನಡೆಯುವ ಎಲ್ಲಾ ಕಾರ್ಯಗಳು, ರಕ್ಷಣೆ ಯೋಜನೆಯಲ್ಲಿ ಆಗುವ ಕಾರ್ಯಗಳಿಗೆ ಒಂದು ಮಾದರಿ.
ಸಾಯುವ ಕುರಿಮರಿ ಯೇಸು, ಯೇಸು ಜೀವಿಸುವ ಯಾಜಕನು. ಯೇಸು ನಮ್ಮ ಮಹಾ ಯಾಜಕನು.
ಇಸ್ರಾಯೇಲ್ಯರ ಮಹಾಯಾಜಕನು ಮಹಾ ಪವಿತ್ರಸ್ಥಳವನ್ನು ವರ್ಷಕ್ಕೆ ಒಂದು ಸಾರಿ ಪ್ರವೇಶಿಸಿದನು. ಅದೇ ರೀತಿ ಯೇಸು ಸಮಯದ ಅಂತ್ಯದಲ್ಲಿ, ನ್ಯಾಯ ವಿಚಾರಣೆಯ ಕಾರ್ಯವನ್ನು ಮಾಡಲು ಮಹಾ ಪರಿಶುದ್ಧ ಸ್ಥಳಕ್ಕೆ ಪ್ರವೇಶಿಸಿದನು.



112


(ವಚನ. ಮತ್ತಾಯ ೧೦:೩೨, ೩೩)
ನ್ಯಾಯ ವಿಚಾರಣೆಯಲ್ಲಿ, ಕ್ರಿಸ್ತನ ಕಡೆಗೆ ನಮ್ಮ ಸಂಭಂದ ಮತ್ತು ವರ್ತನೆಯು ನಮ್ಮ ನಿತ್ಯ ವಿಧಿಯನ್ನು ತೀರ್ಮಾನಿಸುವುದು.
ಕ್ರಿಸ್ತನು ನಮ್ಮನ್ನು ರಕ್ಷಿಸಲು ಹಾತೊರೆಯುತ್ತಾನೆ. ನಿಮ್ಮನ್ನು ರಕ್ಷಿಸಲು ಎಲ್ಲವನ್ನು ಮಾಡುತ್ತಿದ್ದಾನೆ. ಆದ ಕಾರಣ ಮನುಷ್ಯರ ಮುಂದೆ ನನ್ನನ್ನು ಒಪ್ಪಿಕೊಳ್ಳಬೇಕೆಂದು ಆತನು ಹೇಳುತ್ತಾನೆ.



113

ನಾನು ಸಹ ಅವನನ್ನು ನನ್ನವನೆಂದು ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.



114

ಯಾವನು ಮನುಷ್ಯರ ಮುಂದೆ ನಾನು ಯೇಸುವಿನವನಲ್ಲವೆಂದು ಹೇಳುವನೋ ನಾನು ಸಹ ತಂದೆಯ ಮುಂದೆ ನನ್ನವನ್ನಲ್ಲವೆಂದು ಹೇಳುವೆನು. ಮತ್ತಾಯ ೧೦:೩೨, ೩೩


115

ನೀವು ಒಬ್ಬರೇ ನ್ಯಾಯ ವಿಚಾರಣೆಯಲ್ಲಿ ನಿಲ್ಲಬೇಕಿಲ್ಲ ನಾವು ಕ್ರಿಸ್ತನನ್ನು ಅರಿಕೆ ಮಾಡಿದರೆ ಆತನು ನಮ್ಮನ್ನು ತಂದೆಯ ಮುಂದೆ ಅರಿಕೆ ಮಾಡುವನು.

ನಾವು ಕ್ರಿಸ್ತವನಾಗಿದ್ದರೆ, ಆತನು ನಮ್ಮ ವಕೀಲನು. ಯೇಸುವಿನ ಮೂಲಕ ನಾವು ತಂದೆಯ ಮುಂದೆ ಪಾಪ ಮಾಡದವರ ಹಾಗೆ ನಿಲ್ಲುತ್ತೇವೆ.


116

ನಮ್ಮ ದಾಖಲೆಗಳು ನಮ್ಮ ರಕ್ಷಕನ ಪ್ರೀತಿಯ ಜೀವಿತವನ್ನು ಮಾತ್ರ ತೋರಿಸುತ್ತವೆ. ಆತನ ಪರಿಪೂರ್ಣ ಜೀವಿತಕ್ಕೆ ನಾವು ವಿಶ್ವಾಸವನ್ನು ಪಡೆಯುತ್ತೇವೆ.

ಯೇಸುವನ್ನು ಅವರ ಪೂರ್ಣ ಪ್ರಾಣದಿಂದಲೂ ಬುದ್ಧಿಯಿಂದಲೂ, ಆತನನ್ನು ಹಿಂಬಾಲಿಸಿ ಆತನನ್ನು ಪ್ರೀತಿಸುವ ಸ್ನೇಹಿತನೇ ನ್ಯಾಯ ವಿಚಾರಣೆಯ ದಿನದ ವಿಚಾರ ಭಯಪಡಿಸಬೇಕಿಲ್ಲ.

ಯೇಸು ಆತನ ಸ್ವಂತ ರಕ್ತವನ್ನು ಚೆಲ್ಲಿದ ಅರ್ಹತೆಯನ್ನು ತೋರಿಸಿ ಪ್ರತಿ ಕ್ಷಮೆ ಕೇಳಿದ ಪಾಪವನ್ನು ಮುಚ್ಚುವನು. ಯೋಹಾನನು ಹೀಗೆ ಬರೆದನು.



117

(ವಚನ. ೧ ಯೋಹಾನ ೧:೭)

ಯೇಸುವಿನ ರಕ್ತವು ಸಕಲ ಪಾಪಗಳನ್ನು ನಿವಾರಣೆ ಮಾಡುವದು. ೧ ಯೋಹಾನ ೧:೭



118

(ವಿಡಿಯೋ ೧೩ ಸೆಕೆಂಡುಗಳು) ನಾವು ಲೋಕದ ಕೊನೆಯ ಗಳಿಗೆಯಲ್ಲಿ ಜೀವಿಸುತ್ತಿದ್ದೇವೆ. ಪರಲೋಕದಲ್ಲಿ ಕ್ರಿಸ್ತನು ಬರಲಿಕ್ಕೆ ಮೊದಲು ನ್ಯಾಯ ವಿಚಾರಣೆಯು ೧೮೪೪ ರಿಂದ ನಡೆಯುತ್ತಾ ಇದೆ.



119

(ವಿಡಿಯೋ ಮುಂದುವರೆಯಿತು) ಹೇಬೇಲನಿಂದ ನ್ಯಾಯ ವಿಚಾರಣೆಯು, ಪ್ರಾರಂಭವಾಯಿತು, ಈತನು ಈ ಲೋಕದಲ್ಲಿ ಸತ್ತ ಮೊದಲ ನೀತಿವಂತನು.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.



120

(ವಚನ, ೧ ಪೇತ್ರ ೪:೧೭)
ಪೌಲನು ಹೀಗೆ ಬರೆದನು, ನ್ಯಾಯ ವಿಚಾರನೆಯ ಸಮಯ ಬಂದಿದೆ. ಆ ವಿಚಾರಣೆಯು ದೇವರ ಮನೆಯಲ್ಲಿಯೇ ಪ್ರಾರಂಭವಾಯಿತಲ್ಲಾ. ೧ ಪೇತ್ರ ೪:೧೭
ದೇವ ಜನರೆಂದು ಹೇಳಿಕೊಂಡವರ ಮೊದಲುಗೊಂಡು ನ್ಯಾಯ ವಿಚಾರಣೆಯು ಪ್ರಾರಂಭವಾಗುತ್ತದೆ.


121


ನ್ಯಾಯ ಸಭೆಯಲ್ಲಿ ಹೇಬೇಲನ ದಿನವನ್ನು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳೋಣ. ಆತನ ಹೆಸರು ನ್ಯಾಯಾಲಯಕ್ಕೆ ಬರುವಾಗ ದೇವರು ಹೇಬೇಲನ ಜೀವಿತವನ್ನು ನೊಡುತ್ತಾನೆ, ದೇವರ ಕುರಿಮರಿಯ ಮರಣದ ಅಂಗೀಕಾರದ ದಾಖಲೆ ಅಲ್ಲಿದೆ.


122

ಸತ್ಯವೇದದಲ್ಲಿ ಹೇಬೇಲನು ಮಾಡಿದ ಕೊನೆಯ ಕಾರ್ಯವು, ಆತನು ಅರ್ಪಿಸಿದ ಬಲಿ, ಮುಂದೆ ಬರಲಿರುವ ವಿಮೊಚಕನ ಮೇಲಿನ ನಂಬಿಕೆಯನ್ನು ತೋರಿಸಿತು.
ಕ್ರಿಸ್ತನ ಜೀವಿತವು ಆತನ ಲೆಕ್ಕಕ್ಕೆ ಹಾಕಲ್ಪಟ್ಟಿತು. ಆತನ ಪಾಪಗಳೆಲ್ಲಾ, ಕ್ರಿಸ್ತನ ರಕ್ತದಿಂದ ಮುಚ್ಚಲ್ಪಟ್ಟವು.



123

ಹೇಬೇಲನ ವಕೀಲನಾದ ಯೇಸು ಮೊಳೆಯ ಗುರುತಿನ ಕೈಗಳನ್ನು ಚಾಚಿ, ಹೇಳಿದನು,
ತಂದೆಯೇ, ಹೇಬೇಲನ ಸಾಲವನ್ನು ನನ್ನ ರಕ್ತವು ತೀರಿಸಿತು. ಲೆಕ್ಕವಿಲ್ಲದ ದೂತರು ಯೇಸುವು ಹೇಳುವಾಗ ಸಂತೋಷದಿಂದ, ಹೇಬೇಲನ ಹೆಸರನ್ನು ಜೀವ ಬಾದ್ಯರ ಪುಸ್ತಕದಲ್ಲಿ ಇಡಿರಿ ಎಂದು ಸಂತೋಷದಿಂದ ಹೇಳುವರು. ಆತನ ಹೆಸರು ಇನ್ನೂ ಅಲ್ಲಿದೆ. ಕ್ರಿಸ್ತನು ವಾಗ್ದಾನ ಮಾಡಿದ ಹಾಗಿದೆ.



124


(ವಚನ. ಪ್ರಕಟನೆ ೩:೫)
ಜಯಶಾಲಿಗೆ ಹೀಗೆ ಶುಭ್ರ ವಸ್ತ್ರಗಳನ್ನು ಹೊದಿಸುವರು.



125

ಜೀವ ಬಾದ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿ ಬಿಡುವದಿಲ್ಲ.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.



126

ಅವನು ನನ್ನವನೆಂದು ನನ್ನ ತಂದೆಯ ಮುಂದೆಯೂ, ಆತನ ದೂತರ ಮುಂದೆಯೂ ಒಪ್ಪುವೆನು. ಪ್ರಕಟನೆ ೩:೫


127

ಯೂದನ ಹೆಸರು ಕೂಡ ನ್ಯಾಯ ಸಭೆಯಲ್ಲಿ ಕರೆಯಲ್ಪಡುತ್ತದೆಂಬದರಲ್ಲಿ ಸಂದೇಹವಿಲ್ಲ.
ಯೂದನು ಕ್ರಿಸ್ತನ ಹಿಂಬಾಲಕರಲ್ಲಿ, ಆತನ ಶಿಷ್ಯರಲ್ಲಿ ಒಬ್ಬನು. ಆತನು ಕೆಟ್ಟವನಾಗಿರಲಿಲ್ಲ, ಆತನ ಕೆಲಸದಂತೆ ಆತನು ಜೀವಿತ ಇರಲಿಲ್ಲ. ಆತನು ಕ್ರಿಸ್ತನನ್ನು ಹೆಚ್ಚಾಗಿ ಪ್ರೀತಿಸಲಿಲ್ಲ.


128


ಕೆಲವು ವೇಳೆ ಕ್ರಿಸ್ತನ ಕಡೆಗೆ ಎಳೆಯಲ್ಪಟ್ಟನು, ಒಂದು ಬಲಹೀನತೆ ಇನ್ನೊಂದು ಬಲಹೀನತೆಗೆ ನಡಿಸಿತು. ಆತನು ಕರ್ತನನ್ನು ೩೦ರೂಗಳಿಗೆ ಮಾರುವವರೆಗೂ ನಡಿಸಿತು. ಬೇಸತ್ತು ನಂತರ ಉರ್ಲು ಹಾಕಿಕೊಂಡು ಸತ್ತನು.


129

ಯೇಸು ಯೂದನನ್ನು ಪ್ರೀತಿಸಿದನು. ಕರ್ತನ ಭೋಜನದ ರಾತ್ರಿಯಲ್ಲಿ ಆತನ ಪಾದಗಳನ್ನು ತೊಳೆಯಲು ಬಾಗಿದನು.
ಗರ್ವದ ಹೃದಯವನ್ನು ಮುಟ್ಟಲು ಯೇಸು ನಿರೀಕ್ಷಿಸಿದನು.
ನ್ಯಾಯ ವಿಚಾರಣೆಯಲ್ಲಿ ಆತನ ಪರವಾಗಿ ವಕೀಲನಾಗಿರಲು ಆತನು ಆಶಿಸಿದನು.


130

ಆದರೆ ಯೂದನು ಹೊರಟು ಹೋದನು.
ಯೂದನ ಹೆಸರನ್ನು ವಿಮರ್ಷಿಸಲು ಯೇಸುವಿಗೆ ಎಷ್ಟು ದುಃಖವಾಗಿರಬೇಕು.
ನಮ್ಮ ಸ್ವಂತ ನೀತಿಯು ನ್ಯಾಯ ವಿಚಾರಣೆಯಲ್ಲಿ ಏನು ಮಾಡುವದಿಲ್ಲ. ಕೇಳಿರಿ



131

(ವಚನ. ಯೆಶಾಯ ೬೪:೬)
ನಾವೆಲ್ಲರು ಅಶುದ್ದನ ಹಾಗಿದ್ದೇವೆ, ನಮ್ಮ ಧರ್ಮ ಕಾರ್ಯಗಳೆಲ್ಲಾ ಹೊಲೆಯ ಬಟ್ಟೆಯಂತಿದೆ.

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.


132

ತಮ್ಮ ಜೀವಿತಗಳಲ್ಲಿ ಕ್ರಿಸ್ತನನ್ನು ಮೊದಲಾಗಿ ಮಾಡಿ ಮುಂದುವರಿಸುವವರು ಮಾತ್ರ ಕ್ರಿಸ್ತನ ನೀತಿಯ ವಸ್ತ್ರವನ್ನು ಧರಿಸಬಹುದು.
ಅದಲ್ಲದೆ ನ್ಯಾಯ ವಿಚಾರಣೆಯಲ್ಲಿ ಯಾರೂ, ಸಮರ್ಥಿಸಲಾಗದು.
ಆದ ಕಾರಣ ಯೂದನ ಹೆಸರು ಜೀವಬಾದ್ಯರ ಪಟ್ಟಿಯಿಂದ ಆಳಿಸಲ್ಪಡುತ್ತದೆ.



133

ನಾವು ಜೀವಿಸುವುದು ಒಂದು ಗಂಭೀರವಾದ ಸಮಯುವಾಗಿದೆ.
ಇಸ್ರಾಯೇಲ್ಯರ ಹಾಗೆ, ನಾವು ನಮ್ಮ ಜೀವಿತಗಳ ಕಾರ್ಯಗಳನ್ನು ಪರಿಶೀಲಿಸಬೇಕಾಗಿದೆ.
ನ್ಯಾಯ ಸಭೆಯು ಕರೆಯುವಾಗ ಸಿದ್ದತೆಯ ಸಾದ್ಯತೆಗೆ ಯೇಸುವಿನ ಅಪ್ಪಣೆಯನ್ನು ಅದೇ ರೀತಿ ಇಡುವ ಅಗತ್ಯವಿದೆ. ಬೇಗ ಮಾನವನ ಕೃಪೆಯ ಕಾಲ ಮುಗಿಯುತ್ತದೆ. ಮತ್ತು ಕೊನೆಯ ಪ್ರಕಟನೆ ತಿಳಿಸಲ್ಪಡುತ್ತದೆ.




134

(ವಚನ. ಪ್ರಕಟನೆ ೨೨:೧೧)
ಅನ್ಯಾಯ ಮಾಡುವವನು ಇನ್ನೂ ಅನ್ಯಾಯ ಮಾಡಲಿ. ಪವಿತ್ರನು ಇನ್ನೂ ಪವಿತ್ರ ಮಾಡಿಕೊಳ್ಳಲಿ. ಪ್ರಕಟನೆ ೨೨:೧೧
ಆ ಸಮಯದಲ್ಲಿ ಮಾನವನಿಗೆ ಕೊಟ್ಟ ದೇವರ ಕರುಣೆ ಮತ್ತು ಕ್ಷಮೆಯು ತೆಗೆಯಲ್ಪಡುತ್ತದೆ.
ರಕ್ಷಣೆಯನ್ನು ತಿರಸ್ಕರಿಸಿದವರು, ಕ್ರಿಸ್ತನನ್ನು ತಮ್ಮ ಕರ್ತನೂ ಮತ್ತು ವಕೀಲನೂ ಎಂದು ಅಂಗೀಕರಿಸದವರಿಂದ ಬಹು ದುಃಖದ ಮಾತುಗಳು ಇರುತ್ತವೆ.



135

(ವಚನ ಯೆರೆಮೀಯ ೮:೨೦)
ಅವರು ಹೀಗೆ ಹೇಳುವರು. ಸುಗ್ಗಿಯು ತೀರಿತು, ಹಣ್ಣಿನ ಕಾಲ ಮುಗಿಯಿತು, ನಮಗೆ ಉದ್ದಾರವೇ ಆಗಲಿಲ್ಲ.
ನಂತರ ಯೇಸು ಭೂಮಿಗೆ ಬರುವನು. ಹೀಗೆ ಓದುತ್ತೇವೆ.



136

(ವಚನ ಪ್ರಕಟನೆ ೨೨:೧೨)
ಇಗೋ ಬೇಗ ಬರುತ್ತೇನೆ, ನಾನು ಪ್ರತಿಯೊಬ್ಬನಿಗೆ ಅವನವನ ನಡೆತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ. ಪ್ರಕಟನೆ ೨೨:೧೨

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.


137

ಸ್ನೇಹಿತನೇ, ನ್ಯಾಯ ವಿಚಾರಣೆಯಲ್ಲಿ ನಿಮ್ಮ ವಕೀಲನಾಗಿರಲು ಯೇಸು ಹಾತೊರೆಯುತ್ತಾನೆ.
ಕಲ್ವೇರಿಯ ಮೇಲೆ ಮಾಡಿದ ತ್ಯಾಗ ಬಲಿಯನ್ನು ನೀವು ಅಂಗೀಕರಿಸುವಂತೆ ಆತನು ಹಾತೊರೆಯುತ್ತಾನೆ.
ಆತನಿಗೆ ಪಾಪ ಅರಿಕೆಯನ್ನು ನೀವು ಮಾಡಬೇಕೆಂದು ಆತನು ಹಾತೊರಿಯುತ್ತಾನೆ, ಇದರಿಂದ ಆತನು ಅವನ್ನು ಅಳಿಸಲು ಸಾಧ್ಯವಿದೆ.
ಜೀವಬಾದ್ಯರ ಪಟ್ಟಿಯಲ್ಲಿ ನಿಮ್ಮ ಹೆಸರು ಬರೆಯಲ್ಪಡಲು ಆತನು ಹಾತೊರೆಯುತ್ತಾನೆ.
ಪರಲೋಕಕ್ಕೆ ಹೋಗುವವರಾರು, ಹೋಗದವರು ಯಾರೆಂದು ಯೋಹಾನನು ವಿವರಿಸುತ್ತಾನೆ.



138

(ವಚನ. ಪ್ರಕಟನೆ ೨೧:೨೭)
ಅಸಹ್ಯವಾದದನ್ನು, ಸುಳ್ಳಾದದ್ದನ್ನು ನಡಿಸುವವರು ಸೇರುವುದಿಲ್ಲ.



139

ಯಜ್ಞದ ಕುರಿಯಾದಾತನ ಜೀವಬಾದ್ಯರ ಪಟ್ಟಿಯಲ್ಲಿ ಹೆಸರುಗಳು ಬರೆದಿರುವವರು ಮಾತ್ರ ಸೇರುವರು.
ಪ್ರಕಟನೆ ೨೧:೨೭

೯ – ಭರವಸೆಯಿಂದ ನ್ಯಾಯತೀರ್ಪನ್ನು ಎದುರಿಸುವದು.


140

ಈಗಲೇ ಯೇಸುವಿಗೆ ನಿಮ್ಮ ಹೃದಯವನ್ನು ತೆರೆಯಲು ನೀವು ಆಶಿಸುವಿರೋ? ಆತನ ರಾಜ್ಯದಿಂದ ಬೇರ್ಪಡಿಸುವ ನಿಮ್ಮ ಜೀವಿತದ ಕಾರ್ಯಗಳನ್ನು ನಿಮ್ಮ ಜೀವಿತದಿಂದ ತೆಗೆಯಲು ಆತನನ್ನು ಕೇಳಲು ಆಶಿಸುವಿರೋ? ನ್ಯಾಯ ವಿಚಾರಣೆಯಲ್ಲಿ ನಮ್ಮ ವಿಚಾರವಾಗಿ ದೇವರು ಎಲ್ಲವನ್ನು ಪ್ರಕಟಿಸುವನು.

ಇಡೀ ಜಗತ್ತಿಗೆ ಎಲ್ಲವೂ ತೋರಿಸಲ್ಪಡುತ್ತದೆ, ನಮ್ಮ ಪಾಪಗಳೆಲ್ಲಾ ದಾಖಲಾಗಿವೆ, ನಿಮ್ಮ ಪಾಪಗಳು ಮರೆಯಾಗಲು ಯೇಸುವಿನ ರಕ್ತದಿಂದ ಮರೆಯಾಗಲು ಇಷ್ಟಪಡುವಿರೋ?

ಯೇಸು ಮುಂದೆ ಬಂದು ಈ ವ್ಯಕ್ತಿ, ಈ ಸ್ತ್ರೀಯು ನನ್ನವರೆಂದು ಕ್ರಿಸ್ತನು ಹೇಳಲು ನೀವು ಇಷ್ಟ ಪಡುವಿರೋ?

ನಾನು ಅವರ ಪಾಪಗಳನ್ನು ಕ್ಷಮಿಸಿದ್ದೇನೆ, ಅವರ ಸಾಲವನ್ನು ಅಳಿಸಿದ್ದೇನೆ, ಅವರ ಅಪರಾಧವನ್ನು ಕ್ಷಮಿಸಿದ್ದೇನೆ. ಅವರ ಪಾಪಗಳು ನನ್ನ ರಕ್ತಗಳಿಂದ ಮುಚ್ಚಲ್ಪಟ್ಟಿವೆ. ದಾಖಲೆಯಿಂದ ಅವುಗಳನ್ನು ಸಂಪೂರ್ಣವಾಗಿ ಅಳಿಸಿಬಿಡು.

ಪರಲೋಕದ ಸಿಂಹಾಸನದ ಮುಂದೆ ಯೇಸು ನಿಂತಿದ್ದಾನೆ.

ನಿಮ್ಮ ರಕ್ಷಕನಾಗಿ ನ್ಯಾಯ ವಿಚಾರಣೆಯಲ್ಲಿ ನಿಂತಿದ್ದಾನೆ. ಈಗಲೇ, ಈ ಸಮಯದಲ್ಲಿ ಆತನ ಬಳಿಗೆ ನೀವು ಬರುವಿರೋ? ನಿಮ್ಮ ಇಡೀ ಜೀವಿತವನ್ನು ಆತನಿಗೆ ಒಪ್ಪಿಸುವಿರೋ? ನಾವು ಪ್ರಾರ್ಥಿಸುವಾಗ ನಿಮ್ಮ ಕೈಯನ್ನು ಪರಲೋಕದ ಕಡೆಗೆ ಈಗಲೇ ಎತ್ತಿರಿ, ಹೌದು ಕರ್ತನೇ, ನನ್ನ ಜೀವಿತವನ್ನು ತೆಗೆದುಕೋ, ನಾನು ನಿನ್ನವನಾಗಿರಬೇಕೆಂದು ಹೇಳಿರಿ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



1

ಇದು ಒಂದು ವ್ಯತ್ಯಾಸವನ್ನು ಮಾಡುತ್ತದೋ?



2

ಇಡೀ ಲೋಕದ ಪಟ್ಟಣಗಳಲ್ಲಿ ಅಕ್ರಮಗಳು ಹೆಚ್ಚುತ್ತಿರುವದನ್ನು ನೀವು ಗಮನಿಸಿದ್ದೀರೋ? ಹೆಚ್ಚಿನ ರೀತಿಯಲ್ಲಿ ಕಾಣುತ್ತದೆ.


3

ಒಬ್ಬ ವ್ಯಕ್ತಿ ಅವಸರವಾಗಿ ಪೋಲಿಸ್ ಕಛೇರಿಗೆ ಕೋಪದಿಂದ ಬಂದನು. ಯಾರೋ ಮನೆಯ ಬಾಗಿಲನ್ನು ಮುರಿದು ಅನೇಕ ಬೆಲೆಬಾಳುವ ವಸ್ತುಗಳನ್ನು ತೆಗೆದುಕೊಂಡು ಹೋದರು. ನಾನು ಕಳ್ಳನನ್ನು ನೋಡಿದ ಹಾಗಿದೆ, ಪೋಲಿಸರು ಏನಾದರೂ ಮಾಡಲು ಒತ್ತಾಯಿಸಿದನು. ಅಧಿಕಾರಿಯು ಕಳ್ಳರಿದ್ದ ಪುಸ್ತಕಗಳನ್ನು ತೋರಿಸಿದನು. ಇವರೆಲ್ಲರು ಅಪರಾಧಿಗಳು. ಆತನ ಮುಖನೋಡಿ ಕಂಡುಹಿಡಿಯಲು ಹೇಳಿದನು.


4

ಅಧಿಕಾರಿಯು ಸ್ವಲ್ಪ ತಾಳು ಅಂದನು; ಒಂದು ಪುಟದ ಮೇಲೆ ಕೈಹಾಕಿ, ಪುಸ್ತಕವನ್ನು ನೋಡಿ, ಆತನನ್ನು ನೋಡಿ ನೀನೇ ಆತನೆಂದನು. ಪೋಲೀಸನು ನಿನ್ನನ್ನು ಬಂದಿಸಲು ಅಪ್ಪಣೆ ಬಂದಿದೆ ಅಂದನು. ಕೋಪದಿಂದ ಬಂದ ಮನೆಯ ಮಾಲಿಕನು, ಹುಡುಕುತ್ತಿದ್ದ ದೊಡ್ಡ ಕಳ್ಳನಾಗಿದ್ದನು.



5

ಅಕ್ರಮ ಮತ್ತು ಅಪರಾಧಗಳು ಎಲ್ಲಾ ಕಡೆ ಇವೆ. ನೀವು ಅಪೇಕ್ಷಿಸದ ಸ್ತಳಗಳಲ್ಲಿ ಇದೆ. ಕೆಲಸ ಮಾಡುವ ಸ್ತಳಗಳಲಿ, ಕಾರ್ಖಾನೆಗಳಲ್ಲಿ, ನಮ್ಮ ಹಳ್ಳಿಗಳಲ್ಲಿ, ಊರುಗಳಲ್ಲಿ ಮತ್ತು ಪಟ್ಟಣಗಳಲ್ಲಿ ಇವೆ.


6

ಕೆಲವು ದೇಶಗಳಲ್ಲಿ ಗೊಂದಲ, ಕ್ರಾಂತಿ ಮತ್ತು ಕಳ್ಳತನವಿದೆ, ಬೀದಿಗಳು ಸುರಕ್ಷತೆಯಾಗಿಲ್ಲ.
ಇಡೀ ಲೋಕದ ದೇಶಗಳಲ್ಲಿ ಕೊಲೆಗಳು, ಹೆಚ್ಚು ಅಡ್ಡಾಡುವದು, ಬಾಂಬ ಗಳನ್ನು ಹಾಕುವದು, ಉಸಿರು ಕಟ್ಟುವಂತೆ ಮಾಡುವದು, ಬಲತ್ಕಾರದಿಂದ ಕೆಡಿಸುವದು, ದರೋಡೆಗಳು, ಸ್ವಂತಕ್ಕೆ ಬಳಸಿಕೊಳ್ಳುವದು, ಸರ್ಕಾರದ ಕೆಟ್ಟತನಗಳನ್ನು ಪ್ರತಿದಿನವೂ ಕಾಣಬಹುದಾಗಿದೆ.
ಅಕ್ರಮ ಯಾಕೆ ಅಧಿಕವಾಗುತ್ತದೆ?
ಆಜ್ಞೆಗಳಿಲ್ಲದೆ ಈ ರೀತಿ ನಡೆಯುವ ಹಿನ್ನಲೆ ಏನು?
ನಮ್ಮ ಲೋಕಕ್ಕೆ ಏನಾಯಿತು?

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



7

ಪಾಶ್ಚಾತ್ತ ದೇಶಗಳಲ್ಲಿ ಮತ್ತು ಲೋಕದ ಮುಂದುವರೆದಿರುವ ದೇಶಗಳಲ್ಲಿ, ಹೊಸ ಯವನಸ್ತರ ಪಂಗಡ ಒಂದಿದೆ, ಯವನಸ್ತರ, ಪ್ರಶ್ನಿಸುತ್ತಾರೆ, ಮತ್ತು ಸವಾಲು ನೀಡುತ್ತಾರೆ.
ಮಕ್ಕಳಿಗೆ ಸಂಪೂರ್ಣ ಮಾದರಿಯಾಗಿರಲು ದೇವರು ದೊಡ್ಡವರನ್ನು ಕರೆಯುತ್ತಾನೆ. ಮಕ್ಕಳು ಅವರ ಸುತ್ತಲಿರುವ ಸಮಾಜದ ವರ್ತನೆಯಂತೆ ಮಾಡುತ್ತಾರೆ. ಅವರ ಅಧ್ಯಾತ್ಮಿಕ ಮಾದರಿಗಳು ಯಾರು?


8


ತಂದೆಗಳು ಕೆಲಸದಲ್ಲಿ ಇಲ್ಲವೇ ಅವರ ಕಂದಾಯಗಳಲ್ಲಿ ಮೋಸ ಮಾಡುತ್ತಾರೆ.


9

ಮಕ್ಕಳು ಅದನ್ನೆಲ್ಲಾ ನೋಡುತ್ತಾರೆ.
ಒಡೆದ ಮನೆಗಳು ಆಳವಾದ ಗುರುತನ್ನು ಇಡುತ್ತವೆ. ತಂದೆ ತಾಯಿಗಳು ಮಾಡದಿರುವಾಗ, ಮಾಡಲು ಆಗದಿರುವಾಗ ಒಳ್ಳೇಯದು ಕೆಟ್ಟದೆಂಬ ಒಂದು ಭಾವನೆಯನ್ನು ತರುವವರು ಯಾರು?
ನಿಜದಲ್ಲಿ ತಂದೆ ತಾಯಿಗಳು ಇಂಥ ದೊಡ್ಡ ಒಂದು ಜವಾಬ್ದಾರಿಯನ್ನು ಶಾಲೆಗಳಿಗೆ ಬಿಡಲಾಗದು. ಅನೇಕ ಶಾಲೆಗಳು ನೈತಿಕ ಜೀವಿತವನ್ನು ಕಲಿಸುವದಿಲ್ಲ ಇಲ್ಲವೇ ಒತ್ತಾಸೆ ನೀಡುವದಿಲ್ಲ.
ನಾವು ಸತ್ಯ ವೇದದ ನೈತಿಕ ಮಟ್ಟದಿಂದ ಹೆಚ್ಚಾಗಿ ಮುಂದುವರೆದಿದ್ದೇವೆಂಬ ಭಾವನೆ ಬಂದಿರುತ್ತದೆ.


10

ಇಂದು ಅನೇಕ ಸಭೆಗಳು ಈ ರೀತಿ ಕಲಿಸುತ್ತವೆ.


11

ಆತನ ಆಜ್ಞೆಗಳು ಅಳಿಸಲ್ಪಟ್ಟವೆಂದು ಅವರು ಹೇಳುತ್ತಾರೆ.


12

ಇಲ್ಲವೇ ಆತನ ಅಜ್ಞೆಗಳು ಸಂಭಂದ ಪಟ್ಟವುಗಳಲ್ಲ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?




13

ಇಲ್ಲವೇ ಅವುಗಳನ್ನು ಕೈಕೊಳ್ಳಲು ಅಸಾಧ್ಯ.


14

ಅದರ ಫಲವಾಗಿ, ಅನೇಕ ಜನರು ಇಷ್ಟ ಪ್ರಕಾರ ಮಾಡುತ್ತಾರೆ. ಸಮಾಜವು ಹೆಚ್ಚಿನ ಫಲವನ್ನು ಕೊಡುತ್ತದೆ. ಒಡೆದ
ಮನೆಗಳು, ಭಂದನದಲ್ಲಿಡಲಾಗದ ಮಕ್ಕಳು; ಭಯಂಕರವಾದ ಅಕ್ರಮಗಳು.




15

(ವಚನ– ಹೊಶೇಯ ೮:೭)
ಪ್ರವಾದಿಯಾದ ಹೊಶೇಯನ ಮಾತು ಹೀಗಿದೆ. ಅವರು ಗಾಳಿಯನ್ನು ಬಿತ್ತುತ್ತಾರೆ, ಬಿರುಗಾಳಿಯನ್ನು ಕೊಯ್ದುಕೊಳ್ಳುತ್ತಾರೆ.


16

ಒಂದು ಪರಿಹಾರವು ತಪ್ಪೋ ಸರಿಯೋ ಎಂದ ತೀರ್ಮಾನಿಸುವವರು ಯಾರೆಂಬ ಪ್ರಶ್ನೆಯು ಬರುತ್ತದೆ?
ಒಳ್ಳೆಯವರ ನೈತಿಕ ತೀರ್ಪು ಕೆಲವು ವೇಳೆ ಪರಿಪೂರ್ಣವಾಗಿಲ್ಲದೆ ಇರುವದಲ್ಲವೇ? ನಮ್ಮಿಂದ ಹೊರಗೆ, ಒಳ್ಳೆಯದು ಮತ್ತು ಕೆಟ್ಟದೆಂಬ ಯಾವ ಮಟ್ಟವು ಇಲ್ಲವೋ? ನಾವು ಏನು ಬೇಕಾದರೂ ತೀರ್ಮಾನಿಸಬಹುದು.



17

(ವಚನ. ಜ್ಞಾನೋಕ್ತಿ ೧೬:೨೫)
ಯಾವುದು ಒಳ್ಳೆಯದು ಯವುದು ಕೆಟ್ಟದೆಂದು ತೀರ್ಮಾನಿಸಲು ನಾವು ಒಳ್ಳೆಯ ನ್ಯಾಯಾದೀಶರಲ್ಲವೆಂದು ಸತ್ಯವೇದವು ಜ್ಞಾಪಕಪಡಿಸುತ್ತದೆ.
ಮನುಷ್ಯ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು.
ಕೆಟ್ಟಕಡೆಗೆ ಅದು ಮರಣ ಮಾರ್ಗವೇ. ಜ್ಞಾನೋಕ್ತಿ ೧೬:೨೫



18

(ವಚನ. ೨ ತಿಮೋಥಿ ೪:೩,೪)
ಅಪೋಸ್ತಲನಾದ ಪೌಲನು ಮುಂತಿಳಿಸಿದನು. ಯಾಕೆಂದರೆ ಜನರು ಸ್ವಸ್ಥ ಭೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ. ಅದರಲ್ಲಿ



19

ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಸೆಗಳಿಗೆ ಅನುಕೂಲವಾದ ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



20

ಅವರು ಸತ್ಯ ಬೋಧನೆಗೆ ಕಿವಿಗೊಡದೆ ಕಲ್ಪನಾಕಥೆಗಳನ್ನು ಕೇಳುವದಕ್ಕೆ ಹೋಗುವರು ೨ತಿಮೋಥಿ ೪:೩,೪


21

ನಿಯಮಗಳನ್ನು ಬಿಸಾಡಿ, ಸ್ವಾತಂತ್ರವನ್ನು ಪಡೆಯಲಾಗದೆಂದು ಕಂಡು ಹಿಡಿಯುತ್ತೇವೆ. ಇದು ವ್ಯಸನವನ್ನು ತರುತ್ತದೆ.
ಒಳ್ಳೆಯದು ಮತ್ತು ಕೆಟ್ಟದೆಂಬ ಮಟ್ಟವನ್ನು ತೆಗೆಯಿರಿ. ಗಲಿಬಿಲಿಯು ಬರುತ್ತದೆ.



22

ಪ್ರಯಾಣದ ಚಿಹ್ನೆಗಳನ್ನು ಗುರುತುಗಳನ್ನು ನೀವು ತೆಗೆದು ಹಾಕಿದರೆ, ರಾಜಮಾರ್ಗದಲ್ಲಿ ಗಲಿಬಿಲಿ ಇರುತ್ತದೆ.



23

ನಿಯಮಗಳು ಯಾವವು?
ಒಳ್ಳೆಯದು ಮತ್ತು ಕೆಟ್ಟದೆಂದು ನಾವು ತಿಳಿಯುವದು ಹೇಗೆ?


24

ಅನೇಕ ಕಾಲದ ಹಿಂದೆ ದೇವರ ಒಂದು ಅಪರಾಧವಿಲ್ಲದ ಸಮಾಜವಾಗಿ ಜೀವಿಸಲು ಒಂದು ಗುರುತು ನೀಡಿದ್ದಾನೆ.
ಇದನ್ನು ಹಿಂಬಾಲಿಸಿದ್ದರೆ ಯಾವ ಅಕ್ರಮ ಅಪರಾಧವೂ ಇರುತ್ತಿರಲಿಲ್ಲ. ಈ ಲೋಕದ ಎಲ್ಲಾ ಕಡೆ ಜನರು ಸಂತೋಷವಾಗಿಯು ಮತ್ತು ಭದ್ರತೆಯಿಂದಲೂ ಇರುತ್ತಿದ್ದರು.



25

(ವಚನ. ವಿಮೋಚನಕಾಂಡ ೨೦:೨)
ಇಸ್ರಾಯೇಲ್ಯರು ಸಿನಾಯಿಯ ಬೆಟ್ಟದ ಬಳಿ ಉಳಿದು ಕೊಂಡಾಗ ಕರ್ತನು ಅವರನ್ನು ಸಂದಿಸಲು ಬಂದು ಹೀಗೆಂದನು. ನೀನು ದಾಸತ್ವದಲ್ಲಿ ಇದ್ದಾಗ ಐಗುಪ್ತ ದೇಶದೊಳಗಿಂದ ನಿನ್ನನ್ನು ಬಿಡುಗಡೆ ಮಾಡಿದ ಯೆಹೋವನು ಎಂಬ ನಿನ್ನ ದೇವರು ನಾನೇ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



26

ವಿಡಿಯೋ ೬ ಸೆಕೆಂಡುಗಳು
ಮೊದಲಾಗಿ ಕರ್ತನು ಗುಲಾಮತ್ವದಿಂದ ಅವರನ್ನು ಬಿಡಿಸಿದವನೆಂದು ತನ್ನನ್ನು ತಿಳಿಸುತ್ತಾನೆ.
ಅವರ ಮುಂದೆ ಕೆಂಪು ಸಮುದ್ರವನ್ನು ತೆರೆದವನು ಆತನೇ.
ಆತನು ಅವರನ್ನು ಪರಾಂಬರಿಸಿದನು.
ಇನ್ನೊಂದು ವಿಧದಲ್ಲಿ ಹೇಳಬೇಕಾದರೆ, ನಾನು ನಿನ್ನನ್ನು ಕಾಪಾಡುತ್ತೇನೆ.
ನೀವು ನನ್ನನ್ನು ನಂಬಬಹುದು.


27

ನಂತರ ಆತನ ದೈವಿಕ ನ್ಯಾಯ ಪ್ರಮಾಣವನ್ನು ತಿಳಿಸಿದನು. ಇದರಿಂದ ಮಾನವನು ಸಮಾಧಾನದಿಂದ ಭದ್ರತೆಯಿಂದ ಜೀವಿಸಲು ಹೇಗೆಂದು ತಿಳಿಯಬೇಕಿತ್ತು. ಒಳ್ಳೆಯದಾವುದು ಮತ್ತು ಕೆಟ್ಟದ್ದಾವುದೆಂದು ತಿಳಿಯಲು ಮಾರ್ಗವಾಗಿತ್ತು.




28

ಸಿನಾಯಿ ಬೆಟ್ಟದ ಮೇಲೆ ೧೦ ಆಜ್ಞೆಗಳ ಪಟ್ಟಿಯನ್ನು ನೋಡೋಣ.
(ವಚನ . ವಿಮೋಚನ ಕಾಂಡದಿಂದ ೧೦ ಕಟ್ಟಳೆಗಳು)
ನಾನಲ್ಲದೆ ನಿನಗೆ ಬೇರೆ ದೇವರುಗಳಿರಬಾರದು.




29

ಯಾವ ಮೂರ್ತಿಯನ್ನು ಮಾಡಿಕೊಳ್ಳಬಾರದು, ಅವುಗಳಿಗೆ ಅಡ್ಡಬೀಳಲೂಬಾರದು, ಪೂಜಿಸಲೂ ಬಾರದು.




30

ನಿನ್ನ ದೇವರಾದ ಯಹೋವನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು.



31

ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಡಬೇಕು. ಆರು ದಿನಗಳಲ್ಲಿ ನೀನು ದುಡಿದು ನಿನ್ನ ಕೆಲಸವನ್ನೆಲ್ಲಾ ಮಾಡಬೇಕು. ೭ನೇಯ ದಿನವು ನಿನ್ನ ದೇವರಾದ ಯೆಹೋವನಿಗೆ ಮೀಸಲಾದ ವಿಶ್ರಾಂತಿ ದಿನವಾಗಿದೆ.



32

ನಿಮ್ಮ ತಂದೆ ತಾಯಿಗಳನ್ನು ಸನ್ಮಾನಿಸು.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



33

ನರಹತ್ಯ ಮಾಡಬಾರದು.



34

ವ್ಯಭಿಚಾರ ಮಾಡಬಾರದು




35

ಕದಿಯಬಾರದು




36

ಮತ್ತೊಬ್ಬನ ಮೇಲೆ ಸುಳ್ಳು ಸಾಕ್ಷಿ ಹೇಳಬಾರದು.



37

ಮತ್ತೋಬ್ಬನ ಮನೆಯನ್ನು ಆಶಿಸಬಾರದು, ಮತ್ತೊಬ್ಬನ ಹೆಂಡತಿ ಗಂಡಾಳನ್ನು ಆಶಿಸಬಾರದು.



38

ಹೆಣ್ಣಾಳು ಎತ್ತು ಕತ್ತೆ ಮುಂತಾದ ಯಾವುದನ್ನು ಆಶಿಸಬಾರದು. ವಿಮೋಚನ ಕಾಂಡ ೨೦:೩-೧೭



39

(ವಿಡಿಯೋ ೧೦ ಸೆಕೆಂಡುಗಳು)
ಇಸ್ರಾಯೇಲರು ಕೇಳಿದಾಗ ಅವರಿಗೆ ಪರಿಣಾಮ ಬೀರಿತು. ಇದು ದೇವರ ಚಿತ್ತವಿದ್ದರೆ, ಅದನ್ನು ಮಾಡಲು ನಿರ್ದರಿಸಿದರು.


40

ಮಾನವರಾದ ನಾವು ಮರೆಯುವದುಂಟು, ದೇವರು ಎಲ್ಲಾ ೧೦ ಕಟ್ಟಳೆಗಳನ್ನು ತನ್ನ ಸ್ವಂತ ಬೆರಳುಗಳಿಂದ ೨ ಕಲ್ಲಿನ ಹಲಗೆಯ ಮೇಲೆ ಬರೆದನು.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



41

(ವಚನ, ವಿವೋಚನಕಾಂಡ ೩೧:೧೮.)
ಯೆಹೋವನು ಸೀನಾಯಿ ಬೆಟ್ಟದಲ್ಲಿ ಮೋಶೆಯ ಸಂಗಡ ಮಾತಾಡುವುದನ್ನು ಮುಗಿಸಿದನು.



42

ಆತನು ೨ ಕಲ್ಲಿನ ಹಲಗೆಗಳನ್ನು ಅವನಿಗೆ ಕೊಟ್ಟನು.



43

ಕಲ್ಲಿನ ಹಲಗೆಗಳಲ್ಲಿ ಬರೆದವುಗಳು ದೇವರು ಬೆರಳುಗಳಿಂದ ಬರೆದವುಗಳು.


44


ದೇವರು ಆಜ್ಞೆಗಳನ್ನು ಬರವಣಿಗೆಯ ಮೂಲಕ ಕೊಟ್ಟದ್ದು ಮೊದಲನೆಯದಾಗಿದ್ದರೂ, ಇದು ಎಲ್ಲಾ ಕಾಲದಲ್ಲೂ ಇತ್ತು. ಸೀನಾಯಿಗೆ ಮೊದಲು, ಆದಾಮು ಮತ್ತು ಹವ್ವಳಿಗೆ ಮೊದಲೇ, ನಿತ್ಯವಾದ, ಬದಲಾಗದ ನಿಜವಾದ ಮಟ್ಟವು ದೇವರ ಪರಲೋಕದ ಸರ್ಕಾರದ ಆಧಾರವಾಗಿತ್ತು.


45

ದೂತರೂ ಕೂಡ ಈ ಅಜ್ಞೆಗಳಿಗೆ ಬದ್ಧರಾಗಿದ್ದಾರೆ, ಅವರಿಗೆ ಆರಿಸಿಕೊಳ್ಳುವುದು ಕೊಡಲ್ಪಟ್ಟಿದೆ. ದೇವರ ನ್ಯಾಯ ಪ್ರಮಾಣವನ್ನು ಹಿಂಬಾಲಿಸಬಹುದು. ಇಲ್ಲವೇ ಅದಕ್ಕೆ ವಿರುದ್ಧವಾಗಿ ನಿಂತು ಮರೆಯುಬಹುದು.


46

ಸೈತಾನನು ಮತ್ತು ಆತನ ದೂತರು ತಮ್ಮ ಸ್ವಂತ ಕಾರ್ಯವನ್ನು ಮಾಡಲು, ಸ್ವಂತ ನಿಯಮಗಳನ್ನು ಮಾಡಲು ಆರಿಸಿ ಕೊಂಡರು. ಅವರ ವಿರೋಧತೆಯ ಫಲವಾಗಿ ಪರಲೋಕದಿಂದ ತಳ್ಳಲ್ಪಟ್ಟರು.



47


(ವಚನ – ಪ್ರಕಟನೆ ೧೨:೭–೯)
ಸತ್ಯ ವೇದವು ಹೀಗೆ ಹೇಳುತ್ತದೆ, ಪರಲೋಕದಲ್ಲಿ ಯುದ್ಧ ನಡೆಯಿತು. ಮೀಕಾಯೇಲನೂ ಆತನ ದೂತರೂ ಘಟಸರ್ಪನ ಮೇಲೆ ಯುದ್ಧ ಮಾಡುವದಕ್ಕೆ ಹೊರಟರು. ಘಟಸರ್ಪನೂ ಅವನ ದೂತರು ಯುದ್ಧ ಮಾಡಿ ಸೋತು ಹೋದರು.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



48

ಮತ್ತು ಪರಲೋಕದೊಳಗೆ ಅವರಿಗೆ ಸ್ಥಾನವು ತಪ್ಪಿ ಹೋಯಿತು.



49

ಭೂಲೊಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾಘಟಸರ್ಪನು ಅಂದರೆ ಪಿಶಾಚನೆಂತಲೂ, ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ ಬ್ಬಲ್ಪಟ್ಟಿತು.



50

ಭೂಮಿಗೆ ಬಿದ್ದನು; ಆತನ ದೂತರೂ ಅವನೊಂದಿಗೆ ದೊಬ್ಬಲ್ಪಟ್ಟರು.
ಪ್ರಕಟಣೆ ೧೨:೭–೯
ಆದರೆ ದೇವರನ್ನು ಹಿಂಬಾಲಿಸಿ ಮತ್ತು ಆತನ ನ್ಯಾಯ ಪ್ರಮಾಣಕ್ಕೆ ಪ್ರಮಾಣಿಕರಾದ ದೂತರಿದ್ದರು



51


(ವಚನ. ಕೀರ್ತನೆ ೧೦೩:೨೦)
ದೇವದೂತರೇ, ಆತನ ಶಬ್ಧಕ್ಕೆ ಕಿವಿಗೊಡುವ ಪರಾಕ್ರಮಶಾಲಿಗಳೇ ಆತನ ಆಜ್ಞೆಯನ್ನು ನೆರವೇರಿಸುವ ಪರಾಕ್ರಮಶಾಲಿಗಳೇ, ಯೇಹೋವನನ್ನು ಕೊಂಡಾಡಿರಿ.
ಕೀರ್ತನೆ ೧೦೩:೨೦


52

ಏದೇನಿನಲ್ಲಿ ಆದಾಮು ಮತ್ತು ಹವ್ವಳಿಗೆ ದೇವರ ನ್ಯಾಯ ಪ್ರಮಾಣದ ತಿಳಿವಳಿಕೆ ಇತ್ತು. ಅವರು ಪಾಪ ಮಾಡಿದಾಗ ನಾಚಿಕೆ ಮತ್ತು ದೋಷದಿಂದ ಕೂಡಿದ್ದರು.


53


ದೇವರು ಹೇಬೇಲನ ಕಾಣಿಕೆಯನ್ನು ಅಂಗೀಕರಿಸಿದ್ದರಿಂದ ಕಾಯನನ ಕಾಣಿಕೆಯನ್ನು ಅಂಗೀಕರಿಸದೆ ಹೋದದ್ದರಿಂದ ಈತನಿಗೆ ಕೋಪ ಬಂತು. ಕರ್ತನು ಹೀಗೆ ಕೇಳಿದನು.



54


(ವಚನ. ಆದಿಕಾಂಡ ೪:೬,೭)
ಯಾಕೆ ಕೋಪಿಸಿಕೊಂಡಿ? ನಿನ್ನ ತಲೆ ಯಾಕೆ ಬೊಗ್ಗಿತು?

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?




55

ಒಳ್ಳೇ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವದಲ್ಲವೇ, ಇಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಾಗಿಲಲ್ಲಿ ಹೊಂಚಿಕೊಂಡಿರುವದು. ಆದಿಕಾಂಡ ೪:೭ ಆ ಸಮಯದಲ್ಲಿ ದೇವರ ಅಜ್ಞೆ ಇತ್ತೆಂದು ತಿಳಿದು ಬರುತ್ತದೆ.



56

(ವಚನ. ರೋಮಾಪುರದವರಿಗೆ ೪:೧೫)
ನ್ಯಾಯ ಪ್ರಮಾಣ ವಿಲ್ಲದ ಪಕ್ಷದಲ್ಲಿ ಮೀರೋಣವೆಂಬುದೂ ಇಲ್ಲ. ರೋಮಾಪುರದವರಿಗೆ ೪:೧೫




57

ವೆಬ್ ಸ್ಟರ್ ಅರ್ಥಕೋಶದಲ್ಲಿ ಈ ಅರ್ಥವನ್ನು ನೀಡುತ್ತದೆ.
ಮೀರು, ಉಲ್ಲಂಘಿಸು, ಅತಿಕ್ರಮಿಸು


58

ಸಿನಾಯ ಬೆಟ್ಟದಲ್ಲಿ ನ್ಯಾಯ ಪ್ರಮಾಣವನ್ನು ತಿಳಿಸಲು ಮೊದಲೇ ಅಬ್ರಹಾಮನಿಗೆ ಆಜ್ಞೆಗಳು ತಿಳಿದಿತ್ತು. ಮತ್ತು ಅಜ್ಞೆಗಳಿಗೆ ವಿಧೇಯನಾದನು.




59

(ವಚನ. ಆದಿಕಾಂಡ ೨೬:೫)
ಅಬ್ರಹಾಮನನ್ನು ಆತನ ಸಂತತಿಯನ್ನು ಆಶೀರ್ವದಿಸುತ್ತೇನೆಂದು ದೇವರು ಹೇಳಿದನು. ನಿನ್ನ ತಂದೆಯಾದ ಅಬ್ರಹಾಮನು ನನ್ನ ಆಜ್ಞಾನೇಮವಿಧಿಗಳನ್ನು ಕೈಕೊಂಡನು. ಆದಿಕಾಂಡ ೨೬:೫


60


ಸಿನಾಯಿಗೆ ಅನೇಕ ವರ್ಷಗಳಿಗೆ ಮೊದಲು ಯೋಸೇಪನಿಗೆ ಪೋಟಿಪರನ ಹೆಂಡತಿಗೆ ಉತ್ತರ ನೀಡಲು ಮನ ಸಾಕ್ಷಿಯು ನುಡಿಸಿತು.



61

(ವಚನ ಆದಿಕಾಂಡ ೩೯:೯)
ಈ ಮನೆಯಲ್ಲಿ ಅವನು ನನಗಿಂತ ದೊಡ್ಡವನಲ್ಲ. ನೀನು ಅವನ ದರ್ಮಪತ್ನಿಯಾದ್ದರಿಂದ ನಿನ್ನನ್ನು ಮಾತ್ರ ನನಗೆ ಅಧೀನ ಮಾಡಲಿಲ್ಲ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



62

ಹೀಗಿರುವಲ್ಲಿ ನಾನು ಇಂಥಾ ಮಹಾ ದುಷ್ಕೃತ್ಯವನ್ನು ನಡಿಸಿ, ದೇವರಿಗೆ ವಿರುದ್ಧವಾಗಿ ಹೇಗೆ ಪಾಪ ಮಾಡಲಿ ಅಂದನು.
ಆದಿಕಾಂಡ ೩೯:೯


63

ವ್ಯಭಿಚಾರವು ಪಾಪವೆಂದು ಯೋಸೇಪನಿಗೆ ತಿಳಿದಿತ್ತು. ದೇವರ ಒಳ್ಳೆಯದರ ಮತ್ತು ಕೆಟ್ಟದರ ಮಟ್ಟವು ಆತನಿಗೆ ತಿಳಿದಿತ್ತು. ದೇವರ ಪರಿಶುದ್ಧ ನ್ಯಾಯ ಪ್ರಮಾಣವನ್ನು ಮೀರುವದಿಲ್ಲವೆಂದು ದೃಢವಾಗಿ ತೀರ್ಮಾನಿಸಿದನು.




64

(ವಿಡಿಯೋ ೪ ಸೆಕೆಂಡುಗಳು)
ದೇವರನ್ನು ಸೇವಿಸಿ ಆತನಿಗೆ ವಿಧೇಯರಾಗಲು ಇಸ್ರಾಯೇಲ್ ಜನರಿಗೆ ತೀಳಿಸಿತ್ತು, ಆದರೆ ಅವರೆ ಐಗುಪ್ತ ದೇಶದ ಕ್ರೂರ ಗುಲಾಮತ್ವದಿಂದ ಅವರು ದೇವರ ಆಜ್ಞೆಗಳನ್ನು ಮರೆತರು.



65

ಐಗುಪ್ತದಿಂದ ಹೊರಗೆ ಬಂದು ಕೆಲ ವಾರದ ನಂತರ ಸೀನಾಯಿಗೆ ಬಂದರು. ಸಬ್ಬತ್ತನ್ನು ಮೀರಿ ಮನ್ನವನ್ನು ಶೇಖರಿಸಲು ಇಸ್ರಾಯೇಲ್ಯರು ಪ್ರಯತ್ನಿಸಿದ್ದರಿಂದ ಕರ್ತನು ಮೋಶೆಯನ್ನು ಖಂಡಿಸಿದನು.



66

(ವಚನ. ವಿಮೋಚನಕಾಂಡ ೧೬:೨೮,೩೦)
ಆಗ ಯೆಹೋವನ ಮೋಶೆಗೆ, ಎಲ್ಲಿಯವರೆಗೂ ನನ್ನ ಆಜ್ಞೆಯನ್ನು, ನಾನು ಮಾಡಿರುವ ನಿಯಮವನ್ನು ಅನುಸರಿಸದೆ ಅಲಕ್ಷ್ಯ ಮಾಡುವಿರೋ, ನೋಡಿರಿ?



67

ಆದದರಿಂದ ೭ನೇಯ ದಿನದಲ್ಲಿ ಜನರು ಕೆಲಸವನ್ನು ಮಾಡದೇ ಇದ್ದರು.
ವಿಮೋಚನಕಾಂಡ ೧೬:೩೦
ನಿಜವಾಗಿ ದೇವರ ಆತನ ರಾಜ್ಯದಲ್ಲಿ ಒಂದು ನ್ಯಾಯ ಪ್ರಮಾಣವಿದೆ ಎಂದು ನಮಗೆ ಆಶ್ಚರ್ಯವನ್ನು ತರುತ್ತದೋ?


68


ಹೌದು ದೇವರ ನ್ಯಾಯ ಪ್ರಮಾಣವು ಜಗತ್ತಿಗೆ ಒಳ್ಳೆಯದಕ್ಕೆ ನಿತ್ಯ ಮಟ್ಟಗೋಲಾಗಿದೆ. ದೇವರ ರಾಜ್ಯದಲ್ಲಿ ಒಂದು ನ್ಯಾಯ ಪ್ರಮಾಣವಿದೆ ಎಂದು ನಮಗೆ ಆಶ್ಚರ್ಯವನ್ನು ತರುತ್ತದೋ?

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



69

(ವಚನ. ೧ ಕೊರಿಂಥ ೧೪:೩೩)
ಅಪ್ರೋಸ್ತಲನಾದ ಪೌಲನು ಹೀಗೆ ಬರೆದನು, ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ.



70

ಆದರೆ ಎಲ್ಲವೂ ಮರ್ಯದೆಯಿಂದಲೂ ಕ್ರಮದಿಂದಲೂ ನಡೆಯಲಿ. ೧ ಕೊರಿಂಥ ೧೪:೩೩,೪೦


71

ಆಜ್ಞೆಗಳಿಲ್ಲದೆ ಸರ್ಕಾರವು ಕ್ರಮಬದ್ದವಾಗಿ ಇರಲಾಗುವದಿಲ್ಲ. ಹೊಂದಾಣಿಕೆ, ಸಂತೋಷ, ನಿಯಮಗಳಿಲ್ಲದೆ ಸುರಕ್ಷತೆಯ ಸಮಾಜವಿರಲಾಗದು.
ಪ್ರಕೃತಿಗೆ ಆಜ್ಞೆಗಳಿವೆ, ಮಕ್ಕಳೂ ಕೂಡ ನಿಯಮಗಳಿಲ್ಲದೆ ಆಟವಾಡಲಾಗದು.




72

(ವಚನ. ರೋಮಾಪುರದವರಿಗೆ ೨:೧೩)
ಸತ್ಯ ವೇದವು ಹೀಗೆ ಹೇಳುತ್ತದೆ, ನ್ಯಾಯ ಪ್ರಮಾಣ ಕೇಳಿದ ಮಾತ್ರದಿಂದಲೇ ಯಾರೂ ದೇವರ ಸನ್ನಿದಿಯಲ್ಲಿ ನೀತಿವಂತರಾಗುವದಿಲ್ಲ.



73

ಅದನ್ನು ಅನುಸರಿಸುವವರೇ ನೀತಿವಂತರೆಂದು ನಿರ್ಣಯಿಸಲ್ಪಡುವರು. ರೋಮಾಪುರದವರಿಗೆ ೨:೧೩
ದೇವರ ಆಜ್ಞೆಗಳನ್ನು ತಿಳಿಯುವದು ಮಾತ್ರ ಪ್ರಧಾನವಲ್ಲ. ನಾವು ಅದಕ್ಕೆ ವಿಧೇಯರಾಗಬೇಕು.



74

(ವಚನ ಯೋಹಾನ ೧೪:೧೫)
ಯೇಸು ಹೀಗಂದನು, ನೀವು ನನ್ನನ್ನು ಪ್ರೀತಿಸುವುದಾದರೆ ನನ್ನ ಆಜ್ಞೆಯನ್ನು ಕೈಕೊಂಡು ನಡೆಯುವಿರಿ. ಯೋಹಾನ ೧೪:೧೫ ಯೇಸು ಹಳೆ ಒಡಂಬ ಡಿಕೆಯಿಂದ ತಿಳಿಸುತ್ತಾನೆ. ಆಜ್ಞೆಗಳನ್ನು ಕೈಕೊಳ್ಳಲು ಪ್ರೀತಿಯು ಆಧಾರವಾಗಿದೆ.



75

(ವಚನ ಮುತ್ತಾಯು ೨೨:೩೭–೪೦)
ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ಪೂರ್ಣಪ್ರಾಣದಿಂದಲೂ, ನಿನ್ನ ಪೂರ್ಣ ಬುದ್ದಿಯಿಂದಲೂ ಪ್ರೀತಿಸಬೇಕು.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?




76

ಈ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು.



77

ನಾವು ನಿಜವಾಗಿ ದೇವರನ್ನು ಹೃದಯ ಪೂರ್ವಕವಾಗಿ, ಪೂರ್ಣ ಬ
ುದ್ಧಿಯಿಂದಲೂ, ಪೂರ್ಣ ಪ್ರಯದಿಂದಲೂ ಪ್ರೀತಿಸಿದರೆ,



78

ಈ ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ ಪ್ರವಾದಿಗಳ ಗ್ರಂಥಕ್ಕೂ ಆಧಾರವಾಗಿದೆ.
ಮತ್ತಾಯ ೨೨:೩೭–೪೦


79

ನಾವು ನಿಜವಾಗಿ ದೇವರನ್ನು ಹೃದಯ ಪೂರ್ವಕವಾಗಿ, ಪೂರ್ಣ ಬ
ುದ್ಧಿಯಿಂದಲೂ, ಪೂರ್ಣ ಪ್ರಾಣದಿಂದಲೂ ಪ್ರೀತಿಸಿದರೆ,



80

ಮೊದಲ ೪ ಆಜ್ಞೆಗಳನ್ನು ಕೈಕೊಳ್ಳುವುದರಿಂದ ನಾವು ನಿಜದಲ್ಲಿ ಆ ಪ್ರೀತಿಯನ್ನು ವ್ಯಕ್ತ ಪಡಿಸುತ್ತೇವೆ.



81

ನಮ್ಮ ಜೀವಿತದಲ್ಲಿ ದೇವರು ಮೊದಲನೆಯವನು.



82

ನಮ್ಮ ಆರಾಧನೆಯು ಆತನಿಗೆ ಮಾತ್ರ ಮೀಸಲಿಡಬೇಕು.



83

ನಾವು ಆತನ ಹೆಸರನ್ನು ಗೌರವಿಸುತ್ತೇವೆ ಮತ್ತು ಭಕ್ತಿ ತೋರಿಸುತ್ತೇವೆ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



84

ನಾವು ಪ್ರತಿ ಸಬ್ಬತ್ತಿನಲ್ಲಿ ಆತನ ಜೊತೆ ಇರಲು ನಿರ್ಣಯ ಮಾಡಲು ಆಸಕ್ತಿಯಿಂದ ಇರುತ್ತೇವೆ.



85

ನಮ್ಮ ನೆರೆಯುವನನ್ನು ನಾವು ನಮ್ಮಂತೆ ಪ್ರೀತಿಸಿದರೆ, ನಿಜವಾಗಿ



86

ತಂದೆ ತಾಯಿಗಳಿಗೆ ಮರ್ಯಾದೆಯಿಂದ ಗೌರವ ತೋರಿಸುತ್ತೇವೆ.



87

ಜೀವವು ಬೆಲೆಯುಳ್ಳದ್ದು



88

ನೈತಿಕತೆಯನ್ನು ಕಾಪಾಡಿರಿ



89

ಇತರರ ಆಸ್ತಿಯನ್ನು ಗೌರವಿಸಿರಿ.



90

ಒಬ್ಬರಿಗೊಬ್ಬರು ಸಂಭಂಧದಲ್ಲಿ ಪ್ರಾಮಾಣಿಕರಾಗಿರಿ.



91

ಇನ್ನೊಬ್ಬರಿಗೆ ಸಂಭಂದ ಪಟ್ಟದ್ದನ್ನು ಆಶಿಸಬೇಡ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?


92

ವರ್ತನೆಯನ್ನು ಭಂದನದಲ್ಲಿಡಲು ೩ಕೋಟಿ ೫೦ಲಕ್ಷ ನಿಯಮಗಳು ಮಾನವರಿಂದ ಬರೆಯಲ್ಪಟ್ಟಿವೆ ಎಂದು ಅಂದಾಜು ಮಾಡಲಾಗಿದೆ.


93

ಆದರೆ ೧೦ ಕಟ್ಟಳೆಗಳಲ್ಲಿ, ಮಾನವ ವರ್ತನೆಯನ್ನು ಚೆನ್ನಾಗಿ ತಿಳಿಸುವ ದೇವರ ನಿಯಮಗಳು ಬರೆಯಲ್ಪಟ್ಟಿದೆ.
ದೇವರು ಮಾತ್ರವೇ ಇಂಥ ಒಂದು ಪರಿಪೂರ್ಣವಾದ ನ್ಯಾಯ ಪ್ರಮಾಣವನ್ನು ಬರೆಯಲು ಸಾಧ್ಯವಾಯಿತು.




94

(ವಚನ ಕೀರ್ತನೆ ೧೯:೭)
ಯೆಹೋವನ ನ್ಯಾಯ ಪ್ರಮಾಣವು ಲೋಪವಿಲ್ಲದ್ದು, ಅದು ಪ್ರಾಣವನ್ನು ಉಜ್ಜೀವಿಸ ಮಾಡುವಂಥದ್ದು. ಕೀರ್ತನೆ ೧೯:೭




95

(ವಚನ ಕೀರ್ತನೆ ೧೯:೧೧) ಅವುಗಳನ್ನು ಕೈಕೊಳ್ಳುವದರಿಂದ ಬಹಳ ಫಲ ಉಂಟಾಗುತ್ತದೆ. ಕೀರ್ತನೆ ೧೯:೧೧



96

ಸತ್ಯವೇದ ಪಾರಾಂಗತನಾದ ಆಗಸ್ಟ್ ಸ್ಟ್ರಾಂಗ್ ಈ ರೀತಿ ಬರೆದನು. ನ್ಯಾಯ ಪ್ರಮಾಣವು ದೇವರ ಸ್ವಭಾವದ ಒಂದು ಪ್ರತಿಯಾಗಿದೆ.



97

ಇಂದು ನಾವು ಹೀಗೆ ಹೇಳುತ್ತೇವೆ. ಹತ್ತು ಆಜ್ಞೆಗಳು ದೇವರ ಸ್ವಭಾವದ ಒಂದು ಚಿತ್ರಾಕಾರವಾಗಿವೆ. ಬದಲಾಗದ ಸ್ವಭಾವವಾಗಿದೆ.


98

ದೇವರ ನ್ಯಾಯ ಪ್ರಮಾಣದಲ್ಲಿ ಯಾವ ಬದಲಾವಣೆಯದರೂ, ಅದು ಪರಿಪೂರ್ಣತೆಗೆ ಕಡಿಮೆಯುಗಿ ಮಾಡಲ್ಪಡುತ್ತದೆ. ಒಂದು ಪರಿಪೂರ್ಣವಾದ ಆಜ್ಞೆ ಬದಲಾಗುವುದಿಲ್ಲ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



99


(ವಚನ ಲೂಕ ೧೬:೧೭)
ಯೇಸು ಇದನ್ನು ಹೇಳಿದಾಗ ಸತ್ಯವನ್ನೇ ಮಾತಾಡಿದನು.
ಧರ್ಮ ಶಾಸ್ತ್ರದೊಳಗಿಂದ ಒಂದು ಗುಡುಸಾದರೂ ಬಿದ್ದು ಹೋಗುವುದಕ್ಕಿಂತ ಆಕಾಶವೂ, ಭೂಮಿಯೂ ಅಳಿದು ಹೋಗುವುದು ಸುಲಭ. ಲೂಕ ೧೬:೧೭


100

ಆದರೆ ನೀವು ಹೀಗೆ ಹೇಳುವಿರಿ. ೧೦ ಕಟ್ಟಳೆಗಳು ಯಾವಾಗಲೂ ನನ್ನ ಸಂತೋಷವನ್ನು ತಡೆಗಟ್ಟಿ ನನ್ನ ಸುತ್ತಲೂ ಬೇಲಿಯ ಹಾಗಿದೆ ಎಂದು ಭಾವಿಸಿದೆನು. ಆತನ ನ್ಯಾಯ ಪ್ರಮಾಣವು ಮಾನವನಿಗೆ ಒಂದು ಹೊರೆಯ ನನ್ನಾಗಲಿ ಇನ್ನವೇ ಸಂತೋಷವನ್ನು ತಡೆಯವದಕ್ಕಾಗಲಿ ದೇವರು ಮಾಡಲಿಲ್ಲ.


101

ಅದಕ್ಕೆ ತನ್ನ ವಿರುದ್ಧವಾಗಿ ಅದು ದುಃಖ ಮತ್ತು ದೋಷದಿಂದ ಕಾಪಾಡುವ ಒಂದು ಗೋಡೆಯಾಗಿರಲು ದೇವರು ಇಚ್ಛಿಸಿದನು.
ಆತನ ನ್ಯಾಯ ಪ್ರಮಾಣ ಪ್ರತಿಯೊಬ್ಬರ ಸ್ವಾತಂತ್ರ್ಯವನ್ನು ಮತ್ತು ಎಲ್ಲೆಲ್ಲಿಯೂ ಸುರಕ್ಷತೆ ತರುತ್ತಾನೆಂದು ದೇವರು ಆಶಿಸಿದನು.



102

(ವಚನ ದರ್ವೋಪದೇಶಕಾಂಡ ೫:೨೯)
ಕರ್ತನು ಹೀಗಂದನು. ನನ್ನಲ್ಲಿ ಭಯಭಕ್ತಿಯುಳ್ಳವರಾಗಿ ನನ್ನ ಆಜ್ಞೆಗಳನ್ನು ಅನುಸರಿಸುವ ಮನಸ್ಸು ಯಾವಾಗಲೂ ಅವರಿಗೆ ಇದ್ದರೆ ಎಷ್ಟೋಮೇಲು.




103

ಆಗ ಅವರಿಗೂ, ಅವರ ಸಂತತಿಯವರಿಗೂ ಯಾವಾಗಲೂ ಶುಭ ಉಂಟಾಗುವುದು. ದರ್ವೋಪದೇಶಕಾಂಡ ೫:೨೯


104


ಸೇತುವೆಗಳ ಮೇಲೆ ಮತ್ತು ಬೆಟ್ಟಗಳ ರಸ್ತೆಗಳ ಪಕ್ಕದಲ್ಲಿ ನಮ್ಮನ್ನು ಅಪಾಯದಿಂದ ಕಾಪಾಡಲು ಕಬ್ಬಿಣದ ಸರಳು ತೊಲೆಗಳನ್ನು ಹಾಕುವಹಾಗೆ, ಜೀವನದ ಹಾದಿಯಲ್ಲಿ ನಮ್ಮನ್ನು ಕಾಪಾಡಲು ಮತ್ತು ನೋಡಿಕೊಳ್ಳಲು ದೇವರು ಆತನ ಆಜ್ಞೆಗಳನ್ನು ನಮಗೆ ಕೊಟ್ಟನು.



105


(ವಚನ ರೋಮಾಪುರದವರಿಗೆ ೩:೨೦)
ಆದರೆ ದೇವರು ಆತನ ಆಜ್ಞೆಗಳನ್ನು ಕೊಡಲು ಇನ್ನೊಂದು ಕಾರಣವಿದೆ.
ನ್ಯಾಯ ಪ್ರಮಾಣದಿಂದ ಪಾಪದ ಅರುಹು ಉಂಟಾಗುತ್ತದೆ.
ರೋಮಾಪುರದವರಿಗೆ ೩:೨೦

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



106

(ವಚನ ರೋಮಾಪುರದವರಿಗೆ ೭:೭)
ಪೌಲನು ಹೀಗೆ ಹೇಳಿದನು. ನ್ಯಾಯ ಪ್ರಮಾಣದಿಂದಲೇ ಹೊರತು ಪಾಪವೆಂಬುದು ಏನೋ ನನಗೆ ಗೊತ್ತಾಗುತ್ತಿರಲಿಲ್ಲ.



107

ಆಶಿಸಬಾರದೆಂದು ನ್ಯಾಯ ಪ್ರಮಾಣವು ಹೇಳದಿದ್ದರೆ ದುರಾಶೆಯೆಂದರೆ ಏನೋ ನನಗೆ ತಿಳಿಯುತ್ತಿದ್ದಿಲ್ಲ.
ರೋಮಾಪುರದವರಿಗೆ ೭:೭


108

ಒಬ್ಬ ರಾಜಕುಮಾರಿಯು, ಆಕೆಯ ಪ್ರಜೆಗಳಿಂದ ಆಕೆಯ ಬಹು ಸುಂದರಿಯೆಂದು ಹೊಗಳಲ್ಪಟ್ಟಳು.
ಒಂದು ದಿನ ಒಬ್ಬ ವ್ಯಾಪಾರಿಯು ಆಕೆಯ ಬಳಿಗೆ ಬಂದು ಒಂದು ಕನ್ನಡಿಯನ್ನು ಮಾರಿದನು.
ಆ ಕನ್ನಡಿಯನ್ನು ಆಕೆ ನೋಡಿದ ಕೂಡಲೇ ಅಸಹ್ಯವಾದ ಮೂಖವನ್ನು ನೋಡಿ, ಕನ್ನಡಿಯನ್ನೇ ಒಡೆದು ಚೂರು ಮಾಡಿದಳು.


109

ದೇವರ ನ್ಯಾಯ ಪ್ರಮಾಣ ಒಂದು ಕನ್ನಡಿಯ ಹಾಗಿದೆ, ನಾವು ಅದನ್ನು ನೋಡುವಾಗ, ರಾಜಕುಮಾರಿಯಂತೆ, ನಾವು ನೋಡುವದು ಇಷ್ಟವಿರಲಿಕ್ಕಿಲ್ಲ.


110

ನ್ಯಾಯ ಪ್ರಮಾಣವನ್ನು ನಾಶಮಾಡುವುದು ಇಲ್ಲವೇ ಅಲ್ಲಗಳೆಯುವದು ನಮ್ಮ ಸ್ಥಿತಿಯನ್ನು ಬದಲಾಯಿಸುವುದಿಲ್ಲ.


111

ನ್ಯಾಯ ಪ್ರಮಾಣವು ನಮ್ಮ ಪಾಪಗಳನ್ನು ಎತ್ತಿ ತೋರಿಸುತ್ತದೆ. ಆತನ ಆಜ್ಞೆಗಳಲ್ಲಿನ ಬುದ್ಧಿವಾದಗಳನ್ನು ನಾವು ಹಿಂಬಾಲಿಸಿದರೆ, ಒಂದು ಸಂತೋಷದ ದೋಷವಿಲ್ಲದ ಜೀವಿತವನ್ನು ಜೀವಿಸಲು ನಮಗೆ ಸಹಾಯ ಮಾಡುತ್ತದೆ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?


112

ನ್ಯಾಯ ಪ್ರಮಾಣವು ಪಾಪವನ್ನು ಗೆಲ್ಲಲು ಇಲ್ಲವೇ ದೋಷವನ್ನು ತೆಗೆಯಲು ನಮಗೆ ಶಕ್ತಿ ನೀಡುವುದಿಲ್ಲ. ಮುಂದೆ ನಾವು ಎಷ್ಟೋ ಒಳ್ಳೆದನ್ನು ಮಾಡಿದಾಗ್ಲೂ, ಹಿಂದೆ ಮಾಡಿದ ಪಾಪವನ್ನು ನಾವು ಅಳಿಸಲಾಗದು.
ನಾವು ಕ್ಷಮಾಪಣೆಯನ್ನು ಹೊಂದುವುದು ಹೇಗೆ?
ಮಾಡಿದ ಆಜ್ಞೆಯ ದಂಡನೆಯಾದ ಮರಣದಿಂದ ನಾವು ರಕ್ಷಿಸಲ್ಪಡುವುದು ಹೇಗೆ?


113


ಏದೆನ್ ತೋಟದ ಹೆಬ್ಬಾಗಿಲಿನಲ್ಲಿಯೇ, ದೇವರು ಅವಿಧೇಯತೆಯು ಮರಣವನ್ನು ತರುತ್ತದೆಂದು ಜ್ಞಾಪಿಸಿದನು. ಮರಣವನ್ನು ಅವಿಧೇಯನಿಗೆ ತರುತ್ತದೆ ಇಲ್ಲವೇ ಪಾಪಮಾಡಿದ ಪ್ರಾಣಿಗೆ ತರುತ್ತದೆಂದು ಸೂಚಿಸಿದನು. ಮಾನವನನ್ನು ರಕ್ಷಿಸಲು ದೇವರ ಯೋಜನೆಯಲ್ಲಿ ಪಾಪಿಯು ನಂಬಿಕೆಯನ್ನು ತೋರಿಸಲು ಒಂದು ಕುರಿಮರಿಯನ್ನು ಅರ್ಪಿಸಬೇಕಾಗಿತ್ತು.


114

ಮೀರಿದ ನ್ಯಾಯ ಪ್ರಮಾಣದ ಹಕ್ಕುಗಳಿಗೆ ತೃಪ್ತಿ ನೀಡಲು, ನಿಷ್ಕಳಂಕನಾದ ದೇವಕುಮಾರನು ಹೇಗೆ ಸಾಯಬೇಕೆಂದು ಆದಾಮನು ಅರ್ಥಮಾಡಿಕೊಳ್ಳಲು ಸಹಾಯ ನೀಡಲು ಅದು ದೇವರ ಮಾರ್ಗವಾಗಿತ್ತು.
ದೇವರ ಕುರಿಮರಿಯಾಗಿದ್ದ ಕ್ರಿಸ್ತನು, ಮಾನವನ ಶಿಕ್ಷೆಯನ್ನು ತೆಗೆದುಕೊಂಡು, ಆತನ ಮರಣದಲ್ಲಿ ಕಷ್ಟಪಡ ಬೇಕಾಗಿತ್ತು.



115

ನ್ಯಾಯ ಪ್ರಮಾಣವು ಯಾರನ್ನೂ ಪಾಪದಿಂದ ರಕ್ಷಿಸಲಾರದು.



116

(ವಚನ ಗಲಾತ್ಯ ೩:೨೧)
ಅಪೋಸ್ತಲನಾದ ಪೌಲನು ಹೀಗಂದನು ನ್ಯಾಯ ಪ್ರಮಾಣವು ಕೊಡಲ್ಪಟ್ಟಿದ್ದರೆ ಜೀವವನ್ನು ಕೊಡುತ್ತಿತ್ತು.



117

ಸಂದೇಹವಿಲ್ಲದೆ ಕರ್ಮ ಮಾರ್ಗದಿಂದ ನೀತಿ ಉಂಟಾಗುತ್ತಿತ್ತು.
ಗಲಾತ್ಯ ೩:೨೧
ನ್ಯಾಯ ಪ್ರಮಾಣವು ಕ್ಷಮೆಯನ್ನು ರಕ್ಷಣೆಯನ್ನು ತರುವುದಿಲ್ಲ. ಇದು ದೇವರ ಕೃಪೆಯಾಗಿದೆ.
ಕ್ರಿಸ್ತನ ತ್ಯಾಗಬಲಿಯ ಮೂಲಕ ನಾವು ನಿತ್ಯ ಜೀವವನ್ನು ಹೊಂದಬಹುದು.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



118

(ವಚನ ರೋಮಾಪುರದವರಿಗೆ ೬:೨೩)
ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ. ದೇವರ ಉಚಿತಾರ್ಥವಾದ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ.
ರೋಮಾಪುರದವರಿಗೆ ೬:೨೩
ನ್ಯಾಯ ಪ್ರಮಾಣವನ್ನು ಕೈಕೊಳ್ಳುವುದರಿಂದ ನಿತ್ಯ ಜೀವವನ್ನು ಸಂಪಾದಿಸಲು ಆಗದು.



119

(ವಚನ ಎಫೆಸ ೨:೮,೯)
ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ. ಅದು ದೇವರವರವೇ



120

ಅದು ಪುಣ್ಯ ಕ್ರಿಯೆಗಳಿಂದ ಉಂಟಾದದ್ದಲ್ಲ. ಆದುದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ.
ಎಫೆಸ ೨:೮,೯.


121

ನಾವು ಕೃಪೆಯಿಂದ ರಕ್ಷಿಸಲ್ಪಟ್ಟಿದ್ದರೆ ನಾವು ಅವಿಧೇಯತೆಯ ಜೀವಿತವನ್ನು ಜೀವಿಸಬಹುದೋ? ಇಲ್ಲವೇ ಇಲ್ಲ.



122

(ವಚನ, ರೋಮಾಪುರದವರಿಗೆ ೬:೧,೨)
ಪೌಲನು ಹೀಗೆ ಬರೆದನು. ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ?



123

ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವುದು ಹೇಗೆ? ರೋಮಾಪುರದವರಿಗೆ ೬:೧,೨
ಪಾಪದಿಂದ ರಕ್ಷಿಸಲ್ಪಡಲು ಆಶಿಸುವವರು ಮತ್ತು ದೇವರ ರಾಜ್ಯದಲ್ಲಿ ಒಂದು ಭಾಗವಾಗಿ ಆಶಿಸುವವರಿಗೆ ರಕ್ಷಣೆಯು ಕೊಡಲ್ಪಡುತ್ತದೆ.



124

ದೇವರ ನ್ಯಾಯ ಪ್ರಮಾಣ ಅಳಿದು ಹೋಯಿತೆಂದು ನಂಬುವ ಜನರಿದ್ದಾರೆ. ಸ್ವಲ್ಪ ಹೊತ್ತು ಇದನ್ನು ಕುರಿತು ಆಲೋಚಿಸಿರಿ.



125

ನ್ಯಾಯಪ್ರಮಾಣವಿಲ್ಲದಿದ್ದರೆ, ಪಾಪವಿರುತ್ತಿರಲಿಲ್ಲ, ಯಾಕೆಂದರೆ ನ್ಯಾಯ ಪ್ರಮಾಣವನ್ನು ಮೀರುವುದು ಪಾಪವಾಗಿದೆ.



126

ನ್ಯಾಯ ಪ್ರಮಾಣವಿಲ್ಲದಿದ್ದರೆ, ನಮಗೆ ಕೃಪೆಯು ಅಗತ್ಯವಿಲ್ಲ. ದೇವರ ನ್ಯಾಯ ಪ್ರಮಾಣವನ್ನು ಮೀರಿದಾಗ, ಕೃಪೆಯು ದೇವರ ಪ್ರೀತಿಯ ಕರುಣೆಯಾಗಿತ್ತು.



127

ಕೃಪೆ ಬೇಡದಿದ್ದರೆ ಶಿಲುಭೆಯು ನಮಗೆ ಬೇಕಿಲ್ಲ.



128

ಶಿಲುಭೆಯ ಅಗತ್ಯವಿಲ್ಲದಿದ್ದರೆ, ನಮಗೆ ಒಬ್ಬ ರಕ್ಷಕನು ಅಗತ್ಯವಿಲ್ಲ. ನ್ಯಾಯ ಪ್ರಮಾಣ ಬೇಡವೆಂದರೆ, ಪಾಪವನ್ನು, ಕೃಪೆಯನ್ನು, ಶಿಲುಭೆಯನ್ನು ಮತ್ತು ಒಬ್ಬ ರಕ್ಷಕನನ್ನು ತಳ್ಳಿಹಾಕುತ್ತೇವೆ. ಪಾಪದ ಸಾಲ ತೀರಿಸಲು ಆತನ ಕೃಪೆಯಿಂದ ನಮ್ಮನ್ನು ರಕ್ಷಿಸಲು ಶಿಲುಭೆಯ ಮೇಲೆ ಸತ್ತ ರಕ್ಷಕನ ಅಗತ್ಯ ಎಷ್ಟಿದೆ ನೋಡಿರಿ. ಇದು ತಾನೆ ಸುವಾರ್ತೆ. ಕೃಪೆಯು ದೇವರ ನ್ಯಾಯ ಪ್ರಮಾಣವನ್ನು ತಳ್ಳಿ ಹಾಕುವದಿಲ್ಲ.
ದೇವರ ಕೃಪೆಯಿಂದ ದೇವರ ನ್ಯಾಯ ಪ್ರಮಾಣವನ್ನು ಕೈಕೊಳ್ಳಲು ನಾವು ಆಶಿಸುತ್ತೇವೆ.


129

ಒಬ್ಬ ಕೈದಿ ಮರಣದಂಡನೆಗಾಗಿ ಕಾದಿದ್ದರೆ


130

ಕ್ಷಮೆಯನ್ನು ಪಡೆದು, ಬಿಡುಗಡೆ ಹೊಂದಿದ್ದರೆ, ಯಾವ ಕಾನೂನಿಲ್ಲದೆ ಜೀವಿತವನ್ನು ಜೀವಿಸಲು ಇದ್ದಾನೆಂದು ಅರ್ಥವನ್ನು ನಮಗೆ ಕೊಡುತ್ತದೋ? ಇಷ್ಟ ಪ್ರಕಾರ ಸ್ವಂತ ಕಾರ್ಯ ಮಾಡಬಹುದೋ? ಎಂದಿಗೂ ಇಲ್ಲ.


131

ಆತನಿಗೆ ಕ್ಷಮೆ ದೊರೆತದ್ದರಿಂದ, ಆತನು ದೇಶದ ನಿಯಮಗಳನ್ನು ಎತ್ತಿಹಿಡಿಯಲು ಬದ್ದನಾಗಿದ್ದಾನೆ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



132

ಬಹು ಪ್ರಾಮುಖ್ಯವಾಗಿ, ದೇವರ ನ್ಯಾಯಪ್ರಮಾಣವು ನಮ್ಮ ಪಾಪಗಳನ್ನು ತೋರಿಸುತ್ತದೆ ಮತ್ತು ಒಬ್ಬ ರಕ್ಷಕನ ಅಗತ್ಯವಿದೆ. ಎಂಬ ಭಾವನೆಗೆ ನಮಗೆ ಸಹಾಯ ನೀಡುತ್ತದೆ.
ನಾವು ಕ್ರಿಸ್ತನನ್ನು ನಮ್ಮ ರಕ್ಷಕನೆಂದು ಮತ್ತು ಕರ್ತನೆಂದು ಅಂಗೀಕರಿಸುವಾಗ, ಆತನು ಕ್ಷಮೆಯನ್ನು ಒದಗಿಸುತ್ತಾನೆ ಮತ್ತು ಆತನು ವಾಗ್ದಾನಮಾಡಿದ ಹಾಗೆ ಆತನ ಆಜ್ಞೆಗಳನ್ನು ಕೈಕೊಳ್ಳಲು ಶಕ್ತಿಯನ್ನು ನೀಡುತ್ತಾನೆ.



133

(ವಚನ ಇಬ್ರಿಯ ೮:೧೦)
ನನ್ನ ಆಜ್ಞೆಗಳನ್ನು ಅವರ ಮನಸ್ಸಿನಲ್ಲಿ ಇಡುವೆನು, ಅವರ ಹೃದಯದ ಮೇಲೆ ಅವುಗಳನ್ನು ಬರೆಯುವೆನು
ಇಬ್ರಿಯ ೮:೧೦


134

ನೀವು ಆಶಿಸುವ ಯಾವುದನ್ನಾದರೂ ಮಾಡುವದು ನಿಮಗೆ ಸುಲಭವಾಗಿದೆಯಲ್ಲವೇ?
ಆತನನ್ನು ಹಿಂಬಾಲಿಸಲು ಆರಿಸಿದವರಿಗೆ ಕರ್ತನು ಅದನ್ನೇ ವಾಗ್ದಾನ ಮಾಡಿರುತ್ತಾನೆ.
ಆತನ ಆಜ್ಞೆಗಳನ್ನು ಅವರ ಹೃದಯದಲ್ಲಿ ಬರೆಯುವನು, ಅದರಿಂದ ಅವರು ಕೈಕೊಳ್ಳಲು ಇಷ್ಟಪಡುವರು.



135


(ವಿಡಿಯೋ ೮ ಸೆಕೆಂಡುಗಳು)
ಈ ವಿಧವಾಗಿ ಮಾತ್ರ ಮಾನವ ವಿಧೇಯನಾಗಲು ಮತ್ತು ದೇವರನ್ನು ಹಿಂಬಾಲಿಸಲು ಸಾಧ್ಯವಿದೆ.ಆತನ ತಂದೆಯ ಮೇಲಿನ ಆತನ ಪ್ರೀತಿಯಿಂದ ಯೇಸು ಆಜ್ಞೆಗಳನ್ನು ಕೈಕೊಳ್ಳಲು ಸಾಧ್ಯವಾಯಿತು.



136

(ವಚನ. ಯೋಹಾನ ೧೫:೧೦)
ಆತನು ಹೀಗಂದನು. ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿದ್ದೇನೆ.
ಯೋಹಾನ ೧೫:೧೦

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



137

(ವಚನ, ಯೋಹಾನ ೧೪:೧೫)
ಆಜ್ಞೆಗಳನ್ನು ಕೈಕೊಳ್ಳುವುದರ ಮೂಲಕ ಆತನಿಗಾಗಿ ನಮ್ಮ ಪ್ರೀತಿಯನ್ನು ತೋರಿಸಲು ಯೇಸು ಕೇಳುತ್ತಾನೆ.
ನೀವು ನನ್ನನ್ನು ಪ್ರೀತಿಸುವುದಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ.
ಯೋಹಾನ ೧೪:೧೫


138

ದೇವರ ಚಿತ್ತಕ್ಕೆ ವಿಧೇಯತೆ ಮತ್ತು ಪ್ರೀತಿಯ ಸಿದ್ಧಾಂತವು ಪರಿಷ್ಕಾರವಾಗಿ ಒಂದು ಚಳಿಗಾಲದ, ಕತ್ತಲೆಯ ರಾತ್ರಿಯಲ್ಲಿ ಒಂದು ತೋಟದಲ್ಲಿ ಒಲಿವ ಮರದ ಕೆಳಗೆ ತೋರಿಸಲ್ಪಟ್ಟಿತು.
ಆತನ ಮುಖದಲ್ಲಿ ರಕ್ತವು ಹರಿಯುತ್ತಿದ್ದಾಗ ದೇವಕುಮಾರನು ಪ್ರಾರ್ಥಿಸಿದನು.



139

(ವಚನ, ಮತ್ತಾಯ ೨೬:೩೯)
ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟುಹೋಗಲಿ. ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ. ಮಾನವ ಸಂತತಿಯು ಹೋರಾಟದ ವಿಧಿಯ ತಕ್ಕಡಿಯಲ್ಲಿ ತೂಗುವಹಾಗಿತ್ತು.
ಅಪರಾಧ ಮಾಡಿದ ಲೋಕವು ರಕ್ಷಿಸಲ್ಪಡಬೇಕು ಇಲ್ಲವೇ ತಪ್ಪಿಹೋಗಬೇಕು.


140

ಈ ಯವನಸ್ತನಾದ ಗಲಾಲಿಯದವನು ಜೀವನದ ಎಲ್ಲಾ ಆಶೆಯನ್ನು ತೊರೆದು ಮಾನವನ ನೆರವೇರಿಕೆಯನ್ನು ಬದಿಗೊತ್ತಿ ಕಲ್ವೇರಿಯಲ್ಲಿ ಸಾಯುವನೋ?
ಆತನು ಹಣೆಯಿಂದ ಬೆವರನ್ನು ಒರಿಸಿ, ಪಾಪಿಯು ತನ್ನ ಸ್ವಂತ ಪಾಪಗಳಿಗೆ ಕಷ್ಟಪಡಲೆಂದು ಬಿಟ್ಟುಬಿಡುವನೋ?


141

ಇಲ್ಲವೇ ನಮಗಾಗಿ ಶಿಲುಬೆಯನ್ನು ಹೊರುವನೋ. ಆ ಆರಿಸುವಿಕೆಯನ್ನು ಮಾಡಿ, ನಮ್ಮ ಪಾಪಗಳಿಗಾಗಿ ಸತ್ತನು. ನಮಗೆ ಕ್ಷಮೆ ನೀಡಲು ಆತನು ತನ್ನ ರಕ್ತವನ್ನು ಚೆಲ್ಲಿದನು. ನಮ್ಮ ಮರಣವನ್ನು ಆತನು ಅನುಭವಿಸಿ ಸತ್ತನು, ಇದರಿಂದ ಆತನ ಜೊತೆ ಸದಾ ಜೀವಿಸಲು ಸಾಧ್ಯವಿದೆ.


142

ನಮ್ಮ ಪಾಪಗಳಿಗಾಗಿ ಕ್ರಿಸ್ತನು ಕ್ರಯ ಕೊಟ್ಟದ್ದರಿಂದ ಈಗಲೇ ಆತನ ತ್ಯಾಗ ಬಲಿಯ ಮೂಲಕ ಕ್ಷಮೆಯನ್ನು ಪಡೆಯಬಹುದು.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?


143

ಕಲ್ವೇರಿಯ ಬೆಟ್ಟದಲ್ಲಿ ಹಳೆಯ ಮೊರಡಾದ ಶಿಲುಭೆಯು ಆ ಕ್ರಮದ ಒಂದು ನಿತ್ಯ ಜ್ಞಾಪಕಾರ್ಥವಾಗಿದೆ. ಮೀರಿದ ಆಜ್ಞೆಯ ಹಕ್ಕುಗಳಿಗೆ ತೃಪ್ತಿ ನೀಡಲು ದೇವರು ಕ್ರಯ ಕೊಟ್ಟು, ತಪ್ಪಿತಸ್ಥನಾದ ಮನುಷ್ಯನನ್ನು ರಕ್ಷಿಸಲು ಇಷ್ಟವುಳ್ಳವನಾದನು.



144

ದೇವರ ನ್ಯಾಯಪ್ರಮಾಣ ಅಳಿದು ಇಲ್ಲವೇ ಬದಲಾಗಿದ್ದರೆ, ಯೇಸು ಸಾಯಬೇಕಾದ ಅಗತ್ಯವಿರಲಿಲ್ಲ.ಕಲ್ವೇರಿಯು ಅಗತ್ಯವಾಗಿ ಬೇಕಾಗಿರುತ್ತಿರಲಿಲ್ಲ.



145

ಆದರೆ ದೇವರು ಅಪರಾದ ಮಾಡಿದ ಮಾನವನ ಪಾಪವನ್ನು ಮುಚ್ಚಲಾಗಲಿಲ್ಲ.




146

ನ್ಯಾಯ ಪ್ರಮಾಣವನ್ನು ಬದಲಿಸಲಾಗಲಿಲ್ಲ.


147

ಆದಕಾರಣ ಪಾಪಮಾಡಿದ ಮನುಷ್ಯನಿಗೆ ಒಬ್ಬ ರಕ್ಷಕನು ಅಗತ್ಯ. ನಮಗೆ ಬದಲಾಗಿ ಅತನ ಒಬ್ಬನೇ ಮಗನನ್ನು ಸಾಯಲು ಒಪ್ಪಿಕೊಂಡ ಆತನ ಪ್ರೀತಿಗಾಗಿ ದೇವರಿಗೆ ದನ್ಯವಾದಗಳನ್ನು ಸಲ್ಲಿಸಿರಿ.




148

(ವಚನ, ಯೋಹಾನ ೩:೧೬)
ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು.




149

ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.


150

ಪ್ರಕಟನೆಯ ಪುಸ್ತಕವು ಯೇಸುವಿನ ೨ನೇ ಬರೋಣದಲ್ಲಿ ಸಂದಿಸಲು ಸಿದ್ಧರಾಗಿರುವ ಜನರನ್ನು ಮತ್ತು ಪರಲೋಕದ ಪಟ್ಟಣದಲ್ಲಿ ಆತನ ಜೊತೆ ಸದಾ ಇರಲು ವಿವರಣೆ ನೀಡುತ್ತದೆ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?



151

(ವಚನ ಪ್ರಕಟನೆ ೧೪:೧೨)
ಇವರನ್ನು ಕುರಿತು ದೇವರು ಹೀಗೆ ಹೇಳುತ್ತಾನೆ. ಇದರಲ್ಲಿ ದೇವರ ಆಜ್ಞೆಗಳನ್ನು, ಕೈಕೊಂಡು ನಡೆಯುತ್ತಿರುವ ದೇವಜನರ ತಾಳ್ಮೆಯು ತೋರಿ ಬರುತ್ತದೆ. ಪ್ರಕಟನೆ ೧೪:೧೨



152

(ವಚನ ಪ್ರಕಟನೆ ೧೪:೧೪)
೧೪ನೇ ವಚನದಲ್ಲಿ ಯೋಹಾನನು ಹೇಗೆ ಹೇಳುತ್ತಾನೆ.
ನಾನು ನೋಡಲಾಗಿ ಇಗೋ, ಪ್ರಕಾಶ ಮಾನವಾದ ಒಂದು ಮೇಘವು ನನಗೆ ಕಾಣಿಸಿತು. ಆ ಮೇಘದ ಮೇಲೆ ಮನುಷ್ಯಕುಮಾರ ನಂತಿದ್ದವನೊಬ್ಬನು, ಕೂತಿರುವದನ್ನು ಕಂಡೆನು.



153

ಆತನ ತಲೆಯ ಮೇಲೆ ಬಂಗಾರದ ಕಿರೀಟವೂ, ಆತನ ಕೈಯಲ್ಲಿ ಹದವಾದ ಕುಡುಗೋಲೂ ಇದ್ದವು.
ಕರ್ತನು ಲೋಕದ ಕೊಯ್ಲಿಗಾಗಿ ಬರುವ ಒಂದು ವಿವರಣೆಯಗಿದೆ.


154

ಸಭೆಯ ಚರಿತ್ರೆಯ ವಿಚಾರವಾಗಿ ಪ್ರಕಟನೆಯ ಪುಸ್ತಕದಲ್ಲಿ ಯೋಹಾನನಿಗೆ ಯೇಸು ಕೊಟ್ಟ ದೊಡ್ಡ ಪ್ರವಾದನೆಯಲ್ಲಿ ಕೊನೆಯ ಉಳಿದ ದೇವರ ಸತ್ಯ ಸಭೆಯು ಈ ಲೋಕದಲ್ಲಿ ಈ ರೀತಿ ವಿವರಣೆ ನೀಡಿದೆ ಎಂದು ಆತನು ಹೇಳುತ್ತಾನೆ.



155

(ವಚನ ಪ್ರಕಟನೆ ೧೨:೧೭)
ಆಗ ಘಟಸರ್ಪನು ಸ್ತ್ರೀಯ ಮೇಲೆ ಕೋಪಿಸಿಕೊಂಡು ಆಕೆಯ ಸಂತಾನದವರಲ್ಲಿ ಉಳಿದವರ ಮೇಲೆ ಯುದ್ಧ ಮಾಡುವದಕ್ಕೆ ಹೊರಟನು.



156

ದೇವರ ಆಜ್ಞೆಗಳನ್ನು ಕೈಕೊಂಡು ನಡೆದು, ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವವರ ಮೇಲೆ ಯುದ್ಧಕ್ಕೆ ಹೊರಟನು. ಪ್ರಕಟನೆ ೧೨:೧೭



157

ಸತ್ಯವೇದದ ಕೊನೆಯ ಪುಸ್ತಕದಲ್ಲಿದೆ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?


158

ದೇವಜನರು ಅವರ ಸೃಷ್ಟಿಕರ್ತನನ್ನು ಮತ್ತು ಅವರ ವಿಮೋಚಕನನ್ನು ಹೆಚ್ಚಾಗಿ ಪ್ರೀತಿಸುತ್ತಾರೆ. ಆತನು ಆಶಿಸುವದನೆಲ್ಲಾ ಮಾಡಲು ಅವರು ಆಶಿಸುತ್ತಾರೆ.
ಆತನ ಚಿತ್ತದಂತೆ ಮಾಡುವುದರಿಂದ ಅವರು ತಮ್ಮ ಪ್ರೀತಿಯನ್ನು ತೋರಿಸುತ್ತಾರೆ.
ಆತನ ಚಿತ್ತ ಆತನ ಆಜ್ಞೆಗಳಲ್ಲಿ ಇದೆ. ಎಂದು ಅವರು ತಿಳಿದುಕೊಳ್ಳುತ್ತಾರೆ.
ಅವರ ಪಾಪಗಳಿಂದ ಅವರನ್ನು ರಕ್ಷಿಸಲು ಹೆಚ್ಚಾಗಿ ಮಾಡಿದ ಕಾರ್ಯಗಳಿಗಾಗಿ ಆತನಿಗೆ ವಿಧೇಯತೆ ತೋರಿಸುತ್ತಾರೆ. ಕೈಗಳನ್ನು ಚಾಚಿದವನಾಗಿ ಯೇಸು ಬನ್ನಿರೆಂದು ಕರೆಯುತ್ತಾನೆ. ಆತನು ಇನ್ನೂ ಕರೆಯುತ್ತಿದ್ದಾನೆ.
ಆತನಿಗಾಗಿ ಜೀವಿಸಲು ನಮಗೆ ಶಕ್ತಿ ನೀಡಲು ಆತನು ಆಶಿಸುತ್ತಾನೆ.



159

(ವಚನ, ಪ್ರಕಟನೆ ೨೨:೧೭)
ನಮ್ಮ ಪಾಪಗಳನ್ನು ಆತನು ತೊಳೆಯಲು ಆಶಿಸುತ್ತಾನೆ.
ಆತನು ಬೇಡುವ ಸ್ವರ ಇನ್ನೂ ಕರೆಯುತ್ತಿದೆ.
ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ. ಪ್ರಕಟನೆ ೨೨:೧೭


160

ಒಬ್ಬ ಬೋಧಕರು ಒಂದು ದೊಡ್ಡ ಪಟ್ಟಣದ ಹೊರವಲಯದಲ್ಲಿದ್ದ ಒಂದು ಮನೆಯನ್ನು ಸಂಧಿಸಿದರು. ಆ ಮನೆಯ ಹೆಂಗಸು ದಯಾ ಪರಾಳಾಗಿ ದೃಢವಾಗಿದ್ದಳು. ನಾನು ಸತ್ಯವೇದ ಇಲ್ಲವೇ ಕ್ರೈಸ್ತ ಧರ್ಮದ ಮೇಲೆ ಆಸಕ್ತಿ ಮೂಡಿಸಲು ಸಾಧ್ಯವೇ ಇಲ್ಲ ಎಂದಳು. ಒಂದು ರಾತ್ರಿ ಬಂದಳು, ನನ್ನ ಯಜಮಾನರಿಗೆ ಸತ್ಯವೇದದ ವಿಚಾರ ಕಲಿಯಲು ತುಂಬಾ ಆಸಕ್ತಿ ಇದೆ. ನೀವು ಹಿಂದಕ್ಕೆ ಬಂದು ಆತನನ್ನು ಸಂಧಿಸಿರಿ ಎಂದಳು.
ಭೋಧಕರು ಒಂದು ಶನಿವಾರ ರಾತ್ರಿ ಬಂದರು. ಅದು ಕೆಲಸದ ದಿನವಲ್ಲದ್ದರಿಂದ ಆಕೆಯ ಗಂಡನು ಮದ್ಯಾಹ್ನವನ್ನು ಜೂಜಾಟದಲ್ಲಿ ಸ್ನೇಹಿತರ ಜೊತೆ ಹೋಟೇಲಿನಲ್ಲಿ ಕಳೆಯುತ್ತಿದ್ದನು.
ಅತನು ಮಾತಾಡುವ ಸ್ವಭಾವದವನು. ಮಧ್ಯಪಾನವು ಹೆಚ್ಚಾಗಿ ಮಾತಾಡಲು ಪ್ರಾರಂಭಮಾಡುತ್ತದೆ. ಸ್ವಲ್ಪ ಮಾತ್ರ ಉತ್ತರ ನೀಡುತ್ತದೆ.
ನನ್ನಲ್ಲಿ ಒಂದು ವೇದವಿದೆ, ನೀವು ನನ್ನ ವೇದವನ್ನು ನೋಡಬೇಕು.
ಮದುವೆಗೆ ಹೋದಾಗ ನನ್ನ ತಾಯಿ ನನ್ನ ಪೆಟ್ಟಿಗೆಯಲ್ಲಿ ಹಾಕಿದಳು.
ಪ್ರಿಯಳೇ, ನನ್ನ ಸತ್ಯವೇದ ಎಲ್ಲಿ ಎಂದನು? ಸತ್ಯವೇದವನ್ನು ಹೆಚ್ಚುಕಾಲ ಹುಡುಕಿದಾಗ ಬರೇ ಪ್ರಾರ್ಥನೆ ಪುಸ್ತಕವು ಸಿಕ್ಕಿತು. ಸತ್ಯವೇದವು ಸಿಕ್ಕಲಿಲ್ಲ.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?


161

ಮಧ್ಯಪಾನ ಆತನ ಸಮಸ್ಯೆಯು ಮಾತ್ರವಲ್ಲ. ಜೂಜಾಟವೂ ಅದೇ ತರವಾದ ಹಾಳುಮಾಡುವಂಥದ್ದಾಗಿದೆ. ಅದು ಮಾತ್ರವಲ್ಲದೆ ಧೂಮಪಾನವು ಕೂಡ, ಇದರ ಜೊತೆಯಲ್ಲಿ ಬೇರೆ ಅಭ್ಯಾಸಗಳು ಆತನಿಗೂ ಆತನ ಹೆಂಡತಿಗೂ ಒಂದು ಅಂತರವನ್ನು ತಂದಿತ್ತು. ಆಕೆಯು ತನ್ನ ಚೀಲಗಳನ್ನು ಸರಿಮಾಡಿಕೊಂಡು ಮನೆಯಿಂದ ಹೋಗಲು ಸಿದ್ದಳಾದಳು. ಅವರಿಬ್ಬರೂ ಬೇರೆಯಾಗಲು ಯೋಚನೆ ಮಾಡುತ್ತಿದ್ದರು, ಕಾರ್ಯಗಳು ಬ ಹಳ ಕಷ್ಟದ ಪರಿಸ್ಥಿತಿಯಲ್ಲಿದ್ದವು. ಆದರೆ ಆ ವ್ಯಕ್ತಿಯ ಹೃದಯದಲ್ಲಿ ಬ ಲವಾದ, ಉತ್ತಮವಾದ ಒಂದು ಆಶೆಯಿತ್ತು. ಮದ್ಯಪಾನವು ಅದನ್ನು ಇಳಿಸಲಾಗಲಿಲ್ಲ. ತಿರುಗಿ ಭೋದಕರು ಸೋಮವಾರ ರಾತ್ರಿ ಸಂಧಿಸುತ್ತೇನೆ. ಆ ಸಮಯದಲ್ಲಿ ವಾರಕ್ಕೆ ಒಂದಾವರ್ತಿ ವೇದವನ್ನು ಕಲಿಯೋಣವೆಂದು ತಿಳಿಸಿದರು. ಪ್ರಾರಂಭಮಾಡಿದರು.


162

ವಾರ ವಾರ ದೇವರ ವಾಕ್ಯದಿಂದ ಮೂಲಾಂಶಗಳು ತಿಲಿಸಲ್ಪಡುವಾಗ, ಶಿಲುಭೆಯ ಆಹ್ವಾನವು ಆತನಲ್ಲಿ ಕೆಲಸ ಮಾಡಲು ಪ್ರಾರಂಭಿಸಿತು. ಕ್ರಿಸ್ತನು ಆತನ ಪವಿತ್ರಾತ್ಮನ ಮೂಲಕ ಇನ್ನೊಂದು ಅಗತ್ಯವಿರುವ ಮನೆಗೆ ಹೋದನು. ಆ ರಾತ್ರಿ ಅದ್ಭುತವಾಗಿತ್ತು. ಆ ವ್ಯಕ್ತಿ ಹೀಗೆ ಹೇಳಿದನು. ಈ ರಾತ್ರಿ ಇನ್ನೂ ಹೆಚ್ಚಿಗೆ ಹೊತ್ತು ಇರು. ನನ್ನ ಹೆಂಡತಿ ಈಗ ಮಲಗುತ್ತಾಳೆ. ನಾನು ಮತ್ತು ನೀವು ಇಬ್ಬರೂ ಒಟ್ಟಾಗಿ ಸೇರಿ ಮಾತಾಡುವ ಎಂದನು.

೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?


163

ನಂತರ ಮರೆಯಾಚದೆ, ಸರಿಯಾದ ರೀತಿ ಪ್ರಾರಂಭವಾದ ಜೀವಿತದ ವ್ಯಸನಕರವಾದ ಜೀವನದ ಕಥೆಯನ್ನು ಬೋಧಕರಿಗೆ ಹೇಳಿದನು. ಆತನು ಒಳ್ಳೆಯ ಕ್ರೈಸ್ತ ಕುಟುಂಬದಲ್ಲಿ ಹುಟ್ಟಿದನು. ಯವನಸ್ತರ ಬಲಾತ್ಕಾರಗಳು ನನ್ನ ಕೈಯಿಂದ ತಪ್ಪಿಸಿಕೊಂಡವು. ಭಂದನದಲ್ಲಿಡಲಾಗಲಿಲ್ಲ. ಇನ್ನೊಬ್ಬ ಕೆಟ್ಟ ಕೂಮಾರನು ಬೀದಿಗೆ ಹೋದನು, ಅಲ್ಲಿನ ಕಾರ್ಯಗಳು ದೂರ ದೇಶಕ್ಕೆ ನಡಿಸಿದವು.

ಸಭೆಯನ್ನು ಮರೆತೆನು, ಸತ್ಯವೇದವನ್ನು ಲಕ್ಷಿಸಲಿಲ್ಲ, ಕ್ರಿಸ್ತನು ಬರೇ ಸೋಮಾರಿಯ ಪ್ರತಿಜ್ಞೆಗಳಿಗೆ ಕರೆದನು.

ಆದರೆ ಬೋಧಕರೇ, ನನಗೆ ನೀವು ಏನು ಮಾಡಿದಿರಿ? ಅದು ನಾನು ತಿಳಿಯಲು ಆಶಿಸುತ್ತೇನೆ. ನಾನು ೪ ವಾರಗಳಿಂದ ಕುಡಿಯುತ್ತಿಲ್ಲ ಮತ್ತು ಪಂದ್ಯ ಕಟ್ಟಲಿಲ್ಲ. ಈ ೪ ವಾರಗಳು ದೇವರ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಲಿಲ್ಲ. ಅರ್ದ ಸೇರಿದ ಸಿಗರೇಟನ್ನು ಬೆಂಕಿಗೆ ಹಾಕಿ ಮುಂದುವರಿಸಿದನು. ಸಿಗರೇಟುಗಳು ನನಗೆ ರುಚಿತೋರುವುದಿಲ್ಲ. ನಾನು ಬಿಡಲಿದ್ದೇನೆ. ಇದಕ್ಕಿಂತಲೂ ಹೆಚ್ಚಿನ ಅದ್ಭುತ ಒಂದಿದೆ. ನನ್ನ ಹೆಂಡತಿ ಚೀಲದಲ್ಲಿ ಹಾಕಿದ್ದ ವಸ್ತುಗಳನ್ನು ತೆಗೆದಳು. ೩ ವಾರಗಳಿಂದ ಹೀಗೆ ಮಾಡುತ್ತಾಳೆ.

ಈ ಬೆಳಿಗ್ಗೆ ಗೇಟಿನ ಬಳಿ ಬಂದು ಅನೇಕ ವರ್ಷಗಳ ನಂತರ ಮೊದಲ ಬಾರಿಗೆ ಬಂದು, ಮುತ್ತಿಟ್ಟು, ವಂದನೆಯನ್ನು ಹೇಳಿದಳು.

ಹೌದು, ಆಕೆ ಹಾಗೆ ಮಾಡಿದಳು, ಬೋಧಕರೇ ನಾನು ಚಕಿತಗೊಂಡೆನು. ನನ್ನನ್ನು ನೋಡಿ ನಗಾಡಿ, ಹೊಸ ಜಾಕ್‌ನನ್ನು ನಾನು ಇಷ್ಟ ಪಡುತ್ತೇನೆ ಅಂದಳು.

ಈಗ ನನಗೆ ಏನಾಯಿತು? ಸೋಮವಾರದ ರಾತ್ರಿಯ ಸತ್ಯವೇದ ಪಾಠದಿಂದ ಇದು ಆಗಿದೆ ಎಂದು ನೆನಸುತ್ತೇನೆ ಅಂದನು.


164

ಬೋಧಕರು ಹೀಗಂದರು, ನಾನು ಸ್ವತಃ ಇದಕ್ಕಾಗಿ ಏನೂ ಮಾಡಲಿಲ್ಲ. ಆದರೆ ಸತ್ಯವೇದವು ಎಲ್ಲವನ್ನೂ ವಿವರಿಸುತ್ತದೆಂದು ನಂಬುತ್ತೇನೆ. ೨ಕೊರಿಂಥ ೫:೧೭ಕ್ಕೆ ತಿರುಗಿಸಿ ಓದಲಾರಂಭಿಸಿದರು. ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.

ನಿಧಾನವಾಗಿ ಹೊಸ ಜಾಕ್ ಆ ವಚನವನ್ನು ತಾನೇ ಓದಿದನು. ನೂತನ ಸೃಷ್ಟಿ ನೂತನ ಬೋಧಕರೇ ನಿಮಗೆ ಸರಿಯಾಗಿ ತಿಳಿದಿದ್ದರೆ, ಈ ರಾತ್ರಿ ನಾನು ಹೊಸ ಜಾಕ್ ಆಗಿದ್ದೇನೆ.

ಹೌದು, ಸ್ನೇಹಿತರೇ, ಯೇಸು ಕ್ರಿಸ್ತನು ದೇವರ ದೈವಿಕ ಕುಮಾರನು, ಆತನೊಬ್ಬನಿಗೆ ಸ್ತ್ರೀ ಪುರುಷರನ್ನು ಬದಲಿಸಲು ಶಕ್ತಿ ಇದೆ.

ಯೇಸು ನಿಮ್ಮ ಜೀವಿತಗಳನ್ನು ಬದಲಿಸಲು ಆಶಿಸುತ್ತಾನೆ. ಆತನ ಆಜ್ಞೆಗಳನ್ನು ಕೈಕೊಳ್ಳಲು, ಕೃಪೆ ಮತ್ತು ಶಕ್ತಿಯನ್ನು ಕೊಡಲು ಆತನು ಆಶಿಸುತ್ತಾನೆ. ನೀವು ಬಲಹೀನರಾಗಿ ತೋರಬಹುದು, ಆದರೆ ಯೇಸು ಬ ಲಾಢ್ಯನಾಗಿರುತ್ತಾನೆ. ಹಿಂದೆ ನೀವು ಏನು ಮಾಡಿದ್ದರೂ ಸರಿ, ಯೇಸು ನಿಮ್ಮನ್ನು ಕ್ಷಮಿಸಿ, ಶುಚಿಮಾಡುವನು. ಒಂದು ಹೊಸ ಜೀವಿತವನ್ನು ಜೀವಿಸಲು ಆತನ ಬಲವನ್ನು ನಿಮಗೆ ಕೊಡುತ್ತಾನೆ. ಯಾವುದೂ ನಿಮ್ಮನ್ನು ಹಿಂದಕ್ಕೆ ಎಳೆಯಬಾರದು.

ಯೇಸು ಕರೆಯುತ್ತಿದ್ದಾನೆ. ಮನೆಗೆ ಬರಲು ಆತನು ಕರೆಯುತ್ತಿದ್ದಾನೆ. ನೀನು ಮೌನವಾಗಿ ಮೊಣಕಾಲೂರಿ ಹೇಳುವಿರಾ. ಕರ್ತನೇ ಹೌದು ಬರುತ್ತೇನೆ. ಈಗಲೇ ಮೊಣಕಾಲೂರಿ, ಜನರ ವಿಚಾರ ಮರೆಯಿರಿ. ನೀವು ಮೊಣಕಾಲೂರುವಾಗ ಯೇಸುವನ್ನು ಮಾತ್ರ ನೆನೆಸಿರಿ. ಹೌದು ಯೇಸುವೇ, ನಾನು ಬರುತ್ತೇನೆ, ನಾನು ಈಗಲೇ ಬರುತ್ತೇನೆಂದು ಹೇಳಿರಿ.

ಪ್ರಾರ್ಥಿಸೋಣ.


೧೦ – ಒಳ್ಳೇದಕ್ಕೂ ಮತ್ತು ಕೆಟ್ಟದಕ್ಕೂ ಏನಾಯಿತು?

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



1

ನಿಮ್ಮ ಆಳವಾದ ಆಸೆಗಳನ್ನು ತೃಪ್ತಿಪಡಿಸುವದು ಹೇಗೆ?


2

ತೋಮಸ್ ಹಗ್ಸಲೇ ಎಂಬ ಜೀವಶಾಸ್ತ್ರ, ವಿಜ್ಞಾನಿಯ ಬಗ್ಗೆ ಒಂದು ವಿನೂತನ ಕಥೆಯುಂಟು. ಒಂದು ದೊಡ್ಡ ನಗರದಲ್ಲಿ ಆತ ಭಾಷಣ ಕೊಡುವುದಿತ್ತು. ಆದರೆ ಆ ನಗರಕ್ಕೆ ಆತ ಬಹಳ ತಡವಾಗಿ ಬಂದು ಸೇರಿದ. ಆ ನಗರ ಸೇರಿದ ತಕ್ಷಣ ಓಡಿಹೋಗಿ ಒಂದು ಕುದುರೆ ಗಾಡಿಯೊಳಗೆ ನೆಗೆದು ಕುಳಿತು, ತಕ್ಷಣ ವೇಗವಾಗಿ ನಿನ್ನ ಗಾಡಿಯನ್ನು ಓಡಿಸು ಎಂದು ಕುದುರೆ ಸವಾರನನ್ನು ಕುರಿತು ಹೇಳಿದ.


3

ಕುದುರೆ ಸವಾರ, ಕುದುರೆಯ ಬೆನ್ನಿಗೆ ಚಾಟಿಯಿಂದ ಹೊಡೆದು, ಕುದುರೆ ಗಾಡಿಯನ್ನು ಜನನಿಬಿಡ ನಗರದ ದಾರಿಯೊಂದರಲ್ಲಿ ನಾಗಾ ಲೋಟದಿಂದ ಓಡಿಸುತ್ತಿದ್ದ. ಕುದುರೆಗಾಡಿ ಹತ್ತಿದ ತೋಮಸ್, ಸ್ವಲ್ಪ ಬೆನ್ನನ್ನು ಗಾಡಿಯ ಸೀಟಿಗೆ ಒರಗಿಸಿ, ನಿಟ್ಟುಸಿರೊಂದು ಬಿಟ್ಟು, ಆರಾಮವಾಗಿ ವಿಶ್ರಾಂತಿ ತೆಗೆದುಕೊಳ್ಳೋಣ ಎಂದು ಕೊಂಡವ ಏನ್ನನ್ನೂ ನೆನಸಿಕೊಂಡವನಂತೆ; ಕುದುರೆ ಸವಾರನನ್ನು ಕುರಿತು ಕೇಳಿದ, ಏ, ಇಲ್ಲಿ ಸ್ವಲ್ಪ ಕೇಳಪ್ಪಾ, ನಾನು ಎಲ್ಲಗೆ ಹೋಗಬೇಕೆಂದು ನಿನಗೆ ಗೊತ್ತಾ? ನನಗೆ ಗೊತ್ತಿಲ್ಲ ಮಹನೀಯರೇ ಕುದುರೆ ಸವಾರ ಉತ್ತರಿಸಿದ, ನೀವು ಹೇಳಿದಂತೆ ಎಷ್ಟು ವೇಗ ವೇಗವಾಗಿ ಓಡಿಸಲಿಕ್ಕೆ ಸಾಕೋ, ಅಷ್ಟು ವೇಗವಾಗಿ ನನ್ನ ಕುದುರೆ ಗಾಡಿಯನ್ನು ಓಡಿಸುತ್ತಿರುವೆ.


4

ಈವತ್ತು ಅದೇಷ್ಟೊ ಮಂದಿ ನಾಗಾಲೋಟದಲ್ಲಿ ತಮ್ಮ ಜೀವನವನ್ನು ವೇಗವಾಗಿ ಓಡಿಸುತ್ತಿದ್ದಾರೆ. ಅವರ ಜೀವನದಲ್ಲೂ ಏನೇನೂ ನಡೆಯುತ್ತಲ್ಲಿದೆ. ಆದರೆ ಅವರು ಎಲ್ಲಿಗೆ ಓಡುತ್ತಿದ್ದೇವೆ ಎಂದು ತಿಳಿಯದೆ ತಮ್ಮ ಓಟ ಮುಂದುವರಿಸಿದ್ದಾರೆ. ತಮ್ಮ ಜೀವನ ಎತ್ತ ಸಾಗಿದೆಯೆಂದು ಅವರಿಗೇ ತಿಳಿಯದು!


5

ಈ ಕಾರಣಕ್ಕಾಗಿಯೇ, ದೇವರು, ಸತ್ಯವೇದದ ಕೊನೆಯ ಪುಸ್ತಕದಲ್ಲಿ ತಮ್ಮ ಅಂತ್ಯ ಮನವಿಯನ್ನು ನೀಡಿದ್ದಾನೆ. ೧೪ನೇ ಅಧ್ಯಾಯದ, ೭ನೇ ವಚನದಲ್ಲಿ, ಯೇಸುಸ್ವಾಮಿಯ ಬರೋಣಕ್ಕೆ ಕಾಯುತ್ತಿರುವ ಪ್ರಪಂಚಕ್ಕೆ, ಅಪೋಸ್ತಲನಾದ ಯೋಹಾನನು, ಈ ಪದಗಳ ಮೂಲಕ ಮನವಿ ನೀಡುತ್ತಿದ್ದಾನೆ,

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



6

ಪ್ರಕಟಣೆ ೧೪:೭.
ನೀವೆಲ್ಲರು ದೇವರಿಗೆ ಭಯಪಟ್ಟು ಆತನನ್ನು ಘನಪಡಿಸಿರಿ, ಆತನ ನ್ಯಾಯತೀರ್ಪುಮಾಡುವ ಗಳಿಗೆಯು ಬಂದಿದೆ.



7

ಭೂಲೋಕ, ಪರಲೋಕಗಳನ್ನೂ, ಸಮುದ್ರವನ್ನೂ, ನೀರಿನ ಬುಗ್ಗೆಗಳನ್ನೂ ಉಂಟುಮಾಡಿದಾತನಿಗೆ ನಮಸ್ಕಾರ ಮಾಡಿರಿ ಪ್ರಕಟಣೆ ೧೪:೭
ನಿಮ್ಮಲ್ಲಿ ನಿಮ್ಮ ನಗರದ ನಕ್ಷೆಯೊಂದಿದ್ದು, ನೀವು ಆ ನಕ್ಷೇಯಲ್ಲಿ ಒಂದು ಸ್ಥಳವನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುವಾಗ, ಆ ನಕ್ಷೆಯೇ ತಪ್ಪಾದದ್ದಾಗಿದ್ದರೆ, ಆ ಹುಡುಕಾಟ ನಿಜಕ್ಕೂ ಒಂದು ವ್ಯತ್ಯಾಸದ ಹುಡುಕಾಟವಾಗಿರುತ್ತದೆ.


8

ಯಾರನ್ನು ಆರಾಧಿಸೋಣ? ಭೂಪರಲೋಕಗಳನ್ನು ಸೃಷ್ಟಿಸಿದಾತನನ್ನು ಆರಾಧಿಸಿರಿ. ಪ್ರತಿಯೊಂದನ್ನೂ ಸೃಷ್ಟಿಸಿದಾತನನ್ನು ಆರಾಧಿಸಿರಿ. ದೇವರು, ನಮ್ಮ ಜೀವನದ ಓಟದಲ್ಲಿ ನಿಧಾನವಿರಲಿ ಮತ್ತು ಎಲ್ಲಿಗೆ ಓಡುತ್ತೀರೆಂದು ತಿಳಿದುಕೊಂಡು ಓಡುವಂತೆ ತಿಳಿಸುವ ಮೂಲಕ ನಮ್ಮನ್ನು ಅವರೆಡೆಗೆ ಆಹ್ವಾನಿಸುತ್ತಿದ್ದಾನೆ.
ನಾವು ದೇವರಿಂದ ಸೃಷ್ಟಿಸಲ್ಪಟ್ಟವರು ಎಂಬುದನ್ನು ನಾವು ಅರ್ಥಮಾಡಿಕೊಂಡಾಗ, ನಾವು ಇಲ್ಲಿ ಏಕೆ ಇದ್ದೇವೆ ಮತ್ತು ನಾವು ಎಲ್ಲಿಗೆ ಹೊಗಬೇಕಾಗಿದೆ ಎಂಬುದರ ಪರಿಜ್ಞಾನವಾಗುತ್ತದೆ.


9

ಈ ಭೂ ಮಂಡಲ, ಗಗನ ಮಂಡಲ ಹಾಗೂ ಅದರಲ್ಲಿರುವುದನ್ನೆಲ್ಲ ಸೃಷ್ಟಿಮಾಡಿದವನು, ಸೃಷ್ಟಿಕರ್ತನಾದ ದೇವರೆಂಬುದನ್ನು ಇಂದು ಜನ ಮರೆತಿದ್ದಾರೆ. ಕೆಲವು ಜನ, ನಿಸ್ಸಂದೇಹವಾಗಿ ನೀವು ಸತ್ಯವೇದವನ್ನು ನಂಬಬಹುದೆನ್ನುತ್ತಾರೆ. ಯಾರು ಸರಿ ?



10

(ವಿಡಿಯೋ ೬ ಸೆಕೆಂಡುಗಳ ವಿಡಿಯೋ ಪ್ರದರ್ಶನ)
ಇಂದಿಗೂ ಲಕ್ಷಾಂತರ ಮಂದಿ ನಾವು ಜೀವವಿಕಾಸ ಕಾರಣದಿಂದ ಈ ಲೋಕಕ್ಕೆ ಬಂದಿರುವೆ ಎಂದು ನಂಬುತ್ತಾರೆ. ಕೋಟ್ಯಾನುಕೋಟಿ ವರ್ಷಗಳಿಂದ ಏಕಾಣು ಜೀವಿಗಳಿಂದ ಜೀವ ವಿಕಾಸವಾಗಿ, ಸಮುದ್ರದ ಪ್ರಾಣಿಗಳು ಉಂಟಾಗಿ, ಅಲ್ಲಿಂದ ಪ್ರಾಣಿಗಳು ಭೂಮಿಯ ಮೇಲೆ ಉದ್ಭವವಾಗಿ, ನಂತರ ಮಾನವ ಉಂಟಾದನೆಂಬುದು ಇವರ ನಂಬಿಕೆ. ಇವೆಲ್ಲಾ ಆಕಸ್ಮಿಕವಾಗಿ ಎಂದು ನಂಬುವ ಇವರನ್ನು ನಾವು ಅರ್ಥಮಾಡಿಕೊಳ್ಳಲಾಗದು.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.


11

ದೇವರು ತಾನೆ ನಮ್ಮ ಸೃಷ್ಟಿಕರ್ತನೆಂಬುದಕ್ಕೆ ಒಂದು ಗುರುತನ್ನು ಕೊಟ್ಟಿದ್ದಾನೆ ಎಂಬುದು ನಿಮಗೆ ಗೊತ್ತಿದೆಯೇ ? ನಮ್ಮ ಈ ವಿಶ್ವ, ಈ ಪ್ರಪಂಚ ಮತ್ತು ನಮ್ಮನ್ನೂ ಸೃಷ್ಟಿ ಮಾಡಿದವನು ಆತನೇ ಎಂಬುದನ್ನು ಪ್ರತಿವಾರ ಜ್ಞಾಪಿಸಲು ನಮಗೆ ದೇವರು ಒಂದು ಮುಖ್ಯವಾದ ಚಿನ್ಹೆಯನ್ನು ಕೊಟ್ಟಿದ್ದಾನೆ. ಸತ್ಯವೇದ ನಿಜವಾದುದಾದರೆ, ನಿಮ್ಮ ನಿತ್ಯಜೀವನದ ಕೊನೆಯಘಟ್ಟ ನೀವು ಅದನ್ನು ನಂಬುತ್ತೀರಾ ಮತ್ತು ಒಪ್ಪಿಕೋಳ್ಳುತ್ತೀರಾ ಎಂಬುದನ್ನು ಅವಲಂಬಿಸುತ್ತದೆ. ನೀವು ಸತ್ಯವೇದದ ಬಗ್ಗೆ ಏನನ್ನು ನಂಬ ುತ್ತಿರೋ, ಆದು ನೀವು ದೇವರ ಬಗ್ಗೆ ಏನನ್ನು ನಂಬುತ್ತಿರೋ ಅದನ್ನೇ ವ್ಯತ್ಯಾಸ ಮಾಡಿಬಿಡುತ್ತದೆ.




12

ಸೃಷ್ಟಿಯ ವಾರದ ಅಂತ್ಯದಲ್ಲಿಯೇ, ಈ ವಾರಕ್ಕೊಮ್ಮೆ ದೇವರನ್ನು ಸ್ಮರಿಸಿಕೊಳ್ಳುವ ದಿನವನ್ನು ನಮಗೆ ಕೊಟ್ಟಿದ್ದರೆ. ಅಂಥಹ ಒಂದು ದೇವಸ್ಮರಣೆಯ ದಿನವನ್ನು ಹೆಚ್ಚುಕಡಿಮೆ ಇಡೀ ಪ್ರಪಂಚವೇ ಮರೆತ್ತಿದೆ.



13

(೧೫ ಸೆಕೆಂಡುಗಳ ವಿಡಿಯೋ ಪ್ರದರ್ಶನ)
ಅಂಥಹ ಒಂದು ಜ್ಞಾಪಕಪಡಿಸುವ ದಿನವನ್ನು ಮರೆತ ಜನ, ದೇವರು ತಾನೇ ಈ ಲೋಕದ ಸೃಷ್ಟಿಕರ್ತ ಎಂಬುದನ್ನೂ ಮರೆತ್ತಿದ್ದಾರೆ.
ನಾವು, ನಮ್ಮ ಇಂದಿನ ದಿನಗಳಲ್ಲಿ, ನಮ್ಮ ಲೋಕದ ಸೃಷ್ಟಿ ಹೇಗೆ ಪ್ರಾರಂಭವಾಯಿತು ಎಂಬುದಕ್ಕೆ ಏನಾದರೂ ಕುರುಹು ಸಿಕ್ಕಿತೋ ಎನೋ ಎಂಬುದನ್ನು ಕಂಡುಕೊಳ್ಳಲು ಜನರನ್ನು ಚಂದ್ರನ ಮೇಲಕ್ಕೆ ಕಳುಹಿಸುತ್ತಿದ್ದೇವೆ.


14

ನಮ್ಮ ಈ ವಿಶ್ವದ ಸೃಷ್ಟಿ ಹೇಗೆ ಆರಂಭವಾಯಿತು ಎಂಬ ಕುರುಹುಗಳನ್ನು ಕಂಡುಕೊಳ್ಳಲು, ಮನುಷ್ಯ ಇಂದು ಆಕಾಶವನ್ನು ಬಹಳ ಸುಧಾರಿಸಿದ ದೂರದರ್ಶಕಗಳ ಮೂಲಕ ನೋಡುತ್ತಿದ್ದಾನೆ. ಆದ್ದರಿಂದ ಈ ಮಹಾನ್ ಗ್ರಂಥವಾದ– ಸತ್ಯವೇದದ ಕಡೆಗೆ, ಅಂದರೆ ದೇವರ ವಾಕ್ಯದೆಡೆಗೆ ನಿಮ್ಮ ಗಮನಹರಿಸಿ, ಇಲ್ಲೇನಾದರೂ ಸೃಷ್ಟಿಗೆ ಕುರುಹುಗಳಿದೆಯೋ, ಅದನ್ನು ನಾವು ನಂಬಬಹುದೋ ಅಥವಾ ನಂಬಬಾರದೇ ಎಂಬುದಕ್ಕೆ ಸಾಕ್ಷಿಗಳನ್ನು ಹುಡುಕೋಣ.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.


15

ಸೃಷ್ಟಿಯ ಮೂಲದ ಈ ಹುಡುಕಾಟಕ್ಕೆ ಇಷ್ಟೊಂದು ಖರ್ಚು, ಪ್ರಯಾಸ ಹಾಗೂ ತೀವ್ರವಾದ ಆಸಕ್ತಿಯಾದರೂ ಏಕೆ?
ಏಕೆಂದರೆ ನಮ್ಮನ್ನು ಕಾಡುತ್ತಿರುವ ಅನೇಕ ಕಠಿಣ ಪ್ರಶ್ನೆಗಳಿಗೆ ಉತ್ತರಬೇಕಾಗಿದೆ: ಆ ಪ್ರಶ್ನೆಗಳು ಇಂತಿವೆ: ಈ ವಿಶ್ವದಲ್ಲಿ ನಾವು ಮಾತ್ರ ಇದ್ದೇವೆಯೇ ? ನಾವು ಈ ಲೋಕಕ್ಕೆ ಹೇಗೆ ಬಂದೆವು ? ಇಲ್ಲೇ ಏಕೆ ಇನ್ನೂ ಇದ್ದೇವೆ? ಮತ್ತು ಮುಂದೆ ಎಲ್ಲಿಗೆ ಹೋಗಲಿಕ್ಕಿದ್ದೇವೆ.
ಹೀಗಾಗಿ ನಮ್ಮ ಶೋಧ ಮುಂದುವರೆದಿದೆ. ಜೀವನದಲ್ಲಿ ಇಂಥಹ ಶೋಧ ಮುಂದುವರೆದಿರುವಾಗಲೇ, ಜೀವನದುದ್ದಕ್ಕೂ ಈ ಪ್ರಶ್ನೆಗಳಿಗೆ ಉತ್ತರ ನಮ್ಮ ಮುಂದೆಯೇ ಇರುವುದನ್ನು ನಾವು ಗಮನಿಸಿಲ್ಲ. ನಾವು ಎಲ್ಲಿಂದ ಬಂದೆವು ಎಂಬುದನ್ನೆ ಸಂಪೂರ್ಣವಾಗಿ ಮರೆತಿರುವ ಒಂದು ಲೋಕದಲ್ಲಿ ನಾವು ಬದುಕಿದ್ದೇವೆ.



16

ದೇವರನ್ನು ಮರೆಯುವ ಈ ಪ್ರಪಂಚವನ್ನು ಕುರಿತು, ಅವರು ಹೇಳುತ್ತಾರೆ– ನಾನೇ ನಿಮ್ಮ ಸೃಷ್ಟಿಕರ್ತನೆಂಬುದನ್ನು ಜ್ಞಾಪ್ಕದಲ್ಲಿಡಿ. ನಾನು ನಿಮಗೊಂದು ಚಿಹ್ನೆಯನ್ನು ಒಂದು ಸಂಕೇತವನ್ನು ನೀಡಿದ್ದೇನೆ ಎಂಬುದನ್ನು ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿ.




17

(೫ ಸೆಕೆಂಡುಗಳ ವಿಡಿಯೋ ಪ್ರದರ್ಶನ)
ಕಾಲಕಾಲದಿಂದ ಇತಿಹಾಸದುದ್ದಕ್ಕೂ ವಿಕಾಸತತ್ವ, ನಾವು ವಿಕಾಸ ಕಾರಣದಿಂದ ಆಕಸ್ಮಿಕವಾಗಿ ಈ ಲೋಕದಲ್ಲಿ ಸೃಷ್ಟಿಯಾದೆವು ಎಂದು ಹೇಳಿದಾಗಲೆಲ್ಲಾ, ದೇವರು ಹೇಳುತ್ತಾನೆ– ನೀನು ಜೀವವಿಕಾಸದಿಂದ ಉದ್ಬವವಾದವನಲ್ಲ, ನಾನೇ ನಿಮ್ಮನ್ನು ಸೃಷ್ಟಿಸಿದ್ದೇನೆ


18


ಆದರೆ ಕೆಲವರು ಕೇಳಬಹುದು, ದೇವರೇ ನಮ್ಮನ್ನು ಸೃಷ್ಟಿಸಿದನೆಂಬುದನ್ನು ನಮಗೆ ಜ್ಞಾಪಿಸಿಕೊಡುವ ಚಿಹ್ನೆ ಅಥವಾ ಸಂಕೇತ ಯಾವುದು?
ಸೃಷ್ಟಿಯ ವಾರದಲ್ಲಿ ದೇವರು ಪ್ರತಿನಿತ್ಯ ಏನೇನು ಸೃಷ್ಟಿಮಾಡಿದರೆಂಬುದನ್ನು ಈಗಾಗಲೇ ಮಾಡಿದ ಅಧ್ಯಾಯನದ ಆಧಾರದ ಮೇಲೆ ಜ್ಞಾಪಕಮಾಡಿಕೊಳ್ಳಿ.



19

(ಕೀರ್ತನೆ ೩೩:೮, ೯)
ಸೃಷ್ಟಿ ಅಪ್ರತಿಮವಾದುದು! ಇಂಥಹ ಸೃಷ್ಟಿಕಾರ್ಯವನ್ನು ದೇವರು ಹೇಗೆ ಮಾಡಿದನು ಮತ್ತು ಅಷ್ಟೊಂದು ಶೀಘ್ರದಲ್ಲಿ!?
ಸತ್ಯವೇದ ಇದಕ್ಕೆ ಉತ್ತರ ನೀಡುತ್ತದೆ. ಭೂಲೋಕದವರೆಲ್ಲರೂ ಯೆಹೋವನಿಗೆ ಭಯಪಡಲಿ; ಭೂನಿವಾಸಿಗಳಲ್ಲರೂ ಆತನಿಗೆ ಹೆದರಲಿ

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.




20

ಆತನು ನುಡಿದ ಮಾತ್ರಕ್ಕೆ ಸಮಸ್ತವೂ ಉಂಟಾಯಿತು; ಆತನು ಆಜ್ಞಾಪಿಸುತ್ತಲೇ ಸರ್ವವೂ ಸ್ಥಾಪನೆಯಾಯಿತು.
ಕೀರ್ತನೆ ೩೩:೮, ೯


21

ದೇವರು ತನ್ನ ಮಾತಿನ ಮುಖಾಂತರವೇ ಎಲ್ಲವನ್ನೂ ಸೃಷ್ಟಿಮಾಡಿದರು. ಆದರೆ ಅದು ಹೇಗೆ ಎಂಬುದನ್ನು ನಮ್ಮಿಂದ ಅರ್ಥಮಾಡಿಕೊಳ್ಳಲಾಗದು. ದೇವರ ವಾಕ್ಯ–ಅದು ಅವರು ತಮ್ಮ ಬಾಯಿಯಿಂದ ಮಾತಾಡಿದ್ದಾದರೂ ಸರಿ, ಸತ್ಯವೇದದಲ್ಲಿ ಬರೆದಿದ್ದದ್ದಾರೂ ಸರಿ, ಅವು ಬಹಳ ಸೃಜನಾತ್ಮಕವಾದವು ಮತ್ತು ಶಕ್ತಿಯುತವಾದವು. ದೇವರು ನಮಗೆ ಈ ಸತ್ಯವೇದವನ್ನು ಕೊಟ್ಟರು ಮತ್ತು ಈ ಸತ್ಯವೇದದ ಮುಖಾಂತರವಾಗಿ ಅವರು ತಮ್ಮ ಚಿತ್ತವನ್ನು ನಮಗೆ ಸಂವೇದನೆ ಮಾಡುತ್ತಿದ್ದಾರೆ ಎಂಬುದನ್ನು ನಾವು ಗುರುತಿಸಿದಾಗ ಮಾತ್ರ ಮೇಲಿನ ಒಪ್ಪಂದವನ್ನು ಸರಿಯಾಗಿ ವಿವರಿಸಲು ಸಾಧ್ಯವಾಗುತ್ತದೆ.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



22

ಹೀಗೆ ಭೂಮ್ಯಾಕಾಶಗಳೂ ಅವುಗಳಲ್ಲಿರುವ ಸಮಸ್ತವೂ ನಿರ್ಮಿತವಾದವು.
ಆದಿಕಾಂಡ ೨:೧


23

ಆರು ದಿನಗಳಲ್ಲಿ ದೇವರು, ಒಂದು ಲೋಕವನ್ನೇ ಸೃಷ್ಟಿಸಿ, ಅದರ ಭೂಭಾಗವನ್ನು ಹಸಿರು ಗಿಡ ಮರಗಳಿಂದಲೂ, ಬಣ್ಣಬಣ್ಣದ ಹೂಗಳಿಂದಲೂ ಸಿಂಗರಿಸಿದನು; ಹರಿಯುವ ನದಿ ತೊರೆಗಳಿಂದ ಶೋಭಿಸುವಂತೆ ಮಾಡಿದನು.


24

ಹಗಲಲ್ಲಿ ಬೆಳಕು ಕೊಡಲು ಹೊಂಗಿರಣಗಳ ಸೂರ್ಯ; ಆ ಸೂರ್ಯನ ಉದಯ ಹಾಗೂ ಅಸ್ತಮಾ ನಯಾನ ಮನೋಹರ ರಾತ್ರಿಯಲ್ಲಿ ಮನುಷ್ಯ ಸಂತೋಷಿಸಲು ಹಾಲುಬಣ್ಣದ ಚಂದ್ರನ ಬೆಳಕು.


25

ಈ ಸೃಷ್ಟಿಯಲ್ಲೇ ಅತ್ಯುತ್ತಮವಾದ ಸೃಷ್ಟಿಯೆಂದರೆ; ದೇವರು ಸೃಷ್ಟಿಸಿದ ಇಬ್ಬರು ಪರಿಪೂರ್ಣ ಮನುಷ್ಯರು. ಮನುಷ್ಯನಿಗೆ ಸೃಷ್ಟಿಯಲ್ಲಿ ಎಂಥಹ ಗೌರವ! ಅವರು ಸೃಷ್ಟಿಕರ್ತನ ಸ್ವರೂಪದಲ್ಲೇ ಸೃಷ್ಟಿಸಲ್ಪಟ್ಟರು: ಈ ಭೂಮಿ ಮತ್ತು ಈ ಭೂಮಿಯ ಮೇಲಿರುವ ಸಕಲವನ್ನು ಆಳುವ ಒಡೆತನ ಅವರಿಗೆ ಕೊಡಲ್ಪಟ್ಟಿತು.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



26

ಆದಿಕಾಂಡ ೧:೨೭

ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು. ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು.


27

ದೇವರು ತನ್ನ ಸೃಷ್ಟಿಕಾರ್ಯವನ್ನು ಅಲ್ಲಿಗೇ ನಿಲ್ಲಿಸಿರಲಿಲ್ಲ! ಆತನು ಮಾಡಬೇಕಾದ ಕೆಲಸ ಇನ್ನೂ ಒಂದಿತ್ತು. ಸೃಷ್ಟಿಯ ೭ನೇ ದಿನದಲ್ಲಿ ಏನಾಯಿತು ಎಂಬುದನ್ನು ಕುರಿತು ಸತ್ಯವೇದ ಏನು ಹೇಳುತ್ತದೆ ಎಂಬುದನ್ನು ಬಹಳ ಎಚ್ಚರಿಕೆಯಿಂದ ಗಮನಿಸಿ.




28

ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು.
ಆದಿಕಾಂಡ ೨:೪



29

ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ, ಆ ೭ನೇಯ ದಿನದಲ್ಲಿ ವಿಶ್ರಮಿಸಿಕೊಂಡಿದ್ದರಿಂದ ಆ ದಿನವನ್ನು ಪರಿಶುದ್ಧವಾಗಿರಲಿ ಎಂದು ಆಶೀರ್ವದಿಸಿದನು.



30

ಯಾವುದನ್ನಾದರೂ ದೇವರು ಮಾತ್ರ ಪರಿಶುದ್ಧ ಮಾಡಬಲ್ಲನು, ಮತ್ತು ಸತ್ಯವೇದವು ಹೇಳುತ್ತದೆ. ದೇವರು ೭ನೇ ದಿನವನ್ನು ಪರಿಶುದ್ಧ ಮಾಡಿದನು ಎಂಬುದಾಗಿ.




31

ಇದೇ ಭೂಮ್ಯಾಕಾಶಗಳ ನಿರ್ಮಾಣ ಚರಿತ್ರೆ. ಆದಿಕಾಂಡ ೨:೨–೪


32

ಯಾವುದನ್ನಾದರೂ ದೇವರು ಮಾತ್ರ ಪರಿಶುದ್ಧ ಮಾಡಬಲ್ಲನು, ಮತ್ತು ಸತ್ಯವೇದವು ಹೇಳುತ್ತದೆ. ದೇವರು ೭ನೇ ದಿನವನ್ನು ಪರಿಶುದ್ಧ ಮಾಡಿದನು ಎಂಬುದಾಗಿ.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



33

ಯಾವುದನ್ನಾದರೂ ಪರಿಶುದ್ದವಾಗಿರಲೆಂದು ಆಶೀರ್ವದಿಸಲ್ಪಟ್ಟಿದ್ದರೆ, ಅದು ಪರಿಶುದ್ಧ ಬಳಕೆಗಾಗಿಯೇ ಪ್ರತ್ಯೇಕಿಸಲ್ಪಟ್ಟಿರುತ್ತದೆ. ದೇವರು ಸಬ್ಬತ್ತು ದಿನವನ್ನು ಇತರೆ ದಿನಗಳಿಂದ ಪ್ರತ್ಯೇಕಿಸಿದನು. ಆ ದಿನ ಪರಿಶುದ್ಧ ಎಂಬ ಕಾರಣಕ್ಕಾಗಿ ಪ್ರತ್ಯೇಕಿಸಲ್ಪಟ್ಟಿತು ಮತ್ತು ಆತನಿಗಾಗಿ ಪ್ರತಿಷ್ಠೆ ಮಾಡಲ್ಪಟ್ಟಿತು.


34

ಒಂದು ಮದುವೆಯ ಸಂದರ್ಭದಲ್ಲಿ, ಒಬ್ಬ ಹೆಂಗಸನ್ನು ಪರಿಶುದ್ದವಾಗಿ, ಒಬ್ಬ ಗಂಡಸಿಗೆ ಮಾತ್ರ ಪ್ರತ್ಯೇಕವಾಗಿ ಮೀಸಲಾಗಿಡುವುದು. ಅದು ಈಗ ನಿಮ್ಮ ಮದುವೆಯ ದಿನವೇ ಆಗಿದೆ ಎಂದಿಟ್ಟುಕೊಳ್ಳೋಣ.
ನೀವು ಬಹಳ ಪುಲಕಿತಗೊಂಡಿದ್ದಿರಿ, ಕೆಲವು ದಿನಗಳಿಂದ ನೀವು ಈ ದಿನಕ್ಕಾಗಿಯೇ ಕಾದಿದ್ದಿರಿ.


35

ಆದರೆ ನಿಮ್ಮ ಹೆಂಡತಿಗೆ ಆರು ಜನ ತಂಗಿಯರಿದ್ದಾರೆಂದಿಟ್ಟುಕೊಳ್ಳೋಣ. ಮದುವೆಯ ದಿನದಲ್ಲಿ ಒಂದು ಹೆಣ್ಣನ್ನು ಒಂದು ಗಂಡಿಗೆ ಮಾತ್ರ ಧಾರೆ ಎರೆದುಕೊಡಲಾಗುವುದು, ಅದಕ್ಕಾಗಿಯೇ ಆಕೆಯನ್ನು ಪ್ರತ್ಯೇಕಿಸಲಾಗಿದೆ. ಆಕೆ ಇನ್ನೂ ಆ ಏಳರಲ್ಲಿ ಒಂದಲ್ಲ. ಆಕೆ ನಿಮಗಾಗಿ ಪರಿಶುದ್ದ ಮಾಡಲ್ಪಟ್ಟವಳು. ಮದುವೆಯ ಮುಖಾಂತರ ಗಂಡನಿಗಾಗಿ ಮೀಸಲಾಗಿರುವವಳು.


36

ನಿಮ್ಮ ನಾದಿನಿಯರಲ್ಲಿ ಒಬ್ಬಳು, ಆಕೆಯ ಅಕ್ಕನ ಮದುವೆಯ ನಂತರ ನಿಮ್ಮ ಹತ್ತಿರ ಬಂದು, ಇದರಲ್ಲೇನು ವ್ಯತ್ಯಾಸ ? ನಮ್ಮ ೭ ಜನ ಸಹೋದರಿಯಲ್ಲಿ ಒಬ್ಬಳು ನಿನ್ನ ಕೂಡ ಸಂಸಾರಮಾಡಬಹುದಲ್ಲ ? ನಾವು ಒಬ್ಬರಿಗಿಂತ ಇನ್ನೊಬ್ಬರು ಚಂದ ಇದ್ದೇವೆ. ಈ ಪ್ರಶ್ನೆಗಳಿಗೆ ನಿವೇನು ಉತ್ತರ ಕೊಡುತ್ತೀರಿ? ನಿಜವಾಗಿಯೂ ಏನಾದರೂ ವ್ಯತ್ಯಾಸ ಇಲ್ಲಿದೆಯೇ ?


37

ಮದುಮಗಳಿಗೂ ಅವನ ಸಹೋದರಿಯರಿಗೂ ವ್ಯತ್ಯಾಸ ಇದೆಯೇ ?
ಖಂಡಿತವಾಗಿಯೂ ಇದೆ.
ಮದುಮಗನಾದ ನೀವು ಹೇಳುತ್ತಿರಿ,ನನ್ನ ಮದುವಣಗಿತ್ತಿ, ನಾನು ಆರಿಸಿಕೊಂಡವಳು, ಆಕೆ ಪರಿಶುದ್ದವಾಗಿ ನನಗೆ ಪ್ರತ್ಯೇಕಿಸಲ್ಪಟ್ಟವಳು, ನನಗಾಗಿಯೇ ಪ್ರತಿಷ್ಠೇ ಮಾಡಲ್ಪಟ್ಟವಳು.
ಹೀಗೆಯೇ, ದೇವರು ಸಹ ದಿನಕ್ಕೆ ೨೪ ತಾಸಿನ ಒಂದು ಸಾಮಾನ್ಯ ದಿನವನ್ನು ಆರಿಸಿಕೊಂಡನು, ಅದು ೭ನೇ ದಿನವಾಗಿತ್ತು. ಆ ದಿನವನ್ನು ದೇವರು ಆಶೀರ್ವದಿಸಿ ಪರಿಶುದ್ದಗೊಳಿಸಿದನು.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



38

ಮಾರ್ಕ ೨:೨೭,೨೮
. . . ಸಬ್ಬತ್ ದಿನವು ಮನುಷ್ಯರಿಗೋಸ್ಕರ ಉಂಟಾಯಿತೇ ಹೊರತು ಮನುಷ್ಯರು ಸಬ್ಬತ್ ದಿನಕ್ಕೋಸ್ಕರ ಉಂಟಾಗಲಿಲ್ಲ.



39

ಹೀಗಿರಲಾಗಿ ಮನುಷ್ಯಕುಮಾರನು ಸಬ್ಬತ್ ದಿನಕ್ಕೂ ಒಡೆಯನಾಗಿದ್ದಾನೆ . . .
ಮಾರ್ಕ ೨:೨೭,೨೮


40

ನಾವು ಸೃಷ್ಟಿಸಲ್ಪಟ್ಟವರೇ ವಿನಹ, ಜೀವವಿಕಾಸ ಹೊಂದಿ ಬಂದವರಲ್ಲ ಎಂಬುದನ್ನು ಜ್ಞಾಪಕದಲ್ಲಿಕೊಳ್ಳುವ ಸಲುವಾಗಿಯೇ ದೇವರು ಸಬ್ಬತ್ ದಿನವನ್ನು ನಮಗೆ ಕೊಟ್ಟಿದ್ದಾನೆ.
ದೇವರು ಮನುಷ್ಯನನ್ನು ಮತ್ತು ಲೋಕದಲ್ಲಿರುವ ಸಮಸ್ತವನ್ನು ಆರು ದಿನಗಳಲ್ಲಿ ಸೃಷ್ಟಿಸಿದನು!
ಮನುಷ್ಯ ಮತ್ತು ಆತನ ಸೃಷ್ಟಿಕರ್ತರಿಬ್ಬರೂ, ಪ್ರತಿವಾರ ತಮ್ಮ ಪ್ರೀತಿಯ ಹಾಗೂ ಆರಾಧನೆಯ ಪ್ರತಿಜ್ಞೆಯನ್ನು ನೆನಪಿಸಿಕೊಳ್ಳುವುದು ಪರಿಶುದ್ದವಾದ ಗಳಿಗೆಯೇ ಆಗಿದೆ.
ದೇವರು ಆರು ದಿನಗಳಲ್ಲಿ ಭೂಮ್ಯಾಕಾಶಗಳನ್ನು ಮತ್ತು ಅದರಲ್ಲಿರುವ ಸಮಸ್ತವನ್ನು ಉಂಟುಮಾಡಿದನು ಮತ್ತು ೭ನೇ ದಿನ ವಿಶ್ರಾಂತಿ ತೆಗೆದುಕೊಂಡನೆಂಬುದನ್ನು ಮನುಷ್ಯ ಪ್ರತಿ ವಾರ ನೆನಪಿಸಿಕೊಳ್ಳಬೇಕು.


41

ದೇವರು ತಮ್ಮ ಸ್ವಂತ ಕೈಗಳಿಂದ ದಶಾಜ್ಞೆಗಳನ್ನು ಬರೆದಾಗಲೂ ಈ ದಿನವನ್ನು ಪರಿಶುದ್ದವಾಗಿಡಲು ಮರೆಯದೆ ಜ್ಞಾಪಕದ್ದಲ್ಲಿಡಲು ಹೇಳಿದ್ದಾನೆ.
ದೇವರ ಆ ಪರಿಶುದ್ದ ದಶಾಜ್ಞೆಗಳ ಮಧ್ಯದಲ್ಲಿ ೪ನೇ ಆಜ್ಞೆ ಇದೆ.
ಆರು ದಿನಗಳಲ್ಲಿ ಭೂಮಿ, ಸಮುದ್ರ ಮತ್ತು ನೀರಿನ ಕಾರಂಜಿಗಳನ್ನು ಸೃಷ್ಟಿಸಿದ ದೇವರನ್ನು ೭ನೇಯ ದಿನದಲ್ಲಿ ನೆನಸಿಕೊಳ್ಳುವಂತೆ ಮಾನವರಿಗೆ ಹೇಳಿದ್ದಾನೆ.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



42

ಮಾನವನು ಆದಿಯಿಂದ ಸಬ್ಬತ್ತನ್ನು ಸೃಷ್ಟಿಯ ಜ್ಞಾಪಕಾರ್ಥವಾಗಿ ನೆನಸಿಕೊಂಡು ಬಂದಿದ್ದರೆ, ಈ ಹೊತ್ತು, ಈ ಭೂಮಿಯ ಮೇಲೆ, ವಿಕಾಸವಾದಿಯಾಗಲಿ ಅಥವಾ ನಾಸ್ಥಿಕನಾಗಲಿ ಇರುತ್ತಿರಲಿಲ್ಲ. ಅವರು ಹಾಗೇ ಮಾಡಿದಿದ್ದರೆ, ಪ್ರತೀವಾರ ತಮ್ಮ ಸೃಷ್ಠಿಕರ್ತನ ಒಂದಿಗೆ ಇರಬೇಕಾದ ಅನ್ಯೋನ್ಯತೆಯನ್ನು ಮತ್ತು ತಮ್ಮ ಸೃಷ್ಟಿಯ ಮೂಲವನ್ನು ತಪ್ಪದೇ ಜ್ಞಾಪಕದಲ್ಲಿಟ್ಟುಕೊಳ್ಳುತಿದ್ದರು. ಪಾಪವು ಭೂಮಿಯ ಮೇಲೆ ಹೆಚ್ಚುತ್ತಾ ಹೋದಂತೆ, ಮನುಷ್ಯ ತಾನೆಲ್ಲಿಂದ ಬಂದೆ, ತಾನೇಕೆ ಇಲ್ಲಿದ್ದೇನೆ ಮತ್ತು ತಾನೆಲ್ಲಿಗೆ ಹೋಗುತ್ತಿದ್ದೇನೆ ಎಂಬುದನ್ನೇ ಮರೆಯುತ್ತಿದ್ದಾನೆ. ಹೀಗೆಲ್ಲಾ ಆಗುತ್ತಿರುವಾಗ, ಆತ, ತಾನು ಹೇಗೆ ಬದುಕಬೇಕು ಎಂಬುದನ್ನು ಸಹ ಮರೆಯುತ್ತಿದ್ದಾನೆ.



43

(೧೦ ಸೆಕೆಂಡುಗಳ ವಿಡಿಯೋ ಪ್ರದರ್ಶನ)
ಮೋಶೆಯು ಇಸ್ರಾಯೇಲ್ಯರ ನಾಯಕನಾಗುವ ಹೊತ್ತಿಗೆ, ಅವರು ಹೆಚ್ಚುಕಡಿಮೆ ಸಂಪೂರ್ಣವಾಗಿ ತಮ್ಮ ದೇವರನ್ನೇ ಮರೆತ್ತಿದ್ದರು. ಅವರು ಮನುಷ್ಯ ನಿರ್ಮಿತ ವಿಗ್ರಹಗಳನ್ನು ಪೂಜಿಸುವುದರಲ್ಲಿ ಮೈಮರೆತಿದ್ದರು.



44

(೭ ಸೆಕೆಂಡುಗಳ ವಿಡಿಯೋ ಪ್ರದರ್ಶನ)
ದೇವರು ಆಶ್ಚರ್ಯಕರವಾದ ರೀತಿಯಲ್ಲಿ ಇಸ್ರಾಯೇಲ್ಯರನ್ನು ಅವರ ಶತ್ರುಗಳಿಂದ ಬಿಡುಗಡೆಮಾಡಿ, ಅವರು ತಮ್ಮ ವಾಗ್ದತ್ತ ದೇಶಕ್ಕೆ ಪ್ರಯಾಣಮಾಡುತ್ತಿದ್ದಾಗ ಅವರನ್ನು ಅರಣ್ಯದ ಮೂಲಕ ನಡೆಸಿಕೊಂಡು ಹೋದನು.

ಈ ಭೂಮಿಯ ಇತಿಹಾಸದ ಪ್ರಾರಂಭದಲ್ಲಿ ಮೊದಲನೇ ವಾರದಲ್ಲಿ, ಸೃಷ್ಟಿಸಲ್ಪಟ್ಟ ೭ನೇ ದಿನದ ಸಬ್ಬತ್ತನ್ನು ಕುರಿತಂತೆ ಅವರು ಏನು ಮಾಡಬೇಕು ಎಂಬುದನ್ನು ತೋರಿಸಲು, ದೇವರು, ಆ ಅರಣ್ಯದಲ್ಲಿ ಎರಡು ಕಾರ್ಯಗಳನ್ನು ಮಾಡಿದನು.


೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.




45

(೧೦ ಸೆಕೆಂಡುಗಳ ವಿಡಿಯೋ ಪ್ರದರ್ಶನ)
ಮೋದಲನೇಯದಾಗಿ, ಅವರನ್ನು ಹೇಗೆ ಪಾಲಿಸಿದನು. ಮತ್ತು ಐಗುಪ್ತ ದೇಶದಿಂದ ಹೇಗೆ ಹೊರ ನೆಡೆಸಿಕೊಂಡು ಬಂದನೆಂಬುದನ್ನು ಅವರ ನೆನಪಿಗೆ ತಂದನು. ಅವರು ಹೆಚ್ಚು ಆಹಾರವನ್ನು ಹೊತ್ತು ಸಾಗಲಾಗಲಿಲ್ಲ. ಆಹಾರ ಸಾಲದಾಗ ಗುಣಗುಟ್ಟಲಾರಂಬಿಸಿದರು. ದೇವರು ಆ ಕಾಲದಲ್ಲಿ ಅವರ ನಡುವೆ ನಡೆಸಿದ ಅದ್ಭುತ ಕಾರ್ಯಗಳನ್ನು ಮತ್ತು ಅವರು ತೋರಿದ ಕರುಣೆಯನ್ನು ಅವರು ಪ್ರಶಂಶೆಯ ದೃಷ್ಟಿಯಿಂದ ಕಾಣಲಿಲ್ಲ. ಆದಾಗ್ಯೂ ದೇವರು ಆ ಗೂಂಡಾರಣ್ಯದಲ್ಲಿ ದೇವರು ಅವರಿಗೆ ಆಹಾರವನ್ನು ಒದಗಿಸಿದನು.




46

(ವಿಮೋಚನಕಾಂಡ ೧೬:೪,೫)
ಆಗ ಯೆಹೋವನು ಮೋಶೆಗೆ . . . ಇಗೋ, ನಾನು ಆಕಾಶದಿಂದ ನಿಮಗೋಸ್ಕರ ಆಹಾರವನ್ನು ಸುರಿಸುವೆನು. . . . . ಎಂದು ಹೇಳಿದನು.



47

ಈ ಜನರು ಪ್ರತಿದಿನವೂ ಹೊರಗೆ ಹೋಗಿ ಅಯಾ ದಿನಕ್ಕೆ ಬೇಕಾದಷ್ಟು ಮಾತ್ರ ಕೂಡಿಸಿಕ್ಕೊಳ್ಳಬೇಕು.




48

ಇವರು ನನ್ನ ಬೋಧನೆಯನ್ನು ಅನುಸರಿಸಿ ನೆಡೆಯುವರೋ ಅಲ್ಲವೋ ಎಂದು ಪರೀಕ್ಷಿಸಿ ತಿಳಿಯುತ್ತೇನೆ. ವಿಮೋಚನಕಾಂಡ ೧೬:೪ ಇಲ್ಲಿ ಹೇಳಿರುವ ಆಹಾರವನ್ನು ಮನ್ನ ಎಂದು ಕರೆಯಲಾಗಿದೆ.



49

ಆರನೆಯ ದಿನದಲ್ಲಿ ಮಾತ್ರ ಅವರು ತಂದದ್ದನ್ನು ಸಿದ್ದಪಡಿಸಿಕೊಳ್ಳುವಾಗ ಅದು ಪ್ರತಿದಿನ ಕೂಡಿಸಿಕೊಂಡಿದ್ದಕ್ಕಿಂತಲೂ ಎರಡರಷ್ಟಾಗಿರುವುದು ಎಂದು ಹೇಳಿದನು.



50

ಅದು ಪ್ರತಿದಿನ ಕೂಡಿಸಿಕೊಂಡಿದ್ದಕ್ಕಿಂತಲೂ ಎರಡರಷ್ಟಾಗಿರುವುದು. ವಿಮೋಚನಕಾಂಡ ೧೬:೫

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



51

ವಿಮೋಚನಕಾಂಡ ೧೬:೬.
ಮೋಶೆ ಆರೋನರು ಇಸ್ರಾಯೇಲ್ಯರಿಗೆ




52

ನಿಮ್ಮನ್ನು ಐಗುಪ್ತ ದೇಶದಿಂದ ಬಿಡಿಸಿದವನು ಯೆಹೋವನೇ ಎಂಬುದು ಸಾಯಂಕಾಲದಲ್ಲಿ ನಿಮಗೆ ಗೊತ್ತಾಗುವುದು. ವಿಮೋಚನಕಾಂಡ ೧೬:೬.




53

(೧೬ ಸೆಕೆಂಡುಗಳ ವಿಡಿಯೋ ಪ್ರದರ್ಶನ)
ರಾತ್ರಿ ಹೊತ್ತು ನೆಲದ ಮೇಲೆ ಮಂಜು ಮೂಡುತ್ತಿದ್ದಂತೆಯೇ ಮನ್ನ ಬೀಳುತ್ತಿತ್ತು. ಬೆಳಗಿನ ಹೊತ್ತು ಮಂಜು ಮರೆಯಾಗುತ್ತಿದ್ದಂತೆ ಮನ್ನ ನೆಲವನ್ನು ಆವರಿಸುತ್ತಿತ್ತು. ಮನುಷ್ಯರು ಬೆಳಗಾಗುತ್ತಿದ್ದಂತೆ, ನಸುಕಿನಲ್ಲಿ ಮನ್ನವನ್ನು ಸಂಗ್ರಹಿಸುತ್ತಿದ್ದರು ಮತ್ತು ಮಧ್ಯಾಹ್ನವಾಗುತ್ತಿದ್ದಂತೆ ಉಳಿದಿದ್ದ ಮನ್ನವೆಲ್ಲಾ ಮಾಯವಾಗಿ ಬಿಡುತ್ತಿತ್ತು. ಆದರೆ ಸ್ವಲ್ಪ ತಾಳಿ! ವಾರದ ಆರನೇ ದಿನದಲ್ಲಿ ಏನಾಗುತ್ತಿತ್ತು ಎಂಬುದನ್ನು ಗಮನಿಸಿ.




54

(ವಿಮೋಚನಕಾಂಡ ೧೬:೨೧,೨೨) ಜನರು ದಿನದಿನಕ್ಕೆ ಹೊತ್ತಾರೆಯಲ್ಲಿ ತಮ್ಮ ತಮ್ಮ ಭೋಜನಕ್ಕೆ ತಕ್ಕಷ್ಟು ಕೂಡಿಸಿಕೊಂಡರು.




55

ಬಿಸಲು ಹೆಚ್ಚಿದಾಗ ಅದು ಕರಗಿಹೋಯಿತು.



56

ಆರನೆಯ ದಿನ ಕೂಡಿಸಿಕೊಳ್ಳುವಲ್ಲಿ ಎರಡರಷ್ಟು ಆಹಾರವು ಅಂದರೆ ಒಬ್ಬೊಬ್ಬನಿಗೆ ಎರಡೆರಡು ಗೋಮೆರಿನ ಮೇರೆಗೆ ದೊರೆತದರಿಂದ.



57

ಸಮೂಹದ ಅಧಿಕಾರಿಗೆಳೆಲ್ಲರು ಮೋಶೆಯ ಬಳಿಗೆ ಬಂದು ಈ ಸಂಗತಿಯನ್ನು ತಿಳಿಸಿದರು.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



58

ವಿಮೋಚನಕಾಂಡ ೧೬:೨೩

ಅದಕ್ಕೆ ಅವನು– ಇದು ಯೆಹೋವನು ಹೇಳಿದ ಮಾತು; ನಾಳೆ ವಿರಾಮಮಾಡಿಕೊಳ್ಳತಕ್ಕ ಯೆಹೋವನ ಪರಿಶುದ್ಧ ಸಬ್ಬತ್ ದಿನವಾಗಿದೆ.




59

ಈ ಹೊತ್ತಿಗೆ ಸುಡಬೇಕಾದದ್ದನ್ನು ಸುಟ್ಟು ಬೇಯಿಸಬೇಕಾದದ್ದನ್ನು ಬೇಯಿಸಿದ ನಂತರ ಮಿಕ್ಕದ್ದನ್ನು ನಾಳೆಯ ತನಕ ಇಟ್ಟುಕೊಳ್ಳಿರಿ ಅಂದನು. ವಿಮೋಚನಕಾಂಡ ೧೬:೨೧,೨೩.



60

(ವಿಮೋಚನಕಾಂಡ ೧೬:೨೫,೨೬.)
೭ನೇ ದಿನವನ್ನು ಕುರಿತು, ಮೋಶೆ ಅವರಿಗೆ – ಈ ಹೊತ್ತು ಅದನ್ನು ಊಟಮಾಡಿರಿ. ಈ ದಿನವು ಯಹೋವನ ಸಬ್ಬತ್ ದಿನವಾದದರಿಂದ ಈ ಹೊತ್ತು ಅದು ಅಡವಿಯಲ್ಲಿ ದೊರೆಯುವುದಿಲ್ಲ.




61

ಆರು ದಿವಸ ಅದನ್ನು ಕೂಡಿಸಬಹುದು; ೭ನೇ ದಿನ ಸಬ್ಬತ್ತಾದದ್ದರಿಂದ ಅದು ದೊರೆಯುವದೇ ಇಲ್ಲ. ವಿಮೋಚನಕಾಂಡ ೧೬:೨೫,೨೬



62

ಅವರಲ್ಲಿ ಬಹಳಷ್ಟು ಮಂದಿ ದೇವರು ಏನು ಆಜ್ಞೆ ಮಾಡಿದನೋ ಅದನ್ನೆ ಮಾಡಿದರು, ಆದರೆ ಅವರಲ್ಲಿ ಕೆಲವರು ಸಬ್ಬತ್ ದಿನದಂದು ಮನ್ನ ಸಂಗ್ರಹಿಸಲು ಹೊರಟರು. ಈ ಬಗ್ಗೆ ದೇವರು ಏನು ಹೇಳಿದನು ಎಂಬುದನ್ನು ಗಮನಿಸಿ .



63


ವಿಮೋಚನಕಾಂಡ ೧೬:೨೮–೩೦
ನೀವು ಎಲ್ಲಿಯವರೆಗೂ ನನ್ನ ಆಜ್ಞೆಯನ್ನು ನಾನು ಮಾಡಿರುವ ನಿಯಮವನ್ನೂ ಅನುಸರಿಸದೆ ಅಲಕ್ಷ್ಯ ಮಾಡುವಿರೋ;



64


ನೋಡಿರಿ, ನೀವು ಸಬ್ಬತ್ ದಿನವನ್ನು ಆಚರಿಸಬೇಕೆಂದು ನಾನು ಅಪ್ಪಣೆಮಾಡಿರುವುದರಿಂದಲೇ ಆರನೆಯ ದಿನದಲ್ಲಿ ಎರಡು ದಿನದ ಆಹಾರವು ನಿಮಗೆ ದೊರಕುವಂತೆ ಅನುಗ್ರಹಿಸಿದ್ದೇನೆ.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



65

ನಿಮ್ಮಲ್ಲಿ ಪ್ರತಿಯೊಬ್ಬನು ತಾನಿರುವಲ್ಲಿಯೇ ಇರಬೇಕು; ಏಳನೆಯ ದಿನ‍ದಲ್ಲಿ ಒಬ್ಬನೂ ತನ್ನ ಸ್ಥಳವನ್ನು ಬಿಟ್ಟು ಹೊರಗೆ ಹೋಗಕೂಡದು ಎಂದು ಹೇಳಿದನು.



66

ಆದದರಿಂದ ೭ನೇಯ ದಿನದಲ್ಲಿ ಜನರು ಕೆಲಸವನ್ನು ಮಾಡದೆ ಇದ್ದರು. ವಿಮೋಚನಕಾಂಡ ೧೬:೨೮–೩೦


67

ಸೃಷ್ಟಿಯಲ್ಲೆ ಸಬ್ಬತ್ತಿನ ಸಂಸ್ಥಾಪನೆಯಾಯಿತು ಮತ್ತು ದೇವರ ಜನರು ಸಿನಾಯಿ ಬೆಟ್ಟದ ಹತ್ತಿರ ೧೦ ಆಜ್ಞೆಗಳನ್ನು ದೇವರಿಂದ ಪಡೆಯುವ ಮೊದಲೇ ಸಬ್ಬತ್ತಿನ ಆಚರಣೆ ಇತ್ತು.



68

ಇಸ್ರಾಯೇಲ್ಯರು ಐಗುಪ್ತ ದೇಶದಿಂದ ಹೊರನೆಡೆದು ಮೂರು ತಿಂಗಳಾದ ನಂತರ ದೇವರು ಅವರನ್ನು ಸಿನಾಯಿ ಬೆಟ್ಟದ ಹತ್ತಿರಕ್ಕೆ ಕರೆದುಕೊಂಡು ಬ ಂದನು. ಅಲ್ಲಿ ದೇವರು ಮೋಶೆಗೆ ಕಾಣಿಸಿಕೊಂಡು, ಜನರಿಗೆ ಒಂದು ಸಂದೇಶವನ್ನು ಕಳುಹಿಸಿಕೊಟ್ಟನು.



69

(ವಿಮೋಚನಕಾಂಡ ೧೯:೫.೬) ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ದೆಯಿಂದ ಕೇಳಿ ನಾನು ಮಾಡುವ ನಿಬಂದನೆಯನ್ನು ಅನುಸರಿಸಿ ನೆಡೆದರೆ.



70

ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗುವಿರಿ; ಸಮಸ್ತ ಭೂಮಿಯೂ ನನ್ನದಷ್ಟೇ.



71


ನೀವು ನನಗೆ ಯಾಜಕ ರಾಜ್ಯವೂ ಪರಿಶುದ್ದ ಜನವೂ ಆಗಿರುವಿರಿ.




72

ಇವೇ ನೀನು ಇಸ್ರಾಯೇಲ್ಯರಿಗೆ ಹೇಳಬೇಕಾದ ಮಾತುಗಳು ಎಂದನು. ವಿಮೋಚನಕಾಂಡ ೧೯:೬

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



73

ದೇವರು ತನ್ನ ಜನರಿಗೆ ಅತ್ಯಂತ ಅಮೂಲ್ಯವಾದ ಆಯ್ಕೆಯನ್ನು ಮುಂದಿಟ್ಟಿದ್ದಾನೆ. ಅವರು ದೇವರ ಆಜ್ಞೆಗಳನ್ನೂ ಮತ್ತು ನಿಬಂಧನೆಗಳನ್ನೂ ಕೈಗೊಂಡು ನೆಡದರೆ, ಅವರು ವಿಶೇಷ ಜನರೂ ಮತ್ತು ಪರಿಶುದ್ಧ ದೇಶವು ಆಗುತ್ತಾರೆ. ಜನರು ತಮ್ಮ ಸೃಷ್ಟಿಕರ್ತನೊಂದಿಗಿರುವ ಅನ್ಯೋನ್ಯ ಬಾಂಧವ್ಯವನ್ನು ಮರೆಯದಿರಲೆಂದೇ ಒಂದು ಆಜ್ಞೆಯನ್ನು ಕೊಡಲಾಗಿದೆ. ಇಷ್ಟಕ್ಕೂ ಆ ಆಜ್ಞೆ (ಅಂಗ್ಲದಲ್ಲಿ) ಪ್ರಾರಂಭವಾಗುವುದೇ ಜ್ಞಾಪಕದಲ್ಲಿಟ್ಟುಕೋ ಎಂಬ ಪದದಿಂದಲೇ.



74

(ವಿಮೋಚನಕಾಂಡ ೨೦:೮–೧೧)
ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು, ಆರು ದಿವಸಗಳಲ್ಲಿ ನೀನು ದುಡಿದು ನಿನ್ನ ಕೆಲಸವನ್ನೆಲ್ಲಾ ಮಾಡಬೇಕು.



75

ಒನೆಯ ದಿನವು ನಿನ್ನ ದೇವರಾದ ಯೆಹೋವನಿಗೆ ಮೀಸಲಾದ ವಿಶ್ರಾಂತಿ ದಿನವಾಗಿದೆ. ಅದರಲ್ಲಿ ನೀನು ಯಾವ ಕೆಲಸವನ್ನೂ ಮಾಡಬಾರದು.




76

ನಿನ್ನ ಗಂಡುಮಕ್ಕಳು, ಹೆಣ್ಣುಮಕ್ಕಳು, ಗಂಡಾಳು, ಹೆಣ್ಣಾಳು.




77

ಪಶುಗಳು, ನಿನ್ನ ಊರಲ್ಲಿರುವ ಅನ್ಯದೇಶದವರು ಯಾವ ಕೆಲಸವನ್ನು ಮಾಡಬಾರದು.



78

ಆರು ದಿನಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನು ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನು ನಿರ್ಮಾಣಮಾಡಿ ಒನೆಯ ದಿನದಲ್ಲಿ ವಿಶ್ರಮಿಸಿಕೊಂಡನು.



79

ಆದದರಿಂದ ಯೆಹೋವನು ಸಬ್ಬತ್ ದಿನವನ್ನು ತನ್ನ ದಿನವಾಗಿರಲಿ ಎಂದು ಆಶೀರ್ವದಿಸಿದನು. ವಿಮೋಚನಕಾಂಡ ೨೦:೮–೧೧

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



80

ಹತ್ತು ಆಜ್ಞೆಗಳ ಕೇಂದ್ರಬಿಂದು ಅಥಾವ ಹೃದಯ ಸಬ್ಬತ್ತೇ ಆಗಿರುತ್ತದೆ. ಸೃಷ್ಠಿಯ ಸ್ಮರಣಾರ್ಥ ಸಬ್ಬತ್ ದಿನವೇ ಆಗಿದೆ. ಇಂಥಹ ಸಬ್ಬತ್ ಈ ಪ್ರಪಂಚ ಎಷ್ಟು ಹಳೆಯದೋ ಅಷ್ಟೇ ಹಳೆಯದಾಗಿದೆ. ದೇವರಿಗೆ ವಿಧೇಯರಾಗಿ ನಡೆದುಕೊಂಡರೆ ಮತ್ತು ಆತನ ಸೃಷ್ಟಿಯ ಜ್ಞಾಪಕಾರ್ಥವಾದ ಸಬ್ಬತ್ತನ್ನು ಸ್ಮರಣೆಯಲ್ಲಿಟ್ಟುಕೊಂಡ ತನ್ನ ಜನರಿಗೆ ದೇವರು ಅನೇಕ ವಾಗ್ದಾನಗಳನ್ನು ಮಾಡಿದ್ದಾನೆ.




81

ನೀವು ಸಬ್ಬತ್ ದಿನವನ್ನು ಅಗಮ್ಯವಾದದ್ದೆಂದು ತಿಳಿದು ಆ ನನ್ನ ಪರಿಶುದ್ಧ ದಿವಸದಲ್ಲಿ ನಿಮ್ಮ ನಿತ್ಯದ ಕೆಲಸವನ್ನು ಮಾಡದೆ, ಸ್ವೇಚ್ಛೆಯಾಗಿ ನಡೆಯದೆ, ಸ್ವಕಾರ್ಯದಲ್ಲಿ ನಿರತರಾಗದೆ;



82

ಸ್ವೇಚ್ಛೆಯಾಗಿ ನಡೆಯದೆ, ಸ್ವಕಾರ್ಯದಲ್ಲಿ ನಿರತರಾಗದೆ, ಹರಟೆಹರಟದೆ, ಘನಪಡಿಸಿದರೆ ಆಗ ನೀವು ಯೆಹೋವನಲ್ಲಿ ಉಲ್ಲಾಸಪಡುವಿರಿ.



83

ಸ್ವೇಚ್ಛೆಯಾಗಿ ನಡೆಯದೆ, ಸ್ವಕಾರ್ಯದಲ್ಲಿ ನಿರತರಾಗದೆ, ಹರಟೆಹರಟದೆ, ಘನಪಡಿಸಿದರೆ ಆಗ ನೀವು ಯೆಹೋವನಲ್ಲಿ ಉಲ್ಲಾಸಪಡುವಿರಿ.



84

ಆಗ ನೀವು ಯೆಹೋವನನಲ್ಲಿ ಉಲ್ಲಾಸಪಡುವಿರಿ.ಯೆಶಾ ೫೮:೧೩,೧೪
ಮನುಷ್ಯ ಈ ಜ್ಞಾಪಕಾರ್ಥವನ್ನು ನೆನಸಿಕೊಂಡರೆ, ಆತನು ಜೀವನದಲ್ಲಿ ಎದುರಿಸುತ್ತಿರುವ ದೇವರು ನನ್ನ ಕೈಬಿಟ್ಟನೇ? ನನ್ನದು ಒಂದು ಅನರ್ಥ ಜೀವನವೇ ? ನಾನು ತಿರಸ್ಕರಿಸಲ್ಪಟ್ಟವನೇ ? ಮುಂತಾದ ಸಮಸ್ಯೆಗಳೆಲ್ಲಾ ಪರಿಹಾರವಾಗುತ್ತವೆ.
ಇವೆಲ್ಲ ವಿಕಾಸ ವಾದಿಗಳಿಂದ ಪರಿಹಾರ ವಾಗುವಂತಹದಲ್ಲ.



85

(೮ ಸೆಕೆಂಡುಗಳ ವಿಡಿಯೋ ಪ್ರದರ್ಶನ) ಆದರೆ ದೇವಜನರು ಏನನ್ನು ನೆನೆಪಿಟ್ಟುಕೊಳ್ಳಬೇಕೋ ಅದನ್ನೇ ಮರೆತಿದ್ದಾರೆಂದು ಹೇಳಲು ದುಃಖವಾಗುತ್ತದೆ. ದೇವರನ್ನು ಆತನ ಪರಿಶುದ್ಧವಾದ ದಿನದಲ್ಲಿ ಆರಾಧಿಸಲು ಅವರು ಮರೆತ್ತಿದ್ದಾರೆ.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.


86

ಮರ, ಮಣ್ಣು, ಕಲ್ಲುಗಳ ದೇವರುಗಳನ್ನು ಬಹಳ ಕಾಲದಿಂದ ಆರಾಧಿಸಿಕೊಂಡು ಬರುತ್ತಿದ್ದಾರೆ. ಅವರಿಗೆ ಅವರ ಮೂಲ ಬೇರು ಎಲ್ಲಿದೆ ಎಂಬುದೇ ಮರೆತು ಹೋಗಿದೆ !



87

ಸೃಷ್ಟಿಕರ್ತನಾದ ದೇವರತ್ತ, ಶತಮಾನಗಳಿಂದ ದೇವರ ಪ್ರವಾದಿಗಳು ಜನರ ಗಮನವನ್ನು ಕಳೆದಾಗಲೆಲ್ಲಾ ಸಬ್ಬತ್ತಿನ ಆಚರಣೆಯ ಪುನರ್‌ಸ್ಥಾಪನೆಯಾಗಿರುವುದುಂಟು.

ಸಬ್ಬತ್ ಯೆಹೂದ್ಯರಿಗೆ ಮಾತ್ರ ದೇವರು ಸೃಷ್ಟಿ ಮಾಡಲಿಲ್ಲ ಎಂದು ಯೇಶಾಯನು ಒತ್ತಿ ಹೇಳಿದ್ದಾನೆ.



88

ಯೆಹೂದ್ಯರು ಈ ಭೂಮಿಯ ಮೇಲೆ ಉಂಟಾಗುವ ಮುನ್ನವೇ ಸಬ್ಬತ್ ಎಂಬ ಸಂಸ್ಥೆಯು ಆರಂಭವಾಗಿದೆ. ದೇವರು ಅಂಥಹ ಒಂದು ಆಶೀರ್ವಾದವನ್ನು ಒಂದೇ ದೇಶಕ್ಕೆ ಖಂಡಿತವಾಗಿ ಮೀಸಲಾಗಿಟ್ಟಿಲ್ಲ.




89


(ಯೆಶಾಯ ೫೬:೬)
ಸಬ್ಬತ್ತನ್ನು ಆಚರಣೆಗೆ ತರುವುದಕ್ಕಾಗಿ ಈ ಭೂಲೋಕದಲ್ಲಿರುವ ಎಲ್ಲರನ್ನು ಎಲ್ಲೆಡೆ ಇರುವವರನ್ನೂ ದೇವರು ಆಹ್ವಾನಿಸುತ್ತಿದ್ದಾನೆ. ನನ್ನ ದಿನವೆಂದು ಆಚರಿಸಿ ನನ್ನ ಒಡಂಬಡಿಕೆಯನ್ನು ಭದ್ರವಾಗಿ ಹಿಡಿಯುತ್ತಾರೋ ಅವರೆಲ್ಲರನ್ನೂ. . . .


90

ಅವರೆಲ್ಲರನ್ನೂ ನಾನು ನನ್ನ ಪವಿತ್ರ ಪರ್ವತಕ್ಕೆ ಬರಮಾಡಿ ನನ್ನ ಪ್ರಾರ್ಥನಾಲಯದಲ್ಲಿ ಉಲ್ಲಾಸಗೊಳಿಸುವೆನು


91

ನನ್ನ ಆಲಯವು ಎಲ್ಲಾ ಜನಾಂಗಗಳಿಗೂ ಪ್ರಾರ್ಥನಾಲಯವೆನಿಸಿಕೊಳ್ಳುವುದು. ಯೆಶಾಯ ೫೬:೬,೭



92

ಇಡೀ ಸತ್ಯವೇದದಲ್ಲಿ ಎಲ್ಲಿಯೂ ಸಬ್ಬತ್ ದಿನವನ್ನು ಯೆಹೂದ್ಯರ ಸಬ್ಬತ್ತು ಎಂದು ಕರೆದಿಲ್ಲ.


ಯೇಸುಸ್ವಾಮಿ ಈ ದಿನ ಎಲ್ಲಾ ಮಾನವರಿಗಾಗಿ ಸೃಷ್ಟಿಸಲ್ಪಟ್ಟ ದಿನ ಎಂದಿದ್ದಾನೆ.

೧೧ – ಉತ್ತಮ ಶ್ರೇಯಸ್ಸಿಗಾಗಿ ಸೃಷ್ಟಿಸಲ್ಪಟ್ಟಿತು.



93

ಸಬ್ಬತ್ ದಿನವು ಮನುಷ್ಯರಿಗೋಸ್ಕರ ಉಂಟಾಯಿತೇ ಹೊರತು ಮನುಷ್ಯರು ಸಬ್ಬತ್ ದಿನಕ್ಕೋಸ್ಕರ ಉಂಟಾಗಲಿಲ್ಲ
ಮಾರ್ಕ ೨:೨೭



94

ಏಳನೆಯ ದಿನವು ನಿನ್ನ ದೇವರಾದ ಯೆಹೋವನಿಗೆ ಮೀಸಲಾದ ವಿಶ್ರಾಂತಿ ದಿನವಾಗಿದೆ. ವಿ.ಕಾಂಡ ೨೦:೧೦




95

ಯೇಸುಸ್ವಾಮಿಯೇ ಆ ದಿನವನ್ನು ಸೃಷ್ಟಿ ಮಾಡಿದ್ದರಿಂದ, ತಾನೇ ಸಬ್ಬತ್ ದಿನಕ್ಕೆ ಒಡೆಯನಾಗಿದ್ದೇನೆ ಎಂದು ಹೇಳಿದ್ದಾನೆ ಮತ್ತಾಯ ೧೨:೮


